"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತಾರನೆಯ ಅಧಿವೇಶನ

10ನೇ ಮಾರ್ಚ್ 2022
ಗುರುವಾರ

## ವಿಷಯಾನುಕ್ರಮಣಿಕೆ (Index)


01. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

1458 – ಬಿ.ಟಿ.ಎಂ. ಕ್ಷೇತ್ರದ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಮೇಲುಸೇತುವೆ ಕುರಿತು

- ಶ್ರೀ ಹೆಚ್.ಎಸ್.ಗೋಪಿನಾಥ್
- ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

1431 – ಎ.ಸಿ.ಬಿ.ಯವರು ನಡೆಸಿದ ಇಲಾಖೆಯಲ್ಲಿರುವ ಭ್ರಷ್ಟಾಚಾರದ ಬಗ್ಗೆ

- ಡಾ: ವೈ.ಎ.ನಾರಾಯಣಸ್ವಾಮಿ
- ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

1461 – ಜಿ.ಎಸ್.ಟಿ.ಯ ಕುರಿತು

- **ಶ್ರೀ ಕೆ.ಟಿ.ಶ್ರೀಕಂಠೇಗೌಡ (ಶ್ರೀ ಕೆ.ಎ.ತಿಪ್ಪೇಸ್ವಾಮಿ ಪರವಾಗಿ):-**
- ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

1496 – ಬೆಂಗಳೂರು ನಗರಕ್ಕೆ ಕಾವೇರಿ 5ನೇ ಹಂತದ ನೀರು ಪೂರೈಕೆ ಬಗ್ಗೆ

- ಡಾ: ಕೆ.ಗೋವಿಂದರಾಜ್
- ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

1514– ಸೈಬರ್ ಕ್ರೈಂ–ಸಿ.ಇ.ಎನ್. ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣಗಳ ಕುರಿತು

- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

---

**1490 – ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ನಿರ್ಮಾಣ ಕುರಿತು**

– ಶ್ರೀ ಪಿ.ಆರ್.ರಮೇಶ್

– ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು)

**1489 – ಬೆಳ್ತಂಗಡಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಪಶ್ಚಿಮವಾಹಿನಿ ಯೋಜನೆಯಡಿ ವೆಂಟೆಡ್ ಡ್ಯಾಂ ನಿರ್ಮಾಣವಾದ ಬಗ್ಗೆ**

– ಶ್ರೀ ಹರೀಶ್ ಕುಮಾರ್

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**1493 – ಕೊಡಗು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ದರೋಡೆ ಪ್ರಕರಣಗಳ ಕುರಿತು**

– ಶ್ರೀಮತಿ ಎಸ್. ವೀಣಾ ಅಚ್ಚಯ್ಯ

– ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

**1479 – ಪೊಲೀಸ್ ಸಿಬ್ಬಂದಿ ನೇಮಕಾತಿ ಬಗ್ಗೆ**

– ಶ್ರೀ ಸಲೀಂ ಅಹಮದ್

– ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

**1472 – ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡ ಕಾರ್ಮಿಕರ ಕುರಿತು**

– ಶ್ರೀ ಹೆಚ್.ಎಂ.ರಮೇಶ ಗೌಡ

– ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಕಾರ್ಮಿಕ ಸಚಿವರು)

**1500 – ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಕೆರೆಗಳ ಸಂಖ್ಯೆಗಳ ಬಗ್ಗೆ**

– ಶ್ರೀ ಸಿ.ಎನ್. ಮಂಜೇಗೌಡ

– ಶ್ರೀ ಜೆ.ಸಿ.ಮಾಧುಸ್ವಾಮಿ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಸಣ್ಣ ನೀರಾವರಿ ಸಚಿವರು)

**1513 – ಗದಗ, ಧಾರವಾಡ, ಹಾವೇರಿ ಮತ್ತು ಕಾರವಾರ ಜಿಲ್ಲೆಗಳಲ್ಲಿ ಕಾರ್ಮಿಕರು ಚಿಕಿತ್ಸೆ ಪಡೆಯಲು ಲಭ್ಯವಿರುವ ಆಸ್ಪತ್ರೆ ಹಾಗೂ ವೈದ್ಯರುಗಳ ಮಾಹಿತಿ ಕುರಿತು.**

– ಶ್ರೀ ಎಸ್.ವ್ಹಿ. ಸಂಕನೂರ

– ಶ್ರೀ ಅರಬೈಲ್ ಶಿವರಾಮ್ ಹೆಬ್ಬಾರ್ (ಕಾರ್ಮಿಕ ಸಚಿವರು)

**ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಿದ ಉತ್ತರಗಳು**

**೦2. ಪ್ರಕಟಣೆ**

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಬೆಂಗಳೂರು ನಗರದಲ್ಲಿ ಬೇಸಿಗೆ ಪ್ರಾರಂಭವಾಗುವ ಉನ್ನವೇ ಕುಡಿಯುವ ನೀರಿಗೆ ತೊಂದರೆಯಾಗಿರುವ ಬಗ್ಗೆ.**

- ಶ್ರೀ ಕೆ.ಹರೀಶ್ ಕುಮಾರ್
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಆ) ರಾಜ್ಯದಲ್ಲಿ ಕಳಪೆ ಗುಣಮಟ್ಟದ ಆಹಾರ ತಯಾರಿಕೆ ಮತ್ತು ಸೇವನೆಯಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ.**

- ಡಾ: ಡಿ.ತಿಮ್ಮಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಇ) ಖಾಸಗಿ ಶಾಲೆಗಳ ನವೀಕರಣಕ್ಕೆ ಪ್ರತಿ ವರ್ಷ ಅರ್ಜಿ ಸಲ್ಲಿಸುವ ಕುರಿತು**

- ಶ್ರೀ ಅರುಣ ಶಹಾಪುರ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಈ) ಧಾರವಾಡ ತಾಲ್ಲೂಕಿನ ಸೋಮನಪುರದ ಮಹಿಳೆಯೊಬ್ಬಳ ಮೇಲೆ ಟಿ.ವಿ.ಚಾನಲ್ ವರದಿಗಾರ ಅತ್ಯಾಚಾರ ಎಸಗಿರುವ ಬಗ್ಗೆ.**

- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಉ) ರಾಮನಗರ ಜಿಲ್ಲೆಯ ಕಾಡಂಚಿನ ಗ್ರಾಮಗಳ ರೈತರಿಗೆ ಆನೆಗಳ ಹಾವಳಿಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ.**

- ಶ್ರೀ ಎಸ್.ರವಿ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಊ) ರಾಜ್ಯದ ನಗರ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳ ನಿರ್ಮಾಣ ಕುರಿತು**

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಋ) ರಾಜ್ಯದಲ್ಲಿ ಕೋ-ಆಪರೇಟಿವ್ ಸೊಸೈಟಿಗಳು ಅಧಿಕ ಬಡ್ಡಿ ಆಮಿಷ ಒಡ್ಡಿ ಠೇವಣಿ ಹಣ ನೀಡಲು ಸಾಧ್ಯವಾಗದಿರುವ ಬಗ್ಗೆ.**

– ಶ್ರೀ ಸಲೀಂ ಅಹಮದ್

– ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು)

**ಎ) ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಪಿ.ಜಿ.ಪಾಳ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆದಿಂಬ ಎಂಬ ಸೋಲಿಗರ ಹಾಡಿಯಲ್ಲಿ ಮೂಲ ಸೌಕರ್ಯ ಇಲ್ಲದೇ ಇರುವ ಬಗ್ಗೆ.**

– ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**ಏ) ಬಾಲ್ಯ ವಿವಾಹ ಕುರಿತು ಕರ್ನಾಟಕ ರಾಜ್ಯ ಮೊದಲನೇ ಸ್ಥಾನದಲ್ಲಿರುವ ಬಗ್ಗೆ.**

– ಶ್ರೀ ಶಶೀಲ್ ಜಿ.ನಮೋಶಿ

– ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಹಿರಿಯ ನಾಗರೀಕರ ಸಬಲೀಕರಣ ಸಚಿವರು)

**೦4. ವಿತ್ತೀಯ ಕಾರ್ಯಕಲಾಪಗಳು**

**2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

– ಶ್ರೀ ಎಸ್.ಎಲ್.ಭೋಜೇಗೌಡ

– ಶ್ರೀ ಎಂ.ಕೆ.ಪ್ರಾಣೇಶ್

– ಶ್ರೀ ಯು.ಬಿ.ವೆಂಕಟೇಶ್

– ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

– ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು)

– ಶ್ರೀ ಲಕ್ಷ್ಮಣ ಸಂಗಪ್ಪ ಸವದಿ

– ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು)

– ಶ್ರೀ ಕೆ.ಟಿ.ಶ್ರೀಕಂಠೇಗೌಡ

– ಶ್ರೀ ಹೆಚ್.ಎಂ.ರಮೇಶಗೌಡ

– ಡಾ: ತೇಜಸ್ವಿನಿ ಗೌಡ

– ಡಾ: ಕೆ.ಗೋವಿಂದರಾಜ್

– ಶ್ರೀ ಸಿ.ಎನ್.ಮಂಜೇಗೌಡ

– ಶ್ರೀ ಗೋವಿಂದ ಎಂ.ಕಾರಜೋಳ ((ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು)

– ಶ್ರೀ ಅಲ್ಲಂ ವೀರಭದ್ರಪ್ಪ

– ಶ್ರೀ ಅ.ದೇವೇಗೌಡ

– ಶ್ರೀ ಎಸ್.ರವಿ

~*~*~*~*~

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(222)10-03-2022(11-00)bsd-ks

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 10ನೇ ಮಾರ್ಚ್ 2022**

ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ

ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 07 ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಪತಿ **(ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ)** ರವರು ಪೀಠದಲ್ಲಿ

ಉಪಸ್ಥಿತರಾದರು

೦1. **ಪ್ರಶ್ನೋತ್ತರಗಳು.**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ 1505**

**ಸಭಾಪತಿಯವರು:-** ಶ್ರೀ ಅರುಣ ಶಹಾಪುರ ರವರ ಪ್ರಶ್ನೆ ಕೇಳಿ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದಕ್ಕೆ ನನಗೆ ಉತ್ತರ ಬಂದಿಲ್ಲ. ಇದು ಓಪಿಎಸ್ ಕುರಿತಾದ ಬಹಳ ಸಿಂಪಲ್ ಪ್ರಶ್ನೆ, ಇದಕ್ಕೆ ಕಾಲಾವಕಾಶ ಏಕೆ ಬೇಕು? ಕರ್ನಾಟಕ ರಾಜ್ಯದ ಸರ್ಕಾರಿ ನೌಕರರು ಅಪಾರ ಭರವಸೆ ಇಟ್ಟುಕೊಂಡಿದ್ದಾರೆ. ಬೇರೆ ರಾಜ್ಯಗಳಂತೆ ಇಲ್ಲಿಯೂ ಓಪಿಎಸ್ ಜಾರಿಗೆ ತರಬೇಕು.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ನಾನು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇದು ಪಾಲಿಸಿ ಬದಲಾವಣೆಯ ವಿಷಯವಾಗಿದ್ದು, due consideration ಮಾಡಿ ಮಾಡಬೇಕಾಗಿದೆ. Financial implication ಮಾಡಬೇಕು. ಬೇರೆ ರಾಜ್ಯಗಳಲ್ಲಿ ಮಾಡಿರುವುದನ್ನು ತರಿಸಿಕೊಳ್ಳುತ್ತಿದ್ದೇವೆ. ಈಗ ನಾನು ಉತ್ತರ ಕೊಟ್ಟರೆ ಸಮಾಧಾನವಾಗುವುದಿಲ್ಲ. ಅಂತಹ ಉತ್ತರ ಕೊಡುವುದು ಬೇಡ ಎಂದು ಮುಂದೆ ಹಾಕಿದ್ದೇನೆ. ರೆಗ್ಯುಲರ್ ಉತ್ತರ ಕೊಡುವ ಹಾಗಿದ್ದರೆ ಈಗಲೇ ಉತ್ತರ ಕೊಡುತ್ತೇನೆ. ನಿರ್ಣಯ ಮಾಡಿ ಉತ್ತರವನ್ನು ಕೊಡುತ್ತೇನೆ.

**ಶ್ರೀ ಅರುಣ ಶಹಾಪುರ:-** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 1441**

**ಶ್ರೀ ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೂ ಉತ್ತರ ಬಂದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ (ಮುಖ್ಯಮಂತ್ರಿಗಳು):-** ಈ ಪ್ರಶ್ನೆಗೂ ಸಮಯಾವಕಾಶ ಬೇಕಾಗಿದೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಇದಕ್ಕೂ ಸಮಯ ಬೇಕೆ? ಹಾಗಿದ್ದರೆ ಮನೆಗೆ ಬಂದು ಉತ್ತರ ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಈ ವಾರದ ಕೊನೆಯೊಳಗೆ ಉತ್ತರ ಕೊಡುತ್ತೇನೆ.

**ಶ್ರೀ ಸಿ.ಎಂ. ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರ ಮೇಲೆ ನನಗೆ ವಿಶ್ವಾಸ ಇದೆ. ಏಕೆಂದರೆ ಅಲ್ಪಸಂಖ್ಯಾತರ ವಿಚಾರದ ಪ್ರಶ್ನೆಯಾಗಿದ್ದು, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದು ನೋಡಿದ ಮೇಲೆ ಅವರು ಏನೋ ಜಾಸ್ತಿ ಮಾಡಬೇಕೆಂದು ಇರುವುದರಿಂದ ಸಮಯ ತೆಗೆದುಕೊಂಡಿದ್ದಾರೆ ಎನಿಸುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಖಂಡಿತ, ಸೋಮವಾರ ಅಥವಾ ಮಂಗಳವಾರದ ಒಳಗಡೆ ಉತ್ತರ ಕೊಡುತ್ತೇನೆ.

(ಮುಂದು)

(223) 10.03.2022 11.10 hv.ks

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ ಬಹಳಷ್ಟು ಪ್ರಶ್ನೆಗಳಿಗೆ ಸಚಿವರು ಕಾಲಾವಕಾಶವನ್ನು ಕೇಳುತ್ತಾರೆ. ಇವತ್ತಿನ ಅಜೆಂಡಾದಲ್ಲಿರುವ ನಾಲ್ಕು ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕಾಲಾವಕಾಶವನ್ನು ಕೇಳಿದ್ದಾರೆ. ಈ ರೀತಿ ಆದರೆ, ಸದನ ನಡೆಸುವುದಕ್ಕೆ ಕಷ್ಟವಾಗುತ್ತದೆ.

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1458

## (ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಹೆಚ್.ಎಸ್.ಗೋಪಿನಾಥ್:-** ಸನ್ಮಾನ್ಯ ಸಭಾಪತಿಯವರೇ, ಬಿ.ಟಿ.ಎಂ.ಕ್ಷೇತ್ರದ ವ್ಯಾಪ್ತಿಯಲ್ಲಿ ಈಜಿಪುರದಿಂದ ಅಗರದವರೆಗೆ ನೂತನ ರಸ್ತೆಯನ್ನು ನಿರ್ಮಾಣ ಮಾಡಲು 2019ರಲ್ಲಿ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿ 30 ಕೋಟಿ ರೂಪಾಯಿಗಳ ಅನುದಾನ ನೀಡಲಾಗಿದ್ದರೂ ಸಹ ಇಲ್ಲಿಯವರೆಗೆ ಕಾಮಗಾರಿ ಪ್ರಾರಂಭವಾಗಿಲ್ಲ ಇದಕ್ಕೆ ಕಾರಣವೇನು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈಜಿಪುರದಿಂದ ಅಗರದವರೆಗೆ ನೂತನ ರಸ್ತೆಯನ್ನು ನಿರ್ಮಾಣ ಮಾಡುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಬಿ.ಟಿ.ಎಂ. ಕ್ಷೇತ್ರದಲ್ಲಿ, formation of road as per Master Plan 2015 ರ ಪ್ರಕಾರ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಅದಕ್ಕೆ 30 ಕೋಟಿ ರೂಪಾಯಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ. ಆದಷ್ಟು ಬೇಗನೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಈ ಕಾಮಗಾರಿಗೆ ಎರಡು ಆಡಚಣೆಗಳು ಎದುರಾಗಿದ್ದವು. ಒಂದು ಕಡೆ ಡಿಫೆನ್ಸ್ ಲ್ಯಾಂಡ್ ಬರುತ್ತಿದೆ. ಮತ್ತೊಂದು ಕಡೆ ಕೆರೆ ಏರಿ ಪ್ರದೇಶವಿದೆ. ಇದರಿಂದಾಗಿ ಅದರ alignment ಅನ್ನು ಸರಿಪಡಿಸಿಕೊಂಡು ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1431**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಬಹಳ ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. "ಕಳೆದ 5 ವರ್ಷಗಳಲ್ಲಿ ಎ.ಸಿ.ಬಿ. ಎಷ್ಟು ಮಂದಿ ಸರ್ಕಾರಿ ನೌಕರರ/ಅಧಿಕಾರಿಗಳ ಕಛೇರಿ ಮತ್ತು ಮನೆಗಳ ಮೇಲೆ ದಾಳಿ ನಡೆಸಿದ್ದಾರೆ; ಸದರಿ ಪ್ರಕರಣಗಳು ಯಾವ ಹಂತದಲ್ಲಿವೆ" ಎನ್ನುವ ನನ್ನ ಪ್ರಶ್ನೆಗೆ, "2017ನೇ ಇಸವಿಯಿಂದ ಇಲ್ಲಿಯವರೆಗೆ ಒಟ್ಟು 371 ಮಂದಿ ಸರ್ಕಾರಿ ನೌಕರರ/ಅಧಿಕಾರಿಗಳ ಕಛೇರಿ ಮತ್ತು ಮನೆ ಮೇಲೆ ದಾಳಿ ನಡೆಸಿ, ಕೇಸ್ ದಾಖಲಿಸಿ ತನಿಖೆ ಮಾಡಲಾಗುತ್ತಿದೆ" ಎನ್ನುವ ಉತ್ತರವನ್ನು ನೀಡಿದ್ದಾರೆ. ಇಲ್ಲಿಯವರೆಗೆ 63 ಪ್ರಕರಣಗಳು ಇತ್ಯರ್ಥಗೊಂಡಿವೆ ಉಳಿದಿರುವ 223 ಪ್ರಕರಣಗಳನ್ನು ಬೇಗನೇ ಇತ್ಯರ್ಥಗೊಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ನಾವು ತೆಗೆದುಕೊಂಡಿರುವ ಕ್ರಮದ ಬಗ್ಗೆ ಲಿಖಿತ ರೂಪದ ಉತ್ತರದಲ್ಲಿ ತಿಳಿಸಿದ್ದೇವೆ. ಸುಮಾರು 310 ಸರ್ಕಾರಿ ನೌಕರರ/ಅಧಿಕಾರಿಗಳ ಮನೆಯ ಮೇಲೆ ಎ.ಸಿ.ಬಿ. ದಾಳಿ ನಡೆಸಿ ಕೇಸ್ ದಾಖಲು ಮಾಡಲಾಗಿದೆ. ಕೆಲವೊಂದು ಪ್ರಕರಣಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಿಂದ ಆದೇಶಗಳು ಹೊರಬಂದಿವೆ.

ಸನ್ಮಾನ್ಯ ಸಭಾಪತಿಯವರೇ, ಒಂದು ಪ್ರಮುಖವಾಗಿರುವ ವಿಚಾರವನ್ನು ಈ ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಎ.ಸಿ.ಬಿ.ಯವರು ಪ್ರಾಥಮಿಕ ತನಿಖೆಯಾದ ನಂತರ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸಲು ಸರ್ಕಾರದ ಅನುಮತಿಯನ್ನು ಕೇಳುತ್ತಾರೆ. ಕೆಲವೊಂದು ಇಲಾಖೆಯಲ್ಲಿ ಇದನ್ನು ಪದ್ಧತಿಯನ್ನಾಗಿ ಮಾಡಿಕೊಂಡಿದ್ದರು. ಅದೇನೆಂದರೆ, ಕಾರ್ಯದರ್ಶಿಗಳು ಮತ್ತು ಉಪ ಕಾರ್ಯದರ್ಶಿಗಳನ್ನು ಒಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಿಕೊಂಡು ಆ ಸಮಿತಿಯಲ್ಲಿ ಪರಿಶೀಲನೆ ಮಾಡಿ, ಮೇಲ್ನೋಟಕ್ಕೆ ಇದು ಸರಿ ಇಲ್ಲವೆಂದು ಹೇಳಿ, "ಇದನ್ನು exonerate ಮಾಡಿ" ಎಂದು ಅವರೇ ಕಡತವನ್ನು ಮಂಡನೆ ಮಾಡುತ್ತಾರೆ. ಈ ರೀತಿಯಾದರೆ, ಎ.ಸಿ.ಬಿ. ಏತಕ್ಕೋಸ್ಕರ ಬೇಕೆಂದು ನಾನು ಯೋಚನೆ ಮಾಡಿದೆ. ಎ.ಸಿ.ಬಿ. ಕೇಸ್. ದಾಖಲು ಮಾಡಿ ಎಫ್.ಐ.ಆರ್. ಹಾಕಿ

ತನಿಖೆ ಮಾಡಿದ ನಂತರ ಇಲಾಖೆಯವರು ಕಾನೂನು ಕ್ರಮ ಜರುಗಿಸಲು ಅನುಮತಿಯನ್ನು ಕೊಡದೇ ಈ ರೀತಿ ಮಾಡಿರುವ ಹಲವಾರು ಪ್ರಕರಣಗಳು ಹಿಂದೆ ಆಗಿ ಹೋಗಿವೆ. ಅವೆಲ್ಲವುಗಳನ್ನು ತರಿಸಿಕೊಳ್ಳುತ್ತಿದ್ದೇನೆ. ನಾನು ಮುಖ್ಯಮಂತ್ರಿಯಾದ ಮೇಲೆ ಇಂತಹ ಸಮಿತಿಗಳ ಅವಶ್ಯಕತೆ ಇಲ್ಲವೆಂದು ಈ ಸಮಿತಿಗಳನ್ನು ಬರ್ಖಾಸ್ತು ಮಾಡಿ. ನೇರವಾಗಿ ಎ.ಸಿ.ಬಿ. ಶಿಫಾರಸ್ಸು ನಮಗೆ ಬರಬೇಕು. ನಾವು ಅದರ ಬಗ್ಗೆ ತೀರ್ಮಾನ ಮಾಡುತ್ತೇವೆ. ಯಾವ ಪ್ರಕರಣಗಳಲ್ಲಿ ಮೇಲ್ನೋಟಕ್ಕೆ ತಪ್ಪಿತಸ್ಥರು ಎಂದು ಕಂಡು ಬಂದಿರುತ್ತದೆ, ಅವರ ಮೇಲೆ ಕಾನೂನು ಕ್ರಮ ಜರುಗಿಸುವಂತಹ ಕೆಲಸವನ್ನು ಮಾಡಲಾಗುತ್ತದೆ. ವಿಶೇಷವಾಗಿ ಈ ಸಮಿತಿಗಳು ನಗರಾಭಿವೃದ್ಧಿ ಇಲಾಖೆಯಲ್ಲಿತ್ತು. ಇದನ್ನು ತೊಡೆದು ಹಾಕಬೇಕೆನ್ನುವ ಹಿನ್ನೆಲೆಯಲ್ಲಿ ಈ ನಿರ್ಣಯವನ್ನು ಮಾಡಿದ್ದೇವೆ. ಮುಂದಿನ ದಿನಮಾನಗಳಲ್ಲಿ ಎ.ಸಿ.ಬಿ. ತನಿಖೆಯಲ್ಲಿ ಮೇಲ್ನೋಟಕ್ಕೆ ತಪ್ಪು ಕಂಡುಬಂದರೂ ಕಾನೂನು ಕ್ರಮ ಜರುಗಿಸಲು ಅನುಮತಿಯನ್ನು ನೀಡಲಾಗುತ್ತದೆ.

**ಸಭಾಪತಿಯವರು:-** ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 192(1427) ನ್ನು ಕೇಳಿರುವ ಮಾನ್ಯ ಎನ್. ರವಿಕುಮಾರ್‌ರವರು ಮತ್ತು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:194(1490)ನ್ನು ಕೇಳಿರುವ ಮಾನ್ಯ ಪಿ.ಆರ್.ರಮೇಶ್‌ರವರು ಸದನದಲ್ಲಿ ಹಾಜರಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ನಾನು ಇನ್ನೂ 10-15 ನಿಮಿಷಗಳ ಕಾಲ ಈ ಸದನದಲ್ಲಿ ಇರುತ್ತೇನೆ. ಅಷ್ಟರೊಳಗೆ ಪ್ರಶ್ನೆ ಕೇಳಿರುವ ಸದಸ್ಯರು ಬಂದರೆ ಅವರಿಗೆ ಅವಕಾಶ ನೀಡಿ. ಇಲ್ಲದಿದ್ದರೆ ನನ್ನ ಪರವಾಗಿ ಮಾನ್ಯ ಸಭಾನಾಯಕರು ಉತ್ತರವನ್ನು ನೀಡುತ್ತಾರೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1461**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಶ್ರೀ ಕೆ.ಎ.ತಿಪ್ಪೇಸ್ವಾಮಿ ಪರವಾಗಿ):-** ಸನ್ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷಗಳಿಂದ ನಮ್ಮ ಕರ್ನಾಟಕ ರಾಜ್ಯ ನಿರಂತರವಾಗಿ ಜಿ.ಎಸ್.ಟಿ. ಸಂಗ್ರಹಣೆಯಲ್ಲಿ ಮೊದಲನೆಯ ಮತ್ತು ಎರಡನೆಯ ಸ್ಥಾನದಲ್ಲಿದೆ. ಇಲ್ಲಿಯವರೆಗೆ 2,44,306ಕೋಟಿ 19 ಲಕ್ಷ ರೂಪಾಯಿಗಳಷ್ಟು ಜಿ.ಎಸ್.ಟಿ. ಸಂಗ್ರಹಣೆಯನ್ನು ನಾವು ಮಾಡಿದ್ದೇವೆ. ಫೆಬ್ರವರಿಯ ಕಡೆಯವರೆಗೆ ನಮಗೆ ಬರಬೇಕಾಗಿರುವ ಜಿ.ಎಸ್.ಟಿ. ಮೊತ್ತದಲ್ಲಿ 45,250ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದಿಂದ ನಮಗೆ ಬರಬೇಕಾಗಿರುವ ಜಿ.ಎಸ್.ಟಿ. ಮೊತ್ತದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಅನ್ಯಾಯವಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸರ್ಕಾರ ಮಾಡಿರುವಂತಹ ಪ್ರಯತ್ನಗಳೇನು ಎನ್ನುವುದು ನನ್ನ ಮೊದಲನೆಯ ಉಪ ಪ್ರಶ್ನೆಯಾಗಿದೆ. ಅದೇ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಿ.ಎಸ್.ಟಿ. ಪರಿಹಾರದ ಅವಧಿಯನ್ನು ಮುಂದುವರಿಸಬೇಕೆಂದು ಕೇಳಿದ್ದೀರಿ, ಅದು ಯಾವ ಹಂತದಲ್ಲಿದೆ ಎನ್ನುವುದು ನನ್ನ ಎರಡನೆಯ ಪ್ರಶ್ನೆಯಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಸನ್ಮಾನ್ಯ ಸಭಾಪತಿಯವರೇ, ಕಳೆದ 3 ವರ್ಷಗಳಲ್ಲಿ ರಾಜ್ಯದಿಂದ ಸಂಗ್ರಹವಾಗಿರುವ ಜಿ.ಎಸ್.ಟಿ.ಯ ಬಗ್ಗೆ ನಾನು ಲಿಖಿತ ರೂಪದ ಉತ್ತರವನ್ನು ನೀಡಿದ್ದೇನೆ. 2017 ರಿಂದ 2021ನೇ ಸಾಲಿನವರೆವಿಗೂ ರಾಜ್ಯದ ಜಿ.ಎಸ್.ಟಿ. ಸಂಗ್ರಹ ಎಷ್ಟಿದೆ ಮತ್ತು Central Consolidated Fund ಗೆ ಎಷ್ಟು ಹೋಗುತ್ತಿದೆ ಎನ್ನುವುದರ ಮಾಹಿತಿಯನ್ನು ಸಹ ನಾನು ನೀಡಿದ್ದೇನೆ. ಐ.ಜಿ.ಎಸ್.ಟಿ.ಯಲ್ಲಿ ಅಂದರೆ, ಅಂತರರಾಜ್ಯ ಮಟ್ಟದ ಒಟ್ಟು ಜಿ.ಎಸ್.ಟಿ.ಯಲ್ಲಿ ನಮಗೆ ಶೇಕಡಾ 30ರಷ್ಟು ಬರುತ್ತಿದೆ. ನಮ್ಮ ಇಡೀ ರಾಷ್ಟ್ರದ cess fund ಏನಿದೆ, ಈ sin goods ಗಳಾದ ತಂಬಾಕು, ಆಲ್ಕೋಹಾಲ್, ಎಲೆಕ್ಟ್ರಾನಿಕ್ ಗೂಡ್ಸ್ ಇವುಗಳ ಮೇಲೆ ಚಾರ್ಜ್ ಮಾಡಿರುತ್ತಾರೆ. ಅವುಗಳಿಂದ ಸಂಗ್ರಹಣೆಯಾಗಿರುವ ಹಣದ ಮೇಲೆ ನಮಗೆ ಪರಿಹಾರವನ್ನು ನೀಡುತ್ತಾರೆ. ಕಳೆದ

ವರ್ಷದವರೆಗೆ ನಮ್ಮ ರಾಜ್ಯದ ಜಿ.ಎಸ್.ಟಿ. ಪಾಲು ಸರಿಯಾಗಿ ಬಂದಿದೆ. ಕೋವಿಡ್-19ರ ಪರಿಸ್ಥಿತಿಯಲ್ಲಿ ಕೇಂದ್ರದಲ್ಲಿಯೂ ಜಿ.ಎಸ್.ಟಿ. ಸಂಗ್ರಹ ಕಡಿಮೆಯಾಗಿದೆ. ನಮ್ಮಲ್ಲಿಯೂ ಕಡಿಮೆಯಾಗಿದೆ. ಆದರೆ, compensation of 14% annual revenue growth for 5 years ಕೊಡಲೇಬೇಕು ಎನ್ನುವ ಹಿನ್ನಲೆಯಲ್ಲಿ, year-on-year ಶೇಕಡಾ 14ರಷ್ಟನ್ನು ಕೊಡಲೇಬೇಕಾಗುತ್ತದೆ. ಸಂಗ್ರಹ ಕಡಿಮೆಯಾದರೂ ಸಹ ಅದನ್ನು ಸಾಲದ ರೂಪದಲ್ಲಿ ನಮಗೆ ಕೊಟ್ಟಿದ್ದಾರೆ. ಆದ್ದರಿಂದ ಕೇಂದ್ರದಿಂದ ನಮಗೆ ಬರಬೇಕಾಗಿರುವ ನಮ್ಮ ಪಾಲಿನ ಜಿ.ಎಸ್.ಟಿ. ನಮಗೆ ಬಂದಿದೆ. ಜಿ.ಎಸ್.ಟಿ. ಪರಿಹಾರದ ಅವಧಿಯನ್ನು ಮುಂದುವರಿಸಬೇಕೆನ್ನುವುದು ಈಗ ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ನಾನು ಎರಡು ಬಾರಿ ಕೇಂದ್ರಕ್ಕೆ ಹೋಗಿ ಮಾತನಾಡಿದ್ದೇನೆ. ಬಹುತೇಕವಾಗಿ ಒಳ್ಳೆಯ ಸುದ್ಧಿ ಬರುವಂತಹ ಸೂಚನೆಗಳು ಇವೆ. ಇದರ ಬಗ್ಗೆ ಕೇಂದ್ರ ಸರ್ಕಾರ ಬಹಳ ಗಂಭೀರವಾಗಿರುವ ಚಿಂತನೆಯನ್ನು ಮಾಡುತ್ತಿದೆ. ನಮ್ಮ ರಾಜ್ಯದ ಸ್ಥಿತಿಯೂ ಅವರಿಗೆ ಗೊತ್ತಿದೆ. ಆದ್ದರಿಂದ ಜಿ.ಎಸ್.ಟಿ. ಅವಧಿ ಮುಂದುವರಿಕೆಯ ಬಗ್ಗೆ ನಮ್ಮ ಪ್ರಯತ್ನಕ್ಕೆ ಯಶಸ್ಸು ಸಿಗುತ್ತದೆನ್ನುವ ವಿಶ್ವಾಸ ನನಗಿದೆ.

---

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:1496**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ|| ಕೆ.ಗೋವಿಂದರಾಜು:-** ಸನ್ಮಾನ್ಯ ಸಭಾಪತಿಯವರೇ, ಕಾವೇರಿ ಕುಡಿಯುವ ನೀರು ಸರಬರಾಜು ಯೋಜನೆಯ 5ನೇ ಹಂತದ ಯೋಜನೆಗೆ ಜೈಕಾ ಸಂಸ್ಥೆಯಿಂದ ಆರ್ಥಿಕ ನೆರವನ್ನು ಪಡೆದುಕೊಂಡು 110 ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ಯೋಜನೆಗೆ ಸರ್ಕಾರ 2018ರಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಯೋಜನೆಗೆ ತಗಲುವ 5550.00 ಕೋಟಿ ಅಂದಾಜು ವೆಚ್ಚಕ್ಕೆ 2013ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

(ಮುಂದುವರಿದಿದೆ)

(224) 10.3.2022 11.20 ಪಿಕೆ:ಜಿಆರ್

**ಡಾ: ಕೆ.ಗೋವಿಂದ ರಾಜ್(ಮುಂದು):**

2013ರಲ್ಲಿ ಇದಕ್ಕೆ ಅನುಮತಿ ಸಿಕ್ಕಿದ್ದು, 2017ರಲ್ಲಿ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ. 2007-08ರಲ್ಲಿ 110 ಹಳ್ಳಿಗಳನ್ನು ಬಿ.ಬಿ.ಎಂ.ಪಿ., ವ್ಯಾಪ್ತಿಗೆ ತರುತ್ತಾರೆ. ಆ ಕಾಲದಿಂದಲೂ, ಅಂದರೆ 2018-19ರಲ್ಲಿ ಸುಮಾರು ರೂ. 1000 ಕೋಟಿ, ರೂ.500 ಕೋಟಿ, one T.M.C., and seven C.M.Cs., ಎಂದು ಹಣ ಬಿಡುಗಡೆಯಾಗಿದೆ. ಆ ಹಣ ಏನಾಯಿತು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಗಳೆ, ಮೊದಲು ಇಡೀ ಬೆಂಗಳೂರಿಗೆ ಕಾವೇರಿ ನೀರು ಸರಬರಾಜು ಆಗುತ್ತಿರಲಿಲ್ಲ. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರು ಸರಬರಾಜು ಆಗುತ್ತಿತ್ತು, ನಂತರ ಬೋರ್‌ವೆಲ್ ನೀರನ್ನು ಸರಬರಾಜು ಮಾಡುತ್ತಿದ್ದರು. ಮೊದಲು 8 ಟಿ.ಎಂ.ಸಿ.,ಯನ್ನು ಬೆಂಗಳೂರು ವ್ಯಾಪ್ತಿಗೆ ಸೇರಿಸಿಕೊಂಡರು. ಅದಕ್ಕೆ ಸಂಬಂಧಪಟ್ಟಂತೆ ಯೋಜನೆಗಳಿಗೆ ದುಡ್ಡು ಖರ್ಚಾಗಿದೆ. ಅದೇರೀತಿ 2006-07ರಲ್ಲಿ 110 ಹಳ್ಳಿಗಳನ್ನು ಸೇರಿಸಿಕೊಂಡಿದ್ದೇವೆ. ಪ್ರಾರಂಭದಲ್ಲಿ ಕಾವೇರಿ ನೀರನ್ನು ಸರಬರಾಜು ಮಾಡುತ್ತಿರಲಿಲ್ಲವಾದ್ದರಿಂದ ಮತ್ತು ಪರ್ಯಾಯವಾಗಿ ಕುಡಿಯುವ ನೀರು ಸರಬರಾಜು ಮಾಡಬೇಕಾಗಿದ್ದರ ಹಿನ್ನೆಲೆಯಲ್ಲಿ

ಸಂಬಂಧಪಟ್ಟ ಯೋಜನೆಗಳಗೋಸ್ಕರ ಆ ದುಡ್ಡು ಖರ್ಚಾಗಿದೆ. ಯಾವ ಯಾವ ವರ್ಷಗಳಲ್ಲಿ ಏನು ಕೆಲಸವಾಗಿದೆ, ಯಾವ ಕಾಮಗಾರಿಗಳನ್ನು ಮಾಡಲಾಗಿದೆ ಎನ್ನುವ ವಿವರಗಳನ್ನು ಮಾನ್ಯ ಸದಸ್ಯರಿಗೆ ಕೊಡಲು ನಾನು ಸಿದ್ಧನಿದ್ದೇನೆ. ಈಗ ಕಾವೇರಿ ನೀರು ಕೊಡಬೇಕು ಎನ್ನುವ ಕಾರಣದಿಂದ 2017-18ರಲ್ಲಿ ರೂ.5,500 ಕೋಟಿಗಳ ಯೋಜನೆಗಳನ್ನು ಮಾಡಿ, ಜೈಕಾದಿಂದ ಫಂಡ್ ತೆಗೆದುಕೊಂಡು ಬಂದಿದ್ದೇವೆ. 2023ಕ್ಕೆ ಈ ಯೋಜನೆ ಮುಕ್ತಾಯವಾಗಬೇಕು. ನಿಗದಿತ ವೇಳೆಯಲ್ಲಿ ಮುಗಿಸುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಪರ್ಯಾಯವಾಗಿ ಬೋರ್‌ವೆಲ್ ನೀರು ಮತ್ತು ಕಾವೇರಿ ನೀರು ಕೂಡ ಸರಬರಾಜು ಆಗುತ್ತಿದೆ. ಹಾಗಾಗಿ 110 ಹಳ್ಳಿಗಳಿಗೆ ನೀರು ಒದಗಿಸುವ ವ್ಯವಸ್ಥೆಗೆ ಆ ದುಡ್ಡು ಖರ್ಚಾಗಿದೆ. ಬೆಂಗಳೂರು ವ್ಯಾಪ್ತಿಗೆ ಬರುವ ಪ್ರದೇಶಗಳನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ., ಯೇ ನಿರ್ವಹಣೆ ಮಾಡಬೇಕಾಗುತ್ತದೆ. ಆ ಕೆಲಸವನ್ನು ಮಾಡಿದ್ದಾರೆ.

**ಡಾ: ಕೆ.ಗೋವಿಂದ ರಾಜ್:-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಯಾವುದಕ್ಕೆ ಹಣ ಖರ್ಚು ಮಾಡಿದ್ದೀರಿ ಎನ್ನುವುದರ ಬಗ್ಗೆ ಮಾಹಿತಿ ಕಳುಹಿಸಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಇದಕ್ಕೆ ಸುಮಾರು ಹಣ ಈಗಾಗಲೇ ಖರ್ಚಾಗಿದೆ. ಅದರ ಮೇಲೆ ಸುಮಾರು 5000 ಕೋಟಿ ಹಣ ಯಾವುದಕ್ಕೆ ಖರ್ಚಾಗಿದೆ ಎಂಬ ಬಗ್ಗೆ ಮಾಹಿತಿ ಕೊಟ್ಟರೆ ಸಾಕು. ಇದರಲ್ಲಿ ಬಹಳಷ್ಟು ವಿಚಾರಗಳಿವೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಖಂಡಿತವಾಗಿ ಮಾಹಿತಿ ಕೊಡುತ್ತೇವೆ. ಯಾವ ಯಾವ ವರ್ಷ ಎಷ್ಟು ದುಡ್ಡು ಖರ್ಚು ಮಾಡಿದ್ದಾರೆ, ಯಾವ ಹಳ್ಳಿಗಳಗೋಸ್ಕರ ಖರ್ಚು ಮಾಡಿದ್ದಾರೆ, ಯಾವ ಕಾಮಗಾರಿಗಳನ್ನು ಕೈಗೊಂಡಿದ್ದಾರೆ ಎನ್ನುವ ಸಂಪೂರ್ಣ ವಿವರಗಳನ್ನು ಒದಗಿಸಿ ಕೊಡುತ್ತೇನೆ.

**"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

---

**ಪ್ರಶ್ನೆ ಸಂಖ್ಯೆ: 1514**

**(ಉತ್ತರ ಪ್ರತಿ ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಗಳೆ, ಈ ರಾಜ್ಯದಲ್ಲಿ ಸೈಬರ್ ಕ್ರೈಂ ಬಹಳ ಆಗುತ್ತಿವೆ. ಅದರ ಬಗ್ಗೆ ಸಂಪೂರ್ಣವಾಗಿ, 4 ವರ್ಷದ ದಾಖಲೆಗಳನ್ನು ಕೇಳಿದ್ದೆ. ಆ ದಾಖಲೆಗಳನ್ನು ಬಹಳ ನೀಟ್ ಆಗಿ, ಬಹಳ ಅಚ್ಚುಕಟ್ಟಾಗಿ ನೀಡಿದ್ದಾರೆ. ಮಾನ್ಯ ಸಚಿವರು ದಕ್ಷ ಮತ್ತು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ನನಗೆ ಒಂದು ವಿಷಯದಲ್ಲಿ ನೋವಾಗುತ್ತಿದೆ. 2019ನೇ ಸಾಲಿನಲ್ಲಿ ಸೈಬರ್ ಕ್ರೈಂ-ಸಿ.ಇ.ಎನ್., ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣಗಳು 11910. ಅದರಲ್ಲಿ ಪತ್ತೆಯಾದ ಪ್ರಕರಣಗಳು 2327. 2020ನೇ ಸಾಲಿನಲ್ಲಿ ದಾಖಲಾದ ಪ್ರಕರಣಗಳು 10604. ಪತ್ತೆಯಾಗಿರುವ ಪ್ರಕರಣಗಳು 3297. ಅಂದರೆ 2019 ಮತ್ತು 2020ರಲ್ಲಿ ದಾಖಲಾದ ಪ್ರಕರಣಗಳ ಪೈಕಿ 20000 ಪ್ರಕರಣಗಳು ಪತ್ತೆಯಾಗಿಲ್ಲ. ಸೈಬರ್ ಕ್ರೈಂ ಬ್ರಾಂಚ್‌ನಲ್ಲಿ ದೂರು ಕೊಟ್ಟಿರುವ ಜನ ಒದ್ದಾಡುವಂತಾಗಿದೆ. ದಯವಿಟ್ಟು ಮಾನ್ಯ ಸಚಿವರು ಗಮನಹರಿಸಬೇಕು.

ನನ್ನ ಎರಡನೆ ಪ್ರಶ್ನೆಯಲ್ಲಿ ಓ.ಟಿ.ಪಿ., ಬಗ್ಗೆ ಕೇಳಿದ್ದೇನೆ. ಮೊಬೈಲ್‌ಗಳಲ್ಲಿ ಮತ್ತು ಇತರ ಸಾಮಾಜಿಕ ಜಾಲತಾಣಗಳಲ್ಲಿ ಭೋಗಸ್ ಓ.ಟಿ.ಪಿ., ಗಳನ್ನು ಕೇಳಿ ಜನರನ್ನು ವಂಚಿಸುತ್ತಿರುವುದು ಎಲ್ಲರ ಗಮನಕ್ಕೆ ಬಂದಿದೆ. ಸುಮಾರು 10000 ಪ್ರಕರಣಗಳು ರಾಜ್ಯಾದ್ಯಂತ ದಾಖಲಾಗಿವೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ 7350 ಪ್ರಕರಣಗಳು ಬಾಕಿ ಇವೆ. ಸುಮಾರು 3000 ಸಾವಿರ ಪ್ರಕರಣಗಳು ಮಾತ್ರ ಇತ್ಯರ್ಥವಾಗಿವೆ. ಇದರ ಜೊತೆಗೆ, ನಮ್ಮ ಹಿರಿಯ ಐ.ಪಿ.ಎಸ್., ಅಧಿಕಾರಿ ಆಗಿದ್ದ ಮಾನ್ಯ ಶಂಕರಬಿದರಿ ಮತ್ತು ಇನ್ನೊಬ್ಬ ಅಧಿಕಾರಿಯಾದ ಮಾನ್ಯ ಆತೀಕ್ ಎನ್ನುವವರು ಮೋಸಕ್ಕೆ ಒಳಗಾಗಿದ್ದಾರೆ. ಮಾನ್ಯ ಶಂಕರ ಬಿದರಿಯವರಿಗೆ ಮೋಸ ಮಾಡಿ ಓ.ಟಿ.ಪಿ., ನಂಬರ್ ತೆಗೆದುಕೊಂಡು 80,000 ರೂಪಾಯಿಗಳ ವಂಚನೆ ಮಾಡಿದ್ದಾರೆ. ಮಾನ್ಯ ಆತೀಕ್ ರವರೂ ಕೂಡ ಮೋಸಕ್ಕೆ ಒಳಗಾಗಿದ್ದಾರೆ. ರಾಜ್ಯದ ಜನರೂ ಕೂಡ ಸಾಕಷ್ಟು ವಂಚನೆಗೆ ಒಳಗಾಗಿದ್ದಾರೆ. ಈ ಕುರಿತು ಸರ್ಕಾರ ಹೆಚ್ಚಿನ ಜಾಗ್ರತೆ ವಹಿಸಬೇಕು. ಮಾನ್ಯ ಸಭಾಪತಿಗಳೆ, ಸಾಮಾಜಿಕ ಜಾಲತಾಣಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ಪ್ರಕರಣಗಳ ಪೈಕಿ ಸುಮಾರು

10,000 ಪ್ರಕರಣಗಳು ಬಾಕಿ ಇವೆ. ಈ ಎಲ್ಲಾ ಪ್ರಕರಣಗಳನ್ನು ಪತ್ತೆ ಹಚ್ಚಬೇಕಾದರೆ ಸೈಬರ್ ಪೋಲೀಸ್ ಸ್ಟೇಷನ್‌ಗಳಲ್ಲಿ ಕೆಲಸ ಮಾಡುವ ಇನ್ಸ್‌ಪೆಕ್ಟರ್‌ಗಳಿಗೆ ಮತ್ತು ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ಕೊಡಬೇಕಾಗತ್ತದೆ. ಅದಕ್ಕಾಗಿ ನಾನು ಮಾನ್ಯ ಸಚಿವರಲ್ಲಿ, ಸೈಬರ್ ಬ್ರಾಂಚ್ ಪೋಲೀಸ್ ಠಾಣೆಗಳಿಗೆ ಸೂಕ್ತ ಉಪಕರಣಗಳನ್ನು ಕೊಡಬೇಕು, ಹೆಚ್ಚಾಗಿ ತಂತ್ರಜ್ಞರನ್ನು ನೇಮಕ ಮಾಡಬೇಕು, ತರಬೇತಿ ಪಡೆದಿರುವ ಅಧಿಕಾರಿಗಳನ್ನು ಅಲ್ಲಿಗೆ ಪೋಸ್ಟಿಂಗ್ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಆಗ ಮಾತ್ರ ಇಂತಹ ಪ್ರಕರಣಗಳು ಕಡಿಮೆಯಾಗುತ್ತವೆ. ಹೊರ ರಾಜ್ಯದಿಂದ ಬಂದಿರತಕ್ಕ ಪ್ರಕರಣಗಳು ಜಾಸ್ತಿ ಇವೆ. ಅವುಗಳೂ ಕೂಡ ಇತ್ಯರ್ಥವಾಗಿಲ್ಲ. ರಾಜಸ್ಥಾನದಲ್ಲಿ ಒಬ್ಬರನ್ನು ಹಿಡಿದಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ, ರಾಜ್ಯದ ಜನರು ಏನು ಮೋಸ ಹೋಗುತ್ತಿದ್ದಾರೋ ಅವರಿಗೆ ನ್ಯಾಯ ಕೊಡಿಸಬೇಕು. ನೀವು ನ್ಯಾಯ ಕೊಡಿಸುತ್ತೀರಿ ಎನ್ನುವ ವಿಶ್ವಾಸ ನನಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಗಳೆ, 2017ರಲ್ಲಿ ಗೃಹ ಇಲಾಖೆಯಲ್ಲಿ ಸೈಬರ್ ವಿಭಾಗವನ್ನು ಪ್ರತ್ಯೇಕವಾಗಿ ತೆರೆಯಲಾಯಿತು. ತಮಗೆ ಗೊತ್ತಿರುವ ಹಾಗೆ, ಆಧುನಿಕ ಟೆಕ್ನಾಲಜಿಯನ್ನು ಉಪಯೋಗಿಸಿ ಮಾಡುವಂತಹ ದರೋಡೆಯಾಗಿದೆ. ಮೊದಲು ರಸ್ತೆಯಲ್ಲಿ ರಾಬರಿ ಆಗುತ್ತಿತ್ತು. ಈಗ ಈ ರೀತಿಯ ರಾಬರಿಯನ್ನು ಪ್ರಾರಂಭ ಮಾಡಿದ್ದಾರೆ. ಇದಕ್ಕಾಗಿ ವಿಶೇಷ ವಿಭಾಗವನ್ನು ತೆರೆದು, ಮಾನ್ಯ ಸದಸ್ಯರು ಹೇಳಿದ ಹಾಗೆ, ತರಬೇತಿಯನ್ನು ಪಡೆದಿರುವ ಅಧಿಕಾರಿಗಳನ್ನು ಹಾಕುವಂತಹ ಕೆಲಸ ಮಾಡಿದ್ದೇವೆ. ನಮ್ಮ ಸಿ.ಐ.ಡಿ., ಕಚೇರಿಯಲ್ಲಿ Centre for Cybercrime Investigation Training & Research (CCITR) ಘಟಕವನ್ನು ಪ್ರಾರಂಭಿಸಿದ್ದೇವೆ. Data Security Council of India ಇದರ ಸಹಯೋಗದೊಂದಿಗೆ ವಿಶೇಷ ಸೈಬರ್ ವಿಭಾಗದಲ್ಲಿ ಕೆಲಸ ಮಾಡುವ ಪೋಲೀಸರಿಗೆ ತರಬೇತಿಯನ್ನು ಕೊಡುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಗೂ ಕೂಡ ಒಂದೊಂದು Cell Police Station ಗಳನ್ನು ತೆರೆದಿದ್ದೇವೆ. 46 Cell Police Station ಗಳು ಇವೆ. ಅದರಲ್ಲಿ 8 ಬೆಂಗಳೂರಿನಲ್ಲಿವೆ. ಈ ವಿಭಾಗದಲ್ಲಿ ಕೆಲಸ ಮಾಡುವ ಅಧಿಕಾರಿಗಳು ಕಳೆದ ಒಂದೆರಡು ವರ್ಷದಲ್ಲಿ ಬೆಂಗಳೂರು ನಗರದಲ್ಲೇ ಸುಮಾರು 70 ಕೋಟಿ

ರೂಪಾಯಿಗಳ Account freeze ಮಾಡುವುದರ ಮೂಲಕ ಉಳಿಸಿಕೊಟ್ಟಿದ್ದಾರೆ. 2 ಗಂಟೆಯ ಒಳಗೆ ಪೋಲೀಸರಿಗೆ ಮಾಹಿತಿ ಕೊಟ್ಟರೆ Account freeze ಮಾಡಬಹುದು. ಮಾನ್ಯ ಮುಖ್ಯಮಂತ್ರಿಗಳು ಗೃಹ ಸಚಿವರಾಗಿದ್ದಾಗ, ವಿಶೇಷ ಪ್ರಯತ್ನ ಮಾಡಿ, ಬ್ಯಾಂಕ್‌ಗಳು ಅಧಿಕಾರಿಗಳು ಮತ್ತು ಪೋಲೀಸ್ ಅಧಿಕಾರಿಗಳನ್ನು ಕರೆಸಿ, ಒಂದು ಸಹಯೋಗವನ್ನು ಏರ್ಪಡಿಸಿ, Account freeze ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಹಾಗಾಗಿ ಇದರಿಂದ ಸುಮಾರು ರೂ. 70 ಕೋಟಿ ಉಳಿದಿದೆ ಎನ್ನುವ ಮಾಹಿತಿ ನನ್ನ ಹತ್ತಿರ ಇದೆ. ಮಾನ್ಯ ಸದಸ್ಯರು ಮಾತನಾಡುತ್ತಾ, ಈ ನಿಟ್ಟಿನಲ್ಲಿ ಪ್ರೋಗ್ರೆಸ್ ಕಡಿಮೆ ಇದೆ ಎನ್ನುವ ಮಾತನ್ನು ಹೇಳಿದರು. ಅದು ಸಹಜ, ನಾನು ಒಪ್ಪುತ್ತೇನೆ. ಕಳೆದ ಎರಡು ವರ್ಷಗಳಿಂದ ಕೋವಿಡ್-19 ಇತ್ತು. ಇಂತಹ ಅಪರಾಧಗಳನ್ನು ಮಾಡಿರುವವರು ಹೊರ ರಾಜ್ಯದವರು. ರಾಜಾಸ್ಥಾನದ ಒಂದು ಹಳ್ಳಿಯಲ್ಲೇ ಇಂತಹ ಒಂದು ಕ್ರೈಂ ಮಾಡುವ ವ್ಯಕ್ತಿಗಳಿದ್ದಾರೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಎಲ್ಲೆಲ್ಲೋ ಕುಳಿತುಕೊಂಡು ಇಂತಹ ಅಪರಾಧಗಳನ್ನು ಮಾಡುತ್ತಾರೆ. ಕೋವಿಡ್-19ರ ಕಾರಣದಿಂದ ಪೋಲೀಸರಿಗೆ ಅಲ್ಲಿಗೆ ಹೋಗಿ ಬಂದು ಮಾಡುವುದಕ್ಕೆ ಆಗಲಿಲ್ಲ. ಆದರೆ ನಾವು ಇದನ್ನು ಪತ್ತೆ ಹಚ್ಚುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದ್ದೇವೆ. ಓ.ಟಿ.ಪಿ., ಮೂಲಕ ಯಾರು ವಂಚನೆಗೆ ಒಳಗಾಗಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಮಾನ್ಯ ಶಂಕರ ಬಿದರಿಯವರು ಹೇಳಿಕೊಂಡಿದ್ದರಿಂದ ನಮಗೆ ಗೊತ್ತಾಗಿದೆ.

(ಮುಂದು . ..)

(225) 10-3-2022 11.30 ಡಿಎಸ್-ಜಿಆರ್

**ಶ್ರೀ ಅರಗ ಜ್ಞಾನೇಂದ್ರ(ಮುಂದು):-**

ನಮ್ಮಲ್ಲಿ ಇದ್ದಂಥ ಅನೇಕರದ್ದು ಆಗಿರಬಹುದು. ಬಹಳ ಜನ ಇದನ್ನು ಕಳೆದುಕೊಳ್ಳುತ್ತಿದ್ದಾರೆ. ಮತ್ತೆ ಫೋನ್ ಮಾಡಿ ಹೇಳಿ ಅಕೌಂಟ್‌ಗೆ ಹಾಕಿಸಿಕೊಂಡು ತಕ್ಷಣ ಅಕೌಂಟ್‌ನಿಂದ ಹಣವನ್ನು ವಿತ್‌ಡ್ರಾ ಮಾಡುತ್ತಾರೆ. ಬಹಳ ಜನ ವಿದ್ಯಾವಂತ ಯುವಕರು, ಯುವತಿಯರು ಈ ವಂಚನೆಗೆ ಒಳಗಾಗಿದ್ದಾರೆ. ಈ ಅಪರಾಧಗಳು ನಾಗಲೋಟದಿಂದ ನಡೆಯುತ್ತಿದ್ದು, ಇದು ಆಧುನಿಕ ವಿಜ್ಞಾನ ಯುಗದ ದೊಡ್ಡ

ಪಿಡುಗು. ಅದನ್ನು ತಡೆಯುವುದಕ್ಕೆ ಏನೆಲ್ಲಾ ಪ್ರಯತ್ನ ಮಾಡಬಹುದೋ, ಎಷ್ಟು ಸೈಬರ್ ವಿಭಾಗವನ್ನು ಗಟ್ಟಿ ಮಾಡಬಹುದೋ ಅದನ್ನು ಗೃಹ ಇಲಾಖೆಯಿಂದ ಮಾಡುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ಅನೇಕರಿಗೆ ಎಡಮುರಿ ಕಟ್ಟುತ್ತಿದ್ದೇವೆ. ಈಗ ಅನೇಕರು ಪತ್ತೆಯಾಗಿದ್ದಾರೆ. ಪತ್ತೆ ಆಗದೆ ಇರುವವರನ್ನು ಪತ್ತೆ ಹಚ್ಚುವ ಕೆಲಸ ಮಾಡುತ್ತಿದ್ದೇವೆ.

**ಶ್ರೀ ಸುನಿಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಿಗೆ ನಾನು ಹೇಳುವುದೇನೆಂದರೆ, ಆ ಸೈಬರ್ ಬ್ರಾಂಚ್‌ಗಳಿಗೆ ಏನು instruments ಕೊಡಬೇಕಾಗಿದೆ ಆ latest technology instruments ಅನ್ನು ಕೊಟ್ಟರೆ ಪತ್ತೆ ಹಚ್ಚುವುದಕ್ಕೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಎಲ್ಲಾ ರೀತಿಯ instruments ಗಳನ್ನು ಕೊಡುತ್ತಿದ್ದೇವೆ. ಈ ಸಲವು ಕೊಡಿಸುತ್ತಿದ್ದೇವೆ.

**ಪ್ರಶ್ನೆ ಸಂಖ್ಯೆ:1490**

**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಆದರೆ ನಾನು ನಿರ್ದಿಷ್ಟವಾಗಿ ಕೇಳುವಂತಹ ಪ್ರಶ್ನೆಗಳೇನೆಂದರೆ, ಬೆಂಗಳೂರಿನಲ್ಲಿ ವಾಹನ ಸಂಚಾರಿಸುವಂತಹ ಸುಮಾರು 12,000 ದಿಂದ 13,000 ಕಿಲೋ ಮೀಟರ್ ರಸ್ತೆಗಳಿವೆ. ಇದರಲ್ಲಿ 8,000 ಕಿಲೋ ಮೀಟರ್ ನಮಗೆ Arterial and Sub Arterial ರಸ್ತೆಗಳಿವೆ. ಇಂತಹ ರಸ್ತೆಗಳಲ್ಲಿ ಆಗಿಂದಾಗ್ಗೆ ನಮಗೆ potholes ಆಗುತ್ತದೆ. ಸುಮಾರು ಒಂದು ಕೋಟಿಗೂ ಹೆಚ್ಚು ವಾಹನ ಸಂಚಾರ ಈ ನಗರದಲ್ಲಿದೆ. ಇಂತಹ ಸಂದರ್ಭದಲ್ಲಿ ನಾವು ಈ ರಸ್ತೆಗಳನ್ನು ವಿನ್ಯಾಸಗೊಳಿಸಿ ಸರಿಯಾದಂತಹ ರೀತಿಯಲ್ಲಿ ಪದರಗಳನ್ನು ಹಾಕಿ ಮಾಡಿದರೆ ಅದು ದೀರ್ಘ ಕಾಲದವರೆಗೆ ಸಂರಕ್ಷಣೆ ಆಗುತ್ತದೆ. ಹಿಂದೆ ವಾಹನ ಸಂಚಾರಕ್ಕೆ ಈ ಎಲ್ಲಾ ರಸ್ತೆಗಳನ್ನು ಮಾಡಿರುವಂಥದ್ದು ಸುಮಾರು ಒಂದು ಲಕ್ಷ ವಾಹನ ಸಂಚಾರ ಇದ್ದಾಗ ನಾವು subgrade, bases ಮಾಡಿರತಕ್ಕಂಥದ್ದು ಆಗಿದೆ. ಆದರೆ ಆ ರಸ್ತೆಯ ಮೇಲೆಯೇ ನಾವು ರಸ್ತೆ ಮಾಡುವಂಥದ್ದು asphalt, macadum ಇವೆಲ್ಲಾ ಹಾಕುತ್ತಿರುವಂಥದ್ದು ಕಾಲಕ್ರಮೇಣ ಮಾಡುತ್ತಾ ಹೋಗುತ್ತಿದ್ದೇವೆಯೇ ಹೊರತಾಗಿ ಅದನ್ನು ನಾವು ಸಂಪೂರ್ಣವಾಗಿ ಕೆಳಗೆ ಇರುವಂತಹ bases or foundation ಸರಿಯಾಗಿ ಇಲ್ಲದಿರುವುದರಿಂದ ಆಗಿಂದಾಗ್ಗೆ ನಮಗೆ potholes ಆಗುತ್ತಿದೆ. ಇದನ್ನು ತಪ್ಪಿಸುವುದಕ್ಕೆ ನಾವು ಸರಿಯಾದಂತಹ ವಿನ್ಯಾಸಗಳನ್ನು ಮಾಡಬೇಕಾಗುತ್ತದೆ. ಇವತ್ತು flexible and rigid ಎಂದು ಇದೆ. ನಾವು pavements ಮಾಡತಕ್ಕಂಥದ್ದು, ಈ rigid ಎನ್ನತಕ್ಕಂಥದ್ದನ್ನು ಕಾಂಕ್ರೀಟ್ ಮಾಡುತ್ತಾರೆ. ಕಾಂಕ್ರೀಟ್ ಮಾಡಿದ ಮೇಲೆ asphalt ಮಾಡಬೇಕಾದಂಥದ್ದು flexible pavement. ಈ pavement ದೀರ್ಘ ಕಾಲಕ್ಕೆ ಅಲ್ಲ, ಕನಿಷ್ಠ ಐದು ವರ್ಷಗಳಿಂದ ಆರು ವರ್ಷದ ವರೆಗೆ ಬರುತ್ತದೆ. ಆದರೆ ಇವತ್ತು ಏನಾಗುತ್ತಿದೆ ಎಂದರೆ, ಪ್ರಾವಿಷನ್ಸ್‌ನಲ್ಲಿ, ಎಸ್ಟಿಮೇಟ್‌ನಲ್ಲಿ, ಡಿ.ಪಿ.ಆರ್., ಗಳಲ್ಲಿ ಅಳವಡಿಸಿಕೊಳ್ಳುತ್ತಾರೆ. ಆದರೆ ಅಲ್ಲಿ ಮಾಡುವಾಗ ಸಮರ್ಪಕ ಗುಣಮಟ್ಟ ಬರುತ್ತಿಲ್ಲ. ಮತ್ತೆ ವಿನ್ಯಾಸ ಏನಿದೆ ಅದನ್ನು ಮಾಡುತ್ತಿಲ್ಲ. ಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಈಗಲೇ ಬಂದರೆ ಎಲ್ಲೆಲ್ಲಿ ಏನಾಗುತ್ತಿದೆ ಎಂಬುದನ್ನು ನಾನು ತೋರಿಸುತ್ತೇನೆ. ಕೇವಲ ನಾವು ಹಣ ಖರ್ಚು ಮಾಡುತ್ತಿದ್ದೇವೆಯೇ ಹೊರತು ಈ ನಗರದಲ್ಲಿ ದೀರ್ಘ ಕಾಲದ ಸಾರ್ವಜನಿಕ ಹಿತದೃಷ್ಟಿಯಿಂದ ಈ ರಸ್ತೆಗಳನ್ನು ಕೊಡುವುದರಲ್ಲಿ ಸರ್ಕಾರ ಆಗಿರಬಹುದು, ಬಿ.ಬಿ.ಎಂ.ಪಿ., ಆಗಿರಬಹುದು, especially ಬೆಂಗಳೂರಿನಲ್ಲಿ ವಿಫಲವಾಗುತ್ತಿದ್ದೇವೆ ಎನ್ನುವ ಭಾವನೆಯಿಂದ ನಾನು ಈ ಪ್ರಶ್ನೆಯನ್ನು ಕೇಳಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರವನ್ನು ನಾನು ಸಂಪೂರ್ಣವಾಗಿ ಓದಿಲ್ಲ. ಓದಿದ್ದರೆ ಇನ್ನಷ್ಟು ಮಾತನಾಡಬಹುದಾಗಿತ್ತು. ಇಷ್ಟನ್ನು ನಾನು ಹೇಳಿ ಮಾನ್ಯ ಮುಖ್ಯಮಂತ್ರಿಗಳ ಉತ್ತರದ ಆಧಾರದ ಮೇಲೆ ಮಾತನಾಡುತ್ತೇನೆ.

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರ ಅತೀ ವೇಗವಾಗಿ ಬೆಳೆಯುತ್ತಿರುವ ನಗರ. ಈಗಾಗಲೇ ನಾನು ಹಿಂದಿನ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಮೂಲ core city ಒಂದು ಕಡೆ, ಮತ್ತೊಂದು ಕಡೆ 8 ಮುನ್ಸಿಪಾಲಿಟಿಗಳು ಸೇರಿರುವಂಥದ್ದು, ಮತ್ತೆ 110 ಹಳ್ಳಿಗಳು ಸೇರಿರುವಂಥದ್ದು. ಅವುಗಳನ್ನು ಅಡಾಪ್ಟ್ ಮಾಡಿದಾಗ ರಸ್ತೆಗಳ size ಆಗಲಿ, ಆ ರಸ್ತೆಗಳ ವಿನ್ಯಾಸವಾಗಲಿ, depth ಆಗಲಿ, ಈಗ ಉದಾಹರಣೆಗೆ 2006-07 ರಲ್ಲಿ 110 ಹಳ್ಳಿಗಳು ಬೆಂಗಳೂರು ನಗರದ ವ್ಯಾಪ್ತಿಗೆ ಸೇರಿವೆ. ಆ ಭಾಗದಲ್ಲೆಲ್ಲಾ ಹಳೆ ಗ್ರಾಮ ಪಂಚಾಯಿತಿ ರಸ್ತೆಗಳೇ ಇದ್ದವು. ಆದರೆ ಇತ್ತೀಚೆಗೆ upgrade ಆಗುತ್ತಾ ಬಂದಿದೆ. ಹಾಗಾಗಿ ಇವತ್ತು ಹೇಗೆ ವಾಹನಗಳು load ಆಗುತ್ತಿವೆ ಅದಕ್ಕನುಗುಣವಾಗಿ ಅಷ್ಟು ಸಾಮರ್ಥ್ಯದ ರಸ್ತೆಗಳನ್ನು ವಿನ್ಯಾಸಗೊಳಿಸುವಂತಹ ಅವಶ್ಯಕತೆ ಇದೆ. ಎರಡನೆಯದಾಗಿ, ಇವತ್ತು ವಿನ್ಯಾಸ ಮಾಡಿರುವಂತಹ ರಸ್ತೆಗಳ ಟ್ರಾಫಿಕ್ number axels ಬೇರೆ, ಇವತ್ತು multi-axel vehicles ಕೂಡ ಓಡಾಡುತ್ತಿದೆ. ಮೂರನೆಯದಾಗಿ, ಈಗಾಗಲೇ ಹಲವಾರು ಬಾರಿ ಚರ್ಚೆಗಳಾಗಿವೆ. Co-ordination between different agencies ಇಲ್ಲದ ಕಾರಣದಿಂದ ರಸ್ತೆಗಳಾದ ತಕ್ಷಣ B.WS.S.B., ಯವರು, BESCOM ರವರು ಬಂದು ರಸ್ತೆಗಳನ್ನು ಅಗೆದು ಅವರ ಕಾಮಗಾರಿಗಳನ್ನು ಕೈಗೊಳ್ಳುತ್ತಾರೆ. ಹೀಗಾಗಿ ಒಂದು ರೀತಿ unplanned road making ಆಗಿದೆ. ಅದಕ್ಕಾಗಿ ನಾವು ಏನು ಸೂಚನೆಯನ್ನು ಕೊಟ್ಟಿದ್ದೇವೆಂದರೆ, ಯಾವುದಾದರೊಂದು ರಸ್ತೆ ಮಾಡಬೇಕಾದರೆ 3-4 ಪ್ರಮುಖ ಏಜನ್ಸಿಗಳಿಂದ ಎನ್.ಓ.ಸಿ., ತೆಗೆದುಕೊಂಡು ಮುಂದೆ ಇಲ್ಲಿ ಎಲ್ಲೂ ಕೇಬಲ್ ಎಳೆಯುವ ಹಾಗಿಲ್ಲ ಎಂದು ಕನ್‌ಫರ್ಮ್ ಮಾಡಿಕೊಂಡು ಮಾಡಬೇಕಾಗುತ್ತದೆ. ಭೂಸ್ವಾಧೀನದ ಸಮಸ್ಯೆಯೂ ಕೂಡ ಇದೆ. ಕೆಲವು ರಸ್ತೆಗಳು ಪೂರ್ಣವಾಗಿ ಹೋಗುವುದಿಲ್ಲ. ಏಕೆಂದರೆ, ಮುಂದೆ ಭೂಮಿ ಇಲ್ಲ ಎನ್ನುವ ಕಾರಣಕ್ಕಾಗಿ ಅರ್ಧಕ್ಕೆ ನಿಂತುಬಿಡುತ್ತದೆ. ಭೂಸ್ವಾಧೀನವನ್ನು ಕೂಡ ಪೂರ್ಣವಾಗಿ ಮಾಡಿಕೊಂಡು ರಸ್ತೆಗಳನ್ನು ಮಾಡಬೇಕು, especially in Arterial and Sub Arterial roads. ಇವೆಲ್ಲಾ ಇಡೀ ಬೆಂಗಳೂರಿಗೆ ಸಂಪರ್ಕ ಕೊಡುವಂತಹ ರಸ್ತೆಗಳಾಗಿರುತ್ತವೆ. ಇತ್ತೀಚೆಗೆ ಟೆಂಡರ್ ಶ್ಯೂರ್ ಮತ್ತು ವೈಟ್ ಟಾಪಿಂಗ್ ಮಾಡಿದ್ದಾರೆ ಅಲ್ಲಿ ಸಾಕಷ್ಟು ವಿನ್ಯಾಸಗಳನ್ನು ನಾವು ಅಳವಡಿಸಿಕೊಂಡಿದ್ದೇವೆ, ಅಲ್ಲೇನು ತೊಂದರೆ ಆಗುತ್ತಿಲ್ಲ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ asphalting ಆಗುವಂಥದ್ದು ಕೆಲವು ಕಡೆ

ಆಗಿದೆ ಅದನ್ನು ಸುಧಾರಣೆ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಬರುವಂತಹ ದಿನಗಳಲ್ಲಿ ಇದು ರಿಪೀಟ್ ಆಗದಂತೆ ನಾವು ನೋಡಿಕೊಳ್ಳುತ್ತೇವೆ. ಆಗಾಗ್ಗೆ potholes ಬೀಳುವಂಥದ್ದು, ಈಗ ಉದಾಹರಣೆಗೆ ಹೇಳುವುದಾದರೆ, B.W.S.S.B, ರವರು ಪೈಪ್, U.G.D., line ಹಾಕಿರುತ್ತಾರೆ, ಅದು ಲೀಕ್ ಆಗುತ್ತಿರುತ್ತದೆ, ಅವರು ರಿಪೇರಿ ಮಾಡುವುದಕ್ಕೆ ಮತ್ತೆ ತೆಗೆಯಲೇಬೇಕು. ಹೀಗಾಗಿ ನಗರ ಪ್ರದೇಶದ ರಸ್ತೆಗಳ ನಿರ್ವಹಣೆಗೆ ವಿಶೇಷವಾದಂತಹ ಇಂಜಿನಿಯರಿಂಗ್ ಅವಶ್ಯಕತೆ ಇದೆ. ಅದನ್ನು ಅಳವಡಿಸುವುದಕ್ಕೆ ಅಧಿಕಾರಿಗಳ ಸಭೆ ಕರೆದು ಸೂಚನೆಯನ್ನು ಕೊಟ್ಟಿದ್ದೇನೆ. ಅದನ್ನು ಅನುಷ್ಠಾನ ಮಾಡುವುದಕ್ಕೆ ಎಲ್ಲಾ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

**ಶ್ರೀ ಪಿ.ಆರ್.ರಮೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ ಅದು ಸರಿಯಿದೆ. ಈ ಹಿಂದೆ ಬೆಂಗಳೂರು ನಗರ ಕೇವಲ 225 ಚದರ ಕಿಲೋ ಮೀಟರ್ ಇತ್ತು, ಅದು ಇವತ್ತು 800 ಚದರ ಕಿಲೋ ಮೀಟರ್ ಆಗಿದೆ. 225 ಕಿಲೋ ಮೀಟರ್‌ಗಳಿದ್ದಂತಹ ಸಂದರ್ಭದಲ್ಲೇ ಆ ನಗರದಲ್ಲಿರುವಂತಹ ರಸ್ತೆಗಳನ್ನೇ ಮೇಲ್ದರ್ಜೆಗೆ ಏರಿಸಿಲ್ಲ. ನಾವು ಅದಕ್ಕೆ ಸೂಕ್ತವಾದ ಹಣವನ್ನು ಮತ್ತು ವಿನ್ಯಾಸವನ್ನು ನಾವು ಪ್ರತಿ ವರ್ಷ ಮಾಡುತ್ತಲೇ ಇದ್ದೇವೆ. ಆದರೆ ಅಲ್ಲಿ execute ಆದಂತಹ ಸಂದರ್ಭದಲ್ಲಿ ಯಾವ ರೀತಿ ನಾವು ಮಾಡಬೇಕಾಗಿದೆ ಅದನ್ನು ಮಾಡುತ್ತಿಲ್ಲ. ಹಾಗಾಗಿ ಸರಿಯಾದ ರೀತಿಯಲ್ಲಿ ಚೇಂಬರ್, ಡ್ರೈನೇಜ್ ವ್ಯವಸ್ಥೆ ಇಲ್ಲ, ಸರಿಯಾದಂತಹ shoulders ಕೊಡುವುದಕ್ಕಾಗುತ್ತಿಲ್ಲ. ಸರಿಯಾಗಿ Secondary drains ಗೆ connectivity ಹೋಗುತ್ತಿಲ್ಲ. ಹೀಗಾಗಿ ಮಳೆ ಬಂದಾಗ ಪ್ರವಾಹ ಆಗುವಂಥದ್ದು ಆಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು co-ordination ಬಗ್ಗೆ ಮಾತನಾಡಿದರು. ನಾವು 2020-21 ರಲ್ಲಿ ಮಾಡಿದಂತಹ ಕಾಯ್ದೆಯಲ್ಲಿ Zonal Commissioner ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಮಾಡಿದ್ದೇವೆ. ಆ ಸಮಿತಿಯಲ್ಲಿ ಪೋಲೀಸರು ಇರುತ್ತಾರೆ, B.W.S.S.B., ನವರೂ ಸಹ ಇರುತ್ತಾರೆ ಮತ್ತು ಎಲ್ಲಾ ಇಲಾಖೆಯ ವತಿಯಿಂದ coordination ಆಗುವಂತಹ ಒಂದು mechanism ತಂದಿರುವಂತಹ ಒಂದು ಕಾಯ್ದೆ ನಿರೂಪಣೆಯಾಗಿದೆ. ಈ ಕಾಯ್ದೆಯಲ್ಲಿ ಇದನ್ನು ಸರಿಯಾದಂತಹ ಪ್ರಮಾಣದಲ್ಲಿ ಇವತ್ತಿನವರೆಗೂ ಚಾಲನೆ ಕೊಟ್ಟಿಲ್ಲ. ಅದರ ಜೊತೆಗೆ ನಗರಕ್ಕೆ *Bangalore Metropolitan Planning Committee* (BMPC) ಎನ್ನುವ ಸಮಿತಿ ಇದೆ. ಮಾನ್ಯ ಮುಖ್ಯಮಂತ್ರಿಗಳು ಬಂದಾಗಿನಿಂದ ಅವರ ಅಧ್ಯಕ್ಷತೆಯಲ್ಲಿ *Bangalore Metropolitan Planning Committee* ಯಿಂದ ಒಂದು ಸಭೆಯೂ ಆಗಿಲ್ಲ. ಈ ಸಭೆಗಳು ಆದಾಗ

---

ಸಮಸ್ಯೆಗಳಿಗೆ ಯೋಜನಾಬದ್ಧವಾದಂತಹ ಪರಿಹಾರವನ್ನು ಕೊಡುವುದಕ್ಕಾಗುತ್ತದೆ. ಹಾಗಾಗಿ ಏನು ರಸ್ತೆಗಳನ್ನು ಮಾಡುತ್ತಾರೆ, ಅದಕ್ಕೆ Experts' Committee ಗಳನ್ನು ಇಡಬೇಕು. ನಿವೃತ್ತಿಯಾಗಿರುವಂತಹ ಇಂಜಿನಿಯರ್‌ಗಳಿದ್ದಾರೆ, ಅವರ ಸೇವೆಯನ್ನು ಪಡೆಯಿರಿ. ಇವತ್ತು ರಸ್ತೆಗಳನ್ನು ಏನು ಮಾಡಿದ್ದಾರೆ ಅದನ್ನು assess ಮಾಡುವುದಕ್ಕೆ ಇಂತಹ ಇಂಜಿನಿಯರ್‌ಗಳನ್ನು ಉಪಯೋಗಿಸಿ ಸರಿಯಾದಂತಹ ಪ್ರಮಾಣದಲ್ಲಿ ಉತ್ತಮವಾದಂತಹ ರಸ್ತೆ, ದೀರ್ಘ ಕಾಲ ಬಾಳುವಂತಹ ರಸ್ತೆ, pothole ಆಗದಿರುವಂತಹ ರಸ್ತೆ, pothole ಗೆ ಪ್ರಮುಖವಾದಂತಹ ಕಾರಣ ಲೀಕೇಜ್ ಇರಬಹುದು, ಮತ್ತೊಂದು crack ಆಗುವುದೂ ಇರಬಹುದು. Crack ಆಗುವುದು ಏಕೆಂದರೆ, subways ಸರಿಯಿಲ್ಲದಿದ್ದರೆ ಅದು automatically crack ಬರುತ್ತದೆ. ಹಾಗಾಗಿ crack ಏಕೆ ಬರುತ್ತದೆ ಎಂಬುದು ಬಹಳ ಮುಖ್ಯ. ಇವೆಲ್ಲಾ ಸರಿಯಾದ ರೀತಿಯಲ್ಲಿ, ಸಮಗ್ರವಾದ ರೀತಿಯಲ್ಲಿ construction ಆಗುವಂತಹ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಯೋಜನೆಯನ್ನು ರೂಪಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

(ಮುಂದು)

226/10-3-2022/11-40/bkp-md

(ಸಭಾಪತಿಗಳು ಪೀಠದಲ್ಲಿದ್ದರು)

**ಶ್ರೀ ಬಸವರಾಜ ಬೊಮ್ಮಾಯಿ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ನಾನು ಬೆಂಗಳೂರು ಅಭಿವೃದ್ಧಿ ಖಾತೆಯನ್ನು ವಹಿಸಿಕೊಂಡ ಮೇಲೆ ಬೇರೆ ಬೇರೆ ಸ್ಥಳಗಳಲ್ಲಿ 8-10 ಸಭೆಗಳನ್ನು ಮಾಡಿದ್ದೇನೆ, inspection ಮಾಡಿದ್ದೇನೆ. ಹೀಗಾಗಿ ಸಮಸ್ಯೆಗಳ ಸಂಪೂರ್ಣ ಅರಿವು ಇದೆ. Zonal meeting ಗಳು regular ಆಗಿ ಆಗುವ ರೀತಿಯಲ್ಲಿ ನಾವು ನೋಡಿಕೊಂಡಿದ್ದೇವೆ. ಕಾನೂನನ್ನು ಅನುಷ್ಠಾನ ಮಾಡುವ ಸಲುವಾಗಿ ಏನು ಜಂಟಿ ಆಯುಕ್ತರ ನೇತೃತ್ವದಲ್ಲಿ ಬೇರೆ ಬೇರೆ ಇಲಾಖೆಯಲ್ಲಿ regular ಆಗಿ ಆಗುವಂತೆ ನೋಡುತ್ತಿದ್ದೇವೆ. ಹೀಗಾಗಿ, ಅವರು ಏನು ಹೇಳಿದ್ದಾರೆ, ಅದನ್ನು ಕಾರ್ಯಗತ ಮಾಡಲು ಈಗಾಗಲೇ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮತ್ತು ಇನ್ನು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಸಹ ಅಳವಡಿಸಿಕೊಂಡು ಮುಂದಿನ ದಿನಗಳಲ್ಲಿ ಕ್ರಮಗಳನ್ನು ಕೈಗೊಳ್ಳುತ್ತೇವೆ.

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೆ, ನ್ಯಾಯಾಲಯಗಳು ಇವತ್ತು ಬೆಂಗಳೂರು ಮಹಾನಗರ ಪಾಲಿಕೆಯನ್ನು ಆಳುತ್ತಿವೆ, ಇದನ್ನು ದಯವಿಟ್ಟು ನಿಲ್ಲಿಸಿ. ನಿಮಗೆ ಎಲ್ಲಾ ಆದೇಶಗಳು ನ್ಯಾಯಾಲಯದಿಂದಲೇ ಬರುತ್ತಿವೆ. ಅದನ್ನು ತಪ್ಪಿಸುವಲ್ಲಿ ಕಾರ್ಯೋನ್ಮುಖರಾಗಬೇಕೆಂದು ಕೇಳಿಕೊಳ್ಳುತ್ತೇನೆ.

**ಪ್ರಶ್ನೆ ಸಂಖ್ಯೆ 1489**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ. ಹರೀಶ್ ಕುಮಾರ್:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಮಂಡಿಸಿದ್ದು, ಅದು ಸರಿಯಾಗಿದೆ, ಧನ್ಯವಾದಗಳು.

**“ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು**

---

**ಪ್ರಶ್ನೆ ಸಂಖ್ಯೆ 1493**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್. ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಗೃಹ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬಹುಶಃ ಕೊಡಗು ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳೆಯರೇ ಇರುವ ಮತ್ತು ಒಂಟಿ ಮನೆಗಳ ಮೇಲೆ ಅಪರಿಚಿತರಿಂದ ದಾಳಿ, ಹಲ್ಲೆ ಮತ್ತು ಸರಣಿ ದರೋಡೆಗಳು ಆಗುತ್ತಿದ್ದು ಬಹುತೇಕ ಪ್ರಕರಣಗಳಲ್ಲಿ ಅಸ್ಸಾಮಿಗಳ ಸೋಗಿನಲ್ಲಿರುವ ಬಂಗಾಳಿಗಳೇ ಬಾಗಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವ ಪ್ರಶ್ನೆಗೆ ಸಚಿವರು ಬಂದಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅದು ನಿಜ ಇರಬಹುದು. ಅದರೂ ಕೂಡ ಕೊಡಗು ಜಿಲ್ಲೆಯ್ ಅರಣ್ಯ ಪ್ರದೇಶದ ವಿಚಾರ ಮಾನ್ಯ ಸಚಿವರಿಗೆ ಗೊತ್ತಿದೆ. ಬಹುತೇಕ ಮನೆಗಳು ಕಾಫಿ ತೋಟದ ನಡುವೆ ಒಂಟಿ ಮನೆಗಳೇ ಇದೆ. ಈ ಮನೆಗಳಲ್ಲಿ ಯುವಕರು ಸಾಮಾನ್ಯವಾಗಿ ಹೊರಗಡೆ ಕೆಲಸಕ್ಕೆ ಹೋಗಿರುತ್ತಾರೆ.ವೃದ್ಧರು ಮತ್ತು ಮಹಿಳೆಯರು ಜಾಸ್ತಿ ವಾಸಿಸುವುದರಿಂದ ಅಲ್ಲಿ ದರೋಡೆ ಪ್ರಕರಣಗಳಿಗೆ ಬಲಿಯಾಗುತ್ತಿದ್ದಾರೆ. ಮಾನ್ಯ ಸಭಾಪತಿಯವರೆ, ನಾವು ಸೂಕ್ಷ್ಮವಾಗಿ ಗಮನಿಸಬೇಕಾದರೆ, ಕೋವಿಡ್-19 ನಂತರ ಆ ಸಂದರ್ಭದಲ್ಲಿ ಪೋಲೀಸ್ ನವರು ಸಹ ಅಲ್ಲಿಗೆ ಯಾರು ಹೋಗುವುದಿಲ್ಲ. ಮತ್ತೆ ಸಾರ್ವಜನಿಕರು ತಿರುಗಾಡುವುದಿಲ್ಲ. ಅಂತಹ ಒಂಟಿ ಮನೆಗಳನ್ನು ಈ ದರೋಡೆಕೋರರು ಆರಿಸಿದ್ದಾರೆನ್ನುವುದು ನಮ್ಮ ಅನಿಸಿಕೆಯಾಗಿದೆ. ಬಹುಶಃ ತುಂಬಾ ಜನ ಅಸ್ಸಾಮಿಗಳಿದ್ದಾರೆ, ಅವರ ಸೋಗಿನಲ್ಲಿ ಬಂಗಾಳಿಗಳು ಬಂದಿಲ್ಲವೆಂದು ಹೇಳಲಿಕ್ಕೆ ಆಗುವುದಿಲ್ಲ. ಇದನ್ನು ಮಾನ್ಯ ಸಚಿವರು ಗಮನಿಸಬೇಕು. ಒಂಟಿ ಮನೆ ಎಂಧು ತಿಳಿದುಕೊಂಡಿರುವ ಸ್ಥಳೀಯರ ಪ್ರಭಾವವೂ ಸಹ ಇರಬಹುದು ಎನ್ನುವುದು ನಮ್ಮ ಅನಿಸಿಕೆಯಾಗಿದೆ. ಹೀಗಾಗಿ, ತಾವು ಉತ್ತರದಲ್ಲಿ ಉತ್ತರದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿದ್ದು, Police Force ಅನ್ನು ಹಾಕಿರುವುದಾಗಿ ಹೇಳಲಾಗಿದೆ. ಆದರೆ ಇಲ್ಲಿ ರಾತ್ರಿ ಗಸ್ತಿಗೆ ನೇಮಿಸುವಾಗ ಅವರವರ ಬೀಟ್ ವ್ಯಾಪ್ತಿ ಒಂಟಿ ಮಹಿಳೆಯರು ವಾಸಿಸುವ ಮನೆಗಳಿಗೆ ಭೇಟಿ ನೀಡಬೇಕು. ಜೊತೆಗೆ ಅಲ್ಲಿ CC camera ವನ್ನು

ಅಳವಡಿಸಬೇಕೆಂದು ಉತ್ತರದಲ್ಲಿ ಹೇಳಿದ್ದೀರಿ. ಬಹುಶಃ ಅಲ್ಲಿ ಏನಾಗಿದೆ ಎಂದು ಹೇಳಿದರೆ ಎಲ್ಲರಿಗೂ CC camera ಹಾಕುವಂತಹ ಪರಿಸ್ಥಿತಿ ಇರುವುದಿಲ್ಲ. ನಮ್ಮ ಜಿಲ್ಲೆ ಪುಟ್ಟ ಜಿಲ್ಲೆಯಾಗಿದೆ. ಆದರೂ ಕೂಡ ಇಂತಹ ಒಂಟಿ ಮನೆಗಳು ಎಂದರೆ ಮಹಿಳೆಯರು ಮತ್ತು ವೃದ್ಧರು ವಾಸಿಸುವ ಮನೆಗಳಿಗೆ ನಾನು ಈಗಾಗಲೇ ಹೇಳಿದ ಹಾಗೆ ಅತಿ ಹೆಚ್ಚಾಗಿ Police Force ಅನ್ನು ಕೊಡಬೇಕಾಗುತ್ತದೆ, ಅದನ್ನು ಪರಿಶೀಲಿಸಬೇಕಾಗುತ್ತದೆ. ತಮ್ಮ ಇಲಾಖೆಯವರಿಗೆ ಇನ್ನು ಹೆಚ್ಚಿನ Police Force ಮತ್ತು ಸಿಬ್ಬಂದಿಗಳನ್ನು ಕೊಡಬೇಕೆಂಧು ಹೇಳುತ್ತೇನೆ. ನಮ್ಮ ಪೋಲೀಸ್ ಇಲಾಖೆಯವರು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ, ಈ ಪ್ರಕರಣಗಳಲ್ಲಿ ಅಪರಾಧಿಗಳನ್ನು ಕಂಡು ಹಿಡಿಯಲು ಕಷ್ಟಪಡುತ್ತಿದ್ದಾರೆ, ಮತ್ತು ಅದಕ್ಕೆ ತುಂಬಾ ದಿವಸಗಳನ್ನು ತೆಗೆದುಕೊಳ್ಳುತ್ತದೆ. ಹೀಗಾಗಿ, ನಾಗರಿಕರು ಒಂದು ರೀತಿಯಲ್ಲಿ ಆತಂಕಕ್ಕೆ ಒಳಗಾಗುತ್ತಾರೆ. ಮಹಿಳೆಯರಿಗೂ ಸಹ ಕಷ್ಟವಾಗುತ್ತದೆ.

ಆದುದರಿಂದ ಒಂಟಿ ಮನೆಗಳಿರುವ ಮಹಿಳೆಯರಿಗೆ ಹೆಚ್ಚಿನ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಾ, ಆದಷ್ಟು ಶೀಘ್ರವಾಗಿ ಯಾರು ಅಪರಾಧಿಗಳಿದ್ದಾರೆ, ಅವರನ್ನು ಬಂಧಿಸಿ, ಶಿಕ್ಷೆ ಕೊಡಬೇಕು. ತಕ್ಷಣ ಜಾಮೀನು ಕೊಟ್ಟು ಅಪರಾಧಿಗಳನ್ನು ಹೊರಗಡೆ ಬಿಡುವ ಹಾಗೆ ಮಾಡಬಾರದು. ಏಕೆಂದರೆ, ಅದು ಜನರಿಗೆ ಗೊತ್ತಾಗಬೇಕು. ಈಗಾಗಲೇ ಅನೇಕ ಕೊಲೆಗಳನ್ನು ಸಹ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಕೋವಿ ಲೈಸೆನ್ಸ್ ಎಲ್ಲರಿಗೂ ಇದೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರು ಪ್ರಸ್ತಾಪ ಮಾಡಿರತಕ್ಕಂತಹ ಸಂಗತಿ ಖಂಡಿತವಾಗಿ ಇದೆ. ನಮ್ಮ ಮಲೆನಾಡಿನ ಕೊಡಗು ಜಿಲ್ಲೆ ಒಂದು ವಿಶೇಷವಾದ ಭೂ ಪ್ರದೇಶವಾಗಿದೆ. ಕಾಡು ಇದೆ, ಎಸ್ಟೇಟ್ ಇದೆ Tea and Coffee Estate ಗಳ ನಡುವೆ ಒಂಟಿ ಮನೆಗಳಿವೆ. ಈ ಮೊದಲು ಭಾಗದ ನಮ್ಮ ಮಲೆನಾಡಿನಲ್ಲಿ ಈ ರೀತಿಯ robbery, ಕಳ್ಳತನ ಆಗುವಂತಹದ್ದು ಬಹಳ ಕಡಿಮೆ ಇತ್ತು. ಏಕೆಂದರೆ, ನಮ್ಮಲ್ಲಿ ಕಳ್ಳತನ ಮಾಡಿ ಸುಲಭವಾಗಿ ತಪ್ಪಿಸಿಕೊಂಡು ಹೋಗಲಿಕ್ಕೆ ಆಗುವುದೇ ಇಲ್ಲ. ಮುಖ್ಯ ರಸ್ತೆಗೆ ಮತ್ತು ಮನೆಗೂ ತುಂಬಾ ದೂರವಿರುತ್ತದೆ. ಆದರೆ,

ಇತ್ತೀಚಿನ ದಿವಸಗಳಲ್ಲಿ ಅಲ್ಲಲ್ಲಿ ಕಳ್ಳತನವಾಗುವುದರ ಬಗ್ಗೆ ವರದಿಗಳಾಗುತ್ತಿವೆ, 2019 ರಲ್ಲಿ ಎಷ್ಟು ಪ್ರಕಣಗಳು, 2020ರಲ್ಲಿ ಎಷ್ಟು ಪ್ರಕಣಗಳು, 2021 ರಲ್ಲಿ ಎಷ್ಟು ಪ್ರಕರಣಗಳು ನಡೆದಿವೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರಿಗೆ ವಿವರವನ್ನು ಒದಗಿಸಿದ್ದೇನೆ. ಮತ್ತೆ ಬಹಳಷ್ಟು ಪ್ರಕರಣಗಳಲ್ಲಿ ಇದನ್ನು ಪೊಲೀಸರು ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ. ಇನ್ನೊಂದು ಅವರು ಸಂಶಯ ವ್ಯಕ್ತ ಮಾಡಿರುವುದು ಏನೆಂದರೆ, Coffee Estate ಗಳಲ್ಲಿ ಅಸ್ಸಾಮಿಗಳ ಸೋಗಿನಲ್ಲಿ ಬಾಂಗ್ಲಾ ದೇಶಿಯರು ಬಹಳಷ್ಟು ಜನರು labours ಇದ್ದಾರೆನ್ನುವುದು ಇದೆ. ಕೊಡಗು ಜಿಲ್ಲೆ ಒಂದರಲ್ಲಿಯೇ ಸುಮಾರು 8 ಸಾವಿರಕ್ಕೂ ಹೆಚ್ಚು ಜನರು ಆ ಭಾಗದಲ್ಲಿ ಲೇಬರ್ಸ್ ಇದ್ದಾರೆ. ಅದರಲ್ಲಿ ಬಹಳಷ್ಟು ಜನರು ಬಂಗ್ಲಾದೇಶಿಯರು ಬಂದಿದ್ದಾರೆ ಎನ್ನುವಂತಹದ್ದು ನಮಗೆ ಮಾಹಿತಿ ಲಭ್ಯವಾಗುತ್ತಿದೆ. ಈಗಾಗಲೇ ನಾನು ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಮಾತನಾಡಿ, ಆಯಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎಷ್ಟು ಜನರು ಹೊಸಬರು ಬಂದಿದ್ದಾರೆ, ಮತ್ತೆ, ವಿಶೇಷವಾಗಿ ಅವರು ಬರುವಾಗ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದ ಕೆಲವು ಜಿಲ್ಲೆಗಳಲ್ಲಿ ಭದ್ರತೆಯನ್ನು ತೆಗೆದುಕೊಂಡು ಬರುತ್ತಾರೆ.

**ಸಭಾಪತಿಯವರು:-** ಆಧಾರಕಾರ್ಡ್ ತೆಗೆದುಕೊಂಡು ಬರುತ್ತಾರೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೆ, Aadhar Card and Voter ID Card ಮಾಡಿಕೊಡುವಂತಹ ಒಂದು ದೊಡ್ಡ ಜಾಲವೇ ಇದೆ. ಅಲ್ಲಿ ಇರುವಂತಹ ಬಡವರಿಗೆ ಮತು ಸಾಮಾನ್ಯ ಜನರಿಗೆ card ಸಿಗದೇ ಇದ್ದರೂ ಇವರಿಗೆ ಸಿಗುತ್ತದೆ. ಇವರನ್ನು ಪತ್ತೆ ಹಚ್ಚಲಿಕ್ಕೆ ವಿಶೇಷವಾದ ಪ್ರಯತ್ನ ಮಾಡುತ್ತಿದ್ದೇವೆ. ಅವರುಗಳನ್ನು ವಿಚಾರಿಸಿದರೆ, ಅಸ್ಸಾಂನ ಯಾವುದೋ ಒಂದು ಹಳ್ಳಿಯ ಹೆಸರನ್ನು ಹೇಳುತ್ತಾರೆ ಮತ್ತು ಪಶ್ಚಿಮ ಬಂಗಾಳದ ಯಾವುದೋ ಒಂದು ಹಳ್ಳಿಯ ಹೆಸರನ್ನು ಹೇಳುತ್ತಾರೆ. ನಾನು ಈ ವಿಚಾರದಲ್ಲಿ ಏನೇನು ಮಾಡಬೇಕೆಂದು ಹೇಳಿದ್ದೇನೆ. ಹೌದಾ ಎಂದು ಹೇಳಿ, ಆ ಹಳ್ಳಿಯ ವ್ಯಾಪ್ತಿಯಲ್ಲಿ ಬರುವಂತಹ ಪೊಲೀಸರ ಜೊತೆಯಲ್ಲಿಯೂ ಸಹ ಸಂಪರ್ಕ ಇಟ್ಟುಕೊಂಡು cross check ಮಾಡಬೇಕೆನ್ನುವುದನ್ನು ಕೂಡ ಈಗಾಗಲೇ ಹೇಳಿದ್ದೇವೆ. ಹೀಗಾಗಿ, ಬಂದಂತಹವರ ಮೇಲೆ

ವಿಶೇಷವಾದಂತಹ ನಿಗಾ ಇಡಲಿಕ್ಕೆ ವಿಶೇಷವಾದಂತಹ ವ್ಯವಸ್ಥೆಯನ್ನು ಈಗಾಗಲೇ ಮಾಡುವಂತಹ ಕೆಲಸಗಳನ್ನು ಮಾಡಿದ್ದೇವೆ. ಎಲ್ಲಾ ಕಡೆ 112 ಸಂಖ್ಯೆಯ ವಾಹನಗಳನ್ನು ಬಿಟ್ಟಿದ್ದೇವೆ. 112 ಗೆ ಫೋನ್ ಮಾಡಿದರೆ ನಗರದಲ್ಲಿ ಆದರೆ 20 ನಿಮಿಷದಲ್ಲಿ ಪ್ರಕರಣವಾದ ಸ್ಥಳಕ್ಕೆ reach ಆಗುತ್ತಾರೆ. ಹಳ್ಳಿಗಳಲ್ಲಿ ಪ್ರಕರಣ ನಡೆದರೆ ಅಲ್ಲಿಗೆ ಹೆಚ್ಚು ಅಂದರೆ 40 ನಿಮಿಷಗಳಲ್ಲಿ ಹೋಗಿ reach ಆಗುತ್ತಾರೆ. ಹೀಗಾಗಿ ಒಂಟಿ ಮನೆ ಇರುವಂತಹ ಕಡೆ ಈ ವಿಷಯವಾಗಿ ಎಲ್ಲಾ ಕಡೆ ಪ್ರಚಾರ ಮಾಡಿದ್ದೇವೆ. ಇಂತಹ ನಂಬರ್‌ನ ಸಂಪರ್ಕ ಇಟ್ಟುಕೊಳ್ಳಬೇಕೆಂದು ಹೇಳಿದ್ದೇವೆ. ಆ ಭಾಗದಲ್ಲಿ 24X7 ಸಮಯದ ಕಾಲ ಗಸ್ತು ವಾಹನ ತಿರುಗುತ್ತಿರುತ್ತದೆ. ಮತ್ತು ಅವರು ಹೇಳಿದ ಹಾಗೆ ಯಾವುದಾದರೂ ಒಂಟಿ ಮನೆಗಳಿಗೆ ಭದ್ರತೆ ಬೇಕೆಂದು ಹೇಳಿದರೆ ಆ ಮನೆಗಳಿಗೆ ಭದ್ರತೆಯನ್ನು ಕೊಡುವಂತಹ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲಿ ಮಾಡುತ್ತೇವೆ. ಹೀಗಾಗಿ ಕೊಡಗು ಮತ್ತು ಮಲೆನಾಡಿನ ಭಾಗದಲ್ಲಿ ಭದ್ರತೆ ಒದಗಿಸುವಲ್ಲಿ ANF *(Anti-Naxal Force)* ಗಳು ಅಲ್ಲಿ ಇವೆ. ಆದ್ದರಿಂದ, ವಿಶೇಷವಾದ ಗಮನವನ್ನು ಗೃಹ ಇಲಾಖೆ ಹರಿಸುತ್ತಿದೆ. ಹಾಗೆಯೇ ಬಹಳಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿದ್ದೇವೆ. ಪತ್ತೆ ಹಚ್ಚುವುದು ಕಷ್ಟ ಮತ್ತು ಸಾಕ್ಷ್ಯಾಧಾರಗಳು ಸಿಗುವುದು ಕಷ್ಟ. ಮತ್ತೆ, ಯಾರು ಅನುಕೂಲಸ್ಥರಿದ್ದಾರೆ, ಅವರು CC Camera ಗಳನ್ನು ಅಳವಡಿಸಿಕೊಳ್ಳಬಹುದು. ಅಂತಹವರಿಗೆ ಪೋಲೀಸ್‌ನವರು ಮಾಹಿತಿಯನ್ನು ಕೊಟ್ಟಿದ್ದಾರೆ. CC Camera ಗಳನ್ನು ಗಳನ್ನು ಇಂತಿಂತಹ point ನಲ್ಲಿ ಹಾಕಬೇಕೆಂದು ಹೇಳಿದ್ದಾರೆ. ಬಹಳಷ್ಟು ಮಂದಿ CC Camera ಗಳನ್ನು ಅಳವಡಿಸಿಕೊಳ್ಳುವಲ್ಲಿ ವಿಶೇಷವಾದ ಪ್ರಯತ್ನವನ್ನು ಮಾಡಿದ್ದಾರೆ. ಇದರ ಬಗ್ಗೆ ವಿಶೇಷವಾದ ನಿಗಾ ವಹಿಸುತ್ತೇವೆ.

---

**ಪ್ರಶ್ನೆ ಸಂಖ್ಯೆ 1479**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಲೀಂ ಅಹಮದ್:-** ಸನ್ಮಾನ್ಯ ಸಭಾಪತಿಯವರೆ, ಇದು ಒಂದು ಬಹಳ ಮಹತ್ವವಾದ ಪ್ರಶ್ನೆಯಾಗಿದೆ. ಗೃಹ ಇಲಾಖೆಯಲ್ಲಿ ಹಾಲಿ ಇರುವ ಸಿಬ್ಬಂದಿಗಳು ಪ್ರಸ್ತುತ ಇರುವ ಜನಸಂಖ್ಯೆಗೆ ಅನುಗುಣವಾಗಿ ಇದೆಯೇ ಎನ್ನುವ ಪ್ರಶ್ನೆಗೆ ರಾಜ್ಯದಲ್ಲಿರುವ ಜನಸಂಖ್ಯೆಗೆ ಅನುಪಾತವು 577 ಇರುತ್ತದೆ ಎಂದು ಹೇಳಿದ್ದಾರೆ. ನನ್ನ ನೇರ ಪ್ರಶ್ನೆ ಏನು ಎಂದರೆ ಎಷ್ಟು ಇರಬೇಕಾಗಿತ್ತೋ ಅಷ್ಟು ಅನುಪಾತವು ಇದೆಯೇ ಇಲ್ಲವೇ ಎನ್ನುವುದು ನನ್ನ ಉಪ ಪ್ರಶ್ನೆಯಾಗಿದೆ. ಎರಡನೆಯದಾಗಿ, ಕಾನೂನು ಸುವ್ಯವಸ್ಥೆ ಕಾಪಾಡಲು ಆಧುನಿಕ ತಂತ್ರಜ್ಞಾನ ವ್ಯವಸ್ಥೆಯನ್ನು ಇಲಾಖೆಗೆ ಬಳಸಿಕೊಳ್ಳಲು ಸರ್ಕಾರಕ್ಕೆ ಇರುವ ಸಮಸ್ಯೆಗಳೇನು ಎನ್ನುವುದಕ್ಕೆ ನೀವು ಈಗಾಗಲೇ ಗಸ್ತು ವಾಹನ, ಅದೇ ರೀತಿ 'Safe City Programme' and 'Smart City' Programme ಬಗ್ಗೆ ವಿಚಾರಗಳನ್ನು ಹೇಳಿದ್ದೀರಿ. ನಾನು ಏನು ಹೇಳುತ್ತಿದ್ದೇನೆಂದರೆ, ಕೇವಲ ಪೋಲೀಸ್ ವಾಹನಗಳಲ್ಲ, ಸ್ಟೇಷನ್‌ಗಳು ಮಾತ್ರವಲ್ಲ. ನಿಮ್ಮ intelligence improve ಮಾಡುವುದಕ್ಕೆ ನೀವು ಏನು ಕೆಲಸ ಮಾಡಿದ್ದೀರಿ? Intelligence Officers ಗೆ ತರಬೇತಿಯನ್ನು ಕೊಡಲಾಗಿದೆಯೇ?

**ಮುಂದು.**

**(227) 10.03.2022 11.50 ಎಸ್‌ವಿ-ಎಂಡಿ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಲೀಂ ಅಹಮದ್ (ಮುಂದು):-**

ನಿಮ್ಮ ಇಂಟೆಲಿಜೆನ್ಸ್ ಅಧಿಕಾರಿಗಳಿಗೆ ತರಬೇತಿಯನ್ನು ಕೊಡಲಾಗಿದೆಯೇ? ಐ.ಬಿ. ಮೂಲಕ ಇಂಟೆಲಿಜೆನ್ಸ್‌ನವರಿಗೆ ಏನು ಮಾಹಿತಿ ಕೊಡುವಂತೆ ತಾವು ಮಾಡಿದ್ದೀರಿ? ಅದೇ ರೀತಿ ಜನರಿಗೆ ವಿಶ್ವಾಸ

ಬರುವ ರೀತಿಯಲ್ಲಿ ತಮ್ಮ ಇಲಾಖೆಯಿಂದ ಜನರಿಗೆ ಯಾವ ಸಂದೇಶವನ್ನು ಕೊಡುವುದಕ್ಕೆ ಕ್ರಮ ಕೈಗೊಂಡಿದ್ದೀರಿ? ಡಿ.ಜಿ.ಪಿ.ಯಾಗಿದ್ದಂತಹ ಶ್ರೀ ಬಾಲಕೃಷ್ಣ ರಾವ್ ಎನ್ನುವವರು 24 ವರ್ಷಗಳ ಹಿಂದೆ ನೇಮಕಾತಿಯ ಕುರಿತು ಒಂದು ವರದಿಯನ್ನು ಕೊಟ್ಟಿದ್ದರು. ಅದರ ಪ್ರಕಾರವಾಗಿ ನೇಮಕಾತಿಗಳನ್ನು ಮಾಡಲಾಗಿದೆಯೇ? ಈ ವರ್ಷ ನಿವೃತ್ತಿಯಿಂದ ತೆರವಾದ ಹುದ್ದೆಗಳನ್ನು ಇಷ್ಟು ದಿನಗಳೊಳಗೆ ಭರ್ತಿ ಮಾಡಬೇಕೆಂಬ ಯೋಜನೆ ಇದೆಯೇ? ಇಲ್ಲವಾದಲ್ಲಿ ಕಾಲಕಾಲಕ್ಕೆ ತಾವು ನೇಮಕಾತಿಗಳನ್ನು ಮಾಡಲಾಗುತ್ತದೆಯೇ? ಸಂಚಾರ ವ್ಯವಸ್ಥೆಯು ಸಂಪೂರ್ಣವಾಗಿ ಹಾಳಾಗಿದೆ. ಅದನ್ನು ಯಾವ ರೀತಿ ಸರಿ ಪಡಿಸಲಾಗುವುದು ಎಂದು ಕೇಳಬಯಸುತ್ತೇನೆ.

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ಜನಗಣತಿಯ ಜನಸಂಖ್ಯೆಯ ಆಧಾರದ ಮೇಲೆ ನಮ್ಮ ರಾಜ್ಯದಲ್ಲಿ 577 ಜನರಿಗೆ ಒಬ್ಬ ಪೋಲೀಸ್ ಇದ್ದಾರೆ. ದಾಮಾಶಾ ಲೆಕ್ಕದಲ್ಲಿ ದೇಶದಲ್ಲಿ 568 ಜನರಿಗೆ ಒಬ್ಬ ಪೋಲೀಸ್ ಇದ್ದಾರೆ. ಒಟ್ಟು 1,06,000 ಸಿಬ್ಬಂದಿ ನಮ್ಮ ಇಲಾಖೆಯಲ್ಲಿದ್ದಾರೆ. ಐದು ವರ್ಷಗಳ ಹಿಂದೆ ಒಟ್ಟಾರೆ 35,000 ಖಾಲಿ ಹುದ್ದೆಗಳಿದ್ದವು. ಈಗ ಅದನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಈ ಬಾರಿ ನೇಮಕಗೊಂಡಿರುವ ಸಬ್ ಇನ್ಸ್‌ಪೆಕ್ಟರ್‌ಗಳು ತರಬೇತಿಯನ್ನು ಮುಗಿಸಿ ಬಂದ ನಂತರ ಎಲ್ಲಾ ಹುದ್ದೆಗಳೂ ಭರ್ತಿಯಾಗುತ್ತವೆ. ಒಂದೇ ಒಂದು ಖಾಲಿ ಹುದ್ದೆ ಇರುವುದಿಲ್ಲ. ಹಾಗೆಯೇ ಪೋಲೀಸ್ ಕಾನ್ಸ್‌ಟೇಬಲ್ ಹುದ್ದೆಗಳೂ ಸಹ ಭರ್ತಿಯಾಗುತ್ತವೆ. ಕಳೆದ ಮೂರು ವರ್ಷಗಳಲ್ಲಿ ಯಾವುದೇ ಇಲಾಖೆಯಲ್ಲಿ ಆಗದಿರುವಷ್ಟು recruitment ಗೃಹ ಇಲಾಖೆಯಲ್ಲಿ ಆಗುತ್ತಿದೆ ಎನ್ನುವುದು ತಮಗೆಲ್ಲಾ ತಿಳಿದಿರುವ ವಿಷಯ. ಪ್ರತಿ ವರ್ಷ 4,000 ಪೋಲೀಸರನ್ನು ಮತ್ತು ಖಾಲಿ ಇರುವ ಎಲ್ಲಾ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳನ್ನು ಭರ್ತಿ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. SOCO (Scene of Crime Officer) ಗೋಸ್ಕರ 206 ವಿಜ್ಞಾನಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ.

ಮಾನ್ಯ ಸದಸ್ಯರ ವಿಶೇಷವಾದ ಕಾಳಜಿ ಏನೆಂಬುದು ನನಗೆ ಗೊತ್ತಾಗುತ್ತದೆ. ಈ ರಾಜ್ಯದ ಭದ್ರತೆಯ ದೃಷ್ಟಿಯಿಂದ, ಶಾಂತಿ ಸುವ್ಯವಸ್ಥೆಯ ದೃಷ್ಟಿಯಿಂದ ಪೋಲೀಸ್ ಇಲಾಖೆ ಬಲಗೊಳ್ಳಬೇಕು ಎನ್ನುವ ಹಿನ್ನೆಲೆಯಲ್ಲಿ ಅವರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಎಲ್ಲಾ ರೀತಿಯ

ಏರ್ಪಾಡುಗಳನ್ನು ಮಾಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. FSL (Forensic Science Laboratory) ಪ್ರಯೋಗಾಲಯಗಳನ್ನು ಬಹಳ ಗಟ್ಟಿಯಾಗಿ ಮಾಡಿದ್ದೇವೆ. ಕೇವಲ 6 FSL Lab ಇತ್ತು. ಬೆಂಗಳೂರಿನ ಪ್ರಯೋಗಾಲಯವು ಬಹಳ ಪ್ರಧಾನವಾಗಿ ಎಲ್ಲಾ ವಿಷಯಗಳ ಮೇಲೆಯೂ ಇತ್ತು. ಉಳಿದಿರತಕ್ಕಂತಹವನ್ನು ನಾವು ಹೈದರಾಬಾದ್‌ಗೆ ಕಳುಹಿಸಬೇಕಿತ್ತು. ಆದರೆ ಇಂದು ಬೆಂಗಳೂರಿನ ಪ್ರಯೋಗಾಲಯವನ್ನು ಎಲ್ಲಾ ರೀತಿಯಿಂದಲೂ ಬಲಪಡಿಸಿದ್ದೇವೆ. ಹುಬ್ಬಳ್ಳಿ ಮತ್ತು ಬಳ್ಳಾರಿಯಲ್ಲಿ ಎರಡು FSL Lab ಗಳನ್ನು ಈ ಬಾರಿ ಪ್ರಾರಂಭ ಮಾಡುತ್ತಿದ್ದೇವೆ. ಅದು ಎಲ್ಲಾ ವಿಷಯಗಳನ್ನೂ ಒಳಗೊಂಡಿರುವ ಪ್ರಯೋಗಾಲಯವಾಗಿದೆ. ವಿಶೇಷವಾಗಿ ನಮಗೆ conviction rate ಕಡಿಮೆಯಾಗುವುದು ಯಾವುದರಲ್ಲಿ ಎಂದರೆ DNA sample test ನದ್ದು ಬಹಳಷ್ಟು ಬಾಕಿ ಉಳಿದಿತ್ತು. ಅದು ಪ್ರಯೋಗಾಲಯಕ್ಕೆ ಹೋದರೆ ಸುಮಾರು ಎರಡು ವರ್ಷಗಳವರೆವಿಗೂ ಆಗುತ್ತಿತ್ತು. ಹುಬ್ಬಳ್ಳಿಯಲ್ಲಿ DNA sample test ಗಳನ್ನು ಮಾಡುವಂತಹ ಪ್ರಯೋಗಾಲಯವನ್ನು ಪ್ರಾರಂಭಿಸಿದ್ದೇವೆ.

**ಸಭಾಪತಿಯವರು:–** ಮಾನ್ಯ ಸಲೀಂ ಅಹಮದ್ ಅವರು ಸಹ ಬಂದಿದ್ದರು.

**ಶ್ರೀ ಆರಗ ಜ್ಞಾನೇಂದ್ರ:–** ಹೌದು, ತಾವು ಅಂದು ವೇದಿಕೆಯ ಮೇಲೆ ಉಪಸ್ಥಿತರಾಗಿದ್ದಿರಿ. ಹಾಗೆಯೇ ಅವೆಲ್ಲವನ್ನು ಬಲಪಡಿಸುವಂತಹ ಎಲ್ಲಾ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. ವಿಶೇಷವಾಗಿ ಹೊಸ ವಾಹನಗಳನ್ನು ಕೊಡಿಸಲಾಗಿದೆ. ಸೈಬರ್ ಬಗ್ಗೆ ನಾನು ಹಿಂದಿನ ಪ್ರಶ್ನೆಯಲ್ಲಿಯೇ ಉತ್ತರವನ್ನು ಕೊಟ್ಟಿದ್ದೇನೆ. ಆ ವಿಭಾಗವನ್ನು ಬಲಪಡಿಸುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. FSL Lab ಗಳು ಬೆಂಗಳೂರು, ಮೈಸೂರು, ಮಂಗಳೂರು, ದಾವಣಗೆರೆ, ಕಲಬುರಗಿ, ಬೆಳಗಾವಿ, ಹುಬ್ಬಳ್ಳಿ ಮತ್ತು ಬಳ್ಳಾರಿ ಇಷ್ಟು ಕಡೆಗಳಲ್ಲಿ ಇದೆ. ಈ ಬಜೆಟ್‌ನ ನಂತರ ಶಿವಮೊಗ್ಗದಲ್ಲಿ ಲ್ಯಾಬ್ ಅನ್ನು ಪ್ರಾರಂಭ ಮಾಡಬೇಕೆನ್ನುವ ಚಿಂತನೆ ಇದೆ. ಹೀಗೆ ಲ್ಯಾಬ್‌ಗಳನ್ನು ಪ್ರಾರಂಭ ಮಾಡಿದರೆ rate of conviction percentage ಜಾಸ್ತಿಯಾಗುತ್ತದೆ. ಸಮಾಜಕ್ಕೆ ಒಂದು ಸಂದೇಶವೂ ಕೂಡ ಹೋಗುತ್ತದೆ. ಅಪರಾಧ ಮಾಡಿದವರನ್ನು ಬಂಧಿಸುವುದು ಮಾತ್ರವಲ್ಲ, ಅವರಿಗೆ conviction

ಆಗುವ ಹಾಗೆ ಮಾಡುವುದು ಕೂಡ ಅಗತ್ಯವಿದೆ. ತಾವು ಹೇಳಿದಂತೆ ಎಲ್ಲಾ ರೀತಿಯ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸುವಂತಹ ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆ.

ಹಿಂದಿನ ಪ್ರಶ್ನೆಯಲ್ಲಿ ಮಾನ್ಯ ಶ್ರೀಮತಿ ವೀಣಾ ಅಚ್ಚಯ್ಯ ಅವರಿಗೆ ಹೇಳಿದಂತೆ ಇತ್ತೀಚಿನ ದಿನಗಳಲ್ಲಿ 112 ವಾಹನ ಎನ್ನುವುದನ್ನು ಇಡೀ ರಾಜ್ಯದಲ್ಲಿ ಒದಗಿಸಲಾಗಿದೆ. ಅವರು ಪೋಲೀಸ್ ಠಾಣೆಗೆ ಬಂದು ಫಿರ್ಯಾದಿಯನ್ನು ಬರೆದುಕೊಟ್ಟು ಇವರು FIR ದಾಖಲಿಸುವ ಅವಶ್ಯಕತೆ ಇಲ್ಲ. ಎಲ್ಲೇ ಕುಳಿತು ದೂರವಾಣಿ ಮಾಡಿದರೂ ನಗರ ಪ್ರದೇಶದಲ್ಲಿ ಕೇವಲ 20 ನಿಮಿಷಗಳಲ್ಲಿ, ಗ್ರಾಮೀಣ ಭಾಗದಲ್ಲಿ 40 ನಿಮಿಷಗಳೊಳಗಾಗಿ ಪೋಲೀಸ್ ಹೋಗಿ ಅಲ್ಲಿ ತಲುಪುತ್ತಾರೆ. ಇದರಿಂದಾಗಿ ಪ್ರಕರಣವನ್ನು ತಡೆಗಟ್ಟುವ ಪ್ರಯತ್ನ ಆಗುತ್ತದೆ. ಸಿಸಿ ಕ್ಯಾಮೆರಾಗಳನ್ನು ನಗರ ಪ್ರದೇಶದಲ್ಲಿ ಹೆಚ್ಚಾಗಿ ಅಳವಡಿಸುವಂತಹ ಕೆಲಸವನ್ನು ಮಾಡಲಾಗಿದೆ. ಸಂಚಾರಿ ಪೋಲೀಸರಿಗೆ Body Worn Camera ಕೊಟ್ಟಿದ್ದೇವೆ. ಅನೇಕ ಬಾರಿ ಪೋಲೀಸರ ಬಗ್ಗೆ ಆರೋಪಗಳು ಬರುತ್ತವೆ. ಬಹಳ rude ಆಗಿ behave ಮಾಡುತ್ತಾರೆ ಎಂದು ದೂರು ಬರುತ್ತದೆ. ಪೋಲೀಸರು ಏನು ಮಾತನಾಡುತ್ತಾರೆ, ಎದುರುಗಡೆ ಇರುವ ಸಾರ್ವಜನಿಕರು ಏನು ಮಾತನಾಡುತ್ತಾರೆ ಎಂಬುದನ್ನು ಈ ಕ್ಯಾಮೆರಾ ಧರಿಸುವುದರಿಂದ ನಾವು ತಿಳಿಯಬಹುದು. ಕರ್ತವ್ಯ ನಿರತರಾಗಿರುವ ಸಂಚಾರಿ ಪೋಲೀಸರು ಕ್ಯಾಮೆರಾ ಅಳವಡಿಸುವುದು ಕಡ್ಡಾಯವಾಗಿದೆ. ಹಾಗೇನಾದರೂ ಕ್ಯಾಮೆರಾ ಧರಿಸದಿದ್ದರೆ ಅವರ ಮೇಲೆ ಕ್ರಮ ಜರುಗಿಸಲಾಗುವುದು. ಸಂಚಾರದ ವಿಷಯದಲ್ಲಿ ಸ್ವಲ್ಪ ಗೊಂದಲ ಇರುತ್ತದೆ. ಪ್ರತಿನಿತ್ಯ ಸಾವಿರಾರು ಹೊಸ ವಾಹನಗಳು ನೋಂದಣಿಯಾಗಿ ರಸ್ತೆಗಿಳಿಯುತ್ತವೆ. ಹಾಗಾಗಿ ಸಂಚಾರ ನಿಯಂತ್ರಣ ಪೋಲೀಸರಿಗೆ ಒಂದು ದೊಡ್ಡ ಸಾಹಸದ ಕೆಲಸ. ಬೆಂಗಳೂರು ನಗರದ ಸಂಚಾರ ದಟ್ಟಣೆಯ ಬಗ್ಗೆ ವಿಶೇಷವಾದ ಪ್ರಯತ್ನ ಮಾಡುತ್ತಿದ್ದೇವೆ. ಇತ್ತೀಚೆಗೆ towing vehicle ಬಗ್ಗೆ ಬಹಳ ಗೊಂದಲ ಇತ್ತು. ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬರುತ್ತಿದ್ದವು. ನಾವು ನಿರ್ಣಯ ತೆಗೆದುಕೊಂಡು ಅದನ್ನು ಸದ್ಯಕ್ಕೆ ನಿಲ್ಲಿಸಿದ್ದೇವೆ. ಅದರ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದಿದೆ. ಒಂದು ಅತ್ಯಾಧುನಿಕವಾಗಿರುವಂತಹ, ಜನಸ್ನೇಹಿಯಾಗಿರುವಂತಹ ಸಂಚಾರ ವ್ಯವಸ್ಥೆಯನ್ನು ತರಲು ಎಲ್ಲಾ ರೀತಿಯಿಂದಲೂ ನಾವು ಪ್ರಯತ್ನ

ಮಾಡುತ್ತಿದ್ದೇವೆ. ರಸ್ತೆಯಲ್ಲಿ ತಡೆಗಟ್ಟಿ ಉಪದ್ರ ಕೊಡುವುದು, ಅದರಿಂದ ಸಂಚಾರ ದಟ್ಟಣೆಯಾಗುವುದು ಇಂತಹ ಸಮಸ್ಯೆಗಳನ್ನು ತಪ್ಪಿಸುವ ಸಲುವಾಗಿ ಅಲ್ಲಲ್ಲಿ ಕ್ಯಾಮೆರಾಗಳನ್ನು ಇಟ್ಟಿದ್ದೇವೆ. ಆ ಕ್ಯಾಮೆರಾಗಳು ಯಾವ ರೀತಿಯಲ್ಲಿದೆ ಎಂದರೆ ಯಾವುದಾದರೂ ವಾಹನಗಳು ಕಳ್ಳತನದಲ್ಲಿ ಓಡಾಡುತ್ತಿದ್ದರೆ ಪೋಲೀಸರಿಗೆ ಅದೊಂದು ಸಿಗ್ನಲ್ ಕೊಡುತ್ತದೆ. ಆ ರೀತಿಯ ಆಧುನಿಕ ಕ್ಯಾಮೆರಾಗಳು ಅಳವಡಿಸುವಂತಹ ಪ್ರಯತ್ನವನ್ನು ನಗರ ಪ್ರದೇಶದಲ್ಲಿ ಮಾಡಿದ್ದೇವೆ. 'Smart City' ಯೋಜನೆಯಲ್ಲಿ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ತಮ್ಮ ಸಲಹೆಗಳ ಪ್ರಕಾರ ನಾವು ಪ್ರಯತ್ನಗಳನ್ನು ಮಾಡಿದ್ದೇವೆ. ನನಗೆ ಮಾನ್ಯ ವಿರೋಧ ಪಕ್ಷದ ಉಪ ನಾಯಕರು ಆಗಾಗ ಸಲಹೆಗಳನ್ನು ಕೊಡುತ್ತಿರುತ್ತಾರೆ. ನಾನು ಅವುಗಳನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇನೆ. ಯಾರದೇ ಕಡೆಯಿಂದ ಬಂದರೂ ಕೂಡ ಸಲಹೆಗಳನ್ನು ನಾವು ಪರಿಗಣಿಸುತ್ತೇವೆ. ಸಂಚಾರ ವಿಷಯದ ಬಗ್ಗೆ ನಾವು ವಿಶೇಷವಾದ ಗಮನವನ್ನು ಕೊಡುವ ಪ್ರಯತ್ನ ಮಾಡಿದ್ದೇವೆ.

**ಶ್ರೀ ಸಲೀಂ ಅಹಮದ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಸಾಕಷ್ಟು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಇಂಟೆಲಿಜೆನ್ಸ್ ವಿಭಾಗದ ಬಗ್ಗೆ ನಮಗೆ ಸಂತೋಷವಿಲ್ಲ. ಇಂಟೆಲಿಜೆನ್ಸ್ ವಿಭಾಗಕ್ಕೆ posting ಮಾಡಿದರೆ ಅದನ್ನು punishment posting ಎಂದು ಭಾವಿಸಲಾಗುವುದು. ಇದನ್ನು ತಾವು ಬಹಳಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ಇಂಟೆಲಿಜೆನ್ಸ್ ವೈಫಲ್ಯದಿಂದಾಗಿ ಹಲವಾರು ಜಿಲ್ಲೆಗಳಲ್ಲಿ ಸಾಕಷ್ಟು ಸಮಸ್ಯೆಗಳಾಗಿದೆ. ನಂತರ ಅವರಿಗೆ ತರಬೇತಿ ನೀಡಬೇಕು. ಯಾವ ರೀತಿಯ ತರಬೇತಿ ನೀಡಲಾಗಿದೆ ಎನ್ನುವುದನ್ನು ಸಚಿವರು ಹೇಳಬೇಕು. ಇಂಟೆಲಿಜೆನ್ಸ್ ಮೂಲಕ ಮಾಹಿತಿ ಸಿಕ್ಕಿದರೆ ಕಾನೂನು ಸುವ್ಯವಸ್ಥೆ ಒಳ್ಳೆಯದಾಗುತ್ತದೆ. ನನಗೆ ಒಂದು ಮಾಹಿತಿ ಬೇಕು. 1000 ಜನರಿಗೆ ಎಷ್ಟು ಪೋಲೀಸ್ ಕಾನ್ಸ್‌ಟೇಬಲ್‌ಗಳು ಬೇಕಾಗಿದ್ದಾರೆ?

**ಶ್ರೀ ಆರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, 577 ಜನರಿಗೆ ಒಬ್ಬ ಪೋಲೀಸ್. ಇಡೀ ದೇಶಾದ್ಯಂತ 568 ಜನರಿಗೆ ಒಬ್ಬ ಪೋಲೀಸ್. ಇದಕ್ಕೆ ಗೈಡ್‌ಲೈನ್ಸ್ ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಗೃಹಸಚಿವರೇ, ಅವರು 1000 ಜನರಿಗೆ ಎಷ್ಟು ಜನ ಪೋಲೀಸರು ಎಂದು ಕೇಳುತ್ತಿದ್ದಾರೆ.

**ಶ್ರೀ ಆರಗ ಜ್ಞಾನೇಂದ್ರ:-** ನಾನು ಮಾಹಿತಿಯನ್ನು ತರಿಸಿ ಹೇಳುತ್ತೇನೆ. ತಾವು ಹೇಳಿರುವಂತೆ ಇಂಟೆಲಿಜೆನ್ಸ್ ಅನ್ನು ಬಹಳವಾಗಿ ಬಲಪಡಿಸುವ ಅವಶ್ಯಕತೆ ಇದೆ. ಇದಕ್ಕೆ ತಮ್ಮ ಜೊತೆಗೆ ಸಹಮತಿಯನ್ನು ವ್ಯಕ್ತಪಡಿಸುತ್ತೇನೆ. ಅನೇಕ ಬಾರಿ ಇಲ್ಲಿ ಸಲ್ಲದವರು ಅಲ್ಲಿ ಸಲ್ಲುತ್ತಾರೆ ಎಂದು ಅಲ್ಲಿಗೆ ಕಳುಹಿಸಲಾಗುತ್ತಿದೆ. ಇಂಟೆಲಿಜೆನ್ಸ್‌ಗೆ ಬೇರೆ ಕಡೆಯಿಂದ ನಿಯೋಜನೆ ಮಾಡುವ ಬದಲು, ವರ್ಗಾವಣೆ ಮಾಡುವ ಬದಲು ಅಲ್ಲಿಗೆ ವಿಶೇಷವಾಗಿರುವ ನೇಮಕಾತಿ, ತರಬೇತಿ, ಬಡ್ತಿ ಎಲ್ಲವೂ ಕೂಡ ಆಗುವ ಹಾಗೆ ಮಾಡುವ ಆಲೋಚನೆ ಇದೆ. ಈಗಾಗಲೇ ಸೈಬರ್ ವಿಭಾಗದಲ್ಲಿ ನಾವು ಅದನ್ನು ಮಾಡಿದ್ದೇವೆ.

**(...ಮುಂದು)**

**(228) 10-03-2022 (12.00) ಕೆಜಿ-ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅರಗ ಜ್ಞಾನೇಂದ್ರ (ಮುಂದು):-**

ಅದಲ್ಲದೇ, ಅವರಿಗೆ ಬೇರೆ ಯಾವುದು ಇಲ್ಲ. Special Incentives ಕೊಡುವುದು. ಆ ಮೇಲೆ ಅವರು without uniform ನಲ್ಲಿರುತ್ತಾರೆ. ಅವರು ಸಮಾಜದಲ್ಲಿ ಯಾರಿಗೂ ಸಹ ಗುರುತು ಸಿಗುವುದಿಲ್ಲ. ಹಾಗಾಗಿ, ಅವರಿಗೆ ವಿಶೇಷವಾದ ತರಬೇತಿಯನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತೇವೆ. ಏಕೆಂದರೆ, ಇಲ್ಲಿಂದ regular police ರವರನ್ನು ಅಲ್ಲಿಗೆ ಹಾಕಿದಾಗ 2/3 ವರ್ಷ ಅಷ್ಟೇ, ಅಮೇಲೆ ಒಂದು ಕಾಲು ಆ ಕಡೆಯೇ ಇಟ್ಟುಕೊಂಡಿರುತ್ತಾರೆ. ಅವರು ಅಲ್ಲಿ ಒಂದು ವರ್ಷ ಆಗುತ್ತಿದ್ದಂತೆಯೇ ನಮ್ಮ-ನಿಮ್ಮ ಹತ್ತಿರ ಬಂದು ಒಂದು ಪತ್ರ ಕೊಡಿ ಎಂದು ಕೇಳಿಕೊಂಡು ಮಾಡುತ್ತಾರೆ. ಆದರೆ, ಅದು ಪ್ರಯೋಜನ ಆಗುತ್ತಿಲ್ಲ. ಅವರಿಗೆ ಆಧುನಿಕವಾದಂತಹ ತಂತ್ರಜ್ಞಾನದೊಂದಿಗೆ ತರಬೇತಿ ಕೊಡುವಂತಹ ಅವಶ್ಯಕತೆ ಇದೆ. ಅನೇಕ ಬಾರಿ intelligence fail ಆಗುವುದರಿಂದಲೇ ಪ್ರಕರಣಗಳ ಸಂಖ್ಯೆ ಹೆಚ್ಚಾಗುವಂಥದ್ದು ನಮ್ಮ ಗಮನದಲ್ಲಿದೆ. ಇದರ ಬಗ್ಗೆ

ನಾನು ಮಾನ್ಯ ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿದ್ದೇನೆ. ಅದಕ್ಕೆ ಪ್ರತ್ಯೇಕವಾದಂತಹ recruitment ಅನ್ನು ಮಾಡಬೇಕೆಂದು ಆ ರೀತಿಯ ಕ್ರಮವನ್ನು ಮುಂದಿನ ಬಾರಿ ತೆಗೆದುಕೊಳ್ಳಬೇಕು ಎನ್ನುವಂತಹ ಯೋಚನೆಯನ್ನು ಮಾಡಿದ್ದೇನೆ.

**ಪ್ರಶ್ನೆ ಸಂಖ್ಯೆ 1472**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ, ಉತ್ತರದಲ್ಲಿ ಒಟ್ಟು 2,83,294 ಅರ್ಜಿಗಳು ಬಂದಿರುತ್ತವೆ. ಅದರಲ್ಲಿ ಇದುವರೆವಿಗೂ ಅಸಂಘಟಿತ ಕಾರ್ಮಿಕರನ್ನು ಯಾರು ಪತ್ತೇ ಮಾಡುವುದಿಲ್ಲ. ಎಲ್ಲಾ ಜಿಲ್ಲೆಗಳಲ್ಲಿ ನಡೆಸಿದ ಈ ಕಾರ್ಮಿಕ ಆದಾಲತ್‌ನಿಂದಾಗಿ ಒಟ್ಟು 2,83,294 ಅರ್ಜಿಗಳು ಬಂದಿರುತ್ತವೆ. ಅದರಲ್ಲಿ 1,53,996 ಕಾರ್ಮಿಕರಿಗೆ ವಿವಿಧ ಯೋಜನೆಗಳಡಿ ರೂ.89,04,97,718/-ಗಳ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಇನ್ನೂ 1.33 ಲಕ್ಷ ಅರ್ಜಿಗಳನ್ನು ಹಾಗೆ ಬಾಕಿ ಉಳಿಸಿಕೊಳ್ಳುತ್ತಾರೆ. 1.33 ಲಕ್ಷ ಕಾರ್ಮಿಕರಿಗೆ ಯಾವುದೇ ಸೌಲಭ್ಯವನ್ನು ಕೊಟ್ಟಿರುವುದಿಲ್ಲ. ಇವರಿಗೆ ಏಕೆ ಕೊಟ್ಟಿಲ್ಲ? ಮುಂದುವರಿದು ಡಾ॥ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ 11 ಅಸಂಘಟಿತ ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್, ಮೆಕಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ರನ್ನು ನೋಂದಾಯಿಸಲಾಗಿದೆ ಎಂದು ತಿಳಿಸಿದ್ದಾರೆ. ಇದುವರೆಗೆ ಒಟ್ಟು 2,66,653 ಅರ್ಜಿಗಳನ್ನು ನೋಂದಣಿಗಾಗಿ ಸ್ವೀಕರಿಸಿದ್ದು, ಅದರಲ್ಲಿ 2,52,467 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ. ಇತ್ತೀಚೆಗೆ ಸ್ವೀಕರಿಸಲಾದ 14,186 ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಶೀಘ್ರ ವಿಲೇವಾರಿ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಮುಂದುವರೆದು ಕಾರ್ಮಿಕರು ತಮ್ಮ ಕೆಲಸದ ಪ್ರದೇಶಗಳಿಗೆ ತೆರಳಲು ಅನುಕೂಲವಾಗಲು ಬೆಂಗಳೂರು ನಗರದಲ್ಲಿ ಆರಂಭಿಸಿದ ಉಚಿತ ಬಸ್‌ಪಾಸ್ ಸೇವೆಯನ್ನು ರಾಜ್ಯದ್ಯಂತ ವಿಸ್ತರಿಸಲು ನಿಯಮಗಳಲ್ಲಿ ತಿದ್ದುಪಡಿಯನ್ನು ತರಲಾಗುತಿದ್ದು, ಸದರಿ ನಿಯಮಗಳು ಜಾರಿಗೆ ಬಂದ ನಂತರ ರಾಜ್ಯದ್ಯಂತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಬಸ್‌ಪಾಸ್ ಸೇವೆಯನ್ನು ವಿಸ್ತರಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಆದರೆ, ಈ ಸೇವೆಯನ್ನು ಬೆಂಗಳೂರು ನಗರಕ್ಕೆ ಮಾತ್ರ ಕೊಡುತ್ತಿದ್ದಾರೆ. ಕಾರ್ಮಿಕರ ಕಷ್ಟ ಏನೆಂದು ಎಲ್ಲರಿಗೂ ಗೊತ್ತಿದೆ. ಬೇರೆ ಬೇರೆ ರಾಜ್ಯಗಳಿಂದ ನಮ್ಮ

ರಾಜ್ಯಕ್ಕೆ ಬಂದಿದ್ದ ಕಾರ್ಮಿಕರನ್ನು ಕೋವಿಡ್ ಸಾಂಕ್ರಮಿಕ ರೋಗ ಬಂದ ಸಂದರ್ಭದಲ್ಲಿ ಅವರಿಗೆ ಬಸ್ ಸೌಲಭ್ಯವನ್ನು ಒದಗಿಸಿ ಅವರನ್ನು ಅವರವರ ಸ್ಥಳಗಳಿಗೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. ಉಚಿತ ಬಸ್ ಪಾಸ್ ಸೌಲಭ್ಯವನ್ನು ಬೆಂಗಳೂರು ನಗರ ಕಾರ್ಮಿಕರಿಗೆ ಮಾತ್ರ ಏಕೆ ಕೊಡುತ್ತಿದ್ದಾರೆ? ಅದನ್ನು ಇಡೀ ರಾಜ್ಯದ್ಯಂತ ವಿಸ್ತರಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

**ಶ್ರೀ ಅಲಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಒಟ್ಟು 3.2 ಲಕ್ಷ ಅರ್ಜಿಗಳಲ್ಲಿ ಒಟ್ಟು 2,83,294 ಅರ್ಜಿದಾರರಿಗೆ ಕೊಟ್ಟಿದ್ದೇವೆಂದು ಹೇಳಿದ್ದೇವೆ. ಈ ಕಾರ್ಮಿಕರಿಗೆ ವಿವಿಧ ಯೋಜನೆಗಳಡಿ ರೂ.89,04,97,718/- ಗಳ ಪರಿಹಾರವನ್ನು ಕೊಟ್ಟಿದ್ದೇವೆ. 2017ನೇ ಸಾಲಿನಿಂದ ಇಲ್ಲಿಯವರೆಗೆ ಅನೇಕ ಕಾರ್ಮಿಕರು ಹಾಕಿರುವಂತಹ ಅರ್ಜಿಗಳಿಗೆ ಉತ್ತರ ಸಿಕ್ಕಿರಲಿಲ್ಲ. ಆ ಅರ್ಜಿಗಳು ಬೇರೆ ಬೇರೆ ಕಾರಣಕ್ಕೆ reject ಆಗಿದ್ದವು. ಕಾರ್ಮಿಕ ಇಲಾಖೆಯಲ್ಲಿ ಸ್ವೀಕೃತವಾದ ಅರ್ಜಿಗಳನ್ನು ವಿಳಂಬವಿಲ್ಲದೇ ನಿಗಧಿತ ಸಮಯದಲ್ಲಿ ವಿಲೇವಾರಿ ಮಾಡಲು ದಿನಾಂಕ 16-08-2021 ರಿಂದ ದಿನಾಮ 15-09-2021 ರವರಗೆ ವಿಶೇಷ ಕಾರ್ಮಿಕ ಆದಾಲತ್‌ನ್ನು ರಾಜ್ಯದ್ಯಂತ ನಡೆಸಲಾಗಿದೆ. ಆ ಆದಾಲತ್‌ನ ಸಂದರ್ಭದಲ್ಲಿಯೂ ಸಹ ಅರ್ಜಿ ಹಾಕದಿರುವವರು ಸುಮಾರು 1.26 ಲಕ್ಷ ಕಾರ್ಮಿಕರು ಅರ್ಜಿಗಳನ್ನು ತಂದು ಕೊಟ್ಟರು. ಇಂತಹ ಎಲ್ಲಾ ಅರ್ಜಿಗಳು ಸೇರಿ ಒಟ್ಟು 3,02,213 ಆದವು. ಇದರಲ್ಲಿ ಒಟ್ಟು 2,83,294 ಅರ್ಜಿಗಳನ್ನು ವಿಲೇವಾರಿ ಮಾಡಿ ಅವರಿಗೆ ಒಟ್ಟು 89,04,97,718/- ಗಳನ್ನು ಕಾರ್ಮಿಕರ ಖಾತೆಗಳಿಗೆ ಹಾಕಿದ್ದೇವೆ.

ಮಾನ್ಯ ಸಭಾಪತಿಯವರೇ, ಕಾರ್ಮಿಕರಿಗೆ ಬಹಳ ವರ್ಷಗಳಿಂದ ಬಸ್‌ಪಾಸ್‌ಗಳಿಗೆ ಹಣ ಕೊಡುವಂತಹ ವ್ಯವಸ್ಥೆ ಇತ್ತು. ಇದು ಕೇವಲ ಬಿಎಂಟಿಸಿಗೆ ಮಾತ್ರ ಇತ್ತು. ನಾವು ಅಧಿಕಾರಕ್ಕೆ ಬಂದ ಮೇಲೆ ಇದನ್ನು B.M.T.C., K.S.R.T.C., N.W.K.R.T.C., N.E.K.R.T.C. 4 ಕಡೆಗೂ ವಿಸ್ತರಣೆ ಮಾಡಿ ರಾಜ್ಯದ್ಯಂತ ಇರುವ ಕಾರ್ಮಿಕರಿಗೆ ಬಸ್‌ಪಾಸ್ ಕೊಡುವ ವ್ಯವಸ್ಥೆನ್ನು ಜಾರಿಗೆ ತಂದಿದ್ದೇವೆ. ಮಾನ್ಯ ಸದಸ್ಯರು ಚಿಂದಿ ಆಯುವವರಿಗೆ ಮತ್ತು ಇತರರು ಸೇರಿ ಸುಮಾರು 14 ಸಾವಿರ ಜನರಿಗೆ ಇನ್ನೂ ಹಣ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಕೋವಿಡ್ ಸಾಂಕ್ರಮಿಕ ರೋಗ ಬಂದಂತಹ ಸಂದರ್ಭದಲ್ಲಿ

ಸರ್ಕಾರ ಇವರಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಆಚರಣೆಗೆ ತಂದಿತ್ತು. ಆದರೆ, ಇವರ ಯಾರ database ನಮ್ಮ ಕಡೆಗೆ ಇರಲಿಲ್ಲ. ಇವರಿಗೆ ಸೇರಿದ ಬ್ಯಾಂಕ್ ಖಾತೆಗಳು ಇರಲಿಲ್ಲ. ಹಾಗಾಗಿ, ತುಂಬ ಕಷ್ಟಪಟ್ಟು ಒಟ್ಟು 2,83,294 ಜನರ database ಅನ್ನು ರೆಡಿ ಮಾಡಿ ಅವರ ಖಾತೆಗೆ D.B.T (Direct Benefit Transfer) ಆಧಾರ ಮೇಲೆ  ಹಣ ಕೊಟ್ಟಿದ್ದೇವೆ. ಸುಮಾರು 14 ಸಾವಿರ ಜನರ database ನಮಗೆ ಸಿಗಲಿಲ್ಲ. ಹಾಗಾಗಿ. ಅವರಿಗೆ ಹಣ ಕೊಡುವುದಕ್ಕೆ ಆಗಲಿಲ್ಲ. ನಾವು ಕಾರ್ಮಿಕ ಇಲಾಖೆಯಲ್ಲಿ ಅನೇಕ ಹೊಸ ಹೊಸ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. "ವನಿತಾ ಸಂಗಾತಿ" ಎಂಬ  ಒಂದು ಕಾರ್ಯಕ್ರಮವನ್ನು ಇಟ್ಟಿದ್ದೇವು.  ಈ ಕಾರ್ಯಕ್ರಮವನ್ನು ಕೈಬಿಟ್ಟಿದ್ದೇವೆ.  ಇದಕ್ಕೆ ಕಾರಣ ಕೈಗಾರಿಕೆಗಳ ಮಾಲೀಕರು ವನಿತಾ ಸಂಗಾತಿಗೆ ಶೇ.60% ಹಣ ಕೊಡಬೇಕಾಗಿತ್ತು.  ಈ ಹಣವನ್ನು  ವನಿತಾ ಸಂಗಾತಿಗೆ ಕೊಡಲು ಯಾವ ಕೈಗಾರಿಕೆಯವರು ಕೊಡಲು ತಯಾರು ಆಗಲಿಲ್ಲ. ಆ ಕಾರಣಕ್ಕೆ ಸರ್ಕಾರ ಇನ್ನೂ 20% ಹೆಚ್ಚಿಗೆ ಮಾಡಿ  ಕೊಡಬೇಕೆಂದು ಯೋಚನೆ ಮಾಡಿದೆ. ಅದು ಇನ್ನೂ ಚರ್ಚೆಯಲ್ಲಿದೆ. ಆ ಕಾರ್ಯಕ್ರಮವನ್ನು ಜಾರಿಗೆ ತರುವಂತಹ ಪ್ರಯತ್ನವನ್ನು ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದಲ್ಲಿ ಕಾರ್ಮಿಕ ಇಲಾಖೆಯಲ್ಲಿ  ಮೊಟ್ಟ ಮೊದಲ ಬಾರಿಗೆ ಎಲ್ಲಾ ಇಲಾಖೆಯ ಮಕ್ಕಳಿಗೆ ತರಬೇತಿ ಕೊಡುವಂತಹ ಪದ್ಧತಿ ಇತ್ತು. ಆದರೆ. construction labour ಮಕ್ಕಳಿಗೆ ತರಬೇತಿ  ಕೊಡುವಂತಹ ಪದ್ಧತಿ ಇರಲಿಲ್ಲ. ನಾವು ಈ ವರ್ಷ ಯೋಚನೆ ಮಾಡಿ ಒಟ್ಟು 750 ಜನರಿಗೆ ಐ.ಎ.ಎಸ್ ಮತ್ತು ಕೆ.ಎ.ಎಸ್ ಗೆ ತರಬೇತಿ ಕೊಡುವಂತಹ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ಈಗ  ಮೊದಲನೇ ಕ್ಯಾಂಪ್‌ನ್ನು ಧಾರವಾಡದಲ್ಲಿ ಪ್ರಾರಂಭ ಮಾಡಿದ್ದೇವೆ. ಅದನ್ನು K.E.A (Karnataka Examination Authority) ರವರಿಗೆ authority ಕೊಟ್ಟು ಅವರಿಗೆ merit–cum–roster ಆಧಾರದ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೇವೆ. ಅದರಲ್ಲಿ ಒಟ್ಟು 250 ಮಂದಿ ಐ.ಎ.ಎಸ್ ಮತ್ತು  ಕೆ.ಎ.ಎಸ್.ಗೆ 500 ಮಂದಿಗೆ ಬೆಂಗಳೂರು ಮತ್ತು ಹುಬ್ಬಳ್ಳಿ ಧಾರವಾಡದಲ್ಲಿ ತರಬೇತಿ ಕೊಡುವಂತಹ ಹೊಸ ಕಾರ್ಯಕ್ರಮವನ್ನು ಸಹ ಜಾರಿಗೆ ತಂದಿದ್ದೇವೆ. ಒಟ್ಟು 29 ಲಕ್ಷ construction labour ರವರಿಗೆ ಬೇಕಾದಂತಹ ಎಲ್ಲಾ

ವ್ಯವಸ್ಥೆಗಳನ್ನು ಜಾರಿಗೆ ತಂದಿದ್ದೇವೆ. ಮೊದಲು ವಿದ್ಯಾಭ್ಯಾಸ ವೆಚ್ಚಕ್ಕೆ ಎರಡು ಸಾವಿರ ರೂಪಾಯಿ ಇತ್ತು. ಅದನ್ನು ಈಗ ಐದು ಸಾವಿರ ರೂಪಾಯಿಗಳಿಗೆ ಹೆಚ್ಚುವರಿ ಮಾಡಿದ್ದೇವೆ. ಒಟ್ಟು 195 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ.  ಈ ವರ್ಷದಿಂದ 410 ಕೋಟಿ ರೂಪಾಯಿಗಳನ್ನು ಒಟ್ಟು ನಾಲ್ಕು ಲಕ್ಷದ 98 ಸಾವಿರ  ವಿದ್ಯಾರ್ಥಿಗಳಿಗೆ  ಕೊಡುತ್ತಿದ್ದೇವೆ.  ನಮ್ಮ ಸರ್ಕಾರ ಕಾರ್ಮಿಕರ ಕಲ್ಯಾಣಕ್ಕಾಗಿ ಒಂದು ರೀತಿಯಲ್ಲಿ ಕ್ರಾಂತಿಕಾರಿಯಾದ ಬದಲಾವಣೆಯನ್ನು ತಂದಿದ್ದೇವೆ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವಿದ್ಯಾರ್ಥಿಗಳಿಗೆ ಕಾರ್ಮಿಕ ಕಲ್ಯಾಣ ಇಲಾಖೆಯಿಂದ ಇಷ್ಟೊಂದು ದೊಡ್ಡ ಮಟ್ಟದಲ್ಲಿ ಸಹಾಯ ಮಾಡುತ್ತಿರುವುದು ನಿಜಕ್ಕೂ ಒಂದು ಒಳ್ಳೆಯ ಬೆಳವಣಿಗೆ. ಇದಾದ ನಂತರ ನಾನು ಮಾನ್ಯ ಸಚಿವರಿಗೆ ಸ್ವಾಗತವನ್ನು ಮಾಡುತ್ತೇನೆ.  ಮಾನ್ಯ ಸಚಿವರು ವೈದ್ಯಕೀಯ ಸೌಲಭ್ಯಗಳ  ವೆಚ್ಚಗಳ ಬಗ್ಗೆ ಹೇಳಿದ್ದಾರೆ. ಇದಕ್ಕೆ ಇಷ್ಟು ಹಣ ಕೊಡುತ್ತೇವೆಂದು criteria ವನ್ನು ನಿಗದಿ ಮಾಡಿದ್ದಾರೆ. ಕಾರ್ಮಿಕರು ಯಾವುದಾದರೊಂದು ಆಸ್ಪತ್ರೆಗೆ ಹೋದಂತಹ ಸಂದರ್ಭದಲ್ಲಿ ಅವರಿಗೆ ಎಷ್ಟೇ ವೆಚ್ಚ ಅಲ್ಲಿ ಆಗಿರಬಹುದು, ಅಷ್ಟು ಹಣವನ್ನು ಕಾರ್ಮಿಕ ಇಲಾಖೆಯಿಂದ ಕೊಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರನ್ನು ಒಬ್ಬ ಮಾನವೀಯತೆ ಇರುವವರು ಎಂದು ನಾವೆಲ್ಲರೂ ಭಾವಿಸಿದ್ದೇವೆ. ಏಕೆಂದರೆ, ಕೋವಿಡ್ ಸಾಂಕ್ರಮಿಕ ರೋಗ ಬಂದಂತಹ ಸಂದರ್ಭದಲ್ಲಿ ಯಾರೇ ಏನೇ ಹೇಳದರೂ ಸಹ, ಪ್ರತಿಯೊಂದು ಸಹಾಯವನ್ನು ಮಾಡಿದ್ದಾರೆ. ಕಾರ್ಮಿಕರಿಗೆ ration kit ಕೊಡುವುದು ಇರಬಹುದು, ಮತ್ತೊಂದು ಇರಬಹುದು ಎಲ್ಲಾ ಸಹಾಯಗಳನ್ನು ಮಾಡಿದ್ದಾರೆ. ಅವರ ಇಲಾಖೆಯಲ್ಲಿ ಸಂಗ್ರಹ ಮಾಡಿದ್ದ ಲಕ್ಷಾಂತರ ration kit ಗಳು ಅಲ್ಲಿಯೇ ಕೊಳೆತು ಬಿದ್ದಿದನ್ನು ತಾವೆಲ್ಲರೂ ನೀಡಿದ್ದೀರಿ. ನಾವು ಈ ಹಿಂದೆಯೂ ಸಹ ಪ್ರಸ್ತಾಪ ಮಾಡಿದ್ದೇವೆ. ಅದಕ್ಕೆ ಮಾನ್ಯ ಸಚಿವರು ಕ್ರಮತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಅದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಏನು ಕ್ರಮತೆಗೆದುಕೊಂಡಿದ್ದಾರೆ ಎಂಬುದನ್ನು ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕು.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಎಲ್ಲೂ ಒಂದು ಕಡೆ ಲೋಪದೋಷ ಆಗಿರುತ್ತದೆ. ನಾವು ಅಧಿಕಾರಿಗಳ ಬಗ್ಗೆ ಕ್ರಮವನ್ನು ತೆಗೆದುಕೊಂಡಿದ್ದೇವೆ.

(ಮುಂದು.,)

**(229) 10-03-2022 (12.10) ಎಂ.ವಿ-ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:- ಮಾನ್ಯ ಸಚಿವರು** ಎಲ್ಲಾ ಕಡೆಗಳಲ್ಲಿ ಸರಿಯಾದ ವ್ಯವಸ್ಥೆಯನ್ನು ಮಾಡಿದ್ದಾರೆ. ಇಡೀ ರಾಜ್ಯದ ಜನರು ತುಂಬಾ ಸಮಾಧಾನದಿಂದ ಇದ್ದಾರೆ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವೈದ್ಯಕೀಯ ವೆಚ್ಚದ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ನಾವು ವೈದ್ಯಕೀಯ ವೆಚ್ಚವನ್ನು ಸಹ ಮರುಪಾವತಿ ಮಾಡುತ್ತೇವೆ. ಕಟ್ಟಡ ಕಾರ್ಮಿಕರಿಗೆ ಎಷ್ಟೇ ಹಣ ಖರ್ಚಾದರೂ ಸಹ ಅವರಿಗೆ ಮರುಪಾವತಿ ಮಾಡುವಂತಹ ಪದ್ಧತಿ ಇದೆ. ಅವರು ಬಿಲ್ಲುಗಳನ್ನು ಹಾಜರುಪಡಿಸುತ್ತಾರೆ. ನಾವು ಅವರ ಬಿಲ್ಲುಗಳಿಗೆ ತಕ್ಕಂತೆ ಹಣವನ್ನು ಮರುಪಾವತಿ ಮಾಡುತ್ತೇವೆ. ಅದರಲ್ಲಿ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಅವರಿಗೆ ಬೇಕಾದಂತಹ ಎಲ್ಲಾ ವೈದ್ಯಕೀಯ ವೆಚ್ಚವನ್ನು ಸಹ ಇಲಾಖೆಯ ವತಿಯಿಂದ ಭರಿಸುತ್ತೇವೆ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಅವರಿಗೆ ಪೂರ್ತಿ ಹಣವನ್ನು ನೀಡಿದರೆ ಸಂತೋಷವಾಗುತ್ತದೆ. ಆದರೆ, ಆ ರೀತಿ ಆಗುತ್ತಿಲ್ಲ. ಇಲಾಖೆಯವರು ಎರಡು ಲಕ್ಷ ರೂಪಾಯಿಗಳೆಂದು ಮಾಡಿದ್ದಾರೆ. ಉತ್ತರದಲ್ಲಿ ತಿಳಿಸಿರುವಂತೆ 300/- ರೂಪಾಯಿಗಳಿಂದ 10,000/- ರೂಪಾಯಿಗಳವರೆಗೆ ಕೊಡುತ್ತೇವೆಂದು ತಿಳಿಸಿದ್ದಾರೆ. ಇಲ್ಲಿ ಕೆಲವುಗಳನ್ನು ಪಟ್ಟಿ ಮಾಡಿದ್ದಾರೆ. ನಾನು ಅವುಗಳನ್ನು ಓದುವುದಕ್ಕೆ ಹೋಗುವುದಿಲ್ಲ. ಇಲ್ಲಿ ಎರಡು ಲಕ್ಷ ರೂಪಾಯಿಗಳೆಂದು ತಿಳಿಸಿದ್ದಾರೆ. ಕಾರ್ಮಿಕರಿಗೆ ಎರಡು ಲಕ್ಷ ರೂಪಾಯಿ ಖರ್ಚು ಆಗಬಹುದು ಅಥವಾ ಮೂರು ಲಕ್ಷ

ರೂಪಾಯಿ ಖರ್ಚು ಆಗಬಹುದು. ಇವತ್ತಿನ ದಿವಸ ಆಸ್ಪತ್ರೆಗಳಲ್ಲಿ ಯಾವ ಪರಿಸ್ಥಿತಿ ಇದೆ ಎಂದು ತಮಗೆ ಗೊತ್ತಿದೆ. ಅವರಿಗೆ ಸರ್ಕಾರದಿಂದ ಏನು ಮಾನದಂಡವನ್ನು ನಿಗದಿಪಡಿಸಿದ್ದಾರೆ. ಅದಕ್ಕಿಂತ ಐವತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೆ ಜಾಸ್ತಿಯಾದರೂ ಸಹ ಅದನ್ನು ಅವರು ಪಾವತಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಿನ ದಿವಸ ಯಾರಾದರೂ ಸತ್ತರೂ ಸಹ ಆಸ್ಪತ್ರೆಯವರು ಸತ್ತವರ ದೇಹವನ್ನು ಕೊಡುವುದಿಲ್ಲ ಅಂತಹ ಆಸ್ಪತ್ರೆಗಳನ್ನು ನಾವು ನೋಡುತ್ತಿದ್ದೇವೆ. ದಯಮಾಡಿ ಕಾರ್ಮಿಕ ಇಲಾಖೆಯವರು ಪೂರ್ತಿ ಹಣವನ್ನು ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಅರಬೈಲು ಹೆಬ್ಬಾರ ಶಿವರಾಮ:–** ಮಾನ್ಯ ಸಭಾಪತಿಯವರೇ, ವಿಶೇಷ ಸಂದರ್ಭವೆಂದು ನಾವು ಒಂದು ಮಾನದಂಡವನ್ನು ನಿಗದಿಪಡಿಸಿದ್ದೇವೆ. ಅಂತಹ ವಿಶೇಷ ಸಂದರ್ಭಗಳು ಬಂದಾಗ, ಅನೇಕ ಜನರಿಗೆ ವೈದ್ಯಕೀಯ ಬಿಲ್ಲುಗಳನ್ನು ಪಾವತಿ ಮಾಡುತ್ತೇವೆ. ಈಗ ನಾವು ಒಂದು ಮಾನದಂಡವನ್ನು ಇಟ್ಟುಕೊಳ್ಳದೆ ಹೋದರೆ, ಎಲ್ಲರೂ ಸಹ ಎರಡು ಲಕ್ಷ, ಮೂರು ಲಕ್ಷ ರೂಪಾಯಿಗಳ ಬಿಲ್ಲುಗಳನ್ನು ಹಿಡಿದುಕೊಂಡು ಬರುತ್ತಾರೆ. ಹಾಗಾಗಿ, ಇಲಾಖೆಯು ಮಾನದಂಡಗಳನ್ನು ನಿಗದಿಪಡಿಸಲೇಬೇಕಾಗಿದೆ. ಈಗ ಯಾರಿಗೆ ಏನು ತೊಂದರೆಯಾಗಿದೆ, ಅಂತಹ ವಿಶೇಷ ಪ್ರಕರಣಗಳು ಬಂದಾಗ, ಇಡೀ ರಾಜ್ಯದಲ್ಲಿ ಸುಮಾರು ಮೂವತ್ತು ಲಕ್ಷ ಕಟ್ಟಡ ಕಾರ್ಮಿಕರು ಇದ್ದಾರೆ. ಈಗ ಸುಮಾರು 21 ರೀತಿಯ ಪರೀಕ್ಷೆ ಮಾಡುವಂತಹ ಹೊಸ ವ್ಯವಸ್ಥೆ ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಅವರ ಇಡೀ ಕುಟುಂಬವನ್ನು 21 ಹಂತದಲ್ಲಿ ಅಪೋಲೋ ಆಸ್ಪತ್ರೆಗೆ ನೀಡಿ, ಒಟ್ಟಾರೆಯಾಗಿ ಅವರ ಆರೋಗ್ಯವನ್ನು ಪರಿಶೀಲಿಸುವಂತಹ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಆ ಒಟ್ಟಾರೆ ಡೇಟಾ ನಮ್ಮ ಬಳಿ ಇರಬೇಕೆಂದು ಸುಮಾರು ಮೂವತ್ತು ಲಕ್ಷ ಕುಟುಂಬಗಳಿಗೆ ಒಂದು ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ.

**ಪ್ರಶ್ನೆ ಸಂಖ್ಯೆ: 1500**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್.ಮಂಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರಗಳನ್ನು ಒದಗಿಸಿದ್ದಾರೆ. ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ ಕೆಲವು ಕಡೆ ಸರಿಯಾದ ಉತ್ತರಗಳನ್ನು ನೀಡಿದ್ದಾರೆ, ಮತ್ತೆ ಕೆಲವು ಕಡೆಗಳಲ್ಲಿ ಉತ್ತರಗಳು ಸಮಂಜಸವಾಗಿಲ್ಲ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅತೀ ಹೆಚ್ಚಿನ ಕೆರೆಗಳಿವೆ. ಸುಮಾರು ಐದು ವರ್ಷಗಳಿಂದ ಸಾಕಷ್ಟು ಕೆರೆಗಳಿಗೆ ನೀರು ತುಂಬಿಲ್ಲ. ಕಳೆದ ಬಾರಿಯಲ್ಲಿ ಪ್ರತಿ ವರ್ಷಕ್ಕಿಂತ ನಾಲ್ಕುಪಟ್ಟು ಜಾಸ್ತಿ ಮಳೆಯಾದರೂ ಕೂಡ, ಆ ಕೆರೆಗಳಲ್ಲಿ ಇರುವಂತಹ ಹೂಳುಗಳನ್ನು ಎತ್ತದೆ, ಒಂದು ಟಿ.ಎಂ.ಸಿ. ನೀರು ನಿಲ್ಲುವಂತಹ ಕೆರೆಗಳು, ಅರ್ಧ ಟಿ.ಎಂ.ಸಿ. ನೀರನ್ನು ಕೂಡ ಹಿಡಿಯಲಾರದ ಮಟ್ಟಕ್ಕೆ ಬಂದಿವೆ. ಇವತ್ತು ಏನು ಸರ್ಕಾರ ಈ ಕೆರೆಕಟ್ಟೆಗಳಿಗೆ ನೀರು ತುಂಬಿಸುವಂತಹ ಕಾರ್ಯಕ್ರಮವನ್ನು ಮಾಡಿ, ಇದರಿಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಮಾಡಬಹುದು ಎಂದು ಸರ್ಕಾರ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈಗ ಬಹುತೇಕ ಕೆರೆಗಳಲ್ಲಿ ನೀರು ಇಲ್ಲದೆ, ಬೆಳೆಗಳನ್ನು ಬೆಳೆಯುವುದಕ್ಕೆ ಆಗುತ್ತಿಲ್ಲ. ಕೆರೆಗಳಿಗೆ ನೀರು ತುಂಬುವುದರಿಂದ, ಆ ಕೆರೆಗಳಿಂದ ಬೋರ್‌ವೆಲ್‌ಗಳು ರೀಚಾರ್ಜ್ ಆಗುತ್ತವೆ. ಆದರೆ, ಈಗ ಆ ರೀಚಾರ್ಜ್ ಕೂಡ ಆಗುತ್ತಿಲ್ಲ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ 2021–22ನೇ ಸಾಲಿನಲ್ಲಿ, ಚಾಮರಾಜನಗರ ಜಿಲ್ಲೆಗೆ ಯಾವುದೇ ಕೆರೆ ತುಂಬಿಸುವ ಕಾಮಗಾರಿಯನ್ನು ಮಂಜೂರು ಮಾಡಿರುವುದಿಲ್ಲ ಎಂದು ಉತ್ತರವನ್ನು ನೀಡಿದ್ದಾರೆ. ಚಾಮರಾಜನಗರ ಜಿಲ್ಲೆ ಬಡತನದ ಜಿಲ್ಲೆ. ಆ ಜಿಲ್ಲೆಯ ಜನರು ವ್ಯವಸಾಯ ಮಾಡುವುದಕ್ಕೆ ನೀರು ಇಲ್ಲದೆ. ಬಂಡೆಗಳ ಹತ್ತಿರ ಮತ್ತು ಮಣ್ಣಿನಲ್ಲಿ ಕೆಲಸ ಮಾಡಿ, ಬಂಡೆ ಕುಸಿತವಾಗಿ ಒಬ್ಬ ಕಾರ್ಮಿಕ ಸತ್ತು ಹೋಗಿದ್ದಾನೆ. ಇವೆಲ್ಲವನ್ನೂ ಕೂಡ ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಹಾಗೆಯೇ ಈ ಕೆರೆಕಟ್ಟೆಗಳು ಎಷ್ಟು ವಿಸ್ತೀರ್ಣವಿದೆ ಎಂದು ಅವುಗಳ ಅಳತೆಯಾಗಿಲ್ಲ.

**ಸಭಾಪತಿಯವರು:** ಮಾನ್ಯ ಸದಸ್ಯರೆ, ನೀವು ಭಾಷಣ ಮಾಡಬೇಡಿ, ಪ್ರಶ್ನೆ ಕೇಳಿ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಅಲ್ಲಿ ಏನಾಗಬೇಕು ಎಂದರೆ, ಅಲ್ಲಿರುವಂತಹ ಕೆರೆಕಟ್ಟೆಗಳ ಹೂಳನ್ನು ಎತ್ತಿಸಬೇಕು. ಕುಡಿಯುವ ನೀರಿನ ಬಹುಗ್ರಾಮ ಯೋಜನೆಗೆ ಅನುಕೂಲ ಮಾಡಿಕೊಡಬೇಕು. ಹಾಗೆಯೇ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ನೀರು ಹರಿದು ನಷ್ಟವಾಗಿ ಹೋಗುತ್ತಿರುತ್ತದೆ. ಕೆರೆಗಳಿಗೆ ನೀರನ್ನು ತುಂಬಿಸುವಂತಹ ಕೆಲಸವನ್ನು ಅಲ್ಲಿನ ಅಧಿಕಾರಿಗಳು ಮಾಡುತ್ತಿಲ್ಲ. ಇದರಿಂದ ಕೆರೆಗಳಲ್ಲಿ ರೀಚಾರ್ಜ್ ಆಗುತ್ತಿಲ್ಲ. ಉದಾಹರಣೆಗೆ; ಮೈಸೂರು ತಾಲ್ಲೂಕಿನಲ್ಲಿ ಉದಬೂರು ಕೆರೆ ಇದೆ. ಅದು ಸುಮಾರು ಐವತ್ತರಿಂದ ಅರವತ್ತು ಎಕರೆ ಇದೆ. ಆ ಕೆರೆಗೆ ನೀರು ತುಂಬಿಸುವುದಕ್ಕೆ ಯಾವುದೇ ರೀತಿಯ ಮೇಲ್ಸೇತುವೆ ಬೇಕಾಗಿಲ್ಲ. ಕೇವಲ ಒಂದು ನಾಲೆಯನ್ನು ಓಪನ್ ಮಾಡಿದರೆ ಅಲ್ಲಿಗೆ ನೀರು ಬಂದು ತುಂಬುತ್ತದೆ. ಆದರೆ, ಅಂತಹ ಕೆಲಸಗಳೂ ಸಹ ಆಗುತ್ತಿಲ್ಲ. ಮೈಸೂರು ತಾಲ್ಲೂಕಿನ ಜೈಪುರ ಕೆರೆ ಹಾಗೆಯೇ ಉದಬೂರು ಕೆರೆಗಳಿಗೆ ರೈತರು ಅವಲಂಬಿತರಾಗಿದ್ದಾರೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದೇವೆ. ಈಗ ನಾವು catchment area ಗಳಿಂದ ಕೆರೆಗೆ ಬರುವಂತಹ ಹೂಳು ತೆಗೆಯುವ ಕಾರ್ಯಕ್ರಮಗಳನ್ನು ಎಲ್ಲೂ ಮಾಡಿಲ್ಲ. ಮಾನ್ಯ ಸದಸ್ಯರು ಹೇಳುವುದು, catchment area ಗಳಿಂದ ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ ಅದನ್ನು ತೆಗೆಯಿರಿ ಎಂದು ಹೇಳುತ್ತಾರೆ. ಈಗ ಕೆರೆಗಳಿಗೆ ಸಂಬಂಧಪಟ್ಟಂತೆ ಎರಡು-ಮೂರು ಇಲಾಖೆಯವರು ಮೇಲ್ವಿಚಾರಣೆ ಮಾಡುತ್ತಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ನಾವು ಒಂದು D.P.R (Detailed Project Report) ಮಾಡಿದ್ದೆವು. ಅದನ್ನು ಬೃಹತ್ ಜಲ ಸಂಪನ್ಮೂಲ ಇಲಾಖೆಯವರು ಆ ಕಾರ್ಯಕ್ರಮವನ್ನು ಮಾಡಬೇಕು. ಹಾಗೆಯೇ ಕಬಿನಿ ನದಿಯಿಂದ ಏನು ಹೆಚ್ಚಿನ ನೀರು ಸಿಗುತ್ತದೆ. ಅದನ್ನು ಏನಾದರೂ ಮಾಡಿ, ಆ ಎರಡು-ಮೂರು ತಾಲ್ಲೂಕುಗಳಿಗೆ ಬೃಹತ್ ಜಲ ಸಂಪನ್ಮೂಲ ಇಲಾಖೆಯ ವತಿಯಿಂದ ಕೆರೆಗಳನ್ನು ತುಂಬಿಸುವ ಕೆಲಸವನ್ನು ಮಾಡಬೇಕು ಎನ್ನುವಂತಹ ಒಂದು ಆಲೋಚನೆ ಇದೆ. ಈಗ ನಾವು ಕೆರೆ ಸಾಮರ್ಥ್ಯವನ್ನು ಏಕಾಏಕಿ ಹೆಚ್ಚಿಗೆ ಮಾಡುವುದಕ್ಕೆ ಆಗುವುದಿಲ್ಲ. ಈಗ ಕಾವೇರಿ ಟ್ರಿಬ್ಯೂನಲ್ ಅವಾರ್ಡ್ ಮೇಲೆ, ನಾವು ಏನು ಆ

ಬೇಸಿನ್‌ನಲ್ಲಿ ನೀರು ಇದೆ. ಎಲ್ಲಿಯಾದರೂ ಅದರ ಸಾಮರ್ಥ್ಯವನ್ನು ಹೆಚ್ಚಿಗೆ ಮಾಡುತ್ತೇವೆಂದರೆ, ನಮ್ಮ ವಿರುದ್ಧ ಸುಪ್ರೀಂ ಕೋರ್ಟ್ ಮುಂದೆ ಪ್ರಕರಣ ಹೋಗುವ ಸಾಧ್ಯತೆಗಳು ಮತ್ತು ಲಕ್ಷಣಗಳಿವೆ. ಹಾಗಾಗಿ ಅದನ್ನು ಹಂತ-ಹಂತವಾಗಿ ನೋಡಿಕೊಂಡು ಮಾಡುತ್ತಿದ್ದೇವೆ. ಕಾವೇರಿ ಬೇಸಿನ್‌ನಲ್ಲಿ ಸ್ವಲ್ಪ ಕಂಟ್ರೋಲ್ ಆಗಿಯೇ ಕೆಲಸ ಮಾಡುತ್ತಿದ್ದೇವೆ. ಏಕೆಂದರೆ, ನಾವು Cauvery Management Authority ಉತ್ತರ ಹೇಳಬೇಕಾಗುತ್ತದೆ. ಈಗ ಸಾಮರ್ಥ್ಯವನ್ನು ಹೆಚ್ಚಿಗೆ ಮಾಡುವುದು, tribunal decision ಆದಮೇಲೆ ಅಷ್ಟು ಸುಲಭವಿಲ್ಲ. ಆದರೂ, ಮಾನ್ಯ ಸಿ.ಎನ್.ಮಂಜೇಗೌಡರು ಹೇಳಿದ ಹಾಗೆ, ನಮ್ಮದು ಏನು ಸಾಮರ್ಥ್ಯವಿದ್ದು, silt up ಆಗಿದ್ದರೆ, ಆ ಕೆರೆಗಳ ಹೂಳು ತೆಗೆಸುವುದಕ್ಕೆ ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, 2021-22ನೇ ಸಾಲಿನಲ್ಲಿ, 995 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಹಾಗೆಯೇ ಗುತ್ತಿಗೆದಾರರನ್ನು ಒಪ್ಪಂದ ಮಾಡಿಕೊಳ್ಳುತ್ತಿದ್ದೇವೆಂದು ಹೇಳಿದ್ದಾರೆ. ಅದು ಆಗಿ ಈಗಾಗಲೇ 2022-23ನೇ ಸಾಲು ಬಂದಿದೆ. ಈ ಹಣದಿಂದ ಇವರ ಈ ಕೆಲಸಗಳನ್ನು ಮಾಡದೇ ಹೋದರೆ, ಮತ್ತೆ ಇದು 9X2=18 ಎಂದು, ಏನಾಗುತ್ತಿದೆ ಎಂದು ಎಲ್ಲಾ ಹಂತದಲ್ಲೂ ಸಹ ನೋಡುತ್ತಿದ್ದೇವೆ. ಇವತ್ತು ತೆಗೆದುಕೊಂಡಂತಹ ಕಾಮಗಾರಿಗಳನ್ನು ಯಾವ ಒಂದು ಅಂದಾಜು ವೆಚ್ಚಕ್ಕೆ ಮಾಡುತ್ತೇವೆ ಅದು ಪುನಃ ಅದು ಶೇಕಡಾ 20ರಷ್ಟು ಮತ್ತು 30ರಷ್ಟು enhance ಆಗುವಂತಹ ಕೆಲಸಗಳಾಗುತ್ತಿವೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ. ಅಲ್ಲಿನ ಕಾಮಗಾರಿಗಳು ಆಗುತ್ತಿಲ್ಲ. ಇದನ್ನು ಜಾರಿ ಮಾಡಿ ಒಂದು ವರ್ಷವಾದರೂ ಕೂಡ, ಗುತ್ತಿಗೆದಾರರನ್ನು ನೇಮಕ ಮಾಡಿಕೊಳ್ಳುವಂತಹ ಹಂತದಲ್ಲಿ ಇದೆಯೆಂದರೆ ಏನರ್ಥ? ಆದುದರಿಂದ ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ. ದಯವಿಟ್ಟು ಇಂತಹ ಕಾರ್ಯಕ್ರಮಗಳು ಬೇಗನೆ ನಡೆಯಲ್ಲಿ. ವಿಶೇಷವಾಗಿ ಚಾಮರಾಜನಗರ ಜಿಲ್ಲೆ ಬಹಳ ಹಿಂದುಳಿದ ಜಿಲ್ಲೆ. ಇನ್ನೇನು ಒಂದು ಅಥವಾ ಎರಡು ತಿಂಗಳಿನಲ್ಲಿ ಮಳೆ ಪ್ರಾರಂಭವಾಗಿ ಬಿಡುತ್ತದೆ. ಆದುದರಿಂದ ಇದನ್ನು ಮುಗಿಸಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**ಶ್ರೀ ಜೆ.ಸಿ.ಮಾಧುಸ್ವಾಮಿ:-** ಮಾನ್ಯ ಸಭಾಪತಿಯವರೇ, ಬನ್ನೂರು ಒಂದೇ ಒಂದು ಕೆರೆಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈಗ ಬನ್ನೂರು ಕೆರೆಗೆ ಮಾಡಿಕೊಡುತ್ತೇವೆ. ಅದು tender process ನಲ್ಲಿ ಇದೆ. ಇದಕ್ಕೆ ಇನ್ನು ಐದಾರು ತಿಂಗಳು ಆಗುತ್ತದೆ. ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಈಗ ಟೆಂಡರ್ ಕರೆಯುವುದು, negotiate ಮಾಡುವುದು, ಟೆಕ್ನಿಕಲ್ ಬಿಡ್, ಫೈನಾನ್ಷಿಯಲ್ ಬಿಡ್ ಇದೆ. ನಾವು ರಾಜ್ಯದ ಕಾನೂನುಗಳನ್ನು ಬಿಟ್ಟು ಬಹಳ ವೇಗವಾಗಿ ಮಾಡುವುದಕ್ಕೆ ಆಗುವುದಿಲ್ಲ. ಆದರೆ, ಇದನ್ನು ಬಹಳ ಬೇಗ ಮಾಡುತ್ತೇವೆ. ಅದಕ್ಕೆ ಈಗಾಗಲೇ work order ಕೊಟ್ಟಿದ್ದೇವೆ. ಆ ಕೆಲಸವನ್ನು ಪ್ರಾರಂಭ ಮಾಡಿಸುತ್ತೇವೆ. ಚಾಮರಾಗಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ನಾನೇ ಸ್ವತಃ ಎರಡು ದಿವಸ ಇದ್ದು. ಚಾಮರಾಜನಗರ ಜಿಲ್ಲೆಯ ಆ ಎಲ್ಲಾ ತಾಲ್ಲೂಕುಗಳಿಗೆ ನೀರನ್ನು ಯಾವ ರೀತಿ ಕೊಡಬೇಕು ಎಂಬುದರ ಬಗ್ಗೆ ಸರ್ವೇ ಕೂಡ ಮಾಡಿಸಿದ್ದೇವೆ. ಈಗ ಸರ್ವೇ ಮಾಡಿಸಿ, ಹನೂರು, ಗುಂಡ್ಲುಪೇಟೆ ಮತ್ತು ಚಾಮರಾಜನಗರ ಇಲ್ಲಿ ಎಲ್ಲಾ ಕಡೆ ಇರುವಂತಹ ಕೆರೆಗಳಿಗೆ ನಾವು ಕಬಿನಿ ಜಲಾಶಯದಿಂದ ಹೆಚ್ಚುವರಿ ಇರುವ ನೀರನ್ನು ಪಂಪ್ ಮಾಡಿ ಕೊಡಬಹುದೇ ಎಂದು ಆಲೋಚನೆ ಮಾಡಿದ್ದೇವೆ. ಈ ಯೋಜನೆಯನ್ನು ಸಣ್ಣ ನೀರಾವರಿ ಇಲಾಖೆಯವರು ಮಾಡಬೇಕೆ ಅಥವಾ ಬೃಹತ್ ಜಲ ಸಂಪನ್ಮೂಲ ಇಲಾಖೆಯವರು ಮಾಡಬೇಕೆ ಎಂದು ಒಂದು ಚರ್ಚೆಯ ಹಂತದಲ್ಲಿ ಇರುವುದರಿಂದ ಅದನ್ನು ಹಾಗೆಯೇ hold ಮಾಡಿದ್ದೇವೆ. ಈಗ ಬೃಹತ್ ಜಲ ಸಂಪನ್ಮೂಲ ಇಲಾಖೆಯವರು ಆ ಭಾಗದಲ್ಲಿ ಕೆಲಸ ಮಾಡುವುದರಿಂದ, ಆ ಕೆಲಸವನ್ನು ಅವರು ಮಾಡುವುದಾದರೆ ಬೃಹತ್ ಜಲ ಸಂಪನ್ಮೂಲ ಇಲಾಖೆಯವರೆ ಮಾಡುತ್ತಾರೆ. ಇಲ್ಲದಿದ್ದರೆ ನಮ್ಮ ಇಲಾಖೆಯವರು ತೆಗೆದುಕೊಂಡು ಸುಮಾರು ನಾಲ್ಕು ನೂರು ಕೋಟಿ ರೂಪಾಯಿಗಳ ಯೋಜನೆಯಲ್ಲಿ ಚಾಮರಾಜನಗರ ಜಿಲ್ಲೆಯ ಎಲ್ಲಾ ಕೆರೆಗಳನ್ನು ತುಂಬಿಸಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ. ನಾವು ಅದನ್ನು ಮಾಡುತ್ತೇವೆ.

**(ಮುಂದು…**

(230) 10.03.2022 12.20 LL-RN

**(ಸಭಾಪತಿಯವರ ಉಪಸ್ಥಿತಿ)**

**ಪ್ರಶ್ನೆ ಸಂಖ್ಯೆ: 1513**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಕಾರ್ಮಿಕರಿಗಾಗಿ ಇರತಕ್ಕಂತಹ ಚಿಕಿತ್ಸೆ ಮತ್ತು ಆಸ್ಪತ್ರೆಗಳ ಕುರಿತು ಮತ್ತು ಅಲ್ಲಿ ಎಷ್ಟು ವೈದ್ಯರು ಕೆಲಸ ಮಾಡುತ್ತಿದ್ದಾರೆ, ಕಾರ್ಮಿಕರ ಯಾವ ರೀತಿ ಆರೋಗ್ಯ ಸೇವೆಗಳು ಇವೆ ಎಂಬ ಬಗ್ಗೆ ಪ್ರಶ್ನೆ ಕೇಳಿದ್ದು, ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿರುತ್ತಾರೆ. ಆದರೆ, ಈ ಉತ್ತರದ ಕುರಿತು ನನ್ನ ಮೂರು ಉಪ ಪ್ರಶ್ನೆಗಳು ಇರುತ್ತವೆ. ಮೊದಲನೆಯದಾಗಿ, ನನಗಿರತಕ್ಕಂತಹ ಮಾಹಿತಿ ಪ್ರಕಾರ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುತ್ತದೆ. ನಿಯಮದ ಪ್ರಕಾರ 3 ಸಾವಿರ ಇ.ಎಸ್.ಐ. ಕಾರ್ಡ್‌ದಾರರಿಗೆ ಒಬ್ಬರು ವೈದ್ಯರು ಇರಬೇಕೆಂದು ಇದೆ. ಆದರೆ, ಈ ಅನುಪಾತದ ಪ್ರಕಾರ ವೈದ್ಯರು ಇದ್ದಾರೆಯೇ ಇಲ್ಲವೋ ಎಂಬ ಬಗ್ಗೆ ನನ್ನ ಉಪ ಪ್ರಶ್ನೆ ಇರುತ್ತದೆ. ವಿಶೇಷವಾಗಿ ಈ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ಬಹಳ ಇದೆ ಎಂದು ನಾನು ಕೇಳಿರುತ್ತೇನೆ. ಉದಾಹರಣೆಗೆ, ಹುಬ್ಬಳ್ಳಿ ಆಸ್ಪತ್ರೆಯಲ್ಲಿ ಸುಮಾರು 19 ರಿಂದ 20 ತಜ್ಞ ವೈದ್ಯರು ಇರಬೇಕಾಗಿದ್ದು, ಕೇವಲ 10 ರಿಂದ 12 ಜನ ತಜ್ಞ ವೈದ್ಯರು ಇದ್ದಾರೆಂಬ ಮಾಹಿತಿ ಇರುತ್ತದೆ. ಹಾಗಾಗಿ, ಈ ಆಸ್ಪತ್ರೆಗಳಲ್ಲಿ ಮತ್ತು ಚಿಕಿತ್ಸಾಲಯಗಳಲ್ಲಿ ಏನು ವೈದ್ಯರ ಕೊರತೆ ಇದೆ, ಆ ಕೊರತೆಯನ್ನು ಮಾನ್ಯ ಸಚಿವರು ಸರಿದೂಗಿಸುತ್ತಾರೆಯೋ ಅಥವಾ ನೇಮಕಾತಿ ಮಾಡುತ್ತಾರೆಯೇ ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

ಎರಡನೆಯದಾಗಿ, ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳನ್ನು ಬಲಪಡಿಸುವುದು ಬಹಳ ಅವಶ್ಯಕತೆ ಇರುತ್ತದೆ. ಗದಗದಲ್ಲಿ ಒಂದು ಇ.ಎಸ್.ಐ. ಆಸ್ಪತ್ರೆ ಇದೆ. ಆ ಆಸ್ಪತ್ರೆಯಲ್ಲಿ ಲ್ಯಾಬ್ ಇರುವುದಿಲ್ಲ. ಆ ಆಸ್ಪತ್ರೆಗೆ ಯಾರಾದರೂ ರೋಗಿ ಬಂದಾಗ, ಆತನಿಗೆ ಶುಗರ್ ಇದೆಯೋ ಇಲ್ಲವೋ ಎಂದು ಪರೀಕ್ಷೆ ಮಾಡುವುದಕ್ಕೆ ರಕ್ತ ಪರೀಕ್ಷೆ ಮತ್ತು ಶುಗರ್ ಟೆಸ್ಟ್ ಮಾಡುವುದಕ್ಕೆ ಟೆಸ್ಟಿಂಗ್ ಲ್ಯಾಬ್ ಇರುವುದಿಲ್ಲ. ಚಿಕಿತ್ಸಾಲಯಗಳಿಗೆ ಕನಿಷ್ಠ ಪಕ್ಷ ಇಷ್ಟು ಟೆಸ್ಟಿಂಗ್ ಲ್ಯಾಬ್ ಆದರೂ ಇರಲೇಬೇಕು. ನಾನು

ಕೇಳುತ್ತಿರುವುದು ಶುಗರ್ ಟೆಸ್ಟ್ ಮತ್ತು ಬ್ಲಡ್ ಟೆಸ್ಟ್ ಮಾತ್ರ. ಅದು ಕೂಡ ಆ ಚಿಕಿತ್ಸಾಲಯಗಳಲ್ಲಿ ಇರುವುದಿಲ್ಲ. ಹೀಗಾಗಿ, ರಾಜ್ಯದಲ್ಲಿರುವಂತಹ ಎಲ್ಲಾ ಚಿಕಿತ್ಸಾಲಯಗಳನ್ನು ಬಲಪಡಿಸಿ, ಕನಿಷ್ಠ ಪಕ್ಷ ಬೇಕಾಗಿರುವ ಲ್ಯಾಬ್ ಟೆಸ್ಟ್ ಸೌಲಭ್ಯಗಳನ್ನು ಒದಗಿಸುವಂತಹ ಕೆಲಸ ಮಾಡುತ್ತಾರೆ ಅಥವಾ ಇಲ್ಲವೇ ಎಂಬ ಬಗ್ಗೆ ಉತ್ತರ ನೀಡಬೇಕು.

ಮೂರನೆಯದಾಗಿ, ಹೀಗಿರತಕ್ಕಂತಹ ಚಿಕಿತ್ಸಾಲಯಗಳನ್ನು ಆಸ್ಪತ್ರೆಗಳಾಗಿ ಮಾರ್ಪಾಡು ಮಾಡುತ್ತಾರೆಯೇ ಎಂಬ ಪ್ರಶ್ನೆ ಕೇಳಿದ್ದು, ಅದು ಪರಿಶೀಲನಾ ಹಂತದಲ್ಲಿದೆ ಎಂದು ಉತ್ತರ ನೀಡಿರುತ್ತಾರೆ. ಮಾನ್ಯ ಸಚಿವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಏಕೆಂದರೆ, ಕೋವಿಡ್-19 ಸಂದರ್ಭದಲ್ಲಿ ಎಂ.ಎಲ್.ಸಿ.ಗಳನ್ನು ಯಾರು ಕೂಡ ಪರಿಗಣಿಸಲಿಲ್ಲ. ಆದರೆ, ಪ್ರಥಮ ಬಾರಿಗೆ ಕಾರ್ಮಿಕ ಇಲಾಖೆ ಸಚಿವರು ಪ್ರತಿಯೊಬ್ಬ ಎಂ.ಎಲ್.ಸಿ.ಗೆ 1 ಸಾವಿರ ಫುಡ್ ಕಿಟ್ ಅನ್ನು ನಮ್ಮ ಮೂಲಕವೇ ವಿತರಣೆ ಮಾಡಿರುತ್ತಾರೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸಂಕನೂರರವರೇ, ಆ ವಿಷಯದ ಬಗ್ಗೆ ಈಗ ಮಾತನಾಡುವುದು ಬೇಡ. ತಾವು ಈಗ ವಿಷಯಕ್ಕೆ ಬನ್ನಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನನ್ನ ವಿನಂತಿ ಏನೆಂದರೆ ಮಾನ್ಯ ಕಾರ್ಮಿಕ ಸಚಿವರು ಅಧಿಕಾರ ವಹಿಸಕೊಂಡ ನಂತರ ತಮ್ಮ ಇಲಾಖೆಯನ್ನು ಸಮರ್ಥವಾಗಿ ಮುನ್ನೆಡೆಸಿಕೊಂಡು ಹೋಗುತ್ತಿದ್ದಾರೆ.

**ಸಭಾಪತಿಯವರು:-** ಹಾಗಾದರೆ, ತಾವು ಕುಳಿತುಕೊಳ್ಳಿ, ಪ್ರಶ್ನೆ ಏತಕ್ಕೆ ಕೇಳುತ್ತೀರಿ?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ನನ್ನ ಆಸೆ ಏನೆಂದರೆ, ದಯಮಾಡಿ ಪ್ರತಿ ಜಿಲ್ಲೆಗೆ ಒಂದು ಆಸ್ಪತ್ರೆ ಮಾಡಬೇಕೆಂದು ಕಳಕಳಿಯ ವಿನಂತಿ ಮಾಡುತ್ತೇನೆ. ಅದರ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ 113 ಚಿಕಿತ್ಸಾಲಯಗಳು ಮತ್ತು 07 ಆಸ್ಪತ್ರೆಗಳು ಇರುತ್ತವೆ. ಗುಲ್ಬರ್ಗಾ ಮತ್ತು ಬೆಂಗಳೂರಿನ ರಾಜಾಜಿನಗರದಲ್ಲಿರುವ ಇ.ಎಸ್.ಐ. ಆಸ್ಪತ್ರೆಗಳನ್ನು ಹೊರತುಪಡಿಸಿ, ಬಾಕಿ ಇರುವಂತಹ ಎಲ್ಲಾ ಆಸ್ಪತ್ರೆಗಳು ನಮ್ಮ ಅಧೀನದಲ್ಲಿರುತ್ತವೆ. ಈ ಎರಡು ಆಸ್ಪತ್ರೆಗಳು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಅಧೀನದಲ್ಲಿರುತ್ತವೆ. ಅದನ್ನು ಹೊರತುಪಡಿಸಿ, 19 ಕಡೆಗಳಲ್ಲಿ ಹೊಸ ಚಿಕಿತ್ಸಾಲಯಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿರುತ್ತದೆ. ಅದು ಮುಧೋಳ, ಗೌರಿಬಿದನೂರು, ತುಮಕೂರು ಗ್ರಾಮಾಂತರ, ಬಂಟ್ವಾಳ, ಚಿಂಚೋಳಿ, ಅರಸೀಕೆರೆ, ರಾಣೆಬೆನ್ನೂರು, ಕೋಲಾರ, ಸಂಡೂರು, ಕನಕಪುರ, ಬೀದರ್, ಯಾದಗಿರಿ, ಯಮಕನಮರಡಿ, ಶಿರಸಿ, ಕುಮುಟಾ, ಮಂಗಳೂರು ನಗರ, ಬೆಳ್ತಂಗಡಿ ಮತ್ತು ಕಾಪು. ಒಟ್ಟು 19 ಕಡೆಗಳಲ್ಲಿ ಚಿಕಿತ್ಸಾಲಯಗಳನ್ನು ಮಂಜೂರು ಮಾಡಲಾಗಿರುತ್ತದೆ. ಇ.ಎಸ್.ಐ. ಆಸ್ಪತ್ರೆಗಳಿಗೆ ಸಂಬಂಧಪಟ್ಟ ಒಂದು ರೂಪಾಯಿ ಖರ್ಚನ್ನು ರಾಜ್ಯ ಸರ್ಕಾರ ಭರಿಸದೇ, ಕೇಂದ್ರ ಸರ್ಕಾರವೇ ಭರಿಸುತ್ತದೆ. ಇವೊತ್ತಿನ ದಿವಸ ನಾವು ಪ್ರತಿ ಜಿಲ್ಲೆಗೆ ಒಂದು ಇ.ಎಸ್.ಐ. ಆಸ್ಪತ್ರೆ ಮಾಡಬೇಕೆಂಬ ಪ್ರಯತ್ನದಲ್ಲಿದ್ದೇವೆ.

ಎರಡನೆಯದಾಗಿ, ಪ್ರಸ್ತುತ ಇರುವಂತಹ 113 ಚಿಕಿತ್ಸಾಲಯಗಳು ಮತ್ತು ಹೊಸದಾಗಿ ಮಂಜೂರಾಗಿರುವ 19 ಚಿಕಿತ್ಸಾಲಯಗಳು ಸೇರಿದಂತೆ ಎಲ್ಲಾ ಚಿಕಿತ್ಸಾಲಯಗಳು ಸಹ ಒಂದೇ ರೀತಿಯ ಕಟ್ಟಡ ನಿರ್ಮಾಣ ಹೊಂದಬೇಕೆಂದು ಪ್ರತಿ ಚಿಕಿತ್ಸಾಲಯ 20 ರಿಂದ 25 ಲಕ್ಷ ರೂಪಾಯಿ ವೆಚ್ಚದಲ್ಲಿ ಆಗಬೇಕೆಂದು ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಒಂದು ಹಂತಕ್ಕೆ ಬಂದಿರುತ್ತೇವೆ. ನಮ್ಮ ಮೂಲಭೂತ ಉದ್ದೇಶ 129 ಜನ ವೈದ್ಯರಗಳನ್ನು ಕೆ.ಪಿ.ಎಸ್.ಸಿ. ಮೂಲಕ ನೇಮಕಾತಿ ಮಾಡಿಕೊಂಡು, ಅವರೆಲ್ಲರೂ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಆದರೆ, ಸುಮಾರು 6 ತಿಂಗಳ ಅಂತರದಲ್ಲಿ 29 ಜನ ವೈದ್ಯರುಗಳು ರಾಜೀನಾಮೆ ನೀಡಿ ಹೋಗಿರುತ್ತಾರೆ. ಅದರಲ್ಲಿ 24 ಜನ ವೈದ್ಯರುಗಳು ಉನ್ನತ ವ್ಯಾಸಂಗಕ್ಕೆ ಹೋಗಿರುತ್ತಾರೆ. ಕೆಲವು ವೈದ್ಯರುಗಳು ರಾಜೀನಾಮೆ ನೀಡಿ ಹೋಗಿದ್ದರಿಂದ, waiting list ನಲ್ಲಿರುವ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಅನುಮತಿ ನೀಡಬೇಕೆಂದು ಕೆ.ಪಿ.ಎಸ್.ಸಿ. ಗೆ ಕೇಳಿರುತ್ತೇವೆ. ಆದರೆ, ಕೆ.ಪಿ.ಎಸ್.ಸಿ. ನವರು ಒಂದು

ವರ್ಷದ ನಂತರ ಅನುಮತಿ ನೀಡುವುದಕ್ಕೆ ಅವಕಾಶ ಇರುವುದಿಲ್ಲ ಎಂದು ಹೇಳಿರುತ್ತಾರೆ. ಮತ್ತೊಮ್ಮೆ ಕೆ.ಪಿ.ಎಸ್.ಸಿ. ಮುಖಾಂತರ ನೇಮಕಾತಿ ಮಾಡಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಕಾಂಟ್ರಾಕ್ಟ್ ಆಧಾರದ ಮೇರೆಗೆ ನೇಮಕಾತಿ ಮಾಡಿಕೊಳ್ಳುವುದಕ್ಕೆ ನಮಗೆ ಅನುಮತಿ ಸಿಕ್ಕಿರುತ್ತದೆ. ಅದರಂತೆ, ಎಷ್ಟು ಜನ ವೈದ್ಯರು ಕಾಂಟ್ರಾಕ್ಟ್ ಆಧಾರದ ಮೇರೆಗೆ ಸಿಗುತ್ತಾರೆ, ಅವರನ್ನು ನೇಮಕ ಮಾಡಿಕೊಳ್ಳುತ್ತೇವೆ.

ಇದರ ಜೊತೆಗೆ, ಬೆಳಗಾವಿ, ಹುಬ್ಬಳ್ಳಿ ಮತ್ತು ವಿಶೇಷವಾಗಿ ಬೆಂಗಳೂರು ಮತ್ತು ಮೈಸೂರು ಇಂತಹ ದೊಡ್ಡ ಆಸ್ಪತ್ರೆಗಳಿಗೆ ಶಸ್ತ್ರಚಿಕಿತ್ಸೆಗೆ ಅವಶ್ಯಕವಾಗಿ ಬೇಕಾಗಿರುವಂತಹ ವೈದ್ಯಕೀಯ ಯಂತ್ರೋಪಕರಣಗಳನ್ನು ಖರೀದಿಸುವುದಕ್ಕೆ 44 ಕೋಟಿ ರೂಪಾಯಿಗಳ ಹಣ ಮಂಜೂರು ಆಗಿದ್ದು, ಟೆಂಡರ್ ಪ್ರಕ್ರಿಯೆ ಸಹ ಆಗಿದ್ದು, ಕಾರ್ಯಾದೇಶವನ್ನು ಸಹ ನೀಡುತ್ತಿದ್ದೇವೆ. ಇನ್ನು ಮುಂದಿನ 2 ತಿಂಗಳಿನಲ್ಲಿ ಎಲ್ಲಾ ಇ.ಎಸ್.ಐ. ಆಸ್ಪತ್ರೆಗಳಿಗೆ ಬೇಕಾದಂತಹ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಎಲ್ಲಿ ಇ.ಎಸ್.ಐ. ಚಿಕಿತ್ಸಾಲಯ ಇದ್ದು, ಅಲ್ಲಿ ಪೂರ್ಣ ವ್ಯವಸ್ಥೆಗಳಿರುವುದಿಲ್ಲ, ಆ ಚಿಕಿತ್ಸಾಲಯಗಳು ಏನು ಬರೆದು ಕೊಟ್ಟಿದ್ದಾರೆ ಅದಕ್ಕೆ ಒಂದು ಪ್ಯಾನಲೈಸ್ ಮಾಡಿ, ಪ್ಯಾನಲ್ ಆಸ್ಪತ್ರೆಗಳನ್ನು ಪ್ರತಿ ಜಿಲ್ಲೆಯಲ್ಲಿ ಇಟ್ಟಿರುತ್ತೇವೆ. ಪ್ಯಾನಲ್ ಆಸ್ಪತ್ರೆಗಳಲ್ಲಿ ಒಳ್ಳೆಯ ಆಸ್ಪತ್ರೆಗಳನ್ನು ಇಟ್ಟಿರುತ್ತೇವೆ. ಆ ಆಸ್ಪತ್ರೆಗಳಲ್ಲಿ ಎಷ್ಟು ಖರ್ಚು ಬರುತ್ತದೆ ಅಷ್ಟೂ ಖರ್ಚನ್ನು ಸಹ ಕೇಂದ್ರ ಸರ್ಕಾರದಿಂದಲೇ ಭರಿಸುತ್ತಿದ್ದು, ರಾಜ್ಯ ಸರ್ಕಾರ ಒಂದು ರೂಪಾಯಿಯನ್ನು ಸಹ ಭರಿಸುತ್ತಿರುವುದಿಲ್ಲ. ಆ ಹಣ ಪ್ರತಿ 95 ದಿವಸಕ್ಕೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗುತ್ತದೆ. ಹಾಗಾಗಿ, ಇ.ಎಸ್.ಐ. ಆಸ್ಪತ್ರೆಗೆ ಇಡೀ ರಾಜ್ಯದಿಂದ ಒಂದು ಒಳ್ಳೆಯ ರೀತಿಯ ಹೆಸರು ತರಬೇಕು ಮತ್ತು ಎಲ್ಲಾ ಜಿಲ್ಲೆಗಳಲ್ಲಿಯೂ ಸಹ ಒಂದೊಂದು ಇ.ಎಸ್.ಐ. ಆಸ್ಪತ್ರೆ ಆಗಬೇಕು ಎನ್ನುವ ಪ್ರಯತ್ನ ಸರ್ಕಾರದ ಮುಂದೆ ಇರುತ್ತದೆ ಮತ್ತು ಅದನ್ನು ನಾವು ಮಾಡುತ್ತೇವೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಸಭಾಪತಿಯವರು:–** ಮಾನ್ಯ ಸಂಕನೂರರವರೇ, ಸಾಕು, ಎಷ್ಟು ಬಾರಿ ಪ್ರಶ್ನೆ ಕೇಳುತ್ತೀರಿ?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಈ ಚಿಕಿತ್ಸಾಲಯಗಳಿಗೆ ಬ್ಲಡ್ ಟೆಸ್ಟ್ ಮತ್ತು ಶುಗರ್ ಟೆಸ್ಟ್ ಮಾಡುವುದಕ್ಕೆ ಲ್ಯಾಬ್ ಟೆಸ್ಟ್ ಅವಕಾಶವನ್ನು ಒದಗಿಸಿಕೊಡಬೇಕು. ಗದಗನಲ್ಲಿ ಒಂದು ಚಿಕಿತ್ಸಾಲಯ ಇದ್ದು, ಶುಗರ್ ಟೆಸ್ಟ್ ಮತ್ತು ಬ್ಲಡ್ ಟೆಸ್ಟ್ ಗೆ ಅವರು ಹುಬ್ಬಳ್ಳಿಗೆ ಹೋಗಬೇಕು. ಅದಕ್ಕೆ ಅಂತಹ ಖರ್ಚು ಸಹ ಆಗುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ಎಲ್ಲಾ ಚಿಕಿತ್ಸಾಲಯಗಳಿಗೆ ಲ್ಯಾಬ್ ಟೆಸ್ಟ್ ವ್ಯವಸ್ಥೆ ಮಾಡಿಕೊಡಬೇಕೆಂದು ಕೇಳುತ್ತಿದ್ದಾರೆ, ಆ ಬಗ್ಗೆ ತಮ್ಮ ಉತ್ತರ ತಿಳಿಸಿ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಪ್ರಯತ್ನ ಮಾಡುತ್ತೇವೆ.

ಸಭಾಪತಿಯವರು:- ಆಯಿತು.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಲ್ಯಾಬ್ establish ಮಾಡಲಿ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಏನಾಗಿದೆಯೆಂದರೆ, ನಾವು ಲ್ಯಾಬ್ ಟೆಕ್ನಿಷಿಯನ್ ನೇಮಿಸಿಕೊಂಡರೂ ಸಹ ಇದೇ ಪರಿಸ್ಥಿತಿ ಮತ್ತು ವೈದ್ಯರುಗಳನ್ನು ನೇಮಿಸಿಕೊಂಡರೂ ಸಹ ಇದೇ ಪರಿಸ್ಥಿತಿ ಇರುತ್ತದೆ. ವೈದ್ಯರುಗಳನ್ನು ನೇಮಿಸಿಕೊಳ್ಳುವುದಕ್ಕೆ ಒಂದು ವರ್ಷ ಕಷ್ಟಪಡುತ್ತೇವೆ. ಆದರೆ, ಅವರನ್ನು ನೇಮಿಸಿಕೊಂಡ ೩ ತಿಂಗಳಿಗೆ ಅವರಲ್ಲಿ ಕೆಲವರು ರಾಜೀನಾಮೆ ಕೊಟ್ಟು ಹೋಗುತ್ತಾರೆ. ಆ ಕಾರಣಕ್ಕಾಗಿ ನಮಗೆ ಕೊರತೆ ಇರುತ್ತದೆ. ಆದಾಗ್ಯೂ, ನೇಮಕಾತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಸಭಾಪತಿಯವರು:-** ಆಯಿತು, ಆ ಬಗ್ಗೆ ತಾವು ವ್ಯವಸ್ಥೆ ಮಾಡಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಇನ್ನೊಂದು ವಿಷಯ...

**ಸಭಾಪತಿಯವರು:-** ಮಾನ್ಯ ಸಂಕನೂರರವರೇ, ಎಷ್ಟು ಬಾರಿ ಪ್ರಶ್ನೆ ಕೇಳುತ್ತೀರಿ? ಈಗಾಗಲೇ ತಮಗೆ ಎರಡು ಬಾರಿ ಅವಕಾಶ ನೀಡಿದ್ದೇನೆ. ಇನ್ನು ಎಷ್ಟು ಬಾರಿ ಅವಕಾಶ ನೀಡಬೇಕು.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ಪ್ರಶ್ನೆ ಇರುತ್ತದೆ.

**ಸಭಾಪತಿಯವರು:–** ಎಲ್ಲಾ ಸದಸ್ಯರ ಪ್ರಶ್ನೆಗಳು ಸಹ ಪ್ರಮುಖವಾದ ಪ್ರಶ್ನೆಗಳೇ ಆಗಿರುತ್ತವೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನೇಮಕಾತಿಗೊಂಡ ಎಂ.ಬಿ.ಬಿ.ಎಸ್. ವೈದ್ಯರು ಉನ್ನತ ವ್ಯಾಸಂಗಕ್ಕೆ ಹೋಗಿರುತ್ತಾರೆ.

**ಸಭಾಪತಿಯವರು:–** ಮಾನ್ಯ ಸಂಕನೂರರವರೇ, ತಮಗೆ ಪ್ರಶ್ನೋತ್ತರ ಅವಧಿಯಲ್ಲಿ ಹೆಚ್ಚಿನ ಸಮಯ ಕೊಡುವುದಕ್ಕಾಗುವುದಿಲ್ಲ. ನಾನು ಮುಂದಿನ ವಿಷಯಕ್ಕೆ ಹೋಗಬೇಕು. ಹಾಗಾಗಿ, ಕೊನೆಯ ಬಾರಿ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನೇಮಕಾತಿಗೊಂಡ ಎಂ.ಬಿ.ಬಿ.ಎಸ್. ವೈದ್ಯರುಗಳು ಇಲಾಖೆಯಿಂದ ಅನುಮತಿ ಪಡೆದು ಉನ್ನತ ವ್ಯಾಸಂಗಕ್ಕೆ ಹೋಗಿ ಈಗ ಎಂ.ಡಿ. ಮತ್ತು ಎಂ.ಎಸ್. ಮಾಡಿಕೊಂಡು ಬಂದಿರುತ್ತಾರೆ. ಆ ರೀತಿ ಎಂ.ಡಿ. ಮತ್ತು ಎಂ.ಎಸ್. ಮಾಡಿಕೊಂಡು ಬಂದಂತಹ ವೈದ್ಯರುಗಳು ಎಲ್ಲಿ ಕೆಲಸ ಮಾಡಬೇಕು? ಅವರು ಆಸ್ಪತ್ರೆಗಳಲ್ಲಿಯೇ ಕೆಲಸ ಮಾಡಬೇಕು. ಆದರೆ, ಸದ್ಯಕ್ಕೆ ನನಗಿರುವ ಮಾಹಿತಿ ಪ್ರಕಾರ ಅವರು ಚಿಕಿತ್ಸಾಲಯಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನಾಗಿದೆಯೆಂದು ನಾನು ಹೇಳುತ್ತೇನೆ. ಅದೇನೆಂದರೆ, ಈ ಸದನದಲ್ಲಿ ಶಾಸಕರು ಮತ್ತು ಮಂತ್ರಿಗಳು ಸಹ ಇದ್ದೇವೆ. ಈ ವಿಷಯದಲ್ಲಿ ನಮಗೂ ಸಹ ಬಹಳ ನೋವಿರುತ್ತದೆ. ನಾವು ವೈದ್ಯರುಗಳನ್ನು ನೇಮಕಾತಿ ಮಾಡುವಂತಹ ಸಂದರ್ಭದಲ್ಲಿ ಹೈದರಾಬಾದ್–ಕರ್ನಾಟಕ ತುದಿಯಿಂದ ನೇಮಕಾತಿ ಮಾಡಿಕೊಂಡು ಬಂದಿರುತ್ತೇವೆ. ಅದರಂತೆ, ಬೀದರ್ ಜಿಲ್ಲೆಯಿಂದ ನೇಮಕಾತಿ ಪ್ರಾರಂಭ ಮಾಡಿ ಹೈದರಾಬಾದ್–ಕರ್ನಾಟಕ ಮತ್ತು ಉತ್ತರ ಕರ್ನಾಟಕ ಮುಗಿದ ನಂತರ ದಕ್ಷಿಣ ಕರ್ನಾಟಕದ ಭಾಗಕ್ಕೆ ಬಂದಿರುತ್ತೇವೆ. ಆದರೆ, ಒಂದು ನೇಮಕಾತಿ ಮಾಡಿ, 20 ದಿವಸದಲ್ಲಿ 20 ರಿಂದ 25 ಶಾಸಕರು ಹಾಗೂ 5 ಜನ

ಮಂತ್ರಿಗಳ ಶಿಫಾರಸ್ಸು ಪತ್ರ ಹಿಡಿದುಕೊಂಡು ವರ್ಗಾವಣೆಗಾಗಿ ಬರುತ್ತಾರೆ. ಅದರಲ್ಲಿ ಪ್ರತಿಯೊಬ್ಬರಿಗೂ ಸಹ ಬೆಂಗಳೂರಿನಲ್ಲಿಯೇ ನೇಮಕಾತಿ ಆಗಬೇಕು. ಆದುದರಿಂದ, ವೈದ್ಯರ ನೇಮಕಾತಿಯಲ್ಲಿ ಕಷ್ಟಸಾಧ್ಯವಾಗಿರುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆ ವೈದ್ಯರ ಪರೀಕ್ಷಾರ್ಥ ಅವಧಿ ಮುಗಿಯುವವರೆಗೂ ತಾವು ಯಾರಿಗೂ ಸಹ ವರ್ಗಾವಣೆ ನೀಡುವುದಕ್ಕೆ ಅನುಮತಿ ನೀಡಬೇಡಿ. ತಾವು ಏತಕ್ಕೆ ಅನುಮತಿ ಕೊಡುತ್ತೀರಿ? ಹಾಗಾಗಿ, ಎರಡು ವರ್ಷದ ಪರೀಕ್ಷಾರ್ಥ ಅವಧಿ ಮುಗಿಯುವವರೆಗೂ, ಯಾವುದೇ ಶಾಸಕರು/ಮಂತ್ರಿಗಳು ಶಿಫಾರಸ್ಸು ಪತ್ರ ನೀಡಿದರೂ ಸಹ, ತಾವು ಯಾರಿಗೂ ವರ್ಗಾವಣೆಗೆ ಅನುಮತಿ ನೀಡಬೇಡಿ. ಆಗ ಈ ಸಮಸ್ಯೆ ಸರಿಹೋಗುತ್ತದೆ.

**(ಗೊಂದಲ)**

**ಡಾ: ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಆ ವೈದ್ಯರುಗಳಿಗೆ ಎರಡು ವರ್ಷ ಕಡ್ಡಾಯ ಮಾಡಲಿ.

**(ಗೊಂದಲ)**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ನನ್ನ ಕ್ಷೇತ್ರವಾದ ದಾಂಡೇಲಿಗೆ ನೇಮಕಾತಿಯಾದ ವೈದ್ಯರನ್ನೇ ನಾನು ಉಳಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಆ ವೈದ್ಯರುಗಳು ಸುಮಾರು 10 ಜನ ಶಾಸಕರ/ಸಚಿವರುಗಳ ಶಿಫಾರಸ್ಸು ಪತ್ರ ಪಡೆದು ಬರುತ್ತಾರೆ.

**ಸಭಾಪತಿಯವರು:-** ಆಯಿತು, ನಾನು ಈಗಾಗಲೇ ಹೇಳಿದಂತೆ ಎರಡು ವರ್ಷ ಪರೀಕ್ಷಾರ್ಥ ಅವಧಿ ಮುಗಿಯುವವರೆಗೂ ಯಾವುದೇ ಶಾಸಕರು/ಸಚಿವರು ಶಿಫಾರಸ್ಸು ಪತ್ರ ನೀಡಿದರೂ ಸಹ ಅವರನ್ನು ವರ್ಗಾವಣೆ ಮಾಡಬೇಡಿ.

**(ಗೊಂದಲ)**

**ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:-** ಮಾನ್ಯ ಸಭಾಪತಿಯವರೇ, ಆಯಿತು.

---

**ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 10ನೇ ಮಾರ್ಚ್, 2022, ಸಮೂಹ-4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 95 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**೦2. ಪ್ರಕಟಣೆ**

**ಸಭಾಪತಿಯವರು:–**

**ಈ ದಿನ ಸದನದಲ್ಲಿ ಕಡ್ಡಾಯವಾಗಿ ಹಾಜರಿರಬೇಕಾದ ಮಾನ್ಯ ಸಚಿವರು ಹಾಗೂ ಅಧಿಕಾರಿಗಳು**

1) ಶ್ರೀ ಮುರುಗೇಶ ಆರ್. ನಿರಾಣಿ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಅನುಮತಿ ಕೋರಿರುತ್ತಾರೆ.

2) ಶ್ರೀ ಎಸ್.ಟಿ. ಸೋಮಶೇಖರ್, ಮಾನ್ಯ ಸಹಕಾರ ಸಚಿವರು,

3) ಶ್ರೀ ಬಿ.ಎ. ಬಸವರಾಜು(ಭೈರತಿ), ಮಾನ್ಯ ನಗರಾಭಿವೃದ್ಧಿ ಸಚಿವರು,

4) ಶ್ರೀ ಎನ್. ನಾಗರಾಜು(ಎಂ.ಟಿ.ಬಿ.), ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆ, ಸಾರ್ವಜನಿಕ ಉದ್ದಿಮೆಗಳ ಸಚಿವರು,

5) ಶ್ರೀ ಆಚಾರ್ ಹಾಲಪ್ಪ ಬಸಪ್ಪ, ಮಾನ್ಯ ಗಣಿ ಮತ್ತು ಭೂವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಸಚಿವರು

6) ಶ್ರೀ ಶಂಕರ್ ಬಿ. ಪಾಟೀಲ್ ಮುನೇನಕೊಪ್ಪ, ಮಾನ್ಯ ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ,

ಸಕ್ಕರೆ ಸಚಿವರು

1) ಇಬ್ರಾಹಿಂ ಮೈಗೂರ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ರೇರಾ, ವಸತಿ ಇಲಾಖೆ, ಶೇಷಾದ್ರಿಪುರ, ಬೆಂಗಳೂರು,

2) ಕೆ. ನಾಗೇಂದ್ರ ಪ್ರಸಾದ್, ಭಾ.ಆ.ಸೇ., ನಿರ್ದೇಶಕರು, ತೋಟಗಾರಿಕೆ ಇಲಾಖೆ, ಬೆಂಗಳೂರು,

3) ಪಂಕಜ್ ಕುಮಾರ್ ಪಾಂಡೆ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ,

ಪ್ರವಾಸೋದ್ಯಮ ಇಲಾಖೆ,

4) ಡಾ: ಎನ್. ಮಂಜುಳ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ,

5) ಶ್ರೀಮತಿ ರಾಧಿಕ, ಭಾ.ಆ.ಸೇ., ನಿರ್ದೇಶಕರು, ಬಿ.ಎಂ.ಟಿ.ಸಿ., (ಎಸ್.ಆಡ್.ವಿ.) ಬೆಂಗಳೂರು.

(231) 10.03.2022 12.30 ವೈಎಲ್-ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)

**೦3. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ವಿಷಯ:- ಬೆಂಗಳೂರು ನಗರದಲ್ಲಿ ಬೇಸಿಗೆ ಪ್ರಾರಂಭವಾಗುವ ಮುನ್ನವೇ ಕುಡಿಯುವ ನೀರಿಗೆ ತೊಂದರೆಯಾಗಿರುವ ಬಗ್ಗೆ.**

****

**ಶ್ರೀ ಕೆ.ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರಿನಲ್ಲಿ ಬೇಸಿಗೆ ಕಾಲಿಡುವ ಮುನ್ನವೇ ಕುಡಿಯುವ ನೀರಿನ ಹಾಹಾಕಾರ ಹಲವು ಬಡಾವಣೆಗಳಲ್ಲಿ ತಲೆ ಎತ್ತಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ. ಬೆಂಗಳೂರಿಗೆ ದಿನನಿತ್ಯ ಸುಮಾರು 1450 ಎಂ.ಎಲ್.ಡಿ. ಕುಡಿಯುವ ನೀರನ್ನು ಜಲಮಂಡಳಿ ಪೂರೈಕೆ ಮಾಡುತ್ತಿದ್ದು, ನಗರದ ಜನತೆಯ ದಾಹವನ್ನು ತಣಿಸುವಲ್ಲಿ ಆರಂಭದಲ್ಲೇ ಎಡವಿರುವುದು ತಿಳಿದುಬಂದಿರುತ್ತದೆ. ಅಂದರೆ ಅನೇಕ ಬಡಾವಣೆಗಳಲ್ಲಿ ನೀರಿನ ಹಾಹಾಕಾರ ಉಂಟಾಗಿ ಟ್ಯಾಂಕರ್‌ಗಳನ್ನು ಅವಲಂಬಿಸಬೇಕಾದ ಸ್ಥಿತಿ ಉಂಟಾಗಿದೆ.

ರಾಜಧಾನಿಯ ನೀರಿನ ದಾಹವನ್ನು ತಣಿಸುವ ಸಲುವಾಗಿ ಹಾವೇರಿ ನೀರು ಸರಬರಾಜು ಯೋಜನೆ 1,2,3,4 ಮತ್ತು 5ನ್ನು ಜಾರಿಗೊಳಸಲಾಗಿದೆ. ಹಾಲಿ ಬೆಂಗಳೂರಿಗೆ ಹೊಸದಾಗಿ 110 ಹಳ್ಳಿಗಳನ್ನು ಸೇರಿಸಿದ ತರುವಾಯ ನೀರಿನ ಬೇಡಿಕೆ ದ್ವಿಗುಣಗೊಂಡಿದ್ದು, ನೀರು ಪೂರೈಸುವ ಕೆಲಸ ಸವಾಲಿನದ್ದಾಗಿದೆ.

ನೀರಿನ ತೀವ್ರತೆ ಬಡವರು ವಾಸಿಸುವಂಥ ಪ್ರದೇಶಗಳಲ್ಲಿಯೇ ಹೆಚ್ಚಾಗಿದ್ದು, ಬಿಸಿಲಿನ ತಾಪದಿಂದ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದ್ದು, ಜಲ ಮಂಡಳಿ ಶ್ರೀಮಂತರು ಹಾಗೂ ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳುವವರಿಗೆ ನೀರನ್ನು ಒದಗಿಸಲು ಆದ್ಯತೆ ನೀಡುತ್ತಿರುವ ಬಗ್ಗೆ ಟೀಕೆಗಳು ವ್ಯಕ್ತವಾಗಿ, ಅಸಮರ್ಪಕ ನಿರ್ವಹಣೆಯಿಂದಾಗಿ ಜನರ ಆಕ್ರೋಶಕ್ಕೆ ಸಿಲುಕಿದೆ.

ಜಲಮಂಡಳಿಯೇ ಜಲಮೂಲ ಕೊಳವೆಬಾವಿಗಳನ್ನು ಆಶ್ರಯಿಸುತ್ತಿದ್ದು, ಸಮಸ್ಯೆ ಬಿಗಡಾಯಿಸುವ ಮುನ್ನ ಎಚ್ಚೆತ್ತುಕೊಂಡು ಲಭ್ಯ ನೀರನ್ನು ಎಲ್ಲಾ ಕಡೆಗಳಲ್ಲಿ ಒದಗಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸಲಾಗುವುದು.

**ಆ) ವಿಷಯ:- ರಾಜ್ಯದಲ್ಲಿ ಕಳಪೆ ಗುಣಮಟ್ಟದ ಆಹಾರ ತಯಾರಿಕೆ ಮತ್ತು ಸೇವನೆಯಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ಬಗ್ಗೆ.**

****

**ಡಾ|| ಡಿ.ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಾವರ್ಜನಿಕ ಆರೋಗ್ಯದ ಹಿತದೃಷ್ಠಿಯಿಂದ ಎರಡು ದಿನಗಳ ಹಿಂದೆಯೇ ಪತ್ರಿಕೆಯಲ್ಲಿ ವರದಿಯಾಗಿರುವ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ರಾಜ್ಯದಲ್ಲಿ ಕಳಪೆ ದರ್ಜೆಯ ಆಹಾರ ಗುಣಮಟ್ಟ ಸೇರಿದಂತೆ, ಕಳಪೆ ದರ್ಜೆಯ ಆಹಾರ ಪದಾರ್ಥಗಳ ಸೇವನೆಯಿಂದ ರಾಜ್ಯದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಮಾನವ ಸೇವಿಸಬಹುದಾದಂಥ ಪ್ರತಿಯೊಂದು ಪದಾರ್ಥದಲ್ಲೂ ವಿಷಯುಕ್ತ ಕಣಗಳು ನಮಗೆ ಅರಿವಿಲ್ಲದಂತೆ ನಮ್ಮೊಳಗೆ ಸೇರುತ್ತಿವೆ. ಉದಾಹರಣೆಗೆ ಕಳಪೆ ಟೀ ಪುಡಿಯು ಕಡಿಮೆ ಬೆಲೆಗೆ ದೊರೆಯುತ್ತಿದ್ದು, ಈ ವಿಷಯವು ಈಗಾಗಲೇ ಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ. ಅದು ಕಲಬೆರಕೆಯಿಂದ ಕೂಡಿದೆ ಎಂಬುದನ್ನು ಸಹ ಮನಗಾಣಬಹುದು. ರಾಜ್ಯಾದ್ಯಂತ ವ್ಯವಸ್ಥಿತ ಜಾಲ ಇಂತಹ ಪ್ರಕರಣಗಳಲ್ಲಿ ಸಕ್ರಿಯವಾಗಿದ್ದು, ಕರಾವಳಿ ಪ್ರದೇಶಗಳಲ್ಲಿ ಉಡುಪಿ, ಮಂಗಳೂರು ಕರಾವಳಿಯಲ್ಲಿ ಮಾರಾಟವಾಗುತ್ತಿದೆ ಎಂದು ಸಹ ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಸಾರ್ವಜನಿಕರ ಮನ ಸೆಳೆಯುವ ಮಾದರಿಯಲ್ಲಿ ಈ ಮಾರಾಟಗಾರರು ಮಾರಾಟ ವಹಿವಾಟು ನಡೆಸುತ್ತಿದ್ದಾರೆ. ಈ ಚಹಾ ಪುಡಿಯು ತಮಿಳುನಾಡಿನ ವಿರುಧ ನಗರದಿಂದ ರಾಜ್ಯಕ್ಕೆ ಬರುತ್ತಿರುವುದು ಹಾಗೂ ಅಧಿಕಾರಿಗಳು ಇವರೊಂದಿಗೆ ಶಾಮೀಲಾಗಿರುವ ಅಂಶಗಳ ಬಗ್ಗೆ ಅನೇಕ ಪತ್ರಿಕೆಗಳು ವರದಿ ಮಾಡಿರುತ್ತವೆ.

ಇಂತಹ ಕಲಬೆರಕೆ ಪದಾರ್ಥಗಳ ಬಗ್ಗೆ ರಾಜ್ಯದ ಆಹಾರ ಕಲಬೆರಕೆ ಪತ್ತೆ ಹಚ್ಚುವ ಕೇಂದ್ರ ಮತ್ತು ರಾಜ್ಯ ಘಟಕಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿದೆಯೇ? ಇದ್ದಲ್ಲಿ ಇಂತಹ ಪ್ರಸಂಗಗಳು ಹೇಗೆ ಕಂಡು ಬರುತ್ತದೆ ಎಂಬುದಕ್ಕೆ ಕೇಂದ್ರ ಮತ್ತು ರಾಜ್ಯ ಘಟಕಗಳು ಸಕ್ರಿಯವಾಗಿ ಕಾರ್ಯಪ್ರವೃತ್ತರಾಗಲು

ಸರ್ಕಾರ ಸೂಕ್ತ ಎಚ್ಚರಿಕೆ ನೀಡಬೇಕೆನ್ನುವ ವಿಷಯದ ಬಗ್ಗೆ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

**ಸಭಾಪತಿಯವರು:–** ಇದಕ್ಕೆ ಉತ್ತರವನ್ನು ಕೊಡಿಸಲೇಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**ಇ) ವಿಷಯ:- ಖಾಸಗಿ ಶಾಲೆಗಳ ನವೀಕರಣಕ್ಕೆ ಪ್ರತಿ ವರ್ಷ ಅರ್ಜಿ ಸಲ್ಲಿಸುವ ಕುರಿತು.**

****

**ಶ್ರೀ ಅರುಣ ಶಹಾಪೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಖಾಸಗಿ ಶಾಲೆಗಳು ಮಾನ್ಯತೆಗಾಗಿ ಪ್ರತಿ ವರ್ಷ ಅರ್ಜಿ ನೀಡಬೇಕಿಲ್ಲ. ಒಮ್ಮೆ ಮಾನ್ಯತೆ ಪಡೆದರೆ ಅದರ ಅವಧಿ 10 ವರ್ಷ ಎಂದು ಹೈಕೋರ್ಟ್ ಆದೇಶ ನೀಡಿರುವ ವಿಷಯವು ಇಂದಿನ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಅನುದಾನ ರಹಿತ ಖಾಸಗಿ ಶಾಲೆಗಳ ಮಾನ್ಯತಾ ಅವಧಿ 10 ವರ್ಷವಾಗಿರುವುದರಿಂದ ಅದರ ನವೀಕರಣಕ್ಕಾಗಿ ಪ್ರತಿ ವರ್ಷ ಸರ್ಕಾರಕ್ಕೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ಮಾನ್ಯತೆ ನವೀಕರಿಸಲು ಪ್ರತಿ ವರ್ಷ ಅರ್ಜಿ ಸಲ್ಲಿಸಲು ಸೂಚಿಸಿ ಸರ್ಕಾರ ಸುತ್ತೋಲೆ ಹೊರಡಿಸಿದೆ ಎಂದು ಆಕ್ಷೇಪಿಸಿ ನೋಂದಾಯಿತ ಅನುದಾನ ರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿ, ರಾಜ್ಯದ ಇತರೆ ಶಿಕ್ಷಣ ಸಂಸ್ಥೆಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಏಕಸದಸ್ಯ ನ್ಯಾಯಪೀಠ ಈ ಆದೇಶ ಮಾಡಿದೆ. ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮ 36ರ ಪ್ರಕಾರ ಮಾನ್ಯತೆ ಅವಧಿ ಮುಗಿದ ನಂತರವೇ ಮಾನ್ಯತೆ ನವೀಕರಣ ಕೋರಿ ಅರ್ಜಿ ಸಲ್ಲಿಸಬೇಕಿದೆ. ಕರ್ನಾಟಕ ಶಿಕ್ಷಣ ಸಂಸ್ಥೆಗಳ (ನೋಂದಣಿ) ನಿಯಮಗಳು-1999ರ ನಿಯಮ 4(1) 22 ಪ್ರಕಾರ ಪಡೆದ ಮಾನ್ಯತೆ 10 ವರ್ಷ ಕಾಲ ಇರಲಿದೆ. ಈ ಅಂಶವನ್ನು ಸರ್ಕಾರದ ಆಕ್ಷೇಪಣೆಯಲ್ಲೂ ಸ್ಪಷ್ಟಪಡಿಸಲಾಗಿದೆ ಎಂದು ಹೈಕೋರ್ಟ್ ಆದೇಶದಲ್ಲಿ ಉಲ್ಲೇಖಿಸಿದೆ. ಮಾನ್ಯತಾ ಅವಧಿ ಪೂರ್ಣಗೊಂಡ ಅಥವಾ ಪೂರ್ಣಗೊಳ್ಳುತ್ತಿರುವ ಆಡಳಿತ ಮಂಡಳಿಗಳು ಶೈಕ್ಷಣಿಕ ಸಾಲಿನ ಆಗಸ್ಟ್ 31 ರೊಳಗೆ ನವೀಕರಣಕ್ಕೆ ಅರ್ಜಿ ಸಲ್ಲಿಸಬೇಕಿದೆ ಎಂದು ಸರ್ಕಾರದ ಸುತ್ತೋಲೆ ಓದಿದರೆ ತಿಳಿದು ಬರುತ್ತದೆ. ಆದ್ದರಿಂದ ಮಾನ್ಯತೆ ಅವಧಿ ಕುರಿತಂತೆ ಯಾವುದೇ ವಿವಾದವಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ ಎಂದು ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ.

ಹೀಗಾಗಿ ಪ್ರತಿ ವರ್ಷ ಮಾನ್ಯತೆ ನವೀಕರಣಕ್ಕಾಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸುವುದನ್ನು ತಡೆ ಹಿಡಿದು ನ್ಯಾಯಾಲಯದ ಆದೇಶದಂತೆ 10 ವರ್ಷಕ್ಕೊಮ್ಮೆ ಮಾನ್ಯತೆ

ನವೀಕರಿಸಲು ಆದೇಶ ಹೊರಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

---

**ಈ) ವಿಷಯ:- ಧಾರವಾಡ ತಾಲ್ಲೂಕಿನ ಸೋಮನಪುರದ ಮಹಿಳೆಯೊಬ್ಬಳ ಮೇಲೆ ಟಿ.ವಿ.ಚಾನಲ್ ವರದಿಗಾರ ಅತ್ಯಾಚಾರ ಎಸಗಿರುವ ಬಗ್ಗೆ.**

****

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) ಮತ್ತು ಶ್ರೀ ಕೆ.ಪ್ರತಾಪಸಿಂಹ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಬೇಲಿಯೇ ಎದ್ದು ಹೊಲ ಮೇಯಬಾರದೆಂಬ ಕಾಳಜಿಯೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಇದೊಂದು ತುಂಬಾ ಅಘಾತಕಾರಿ ಹಾಗೂ ಗಂಭೀರ ಪ್ರಕರಣವಾಗಿದೆ. ಧಾರವಾಡ ಜಿಲ್ಲೆಯ ಧಾರವಾಡ ತಾಲ್ಲೂಕಿನ ಸೋಮನಪುರದ ಮಹಿಳೆಯೊಬ್ಬಳ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಂಡ ಸ್ಥಳೀಯ ಟಿ.ವಿ.ಚಾನಲ್ ವರದಿಗಾರರೊಬ್ಬರು ಅತ್ಯಾಚಾರ ಎಸಗಿರುವ ಪ್ರಕರಣ ದಾಖಲಾಗಿರುವುದಾಗಿ ಪತ್ರಿಕೆ ಮತ್ತು ಟಿ.ವಿ.ಮಾಧ್ಯಮಗಳಲ್ಲಿ ವರದಿಯಾಗಿದೆ.

ಈ ಪ್ರಕರಣದ ಕುರಿತು ವಿದ್ಯಾಗಿರಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 9941/2022 ಐ.ಪಿ.ಸಿ 1860 ಕಲಂ 323, 354, 355, 504, 507, 376 ರಂತೆ ಪ್ರಕರಣ ದಾಖಲಾಗಿದೆ. ಅತ್ಯಂತ ನೋವಿನ ಸಂಗತಿಯೇನೆಂದರೆ, ತನ್ನ ಪತಿಯ ವಿರುದ್ಧ ದೂರು ನೀಡಲು ಪೊಲೀಸ್ ಠಾಣೆಗೆ ಬಂದ ಮಹಿಳೆಗೆ ಅಲ್ಲಿ ನ್ಯಾಯ ದೊರಕದಿರುವುದು ಹಾಗೂ ನ್ಯಾಯ ನೀಡಬೇಕಾದ ಅಲ್ಲಿನ ಕೆಳಹಂತದ ಪೊಲೀಸ್ ಅಧಿಕಾರಿಗಳು ಸ್ಥಳೀಯ ಮಧ್ಯವರ್ತಿಯನ್ನು ಪರಿಚಯ ಮಾಡಿಕೊಡುವ ಮೂಲಕ ಕಾನೂನು ಉಲ್ಲಂಘನೆ ಮಾಡಿರುತ್ತಾರೆ.

ಸದರಿ ಆರೋಪಿತ ವ್ಯಕ್ತಿಯ ವಿರುದ್ಧ ಈ ಹಿಂದೆಯೇ ಮಹಿಳೆಯೊಬ್ಬರಿಗೆ ಕಿರುಕುಳ ನೀಡಿದ್ದ ಆರೋಪವಿದ್ದು, ಅದು ನಿಜವಾಗಿದ್ದಲ್ಲಿ ಪುನಃ ಪೊಲೀಸ್ ಅಧಿಕಾರಿಗಳು ಅದೇ ವ್ಯಕ್ತಿಯನ್ನು ಸಂತ್ರಸ್ತ ಮಹಿಳೆಗೆ ಪರಿಚಯ ಮಾಡಿಕೊಟ್ಟಿರುವುದು ಅಕ್ಷಮ್ಯವಾಗಿದೆ. ಈ ಬೆಳವಣಿಗೆ ಪೊಲೀಸ್ ವ್ಯವಸ್ಥೆಯ ಮೇಲಿನ ನಂಬಿಕೆಯನ್ನು ಅಲುಗಾಡಿಸಿದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಸದರಿ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಉನ್ನತ ಮಟ್ಟದ ತನಿಖೆ ನಡೆಸಿ ನ್ಯಾಯ ನೀಡಬೇಕೆಂದು ಹಾಗೂ ಆರೋಪಿತ ವ್ಯಕ್ತಿಯು ಪತ್ರಿಕಾ ವರದಿಗಾರರೆಂದು ಹೇಳುತ್ತಿದ್ದು, ಈ ಬಗ್ಗೆ ಪರಿಶೀಲಿಸಿ ನಕಲಿ ವರದಿಗಾರನ ಬಗ್ಗೆ ಕ್ರಮ ಕೈಗೊಂಡು ಮಾಧ್ಯಮದ ಘನತೆ ಕಾಪಾಡಲು ಕ್ರಮವಹಿಸುವಂತೆ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಗೃಹ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

**ಉ) ವಿಷಯ:- ರಾಮನಗರ ಜಿಲ್ಲೆಯ ಕಾಡಂಚಿನ ಗ್ರಾಮಗಳ ರೈತರಿಗೆ ಆನೆಗಳ ಹಾವಳಿಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ.**

****

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಮನಗರ ಜಿಲ್ಲೆಯ ಗಡಿಭಾಗಗಳಿಗೆ ಸಮೀಪವಿರುವ ಕಾವೇರಿ ವನ್ಯಜೀವಿಧಾಮದಿಂದ ಆಹಾರ ಅರಸಿಕೊಂಡು ಬರುವ ಆನೆಗಳ ಹಿಂಡು ರಾಮನಗರ ಮತ್ತು ಕನಕಪುರ ತಾಲ್ಲೂಕುಗಳ ಗ್ರಾಮಗಳಿಗೆ ದಾಳಿ ಮಾಡಿ ಕೆಲವರ ಮನೆ ಗೋಡೆಗಳು, ಜಮೀನಿನಲ್ಲಿರುವ ಶೆಡ್‌ಗಳು, ಜಮೀನಿಗೆ ಅಳವಡಿಸಿರುವ ಪಂಪ್‌ಸೆಟ್ಟು, ಪೈಪುಗಳನ್ನು ನಾಶ ಮಾಡುತ್ತಿವೆ. ಅಲ್ಲದೇ ರೈತರು ಬೆಳೆದಿರುವ ಬಾಳೆ, ತೆಂಗು, ಅಡಿಕೆ, ರೇಷ್ಮೆ ಮತ್ತು ಇತರೆ ಬೆಳೆಗಳನ್ನೂ ನಾಶ ಮಾಡುತ್ತಿವೆ. ಇಂತಹ ಪ್ರಕರಣಗಳು ಈ ವಾರದಲ್ಲಿ ಎರಡು ಬಾರಿ ನಡೆದಿರುವುದಾಗಿ ದಿನಪತ್ರಿಕೆಗಳಲ್ಲಿ ವರದಿಯಾಗಿದೆ.

ಕಾಡಾನೆಗಳ ನಿಯಂತ್ರಣಕ್ಕೆ ಅನೇಕ ಬಾರಿ ಮನವಿ ಮಾಡಿದರೂ ಅರಣ್ಯ ಇಲಾಖೆಯ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಇದರಿಂದ ರೈತರು ಕೃಷಿ ಉಪಕರಣಗಳು ಮತ್ತು ಬೆಳೆದ ಬೆಳೆಗಳನ್ನು ಕಳೆದುಕೊಂಡು ಸರ್ಕಾರ ಕೊಡುವ ಬಿಡಿಗಾಸು ಪರಿಹಾರಕ್ಕೆ ವರ್ಷಗಟ್ಟಲೆ ಕಾಯಬೇಕಾದ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ಅರಣ್ಯ ಇಲಾಖೆಯು ಆನೆಗಳ ಹಾವಳಿಗೆ ಕಡಿವಾಣ ಹಾಕಿ, ರೈತರಿಕೆ ಸೂಕ್ತ ಪರಿಹಾರ ಹಣವನ್ನು ಶೀಘ್ರವಾಗಿ ನೀಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಅರಣ್ಯ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

**ಊ) ವಿಷಯ:- ರಾಜ್ಯದ ನಗರ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳ ನಿರ್ಮಾಣ ಕುರಿತು.**

****

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ರಾಜ್ಯದ ನಗರ ಮತ್ತು ಪಟ್ಟಣಗಳ ವ್ಯಾಪ್ತಿಯಲ್ಲಿ ಅನಧಿಕೃತ ಬಡಾವಣೆಗಳ ನಿರ್ಮಾಣದಿಂದಾಗಿ ಸುಮಾರು 19,291 ಎಕರೆ ಭೂಮಿ ದುರ್ಬಳಕೆಯಾಗಿದ್ದು, ಈ ಅಕ್ರಮದಿಂದ 19,622 ಕೋಟಿ ಮೊತ್ತ ತೆರಿಗೆ ವಂಚನೆಯಾಗಿರುವುದು ಪತ್ರಿಕೆಗಳಲ್ಲಿ ವರದಿಯಾಗಿರುತ್ತದೆ.

ಉದ್ಯಾನವನಕ್ಕಾಗಿ ಮೀಸಲಿಟ್ಟಿದ್ದ 1,929 ಎಕರೆ ಹಾಗೂ ರಸ್ತೆಗಾಗಿ ಮೀಸಲಿಟ್ಟಿದ್ದ 964 ಎಕರೆ ಭೂಮಿ ಅನಧಿಕೃತ ಬಡಾವಣೆಗಳಿಗೆ ಬಳಕೆಯಾಗಿರುವುದು ತಿಳಿದುಬಂದಿದ್ದು, ನಿಯಮಬಾಹಿರವಾಗಿ ಅಭಿವೃದ್ಧಿಯ ಪ್ರಮಾಣ ಒಟ್ಟು 30 ರಿಂದ 40 ರಷ್ಟು ಇದೆ. ಯೋಜನಾ ಪ್ರಾಧಿಕಾರ, ನಗರ ಸ್ಥಳೀಯ ಸಂಸ್ಥೆಗಳು, ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯನ್ನು ಮೀರಿ ಅನಧಿಕೃತ ಬಡಾವಣೆಗಳ ಬೆಳವಣಿಗೆಗಳು ನಡೆದಿವೆ. ಇಂತಹ ಅನಧಿಕೃತ ಬಡಾವಣೆಗಳ ನಿರ್ಮಾಣಗಳಿಂದಾಗಿಯೇ ನೈಸರ್ಗಿಕ ಚರಂಡಿಗಳು, ಕೆರೆಗಳು, ಜಲಾನಯನ ಪ್ರದೇಶಗಳು ತನ್ನ ಹರಿವಿನ ಪಥವನ್ನು ಬದಲಿಸಿಕೊಂಡಿದ್ದು, ಉದ್ಯಾನವನಗಳು ಹಾಗೂ ಬಯಲು ಪ್ರದೇಶಗಳು ಕಣ್ಮರೆಯಾಗಿವೆ.

ರಾಜ್ಯದಲ್ಲಿ 63 ನಗರ ಸ್ಥಳೀಯ ಸಂಸ್ಥೆಗಳು ಆಟದ ಮೈದಾನಗಳನ್ನು ಹೊಂದಿಲ್ಲ. ಕೆಲವು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಹಳ ಸಣ್ಣ ಪ್ರದೇಶದಲ್ಲಿ ಆಟದ ಮೈದಾನಗಳಿವೆ. ಬೆಂಗಳೂರು ನಗರವು 14331 ಎಕರೆಯಲ್ಲಿ ಆಟದ ಮೈದಾನಗಳನ್ನು ಹೊಂದಿದೆ. ಇದು ನಗರದ ಒಟ್ಟು ವಿಸ್ತೀರ್ಣದ ಶೇ.1.87 ರಷ್ಟು ಮಾತ್ರ ಇದೆ. ಇವೆಲ್ಲಾ ದುಸ್ಥಿತಿಗೆ ಭೂಮಿಯ ಅನಧಿಕೃತ ದುರ್ಬಳಕೆಯೇ ಕಾರಣವಾಗಿದೆ.

ಆದಕಾರಣ, ಸರ್ಕಾರ ಈ ವಿಚಾರದಲ್ಲಿ ಕೂಡಲೇ ಗಮನಹರಿಸಿ ಅನಧಿಕೃತ ಭೂಮಿ ಬಳಕೆ ಮಾಡಿಕೊಂಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಕಂದಾಯ ಸಚಿವರಿಂದ ನಂತರ ಉತ್ತರವನ್ನು ಒದಗಿಸಲಾಗುವುದು.

(...ಮುಂದು)

(232) 10.03.2022/12.40/ಎಸ್‌ಕೆ-ವಿಕೆ (ಎಂ.ಡಿ)

(ಸಭಾಪತಿಯವರ ಉಪಸ್ಥಿತಿ)

**ಋ) ವಿಷಯ:- ರಾಜ್ಯದಲ್ಲಿ ಕೋ-ಅಪರೇಟಿವ್ ಸೊಸೈಟಿಗಳು ಅಧಿಕ ಬಡ್ಡಿ ಆಮಿಷ ಒಡ್ಡಿ ಠೇವಣಿ ಹಣ ನೀಡಲು ಸಾಧ್ಯವಾಗದಿರುವ ಬಗ್ಗೆ.**

*******

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಜನಸಾಮಾನ್ಯರ ಹಣದ ಅವಶ್ಯಕತೆಯನ್ನು ಪೂರೈಸುವ ಉದ್ದೇಶದಿಂದ ಆರಂಭಗೊಂಡ ಕೋ-ಅಪರೇಟಿವ್ ಸೊಸೈಟಿಗಳು ಈಗ ದಿವಾಳಿಯ ಅಂಚಿನಲ್ಲಿದೆ. ಈ ಸೊಸೈಟಿಗಳು ರಾಜಕೀಯವಾಗಿ ಬೆಳೆಯಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು, ಚುನಾವಣೆಗೆ ಫಂಡ್‌ಗಳ ಹಣವನ್ನು ವಿನಿಯೋಗಿಸಿಕೊಳ್ಳುತ್ತಿರುವುದು ಸಾಮಾನ್ಯವಾಗಿದೆ. ಕೆಲ ಸೊಸೈಟಿಗಳು ಆರಂಭದಲ್ಲಿ ಅಧಿಕ ಬಡ್ಡಿ ಆಸೆ ತೋರಿಸಿ ಗ್ರಾಹಕರಿಂದ ನೂರಾರು ಕೋಟಿ ರೂಪಾಯಿಗಳ ಠೇವಣಿಯನ್ನು ಸಂಗ್ರಹಿಸಿ, ನಂತರ ತಮಗೆ ಬೇಕಾದವರಿಗೆ ಸಾಲವನ್ನು ಕೊಟ್ಟು ವಸೂಲಿ ಮಾಡದೇ ನಿರ್ಲಕ್ಷೆ

ತೋರುತ್ತಿರುವುದರಿಂದ ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಸರಾಸರಿ 500-700 ಸೊಸೈಟಿಗಳು ನಷ್ಟದತ್ತ ಸಾಗುತ್ತಿದೆ. ಅದರಲ್ಲಿ ವರ್ಷಕ್ಕೆ 200 ರಿಂದ 300 ಸೊಸೈಟಿಗಳು ದಿವಾಳಿಯಾಗುತ್ತಿರುವುದರಿಂದ ಸಾರ್ವಜನಿಕರ ಠೇವಣಿ ಹಣಕ್ಕೆ ಗ್ಯಾರಂಟಿ ಇಲ್ಲದಂತಾಗಿದೆ. ಠೇವಣಿ ಇಟ್ಟ ಲಕ್ಷಾಂತರ ಗ್ರಾಹಕರು ನ್ಯಾಯಕ್ಕಾಗಿ ಹೋರಾಟ ನಡೆಸಿದರೂ ಪ್ರಯೋಜನವಾಗುತ್ತಿಲ್ಲ. 2018-19 ರಿಂದ 2020-21 ರ ವರೆಗೆ 2460 ಸೊಸೈಟಿಗಳು ವ್ಯಾಪಕ ಭ್ರಷ್ಟಾಚಾರದಿಂದ ನಿಷ್ಕ್ರೀಯವಾಗಿವೆ.

ಸರ್ಕಾರವು ಕೋ-ಅಪರೇಟಿವ್ ಸೊಸೈಟಿಗಳನ್ನು ಪ್ರಾರಂಭ ಮಾಡುವ ಸಮಯದಲ್ಲಿ ಕಠಿಣ ಕಾನೂನು ಕ್ರಮಗಳನ್ನು ಹೇರಿ, ಗ್ರಾಹಕರಿಗೆ ಇನ್ನು ಮುಂದೆ ಯಾವುದೇ ರೀತಿಯ ವಂಚನೆಯು ಆಗದಂತೆ ಹಾಗೂ ಸರ್ಕಾರದ ಕಾನೂನನ್ನು ಚಾಚು ತಪ್ಪದೇ ಪಾಲಿಸಲು ಸೂಕ್ತ ಕಾನೂನನ್ನು ತರುವಂತೆ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಲೀಂ ಅಹಮದ್‌ರವರು ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿಚಾರಗಳ ಆಧಾರದ ಮೇಲೆ ಸರ್ಕಾರದ ಗಮನವನ್ನು ಸೆಳೆಯುವಂತಹದ್ದನ್ನು ಮಾಡಿದ್ದಾರೆ. ಸಹಕಾರಿ ಸಂಘಗಳ ಚುನಾವಣೆಗಳು ಐದು ವರ್ಷಕ್ಕೊಮ್ಮೆ ನಡೆಯುತ್ತವೆ. ಅವರಿಗೆ ಆಡಳಿತ ಮಂಡಳಿಯ ಅಧಿಕಾರ ಇರುತ್ತದೆ. Rate of interest ಮತ್ತು ಬೇರೆ ಬೇರೆ ರೀತಿಯಲ್ಲಿ ಸಾಲ ಕೊಡುವಂತಹದ್ದು ಇರಬಹುದು ಹಾಗೂ ವಸೂಲಿ ಮಾಡುವ ಈ ತರಹ ಸಂಪೂರ್ಣ ಅಧಿಕಾರ ಆಡಳಿತ ಮಂಡಳಿಗೆ ಇರುವಂತಹದ್ದು ನಮ್ಮ ಸಹಕಾರ ಇಲಾಖೆಗೆ ಇದೆ. ಕೆಲವು ಬ್ಯಾಂಕ್‌ಗಳು ಅಂದರೆ ರಾಘವೇಂದ್ರ ಕೋ-ಅಪರೇಟಿವ್ ಬ್ಯಾಂಕ್, ವಸಿಷ್ಠ ಕೋ-ಅಪರೇಟಿವ್ ಬ್ಯಾಂಕ್, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕೋ-ಅಪರೇಟಿವ್ ಬ್ಯಾಂಕ್ ಇರಬಹುದು. ಈ ತರಹ ಐದಾರು ಸೊಸೈಟಿಗಳು ಮತ್ತು ಬ್ಯಾಂಕ್‌ಗಳು ಅಧಿಕ ಬಡ್ಡಿಯನ್ನು ಕೊಟ್ಟು, cheat ಮಾಡಿರುವುದರ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ. ಅಷ್ಟೇ ಕಠಿಣ ಕ್ರಮ ಕೂಡ ನಮ್ಮ ಸಹಕಾರ ಇಲಾಖೆಯಿಂದ The Karnataka Co-Operative Societies Act section 64, section 65 and section 68 ಪ್ರಕಾರ enquiry ಮಾಡುತ್ತೇವೆ. ರಾಘವೇಂದ್ರ ಕೋ-ಅಪ್‌ರೇಟಿವ್ ಬ್ಯಾಂಕ್ ಬಗ್ಗೆ ವಿಚಾರಣೆಯನ್ನು ನಡೆಸಲು ಸಿ.ಓ.ಡಿ.

ತನಿಕೆ ಮಾಡುವುದಕ್ಕೆ ಕೊಟ್ಟಿದ್ದೇವೆ. ಸಂಗೊಳ್ಳಿ ರಾಯಣ್ಣ ಕೋ-ಅಪರೇಟಿವ್ ಬ್ಯಾಂಕ್ ವಿಚಾರಣೆ ನಡೆಸಲು ED (Enforcement Directorate) ಅವರಿಗೆ ಕೊಟ್ಟಿದ್ದೇವೆ. ಸಂಗೊಳ್ಳಿ ರಾಯಣ್ಣ ಕೋ-ಅಪರೇಟಿವ್ ಬ್ಯಾಂಕ್ ಅಧ್ಯಕ್ಷನನ್ನು ಕೂಡ ಬಂಧಿಸಿದ್ದೇವೆ. ಸಹಕಾರಿ ಇಲಾಖೆಯಲ್ಲಿರುವ ಬಿಗಿಯಾದ ಕಾನೂನು ಏನೇನಿದೆ, ಅವೆಲ್ಲವನ್ನು ಕೂಡ ನಾವು enforce ಮಾಡುತ್ತೇವೆ. ಆದರೂ ಕೆಲವು ಬ್ಯಾಂಕ್‌ಗಳು cheat ಮಾಡಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬರುತ್ತಿದೆ. ಅದಕ್ಕಾಗಿ ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ. Registrar ನಿಂದ ಒಂದು ಕಮಿಟಿ ಮಾಡಿದ್ದೇವೆ. ಬ್ಯಾಂಕ್‌ಗಳಿಗೆ ಒಂದು ತರಹ ಬಡ್ಡಿ ಮತ್ತು ಕೋ-ಅಪರೇಟಿವ್ ಬ್ಯಾಂಕ್‌ಗಳಲ್ಲಿ ಒಂದೊಂದು ತರಹ ಬಡ್ಡಿ ಇರಬಾರದು. ಎಲ್ಲಾ ಕೋ-ಅಪರೇಟಿವ್ ಬ್ಯಾಂಕ್‌ಗಳಲ್ಲಿ ಒಂದೇ ತರಹ ಬಡ್ಡಿ ಕೊಡುವಂತಹದ್ದು ಇರಬೇಕು ಹಾಗೂ Credit Society ಗೂ ಒಂದೇ ರೀತಿ ಇರಬೇಕೆಂದು ಮಾಡುತ್ತಿದ್ದೇವೆ. ಶೇಕಡ 5-10 ರಷ್ಟು ಮಾತ್ರ ಈ ತರಹ cheating ಇದೆ. Entire cooperative sector ಬಹಳ ವ್ಯವಸ್ಥಿತವಾಗಿ ಅರ್ಬನ್ ಕೋ-ಅಪರೇಟಿವ್ ಬ್ಯಾಂಕ್‌ಗಳು ರಾಜ್ಯದಲ್ಲಿ ಸುಮಾರು 265 ಇವೆ. ಒಂದೆರಡ್ನೂರು ಕೋ-ಅಪರೇಟಿವ್ ಬ್ಯಾಂಕ್‌ಗಳು ಈ ತರಹ cheating ಮಾಡುವುದನ್ನು ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ೯೦ percent of the Urban Cooperative Banks ಇರಬಹುದು ವ್ಯವಸ್ಥಿತವಾಗಿ ಸಾರ್ವಜನಿಕರು ಏನೊಂದು ಠೇವಣಿ ಇಟ್ಟಿರುತ್ತಾರೋ, ಅವರಿಗೆ ಬಡ್ಡಿ ಕೊಡುವಂತಹದ್ದು ಮತ್ತೊಂದೆಲ್ಲಾ ವ್ಯವಸ್ಥಿತವಾಗಿ ನಡೆಯುತ್ತಿರುತ್ತದೆ. ಕೆಲವೊಂದು ಬ್ಯಾಂಕ್‌ಗಳು ಈ ತರಹ cheat ಮಾಡುವಂತಹದ್ದು entire cooperative sector ಗೆ ಕೆಟ್ಟ ಹೆಸರು ಬರುವಂತಹದ್ದರ ಬಗ್ಗೆ ನಾವು ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಠೇವಣಿದಾರರಿಗೆ ಎಲ್ಲೋ ಕೆಲವೊಂದು ಬ್ಯಾಂಕ್‌ಗಳು cheat ಮಾಡಿರುವ ಬಗ್ಗೆ ಕೆಲವು ಚಾನೆಲ್‌ಗಳು Private Urban Cooperative Bank ನಲ್ಲಿ ಠೇವಣಿಯನ್ನು ಇಡಲೇ ಬೇಡಿ ಎಂದು ಪ್ರಸಾರ ಮಾಡಿರುವಂತಹದ್ದು ಇದೆ. ಆ ತರಹ ಒಳ್ಳೆಯ ಬ್ಯಾಂಕ್‌ಗಳು ಕೂಡ ಇವೆ. ಮಾನ್ಯ ಸದಸ್ಯರು ಹೇಳಿರುವಂತೆ, ನಾವು ಇನ್ನೂ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಕಾನೂನಿನಲ್ಲಿ ಹಲವಾರು ತಿದ್ದುಪಡಿಗಳನ್ನು ತರುತ್ತೇವೆ. ಈ ತರಹ ಬ್ಯಾಂಕ್‌ಗಳು ಚೀಟಿಂಗ್ ಮಾಡಿರುವ ಬಗ್ಗೆ ಏನೆಲ್ಲಾ ಶಿಕ್ಷೆ ಕೊಡಬಹುದು ಮತ್ತು ಬಿಗಿಯಾದ

ಕಾನೂನನ್ನು ತರಬಹುದು. ಅದೆಲ್ಲವನ್ನೂ ಕೂಡ ಅಸೆಂಬ್ಲಿಗೆ ತರುವಂತಹದ್ದನ್ನು ಕೂಡ ಮಾಡುತ್ತೇವೆ. ಮಾನ್ಯ ಸದಸ್ಯರಿಗೆ ಸಂಕ್ಷಿಪ್ತ ಉತ್ತರವನ್ನು ಒದಗಿಸುವಂತಹದ್ದನ್ನು ಮಾಡುತ್ತೇವೆ.

**ಸಭಾಪತಿಯವರು:–** ಶ್ರೀ ಶಾಂತಾರಾಮ್ ಸಿದ್ದಿಯವರೇ, ತಾವು ಮಾತನಾಡಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ,

**Mr. CHAIRMAN:** No discussion. ಮಾನ್ಯ ಶಾಂತಾರಾಮ್ ಸಿದ್ದಿಯವರೇ ತಾವು ಮಾತನಾಡಿ. ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುವಾಗ, ಮಾನ್ಯ ಸದಸ್ಯರೇ, ಉತ್ತರ ಇರುವುದಿಲ್ಲ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಕೇಳವಂತಹದ್ದಕ್ಕೆ ಉತ್ತರನೇ ಬಂದಿಲ್ಲ.

**ಸಭಾಪತಿಯವರು:–** ಮಾನ್ಯ ರವಿಯವರೇ, ಒಂದು ನಿಮಿಷ. ನನ್ನ ಮಾತನ್ನು ಸ್ವಲ್ಪ ಕೇಳಿ. ನಿಯಮದ ಪ್ರಕಾರ ಹೋಗಿ. ತಾವು ಕೇಳಿರುವಂತಹದ್ದಕ್ಕೆ ಉತ್ತರ ಕೊಡುತ್ತಾರೆ. ಆದರೆ ಚರ್ಚೆ ಇರುವುದಿಲ್ಲ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ನಾನು ನಿನ್ನೆ ಕೇಳಿರುವಂತಹದ್ದಕ್ಕೆ ಉತ್ತರನೇ ಬಂದಿಲ್ಲ. ಈ ಸದನದಲ್ಲಿ ಮಾನ್ಯ ಸಚಿವರು ಸಹ ಇದ್ದಾರೆ.

**ಸಭಾಪತಿಯವರು:–** ಮಾನ್ಯ ರವಿಯವರೇ, ದಯವಿಟ್ಟು, ಕುಳಿತುಕೊಳ್ಳಿ. ತಾವು ಕೇಳಿರುವಂತಹದ್ದಕ್ಕೆ ಉತ್ತರ ಕೊಡುತ್ತಾರೆ. ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರು ಕೇಳಿರುವಂತಹದ್ದಕ್ಕೆ ಉತ್ತರವನ್ನು ಒದಗಿಸಿ. ಮಾನ್ಯ ಶಾಂತಾರಾಮ್ ಸಿದ್ದಿಯವರೇ ತಾವು ಮಾತನಾಡಿ.

**ಎ) ವಿಷಯ:- ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಪಿ.ಜಿ. ಪಾಳ್ಯ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆದಿಂಬ ಎಂಬ ಸೋಲಿಗರ ಹಾಡಿಯಲ್ಲಿ ಮೂಲ ಸೌಕರ್ಯ ಇಲ್ಲದೇ ಇರುವ ಬಗ್ಗೆ.**

*******

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಮೈಸೂರು ಜಿಲ್ಲೆಯ ಹನೂರು ತಾಲೂಕಿನ ಪಿಜಿ ಪಾಳ್ಯ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕೆರೆದಿಂಬ ಎಂಬ ಸೋಲಿಗರ ಹಾಡಿ ಬುಡಕಟ್ಟು ಜನರು ವಾಸಿಸುವ ಜಾಗದಲ್ಲಿ ರಸ್ತೆ ಮತ್ತು ಚಿಕಿತ್ಸೆಯ ವ್ಯವಸ್ಥೆ ಇಲ್ಲದೇ ಇರುವುದರಿಂದ ಜನರಿಗೆ ಆರೋಗ್ಯದಲ್ಲಿ ತೊಂದರೆ ಉಂಟಾದಾಗ ಜನರು ಆಸ್ಪತ್ರೆಗೆ ತಲುಪಲು ಸರಿಯಾದ ದಾರಿಯಲ್ಲದೇ ಪರದಾಡುತ್ತಿದ್ದಾರೆ.

ಇತ್ತೀಚೆಗೆ ಪ್ರೇಮ ಎಂಬ ಮಹಿಳೆಗೆ ಹೆರಿಗೆ ನೋವು ಕಾಣಿಸಿಕೊಂಡಾಗ ಅವರನ್ನು ಆಸ್ಪತ್ರೆಗೆ ಸಾಗಿಸಲು ಸರಿಯಾದ ರಸ್ತೆ ಹಾಗೂ ವಾಹನ ವ್ಯವಸ್ಥೆ ಇಲ್ಲದೇ ಕಾರಣ, ಆ ಊರಿನ ಎಲ್ಲಾ ಜನರು ಸೇರಿ ಆ ಮಹಿಳೆಯನ್ನು ಕಂಬಳಿಯಲ್ಲಿ ಹೊತ್ತು, ಒಂದು ಕಿಲೋಮೀಟರ್ ಸಾಗಿಸಿದ್ದಾರೆ, ನಂತರ ಬಿಳಿಗಿರಿರಂಗಯ್ಯನ ಬೆಟ್ಟದ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ವಾಹನವೊಂದರ ಮುಖಾಂತರ ಚಾಮರಾಜನಗರದ ಜಿಲ್ಲಾ ಕೇಂದ್ರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಚಾಮರಾಜನಗರದಲ್ಲಿ ಗಿರಿಜನರು ವಾಸಿಸುವ ಕೆರೆದಿಂಬ, ಅತ್ತಿಖಾನೆ ಮತ್ತು ಹೊನ್ನಮೆಟಿ ಮುಂತಾದ ಬುಡಕಟ್ಟು ಹಾಡಿಗಳಿಗೆ ರಸ್ತೆ ಹಾಗೂ ಇನ್ನಿತರ ಮೂಲಭೂತ ಸೌಲಭ್ಯಗಳು ಇಲ್ಲ ಎಂಬುದು ಪತ್ರಿಕೆಗಳಲ್ಲಿ ವರದಿಯಾಗುತ್ತಿರುತ್ತದೆ. ಗಿರಿಜನ ಹಾಡಿಗಳಿಗೆ ಮೂಲಭೂತ ಸೌಕರ್ಯ ನೀಡುವ ಬಗ್ಗೆ ಇರುವ ಬೇಡಿಕೆಯನ್ನು ಕೈಗೊಳ್ಳುವಂತೆ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಒದಗಿಸಲಾಗುವುದು.

**ಏ) ವಿಷಯ:- ಬಾಲ್ಯ ವಿವಾಹ ಕುರಿತು ಕರ್ನಾಟಕ ರಾಜ್ಯ ಮೊದಲನೇ ಸ್ಥಾನದಲ್ಲಿರುವ ಬಗ್ಗೆ.**

*******

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಇತ್ತೀಚೆಗೆ ದೇಶದಾದ್ಯಂತ ಬಾಲ್ಯ ವಿವಾಹವೆಂಬ ಪಿಡುಗು ಎಗ್ಗಿಲ್ಲದೇ ಬೆಳೆಯುತ್ತಿದೆ. ಇದರಲ್ಲಿ ಕರ್ನಾಟಕ ಮೊದಲನೇಯ ಸ್ಥಾನದಲ್ಲಿದೆ ಎಂಬುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ಮೊನ್ನೆ ತಾನೇ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಬಾಲ್ಯಾವಸ್ಥೆ ಎನ್ನುವುದು ಬದುಕಿನ ಸುಂದರವಾದ ಘಟ್ಟ, ನಾವು ಇಂದು ಆರೋಗ್ಯದಿಂದಿರುವುದಕ್ಕೆ ನಮ್ಮ ಬಾಲ್ಯವೇ ಮುಖ್ಯ ಕಾರಣ. ಆದರೆ ಇಂದು ಏನನ್ನೂ ಅರಿಯದ ಮುಗ್ಧ ಮಕ್ಕಳನ್ನು ಬಾಲ್ಯ ವಿವಹಾದ ಕೂಪಕ್ಕೆ ತಳ್ಳಲಾಗುತ್ತಿದೆ. 2020ನೇ ಸಾಲಿನ ವರದಿಯ ಪ್ರಕಾರ 185 ಪ್ರಕರಣಗಳು ಕರ್ನಾಟಕದಲ್ಲಿ ದಾಖಲಾಗುವುದರ ಮೂಲಕ ದೇಶದಲ್ಲೇ ಪ್ರಥಮ ಸ್ಥಾನವೆಂಬ ಕುಖ್ಯಾತಿ ಪಡೆದಿದೆ. ಈ ಸರಾಸರಿಯೂ 2019ರಲ್ಲಿ ದಾಖಲಾಗಿದ್ದ 101 ಪ್ರಕರಣಗಳಿಗೆ ಹೋಲಿಸಿದರೆ, ಶೇ.66 ರಷ್ಟು ಹೆಚ್ಚಾಗಿದೆ ಎಂದು National Crime Records Bureau (NCRB) ತಿಳಿಸಿದೆ. ಕರ್ನಾಟಕದಲ್ಲಿ ಕಲ್ಯಾಣ ಕರ್ನಾಟಕ ಭಾಗ ಮತ್ತು ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ಹೆಚ್ಚಾಗಿ ಪ್ರಕರಣಗಳು ದಾಖಲಾಗುತ್ತಿವೆ. ವಿಶೇಷವಾಗಿ ಗ್ರಾಮೀಣ ಭಾಗದಲ್ಲಿ ಹೆಚ್ಚುತ್ತಿರುವ ಬಾಲ್ಯ ವಿವಾಹವನ್ನು ತಡೆಗಟ್ಟಲು ಸರ್ಕಾರ ಎಚ್ಚೆತ್ತುಕೊಳ್ಳದಿದ್ದರೆ ಮುಂದೆ ಗಂಭೀರ ಪರಿಣಾಮವನ್ನು ಅನುಭವಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಆದ್ದರಿಂದ ಇದೊಂದು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಇದರ ಬಗ್ಗೆ ಇನ್ನಷ್ಟು ಕಠಿಣ ಕಾನೂನುಗಳನ್ನು ರೂಪಿಸಿ ಮುಂದೆ ಆಗಬಹುದಾದ ಕೆಟ್ಟ ಪರಿಣಾಮವನ್ನು ತಡೆಗಟ್ಟುವ ಸಲುವಾಗಿ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಹಾಗೂ ಗೃಹ ಸಚಿವರು ಈ ಕೂಡಲೇ ಎಚ್ಚೆತ್ತುಕೊಂಡು ಮುಂದಿನ ನಿರ್ಧಾರದ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಹಿರಿಯ ನಾಗರಿಕರ ಸಬಲೀಕರಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿಯವರು National Crime Records Bureau (NCRB) ನ ವರದಿಯ ಆಧಾರದ ಮೇಲೆ ಕೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಬಾಲ್ಯ ವಿವಾಹದ ಪ್ರಕರಣಗಳು 2018-19 ನೇ ಸಾಲಿನಲ್ಲಿ ಸುಮಾರು 1394 ಪ್ರಕರಣಗಳು ಸ್ವೀಕೃತವಾಗಿವೆ. ಅದರಲ್ಲಿ ಇವತ್ತು ಅಧಿಕಾರಿಗಳು ಮತ್ತು ಸಾರ್ವಜನಿಕರೆಲ್ಲರೂ ಸೇರಿಕೊಂಡು 1271 ನ್ನು ತಡೆಗಟ್ಟಿದ್ದಾರೆ. ಅದರಲ್ಲಿ ಸುಮಾರು 119 ಮೀರಿ ಹೋಗಿರುವಂತಹದ್ದು. ಅದರ ಮೇಲೆ ಸುಮಾರು 48 ಕ್ರಿಮಿನಲ್ ಕೇಸ್ ಆಗಿದೆ. ಒಟ್ಟು 40 percent.

(ಮುಂದು)

**(233) 10-03-202212.50ಟಿಸಿಹೆಚ್-ವಿಕೆ (ಎಂ.ಡಿ) (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಮುಂದು):-**

ಈ ರೀತಿ 2018-19, 2019-20, 2020-21ರಲ್ಲಿ ಒಟ್ಟು 3007 ಬಾಲ್ಯ ವಿವಾಹ ಪ್ರಕರಣಗಳು ಸ್ವೀಕಾರವಾಗಿವೆ. ಅದರಲ್ಲಿ 2007 ಪ್ರಕರಣಗಳನ್ನು ತಡೆಗಟ್ಟಿದ್ದೇವೆ. 296 ಮದುವೆಗಳಾದರೂ ಕೂಡ ಅದರಲ್ಲಿ ಈಗಾಗಲೇ 239 ಎಫ್.ಐ.ರ್ ದಾಖಲಿಸಲಾಗಿದೆ. ಹೀಗೆಯೇ ಕಳೆದ ಮೂರು ವರ್ಷಗಳಲ್ಲಿ 6181 ಮತ್ತು 5609 ಬಾಲ್ಯ ವಿವಾಹವನ್ನು ತಡೆದಿದ್ದು, 571 ರಲ್ಲಿ 417ಕ್ಕೆ criminal case ದಾಖಲಿಸಲಾಗಿದೆ. ಇನ್ನೊಂದು ವಿಚಾರವನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದಿಂದ ನಡೆಸುವ ರಾಷ್ಟ್ರೀಯ ಆರೋಗ್ಯ ಕುಟುಂಬದ ಸಮೀಕ್ಷೆ-5 ರ ಪ್ರಕಾರ ಭಾರತದಲ್ಲಿ ಸುಮಾರು 2015-16 ರಿಂದ 2018-19ನೇ ಸಾಲಿನವರೆಗೆ ಶೇ.26.8 ಇತ್ತು. 2019-20 ನೇ ಸಾಲಿನಲ್ಲಿ NHFS (National Family Health Survey) ಪ್ರಕಾರ, 23.3 ಇದೆ. ಕರ್ನಾಟಕದಲ್ಲಿ 2015-16ರಲ್ಲಿ 21.4 ಇದ್ದಿದ್ದು, ಅದು ಇವತ್ತಿನ ದಿವಸ 21.3 ಆಗಿದೆ. ಅಂದರೆ ರಾಷ್ಟ್ರೀಯ ಸರಾಸರಿಗಿಂತಲೂ ಕೂಡ ಶೇ.2 ರಷ್ಟು ಕಡಿಮೆ

ಇದ್ದೇವೆ. ಇದು ನಮ್ಮ NHFS ಸರ್ವೇ ಪ್ರಕಾರ ಇರುವುದು. ಮತ್ತೆ ಮಾನ್ಯ ಸಚಿವರು ಎಚ್ಚೆತ್ತುಕೊಂಡು ಮುಂದಿನ ನಿರ್ಧಾರದ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಈಗಾಗಲೇ ನಾವು ಇದೇ ತಿಂಗಳ 6ನೇ ತಾರೀಖಿನಂದು ಕೂಡ 'Video on Wheels' ಗೆ ಚಾಲನೆಯನ್ನು ಕೊಟ್ಟು, ಸುಮಾರು 16 ಮಂದಿ ಏನು ಶೋಷಿತರು ಇದ್ದರು, ಅವರ ಅನುಭವಗಳನ್ನು ಇವತ್ತಿನ ದಿವಸ 'Video on Wheels' ಮೂಲಕ ಇಡೀ ರಾಜ್ಯದ್ಯಂತ 778 ಹೋಬಳಿಯಲ್ಲಿ 3000 ಕಾರ್ಯಕ್ರಮಗಳನ್ನು ಮಾಡುವುದರ ಮೂಲಕ ಪ್ರಾರಂಭ ಮಾಡಿದ್ದೇವೆ. International Women's Day ದಿವಸವೂ ಕೂಡ 'Surakshini Portal' (ಸುರಕ್ಷಿಣಿ ಪೋರ್ಟಲ್) ಎಂದು ಮಾಡಿದ್ದೇವೆ. ಅದನ್ನು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಮೂಲಕ ನಾವು monitoring ಮಾಡಿ ತಡೆಯಬೇಕು ಎಂದು ಮಾಡಿದ್ದೇವೆ. ಏನಾದರೂ ಅದನ್ನೂ ಮೀರಿ ಹೋದಂಥವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಬಹಳ ಸ್ಪಷ್ಟವಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ಆ ಕಾಯ್ದೆಗೆ ತಿದ್ದುಪಡಿ ಮಾಡಲು ಕೂಡ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಆ ಸಮಿತಿಯ ರಿಪೋರ್ಟ್ ಮೇಲೆ ಅದಕ್ಕೆ ಇನ್ನೂ ಹೆಚ್ಚು ತಿದ್ದುಪಡಿ ತಂದು ನಿಷೇಧ ಕಾಯ್ದೆಯನ್ನು ಇನ್ನೂ ಗಟ್ಟಿಗೊಳಿಸುತ್ತೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**ಸಭಾಪತಿಯವರು:–** ಉತ್ತರ ಕೊಡಿ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಕೊಡುತ್ತೇನೆ.

**ಸಭಾಪತಿಯವರು:–** ಈಗ ವಿತ್ತೀಯ ಕಾರ್ಯಕಲಾಪಗಳು. ಈಗ ಸದನದ ಗಮನಕ್ಕೆ ತರುವುದೇನೆಂದರೆ, ಗುರುವಾರ, ಶುಕ್ರವಾರ ಮತ್ತು ಸೋಮವಾರ. . .

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಒಟ್ಟು 5 ಪ್ರಶ್ನೆಗಳನ್ನು ಕೇಳಿದ್ದೇನೆ. ಅದರಲ್ಲಿ ನಾಲ್ಕು ಪ್ರಶ್ನೆಗಳಿಗೆ ಮಾನ್ಯ ಸಚಿವರು ಉತ್ತರ ಕೊಟ್ಟಿಲ್ಲ.

**ಸಭಾಪತಿಯವರು:–** ಮಾನ್ಯ ಮಂಜುನಾಥ್ ಭಂಡಾರಿಯವರೇ, ನಂತರದ ದಿನಗಳಲ್ಲಿ ಉತ್ತರ ಕೊಡುತ್ತಾರೆ. ಒಟ್ಟು 12 ಗಂಟೆ 30 ನಿಮಿಷಗಳು ಅಂದರೆ ಒಟ್ಟು 750 ನಿಮಿಷಗಳು ಮಾತನಾಡಿದ್ದೀರಿ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ 19 ಶಾಸಕರಿಗೆ ಆಯವ್ಯಯದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪ್ರತಿಯೊಬ್ಬ ಶಾಸಕರಿಗೂ 22 ನಿಮಿಷಗಳಂತೆ ಒಟ್ಟು 418 ನಿಮಿಷಗಳು ಅಂದರೆ ಒಟ್ಟು 6 ಗಂಟೆ 58 ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಜನತಾದಳ (ಜಾ)ದ 9 ಶಾಸಕರಿಗೆ ಗೂ 22 ನಿಮಿಷಗಳಂತೆ ಒಟ್ಟು 3 ಗಂಟೆ 19 ನಿಮಿಷಗಳ ಕಾಲ ಅವಕಾಶ ಕೊಟ್ಟಿದ್ದೇನೆ. ಭಾರತೀಯ ಜನತಾ ಪಕ್ಷ 6 ಶಾಸಕರು ಮಾತನಾಡಲು ಪಟ್ಟಿ ಕೊಟ್ಟಿದ್ದರು. ಪ್ರತಿಯೊಬ್ಬರಿಗೂ 22 ನಿಮಿಷಗಳಂತೆ ಒಟ್ಟು 132 ನಿಮಿಷ ಅಂದರೆ 2 ಗಂಟೆ 12 ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಪಕ್ಷೇತರರಿಗೆ 22 ನಿಮಿಷ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ನಾವು ಆಯವ್ಯಯದ ಮೇಲೆ ಮಾತನಾಡಲು ದೊಡ್ಡ ಪಟ್ಟಿಯನ್ನು ಕೊಟ್ಟಿದ್ದೇವೆ. ನಿನ್ನೆ ಮತ್ತೆ 6 ಜನ ಶಾಸಕರು ಮಾತನಾಡುತ್ತೇವೆಂದು ಪಟ್ಟಿ ಕೊಟ್ಟಿದ್ದೇವೆ.

**ಸಭಾಪತಿಯವರು:–** ಡಾ.ವೈ.ಎ.ನಾರಾಯಣಸ್ವಾಮಿಯವರೇ, ನನ್ನ ಕಡೆ ಬಂದಿರುವುದನ್ನು ಸಮಯ ನಿಗದಿಪಡಿಸಿದ್ದೇನೆ. ಈಗ ನೀವು ಕೊಟ್ಟರೆ ನಾನೇನು ಮಾಡಲಿ. ಆಮೇಲೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಮಾನ್ಯ ವಿರೋಧ ಪಕ್ಷದವರನ್ನು ಹೊರತುಪಡಿಸಿ, 6 ಗಂಟೆ 58 ನಿಮಿಷಗಳ ಕಾಲ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಜನತಾದಳ (ಜಾ)ರವರು ಒಟ್ಟು 9 ಜನ ಶಾಸಕರು ಆಯವ್ಯಯದ ಮೇಲೆ ಮಾತನಾಡುತ್ತೇವೆಂದು ಕೊಟ್ಟಿದ್ದಾರೆ. ಭಾರತೀಯ ಜನತಾ ಪಕ್ಷದವರು ಒಟ್ಟು 6 ಶಾಸಕರು ಮಾತನಾಡಲು ಕೊಟ್ಟಿದ್ದಾರೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದವರು 20 ಶಾಸಕರು ಕೊಟ್ಟಿದ್ದಾರೆ. ಈ 20 ಶಾಸಕರಲ್ಲಿ ಮಾನ್ಯ ವಿರೋಧಪಕ್ಷದವರು ಈಗಾಗಲೇ ಮಾತನಾಡಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈಗ ಪಟ್ಟಿ ಕೊಡುತ್ತಾರೆ.

**ಸಭಾಪತಿಯವರು:-** ಅವರು ಈಗ ಪಟ್ಟಿ ಕೊಟ್ಟರೆ ಹೇಗೆ. ನಮ್ಮ ಹತ್ತಿರ ಸಮಯವಿಲ್ಲ. ಮೊದಲೇ ಪಟ್ಟಿಕೊಟ್ಟಿದ್ದರೆ ನಾನು ಸಮಯ ನಿಗದಿಪಡಿಸುತ್ತಿದ್ದೆನು. ಆದರೆ ಈಗ ಪಟ್ಟಿ ಕೊಟ್ಟರೆ ನಾನು ಸಮಯ ಎಲ್ಲಿಂದ ತರಲಿ. ಈಗಾಗಲೇ ಇಷ್ಟು ಸಮಯ ಮಾತನಾಡಿದ್ದೀರಿ. Extend ಮಾಡುವುದಕ್ಕೆ ಬರುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರು ಮಾರ್ಚ್ 15ನೇ ತಾರೀಖು ಈ ಸದನದಲ್ಲಿ ಉತ್ತರ ಕೊಡುತ್ತಾರೆ. ನಾನು ಪ್ರತಿದಿನ ನಿಗದಿತ ಸಮಯಕ್ಕಿಂತ ಹೆಚ್ಚಿನ ಅವಧಿಗೆ ಸದನ ನಡೆಸುವುದಕ್ಕೆ ಆಗುತ್ತದೆಯೇ? ಈಗಾಗಲೇ ಮಾತನಾಡಿದವರ ಲೆಕ್ಕ ಇಟ್ಟುಕೊಂಡಿದ್ದೇನೆ. ಮಾತನಾಡತಕ್ಕಂಥವರು ನಿಗದಿತ ಸಮಯಕ್ಕೆ ಮುಗಿಸಬೇಕು. ನಮ್ಮ ಹತ್ತಿರ ಹೆಚ್ಚಿನ ಸಮಯವಿಲ್ಲ. ನಾನೇನು ಮಾಡಬೇಕು ಹೇಳಿ. ಅಧಿವೇಶನವನ್ನು ವಿಸ್ತರಿಸುವುದು ನಮ್ಮ ಕೈಯಲ್ಲಿ ಇಲ್ಲ. ಇನ್ನು 5 ದಿವಸಗಳಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ಭಾರತೀಯ ಜನತಾ ಪಕ್ಷದವರು ಈಗ ಪಟ್ಟಿ ಕೊಟ್ಟರೆ, ಒಬ್ಬೊಬ್ಬರಿಗೆ 22 ನಿಮಿಷ ಕೊಡುವುದನ್ನು time cut ಮಾಡಿ 15 ನಿಮಿಷಗಳ ಸಮಯ ನಿಗದಿಪಡಿಸುತ್ತೇನೆ.

**ಡಾ|| ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾವು ಪಟ್ಟಿ ರೆಡಿ ಮಾಡಿದ್ದೆವು. ಮಾನ್ಯ ಸಭಾನಾಯಕರು ನಿನ್ನೆ ದಿವಸ ಮಾತನಾಡಬಾರದೆಂದು ಇನ್ನೂ ಪಟ್ಟಿ ಕೊಟ್ಟಿಲ್ಲ ಅಷ್ಟೆ.

**ಸಭಾಪತಿಯವರು:-** ಡಾ|| ವೈ.ಎ.ನಾರಾಯಣಸ್ವಾಮಿಯವರೇ, ನನ್ನ ಹತ್ತಿರ ಇದ್ದಂತಹ ಮಾಹಿತಿ ಪ್ರಕಾರ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಈಗ ನೀವು ಕೊಟ್ಟಿದ್ದೀರೆಂದರೆ, ಅಕಸ್ಮಾತ್ ಎಲ್ಲಾದರೂ adjust ಮಾಡಲು ಸಾಧ್ಯವಿದ್ದರೆ ಮಾಡುತ್ತೇನೆ. ಅನಿವಾರ್ಯ ಸಂದರ್ಭ ಬಂದಾಗ ತಾವೆಲ್ಲರೂ ಸಹಕಾರ ಕೊಡಬೇಕು. ನಾನು ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡುತ್ತೇನೆ. ಮಾನ್ಯ ಎಸ್.ಎಲ್.ಭೋಜೇಗೌಡರವರೇ, ಜನತಾದಳ (ಜಾ)ರವರಿಗೆ 3 ಗಂಟೆ 28 ನಿಮಿಷಗಳು ಇದೆ. ತಾವು ನಿನ್ನೆ ದಿವಸ 1 ಗಂಟೆ 25 ನಿಮಿಷ ಮಾತನಾಡಿದ್ದೀರಿ. ಇನ್ನು ಉಳಿದ ಸಮಯವನ್ನು ನಿಮ್ಮಲ್ಲಿ ಮಾತನಾಡುವ ಶಾಸಕರಿಗೆ ಹಂಚುತ್ತೇನೆ. ಇದರ ಮೇಲೆ ನೀವು ಹೇಗೆ ಮಾಡುತ್ತೀರೋ ನೋಡಿ.

ನೀವೇ ಮಾತನಾಡುತ್ತೀರೋ, ಇಷ್ಟಕ್ಕೇ ನಿಮ್ಮ ಭಾಷಣವನ್ನು ಮುಗಿಸುತ್ತೀರೋ. ಈಗ ನಿಮಗೆ 5 ನಿಮಿಷ ಮಾತನಾಡಲು ಅವಕಾಶ ಕೊಡುತ್ತೇನೆ. ಇಲ್ಲವೇ ನೀವು ಬೇರೆಯವರಿಗೆ ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದು. ನೀವು ಮಾತನಾಡುವುದಾದರೆ ನಿಮ್ಮ ಪಕ್ಷದ ಇನ್ನುಳಿದ ಶಾಸಕರಿಗೆ ಮಾತನಾಡಲು ಅವಕಾಶ ಮಾಡಿಕೊಡುವುದಕ್ಕೆ ಕಷ್ಟವಾಗುತ್ತದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ,. . .

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡ ರವರೇ, ನೀವು ಒಬ್ಬರೇ ಮಾತನಾಡಿದರೆ ಉಳಿದವರಿಗೆ ಹೇಗೆ ಸಮಯ ಕೊಡುವುದು?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಡಾ॥ವೈ.ಎ.ನಾರಾಯಣಸ್ವಾಮಿಯವರು time ತೆಗೆದುಕೊಂಡರು. ಶ್ರೀ ರವಿಯವರು...

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡರವರೇ, ಈ ಸದನದಲ್ಲಿ ನೀವು ಮಾತನಾಡುವಾಗ yield ಆಗದಿದ್ದರೆ, ಬೇರೆಯವರು ಮಾತನಾಡುವುದಿಲ್ಲ. ನೀವು yield ಆಗಿ ಕುಳಿತುಕೊಂಡರೆ ಬೇರೆಯವರು ಮಾತನಾಡುತ್ತಾರೆ. ಅದು ಆಗಬಾರದು.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಹಿರಿಯ ಸದಸ್ಯರಿಗೆ ಗೌರವ ಕೊಟ್ಟು ಕುಳಿತುಕೊಂಡೆನು.

**ಸಭಾಪತಿಯವರು:-** ನೀವು ಅವರಿಗೆ ಗೌರವ ಕೊಟ್ಟಿದ್ದೀರಿ, ಅದಕ್ಕೆ ನಾನು ನಿಮಗೆ ಗೌರವ ಕೊಡುತ್ತೇನೆ. ಈಗಾಗಲೇ ನೀವು 1 ಗಂಟೆ 25 ನಿಮಿಷಗಳ ಕಾಲ ಮಾತನಾಡಿದ್ದೀರಿ. ಈಗ ಇನ್ನುಳಿದ ಶಾಸಕರಿಗೆ ಸಮಯ ಕೊಟ್ಟಿದ್ದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನನ್ನದು ಎರಡು ವಿಷಯ ಇದೆ. ಮುಗಿಸಿಬಿಡುತ್ತೇನೆ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡ ರವರೇ, ನಾನು 5 ನಿಮಿಷಕ್ಕಿಂತ ಹೆಚ್ಚು ಮಾತನಾಡಲು ಅವಕಾಶ ಕೊಡುವುದಿಲ್ಲ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಆ ರೀತಿ ಮಾಡಬೇಡಿ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡ ರವರೇ, ನೀವು ಮಾತನಾಡಿ, ಇಲ್ಲವಾದರೆ ನಿಮ್ಮ ಪಕ್ಷದ ಬೇರೆ ಶಾಸಕರಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ಇನ್ನೂ ಮಾನ್ಯ ಗೋವಿಂದರಾಜು Chief Whip ಇವರು ಕೂಡ ಇದ್ದಾರೆ. ಇನ್ನುಳಿದವರಿಗೆ ನಾನು time cut ಮಾಡುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಬೇರೆ ಶಾಸಕರ time ತೆಗೆದುಕೊಳ್ಳುವುದಕ್ಕೆ ನನಗೆ ಅಧಿಕಾರವಿಲ್ಲ.

**ಸಭಾಪತಿಯವರು:-** ಶ್ರೀ ಎಸ್.ಎಲ್.ಭೋಜೇಗೌಡ ರವರೇ, ಈಗ ನೀವು 5 ನಿಮಿಷಕ್ಕಿಂತ ಹೆಚ್ಚಿಗೆ ಮಾತನಾಡುವಂತಿಲ್ಲ.

**04. ವಿತ್ತೀಯ ಕಾರ್ಯಕಲಾಪಗಳು**

**2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ**

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಬಹಳ ಮುಖ್ಯವಾಗಿ ಗೋ ತಳಿಗಳನ್ನು ಅಭಿವೃದ್ಧಿ ಮಾಡುವ ವಿಚಾರದಲ್ಲಿ ಹಿಂದಿನ ಮುಖ್ಯಮಂತ್ರಿಯಾಗಿದ್ದಂತಹ ಸನ್ಮಾನ್ಯ ಶ್ರೀ ಬಿ.ಎಸ್.ಯಡಿಯೂರಪ್ಪನವರು ತಮ್ಮ ಬಜೆಟ್ ಮಂಡನೆ ಮಾಡಿರತಕ್ಕಂಥ ವಿಚಾರ ಹಾಗೂ ಈಗಿನ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಬಜೆಟ್ ಮಂಡನೆ ಮಾಡಿರತಕ್ಕಂಥ ವಿಚಾರದಲ್ಲಿ ಎಲ್ಲೂ ಕೂಡ ನಮ್ಮ ದೇಸೀಯ ತಳಿಗಳಾಗಿರತಕ್ಕಂಥ ಅಮೃತ್ ಮಹಲ್ ತಳಿಗಳು, ಹಳ್ಳಿಕಾರ್ ತಳಿಗಳು ಮತ್ತು ಮಲೆನಾಡು ಗಿಡ್ಡ ಈ ತಳಿಗಳ ಬಗ್ಗೆ ಪ್ರಸ್ತಾಪ ಮಾಡದೇ ಇರತಕ್ಕಂಥದ್ದು ಸ್ವಲ್ಪ ನೋವಿನ ಸಂಗತಿ. 16ನೇ ಶತಮಾನದಲ್ಲಿ

ಶ್ರೀ ಜಯಚಾಮರಾಜ ಒಡೆಯರ್, ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ಚಿಕ್ಕದೇವರಾಜ ಒಡೆಯರ್ ಈ ಮೂರು ಜನರ ಆಡಳಿತದಲ್ಲಿ ಅಮೃತ್ ಮಹಲ್ ತಳಿ ನಮ್ಮ ರಾಜ್ಯಕ್ಕೆ ಬಂತು. ನಂತರದಲ್ಲಿ ಶ್ರೀ ಚಿಕ್ಕದೇವರಾಜ ಒಡೆಯರ್ ರವರ ಅವಧಿಯಲ್ಲಿ ಈ ದನಗಳ ಗುಂಪಿಗೆ "ಬೆಣ್ಣೆ ಚಾವಡಿ" ಎಂದು ಕರೆಯುತ್ತಿದ್ದರು. 16ನೇ ಶತಮಾನದಲ್ಲಿ ಇದನ್ನು ನಮ್ಮ ರಾಜ್ಯಕ್ಕೆ ತಂದಿದ್ದರು. ಈ ದನಗಳನ್ನು ಪೋಷಣೆ ಮಾಡಿ, ಅಮೃತ್ ಮಹಲ್ ತಳಿಯನ್ನು ವೃದ್ಧಿಪಡಿಸಬೇಕೆಂದು ಸುಮಾರು 4,13,039 ಎಕರೆ ಜಾಗದಲ್ಲಿ 214 ಹುಲ್ಲುಗಾವಲು ಮಾಡಿದ್ದರು. ಇದರಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನ್ ರವರು ಬರುತ್ತಾರೆ. 4ನೇ ಆಂಗ್ಲ ಮೈಸೂರು ಮಹಾಯುದ್ಧದಲ್ಲಿ ಈ ತಳಿಗಳು ಸಂಪೂರ್ಣವಾಗಿ ಬ್ರಿಟಿಷರ ವಶವಾದಂಥ ಸಂದರ್ಭದಲ್ಲಿ ಸರ್ ಕೌಲ್ಸ್ ಟ್ರವಲಿಯನ್ ಎಂಬುವರು ಈಜಿಪ್ಟ್ ಪಾಷಾ ಎಂಬುವರಿಗೆ ಇಡೀ ದನಗಳನ್ನು ಕೊಡುತ್ತಾರೆ, ಇದರ ಬಗ್ಗೆ ಇತಿಹಾಸದಲ್ಲಿ ಉಲ್ಲೇಖವಿದೆ. ಇತಿಹಾಸದಲ್ಲಿರಕ್ಕಂಥ ವಿಚಾರಗಳನ್ನು ನಮ್ಮ ಮುಂದಿನ ಪೀಳಿಗೆಗೂ ಗೊತ್ತಾಗಬೇಕಾಗುತ್ತದೆ. ಆ ಸಂತತಿಯು ಸಂಪೂರ್ಣವಾಗಿ ನಾಶವಾಗಿ ನಮ್ಮ ದೇಶವನ್ನೇ ಬಿಟ್ಟು ಹೋಯಿತು ಎನ್ನತಕ್ಕಂಥ ಸಂದರ್ಭದಲ್ಲಿ 1866ಯಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು ಧೃತಿಗೆಡದೇ ಮತ್ತೆ ಅಲ್ಲಲ್ಲಿ ಇದ್ದಂಥ ಈ ತಳಿಗಳನ್ನು ಮತ್ತೆ ವೃದ್ಧಿಪಡಿಸಬೇಕೆಂದು ಹುಡುಕಿ ಮೈಸೂರಿಗೆ ತೆಗೆದುಕೊಂಡು ಬಂದರು. ಅವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ 4,00,439 ಎಕರೆ ಜಾಗದಲ್ಲಿ ತೆಗೆದುಕೊಂಡು ಬಂದು ಸಾಕಿದ್ದರು. ಆಮೇಲೆ ಅದನ್ನು ನಿರ್ದೇಶಕರ ವಶಕ್ಕೆ ಕೊಟ್ಟರು. ನಂತರ ಅದನ್ನು ಪಶುಸಂಗೋಪನೆ ಇಲಾಖೆಗೆ ಬಂತು. ಆದರೆ ಇವತ್ತಿನ ದಿವಸ ಪರಿಸ್ಥಿತಿ ಏನಿದೆಯೆಂದರೆ, ನಿನ್ನೆ ದಿವಸ ನಾನು ಮಾತನಾಡುವಾಗ ಗಂಡು ತಳಿಗಳನ್ನು ಯಾವೊಬ್ಬ ರೈತರು ಕೂಡ ತಮ್ಮ ಮನೆಗಳಲ್ಲಿ ಇಟ್ಟುಕೊಳ್ಳುವುದಿಲ್ಲ. ಅಮೃತ್ ಮಹಲ್‌ತಳಿಗೆ ಬಹಳ ವಿಶೇಷವಾದಂಥ ಶಕ್ತಿ ಇದೆ. ಅದು ಬಹಳ ferocious, ಅದು ತೋಟ ಕಾಯುವುದರಿಂದ ಹಿಡಿದು, ಹಗಲು-ರಾತ್ರಿ ಬೆಳಗ್ಗೆಯಿಂದ ಸಂಜೆಯವರೆಗೆ ದುಡಿದರೂ ಕೂಡ ಶ್ರಮ ಆಗುವುದೇ ಇಲ್ಲ. ಆ ರೀತಿ ಶ್ರಮ ಆಗದೇ ಇರತಕ್ಕಂಥ ಯಾವುದಾದರೂ ತಳಿ ಇದೆಯೆಂದರೆ ಅದು ಅಮೃತ್ ಮಹಲ್ ತಳಿ.

**(ಮುಂದು...)**

(234)10.3.2022/1.00/ಎಂ.ಎಂ-ಬಿ.ಎನ್.ಎಸ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್.ಎಲ್. ಭೋಜೇಗೌಡ (ಮುಂದು):-**

ಇವತ್ತು ಒಂದು ಹೋರಿ ತಳಿಗೆ ಕನಿಷ್ಟ ರೂ. 01 ಲಕ್ಷ ರೂಪಾಯಿವರೆಗೆ ಬೆಲೆ ಇದೆ. ಆ ತಳಿಯ ಹಸುಗಳು 2 ರಿಂದ 2½ ಲೀಟರ್ ಹಾಲು ಕೊಡುತ್ತದೆ ಅಷ್ಟೇ. ಆದರೆ ದುಡಿಯುವಂತಹ ವಿಚಾರದಲ್ಲಿ ಯಾವುದೇ ಗಂಡು ಕರುವಿನ ಬೆಲೆ ಇರುವ ಈ ತಳಿಯನ್ನು ನಾವು ಸಮೃದ್ಧಿ ಮಾಡಬೇಕೋ, ಬಿಡಬೇಕೋ?

**ಶ್ರೀ ಅರಗ ಜ್ಞಾನೇಂದ್ರ(ಗೃಹ ಸಚಿವರು):-** ಅದಕ್ಕೆ ರೋಗ ನಿರೋಧಕ ಶಕ್ತಿ ಇದೆ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಚಿವರೇ, ಆದರೆ ಮಲ್ನಾಡ್ ಗಿಡ್ಡ ತಳಿಯ ಗಂಜಲಕ್ಕೆ ರೋಗ ನಿರೋಧಕ ಶಕ್ತಿ ಇದೆ. ಒಂದೊಂದಕ್ಕೆ ಒಂದೊಂದು ವಿಶೇಷವಿದೆ. 'ಹಳ್ಳಿಕಾರ್ ತಳಿ' ಅದು ಸುಂದರವಾಗಿದ್ದರೂ ಕೂಡ ಕೆಲಸ ಮಾಡುವಂತಹ ತಳಿ ಆಗಿದೆ. ಈ ಮೂರು ತಳಿಗಳನ್ನು ಅಭಿವೃದ್ಧಿ ಮಾಡಿದಾಗ ಎಂತಹ ಗಂಡು ಕರುಗಳು ಬಂದರೂ ಕೂಡ ಯಾವ ಕಾರಣಕ್ಕೂ ಅವು disturb ಆಗುವುದಿಲ್ಲ, ಸಾರ್ವಜನಿಕರಿಗೆ ತೊಂದರೆಯಾಗುವುದಿಲ್ಲ, ರೈತರ ಮನೆಯಲ್ಲಿ ಆ ತಳಿ ಉಳಿಯುತ್ತದೆ. ಇದನ್ನು ಮಾಡಬೇಕಲ್ಲವೇ? ಹೈಕೋರ್ಟ್ 3-4 ಆದೇಶಗಳನ್ನು ಮಾಡಿದೆ. ನಾನು ಯಾರನ್ನೂ ದೂಷಿಸುವುದಕ್ಕೆ ಹೋಗುವುದಿಲ್ಲ. ಇದು ನಿರಂತರವಾಗಿ ಬಂದಿರುವಂತಹ ವಿಚಾರ. 3-4 ಹೈಕೋರ್ಟ್ ಆದೇಶವಾಗಿದ್ದರೂ ಕೂಡ ಮೇಲ್ನೋಟಕ್ಕೆ ಸುಮಾರು 4,514 ಎಕರೆ ಜಾಗ ಒತ್ತುವರಿಯಾಗಿರುವ ಮಾಹಿತಿಯನ್ನು ನಮ್ಮ ಅಧಿಕಾರಿಗಳು ಕೊಟ್ಟಿದ್ದಾರೆ. ಇದರಲ್ಲಿ ಕೇವಲ 248 ಎಕರೆ ಜಾಗವನ್ನು ಬಿಡಿಸಿಕೊಂಡಿದ್ದೇವೆ, ಇನ್ನು ಸುಮಾರು 14,339 ಎಕರೆ ನಮ್ಮಲ್ಲಿದೆ ಎಂದು ಹೇಳಿದರೆ; ಅಂದಿನ ಕಾಲದಲ್ಲಿ, 1866ರಲ್ಲಿ ನಮ್ಮ ಮಹಾರಾಜರು ಇದ್ದ ಕಾಲದಲ್ಲಿದ್ದಂತಹ 4,439 ಎಕರೆ ಜಾಗ ಏನಾಯಿತು? ಆಗ ಈ ತಳಿಯನ್ನು ಅಭಿವೃದ್ಧಿ ಮಾಡಿಲ್ಲವೇ? ದಯಮಾಡಿ ಈ ತಳಿಯನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಕೂಡಲೇ ಯಾರೇ ಒತ್ತುವರಿ ಮಾಡಿರಲಿ ಒತ್ತುವರಿ

---

ಮಾಡಿರುವುದನ್ನು ನಿರ್ದಾಕ್ಷಿಣ್ಯವಾಗಿ ವಶಪಡಿಸಿಕೊಳ್ಳುವಂತಹ ಕೆಲಸ ಆಗಬೇಕಾಗಿದೆ. ಇನ್ನು ಉಳಿದಿರುವಂತಹ ವಿಚಾರದಲ್ಲಿ ಪಶ್ಚಿಮ ಘಟ್ಟ ಪ್ರದೇಶದಲ್ಲಿ; ಮಲೆನಾಡು ಭಾಗದಲ್ಲಿರುವಂತಹ ನಮ್ಮ ಪ್ರಾಣೇಶ್‌ರವರು ಇಲ್ಲಿ ಕುಳಿತಿದ್ದಾರೆ, ಕೂರ್ಗ್‌ನಿಂದ ಬಂದಿರುವ ಸದಸ್ಯರು ಮತ್ತು ವೀಣಾ ಅಚ್ಚಯ್ಯನವರು ಎಲ್ಲರೂ ಇಲ್ಲಿದ್ದೇವ್. ಶ್ರೀಯುತ ಕಸ್ತೂರಿ ರಂಗನ್ ವರದಿ, ಇವತ್ತು ಮುಳ್ಳಯ್ಯನಗಿರಿ ಸಂರಕ್ಷಣಾ ಮೀಸಲು ಅರಣ್ಯ ಪ್ರದೇಶದ ಪರಿಸ್ಥಿತಿ ಇವತ್ತು ಎಂತಹ ಮಾರಕವಾಗಿದೆಯೆಂದರೆ, ಅದರ ಬಗ್ಗೆ ಕ್ಯಾಬಿನೆಟ್ ಎರಡು ಬಾರಿ ಮೀಟಿಂಗ್ ಮಾಡಿತು. ಸುಪ್ರೀಂ ಕೋರ್ಟ್ ಆದೇಶಗಳನ್ನು ಕೊಟ್ಟಂತಹ ಸಂದರ್ಭದಲ್ಲಿ 01,44,000 ಎಕರೆ C & D ಭೂಮಿಯನ್ನು 1980 ರಲ್ಲಿ ವರ್ಗಾವಣೆ ಮಾಡಿ ಎಂದು ಹೇಳಿದ್ದಾರೆ. ಜನವರಿ 03, 1991ರಲ್ಲಿ ಹೊರಡಿಸಿದ ಸರ್ಕಾರದ ಆದೇಶದಲ್ಲಿ ಸೆಕ್ಷನ್ 4[1] ಆಗಿರುವುದನ್ನು C & D ಮಾಡಬೇಡಿ. ಅರಣ್ಯ ಇಲಾಖೆಗೆ ಇರುವಂತಹದ್ದನ್ನು ಗುರುತು ಮಾಡಿ ಅರಣ್ಯ ಇಲಾಖೆಗೆ ಕೊಡಿ. ಉಳಿದಂತಹ ಜಾಗವನ್ನು ನನ್ನ ವಶದಲ್ಲಿದ್ದರೂ, ಯಾರ enjoyment ನಲ್ಲಿದ್ದರೂ ಕೂಡ ರೆವಿನ್ಯೂ ಇಲಾಖೆಗೆ ಬಿಟ್ಟುಬಿಡಿ. ಅದು ಅಲ್ಲಿಯೇ ತೀರ್ಮಾನವಾಗಲಿ ಎಂದು ಈಗಾಗಲೇ ಮುಖ್ಯಮಂತ್ರಿಗಳು, ಕಳೆದ ಮೂರು ಬಾರಿ ಮುಖ್ಯಮಂತ್ರಿಯಾದವರೆಲ್ಲರೂ ಕೂಡ ಪರಿಸರ ಇಲಾಖೆ ಮತ್ತು ಅರಣ್ಯ ಇಲಾಖೆಗೆ ಪತ್ರವನ್ನು ಬರೆದು ವಿನಂತಿ ಮಾಡಿದ್ದಾರೆ. ಆದರೆ ಇವತ್ತಿನವರೆಗೆ ಅದು demarcation ಆಗಿಲ್ಲ. ಉದಾಹರಣೆಗೆ ಸೆಕ್ಷನ್ 4[1]ರಲ್ಲಿ ನಾನು ಜಮೀನನ್ನು ಎಂಜಾಯ್ ಮಾಡುತ್ತಿದ್ದೇನೆ; ನನ್ನ ಅಪ್ಪ, ಅಜ್ಜ ಜಮೀನು ಮಾಡಿದ್ದಾರೆ, ನಾನು ಅಲ್ಲಿ ಜೀವನ ಮಾಡುತ್ತಿದ್ದೇನೆ, ನಾನು ಸೆಕ್ಷನ್ 4[1]ನಲ್ಲಿದ್ದೇನೆ, ಆದರೂ ನಾನು ಆ ಜಮೀನನ್ನು ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ. ಸೆಕ್ಷನ್ 17ರಲ್ಲಿ ನೀವು Forest Settlement Officer ಅನ್ನು ನೇಮಕ ಮಾಡಿದ್ದೀರಿ. ಎಷ್ಟು ಜನರನ್ನು ನೇಮಕಾತಿ ಮಾಡಿದ್ದೀರಿ? 1½ ಲಕ್ಷ ಎಕರೆ ಜಾಗ demarcation ಆಗಬೇಕಾಗಿದೆ, 06 ಜನ Forest Settlement Officers ನ್ನು ನೀವು ಅಲ್ಲಿಟ್ಟಿದ್ದೀರಿ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬೇಕಾದರೆ ಇಡಿ. Fast ಮಾಡಿ. 1991ರಲ್ಲಿ ಗುರುತು ಮಾಡಬೇಕೆಂದು ಹೇಳಿರುವಂತಹ ವಿಚಾರ, now, we are in 2022. ಇವತ್ತಿನವರೆಗೂ ಆಗದೇ ಇದ್ದರೆ ನಾನೇನು ಮಾಡಬೇಕು, ನನ್ನ ಜೀವನ ಹೇಗೆ ಮಾಡಬೇಕು? ನನ್ನ ಜೀವನದ ಜೊತೆ ನಾನೂ ಆಚೆ ಹೋಗಬೇಕೇ? ಇವತ್ತು Tatkola forest ಆಚೆ ಹೋಯಿತು. Basakali forest ಆಚೆ ಹೋಗುತ್ತಿದೆ; ಈಗ ಇನ್ನೊಂದು

ಅರಣ್ಯ ಪ್ರದೇಶ, ಈಗ 149 ಜನರನ್ನು ಎತ್ತಂಗಡಿ ಮಾಡಬೇಕೆಂದು ಅಂತಿಮ ನೋಟಿಸೊಂದನ್ನು ಚಿಕ್ಕಮಗಳೂರಿನಲ್ಲಿ ಕೊಟ್ಟಿದ್ದಾರೆ. ಇಲ್ಲಿ ಜೀವನದ ಪ್ರಶ್ನೆ ಇದೆ. ಬಸಕಳ ಅರಣ್ಯ, ತಟ್ಕೊಳ ಅರಣ್ಯ, ಕುದುರೆಮುಖ iron ore ಹೋದ ನಂತರ ಅರಣ್ಯ ಇಲಾಖೆಯವರು ಏನು ಮಾಡಿದ್ದಾರೆ? ಕೋಟಿ ಕೋಟಿ ಸಸಿಗಳನ್ನು ಬೆಳೆಯುತ್ತೀರಿ, ಬೆಳೆದರೂ ನೀವು ಎಲ್ಲವನ್ನೂ ರೈತರಿಗೆ ವಿತರಣೆ ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ಕುದುರೆಮುಖ ಅರಣ್ಯ ಇವತ್ತು ಸಂಪೂರ್ಣವಾಗಿ ನೀಲಗಿರಿ ಮತ್ತು ಅಕೇಶಿಯಾ ಗಿಡಗಳನ್ನು ನೆಡುವ ಪರಿಸ್ಥಿತಿ ಬಂದಿದೆ. ಇದರಿಂದ ಕಾಡುಪ್ರಾಣಿಗಳಿಗೆ ಊಟ ಇಲ್ಲ. ಇವತ್ತು ಆಗುಂಬೆ ಘಾಟ್‌ನಲ್ಲಿ, ಶಿರಾಡಿ ಘಾಟ್‌ನಲ್ಲಿ ಮಂಗಗಳು ರಸ್ತೆ ಮುಂದೆ ಬಂದು ನಿಲ್ಲುತ್ತವೆ. ಹಿಂದೆ ಮುಸಿಯಗಳನ್ನು ಸಾಮಾನ್ಯವಾಗಿ ರಸ್ತೆಯ ಇಕ್ಕೆಲಗಳಲ್ಲಿ ನೋಡುವುದಕ್ಕೆ ಸಾಧ್ಯವಿರಲಿಲ್ಲ. ಅಂತಹ ಸುಂದರವಾದಂತಹ ಮುಸಿಯಗಳು ಸಹ ಇವತ್ತು ಕಟ್ಟೆ ಮೇಲೆ ಬಂದು ನಿಲ್ಲುತ್ತವೆ. ಯಾರಾದರೂ ಜನಗಳು ಬಾಳೆಹಣ್ಣು, ತೆಂಗಿನಕಾಯಿ, ಪುರಿ ಇಂತಹವುಗಳನ್ನು ಹಾಕುತ್ತಾರೆಂದು ಅವು ಬರುತ್ತವೆ. ಇವತ್ತು ಕಾಡುಪ್ರಾಣಿಗಳಿಗೆ ಇಂತಹ ಪರಿಸ್ಥಿತಿ ಬಂದಿದೆ. ಬಾಳೆಹೊನ್ನೂರು ಭಾಗದಲ್ಲಿ ಕಾಡುಕೋಣಗಳು; ಕಾಡುಕೋಣಗಳ ಕಾಲನ್ನು ನೀವು ನೋಡಬೇಕು. ಎಂತಹ ಸುಂದರವಾಗಿವೆ ಎಂದರೆ ಎರಡು ಕಾಲುಗಳೂ ಬಿಳಿ ಗೆಜ್ಜೆ ತೊಡಿಸಿದ ಹಾಗೆ ಇರುತ್ತದೆ. ಭಗವಂತ ಕೊಟ್ಟಿರುವ ಅಂತಹ ಸುಂದರವಾದ ಪ್ರಕೃತಿ ಇರುವ ಕಾಡುಕೋಣಗಳ ಪರಿಸ್ಥಿತಿ ಏನಾಗುತ್ತಿದೆ ಎಂದರೆ, ಕೇರಳ ಭಾಗದಿಂದ ರಾತ್ರಿ ಸಮಯದಲ್ಲಿ ಗನ್ ಶೂಟ್ ಮಾಡುತ್ತಾರೆ, Silencer ಹಾಕಿ ಶೂಟ್ ಮಾಡುತ್ತಾರೆ. ಒಂದೊಂದು ಕಾಡು ಕೋಣ 1,000 ಕೆ.ಜಿ ಬರುತ್ತದೆ. ಕಾಡುಕೋಣಗಳನ್ನು ರಾತ್ರೋರಾತ್ರಿ ಸಾಗಿಸುತ್ತಾರೆ. ಅದರ ಮಾಂಸಕ್ಕೆ kilo ಗೆ 1,000/- ರೂಪಾಯಿ ಇರುತ್ತದೆ. ಇದು ಏತಕ್ಕೆ ಆಗುತ್ತಿದೆ? ಅರಣ್ಯ ಇಲಾಖೆ ಏನು ಮಾಡುತ್ತಿದೆ? ಅರಣ್ಯ ಇಲಾಖೆಯ ಹುಲಿ ಸಂರಕ್ಷಣಾ ಯೋಜನೆಯಲ್ಲಿ ಸೆನ್ಸಸ್ ಆಗುತ್ತಿಲ್ಲವೇ? ಎಷ್ಟು ಕಾಡು ಕೋಣ ಇದೆ, ಎಷ್ಟು ಆನೆಗಳಿವೆ, ಎಷ್ಟು ಚಿರತೆ ಇದೆ, ಎಷ್ಟು ಹುಲಿ ಇದೆ ಎನ್ನುವ ವಿಚಾರದಲ್ಲಿ ಸೆನ್ಸಸ್ ಆಗಿದೆಯೇ? ಮಾನ್ಯ ಗೃಹ ಸಚಿವರಾದ ಅರಗ ಜ್ಞಾನೇಂದ್ರರವರು ಇಲ್ಲಿ ಕುಳಿತಿದ್ದಾರೆ. ಅದೆಷ್ಟು ಸಭೆಗಳನ್ನು ಮಾಡಿದ್ದಾರೆ ಕೇಳಿ. ಇಲ್ಲಿ burning issue ಇದೆ. ನನ್ನ ತೋಟ ಇದೆ, ತೋಟದ ಸುತ್ತಲಿಂದ ಮೂರು ಅಡಿ ಬಂದರೆ ವನ್ಯಜೀವಿಗಳ ಬೇಲಿ ಬರುತ್ತದೆ. ಭದ್ರಾ ಅಭಯಾರಣ್ಯ ಬರುತ್ತದೆ, ಈ ಕಡೆ ಕುದುರೆಮುಖ ಅಭಯಾರಣ್ಯ ಬರುತ್ತದೆ.

ಜೀವನ ಮಾಡುವುದು ಕಷ್ಟವಾಗಿದೆ. ಸುಮಾರು 1476 ಹಳ್ಳಿಗಳಿಗೆ ಈ ತೊಂದರೆ ಇದೆ. ಜೊತೆಗೆ ಶ್ರೀಯುತ ಕಸ್ತೂರಿ ರಂಗನ್ ವರದಿ; ಪಶ್ಚಿಮ ಘಟ್ಟ ಪ್ರದೇಶಗಳು ಸುಮಾರು ಆರು ರಾಜ್ಯಗಳಲ್ಲಿ ಹಾದುಹೋಗುವುದರಿಂದ ಇದಕ್ಕೊಂದು ತಿಲಾಂಜಲಿ ಹಾಡಬೇಕಾಗುತ್ತದೆ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು**):- ಮಾನ್ಯ ಭೋಜೇಗೌಡರೇ, ಕಸ್ತೂರಿ ರಂಗನ್ ವರದಿ ಬಗ್ಗೆ ಸರ್ಕಾರ ಹೇಳಿದೆ. ಯಾವುದೇ ಕಾರಣಕ್ಕೂ ನಾವು ಒಪ್ಪುವ ಪ್ರಶ್ನೆ ಇಲ್ಲ ಎಂದು ದೆಹಲಿಯಲ್ಲಿ ಹೇಳಿ ಬಂದಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಸರ್ಕಾರದ ಬದ್ಧತೆಯಿದೆ. ಕಸ್ತೂರಿ ರಂಗನ್ ವರದಿಯನ್ನು ಒಪ್ಪುವ ಪ್ರಶ್ನೆಯೇ ಇಲ್ಲ.

**ಶ್ರೀ ಎಸ್.ಎಲ್. ಭೋಜೇಗೌಡ:-** ಮಾನ್ಯ ಸಚಿವರೇ, ಅದಕ್ಕಾಗಿ ತಮಗೆ ಅಭಿನಂದನೆಗಳು. ಎರಡು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಜಿಲ್ಲಾ ಮಟ್ಟ, ತಾಲ್ಲೂಕು ಮಟ್ಟ ಮತ್ತು ಹೋಬಳಿ ಮಟ್ಟದಲ್ಲಿ ನಡೆದಂತಹ ಎಲ್ಲಾ ಸಭೆಗಳಲ್ಲಿ ಜನರು ಸಾಮೂಹಿಕವಾಗಿ ವಿರೋಧ ಮಾಡಿದ್ದಾರೆ. ಅದು ಮಂಗಳೂರು ಇರಬಹುದು, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಇರಬಹುದು ಆ ಭಾಗದಲ್ಲೆಲ್ಲಾ ವಿರೋಧ ಮಾಡಿದ್ದಾರೆ. ಸರ್ಕಾರ ನಮ್ಮ ಪರವಾಗಿ ನಿಂತಿದೆ. ಇದರ ಬಗ್ಗೆ ಪರಿಸರ ಇಲಾಖೆ ಮತ್ತು ಅರಣ್ಯ ಇಲಾಖೆಯವರ ಕಣ್ಣು ತೆರೆಸಬೇಕಾಗಿದೆ. ನಾನು ಹೇಳುವುದೇನೆಂದರೆ, ಸುಪ್ರೀಂ ಕೋರ್ಟ್ ಜಡ್ಜ್‌ಗಳು ಇಲ್ಲಿಗೆ ಬಂದು ಅರಣ್ಯ ಇಲಾಖೆಯ ಗೆಸ್ಟ್ ಹೌಸ್‌ನಲ್ಲಿ ಕುಳಿತು ನಮ್ಮ ಅರಣ್ಯಗಳನ್ನೆಲ್ಲಾ ನೋಡಿದರು. ಕುದುರೆಮುಖ ನೋಡಿದರು, ಮುತ್ತೋಡಿ ಅಭಯಾರಣ್ಯ ನೋಡಿದರು. ಪರಿಸರ ಎಂತಹ ಸುಂದರವಾಗಿದೆ ಎಂದು ಎಂಜಾಯ್ ಮಾಡಿಕೊಂಡು ಹೋದರು. ಯಾರೋ ಪರಿಸರವಾದಿಗಳು ಹೇಳಿದರು ಎಂದು ಸುಪ್ರೀಂ ಕೋರ್ಟ್ ಕೊಟ್ಟಿರುವ ಆದೇಶ ನಮ್ಮ ಬಳಿ ಇದೆ ಎಂದು ಈ ಸದನದಲ್ಲಿ ನಾನು ಘಂಟಾಘೋಷವಾಗಿ ಹೇಳುತ್ತೇನೆ. ಇದನ್ನು ಅವೈಜ್ಞಾನಿಕವಾಗಿ ಮಾಡಿದ್ದೀರಿ. ನಿಮಗೆ ಅಲ್ಲಿ ವಾಸ ಮಾಡುವ ಜನರ ಕಳಕಳಿ ಇಲ್ಲದಂತಾಗಿದೆ. ನೀವೂ ಬನ್ನಿ, ನಮ್ಮನ್ನೂ ಜೀವನ ಮಾಡುವುದಕ್ಕೆ ಬಿಡಿ. ಅಲ್ಲಿನ ಜನರು ಅರಣ್ಯದಲ್ಲಿ ಎಲ್ಲಾ ಗಿಡಗಳನ್ನೂ ಅತ್ಯಂತ ಸುಂದರವಾಗಿ ಬೆಳೆದಿದ್ದಾರೆ. ಅವರ ತೋಟಗಳಲ್ಲಿ ಎಂತೆಂತಹ ಮರಗಳನ್ನು ಹಾಕಿದ್ದಾರೆ ನೋಡಿ. ಬೀಟೆ, ತೇಗ ಸೇರಿದಂತೆ ಎಲ್ಲಾ ಮರಗಳಿವೆ. ಇಡೀ ನಾಡಿನಾದ್ಯಂತ ಅರಣ್ಯ ಇಲಾಖೆಯವರು ನೀಲಗಿರಿ ಮತ್ತು ಅಕೇಷಿಯಾ

ಗಿಡಗಳನ್ನು ಬೆಳೆದಿದ್ದಾರೆ. ಸರ್ಕಾರ ಆದೇಶ ಮಾಡಿದೆ, ಆದೇಶ ಮಾಡಿ ಹತ್ತು ವರ್ಷವಾಗಿದೆ. 10 ವರ್ಷದ ನಂತರದಿಂದ ಇಲ್ಲಿಯವರೆಗೆ ಒಂದೇ ಒಂದು ಅಕೇಷಿಯಾ ಮತ್ತು ನೀಲಗಿರಿ ಗಿಡಗಳನ್ನು ನೆಡಬಾರದು ಮತ್ತು ಇದ್ದಂತಹ ನೀಲಗಿರಿ ಮತ್ತು ಅಕೇಷಿಯಾ ಗಿಡಗಳನ್ನು ತೆಗೆಯಬೇಕೆಂದು ಹೇಳಿದೆ. ಆದರೆ ಅರಣ್ಯ ಇಲಾಖೆಯವರು ಯಾರಾದರೂ ಮನಸ್ಸು ಮಾಡಿದ್ದಾರಾ? ಇವತ್ತು ಕೂಡ ಅವರ ನರ್ಸರಿಗೆ ಬನ್ನಿ. ಅವರ ನರ್ಸರಿಯಲ್ಲಿ ಅಕೇಷಿಯಾ ಮರ ಇದೆ, ನೀಲಗಿರಿ ಮರ ಇದೆ. ಅದನ್ನು ರೈತರಿಗೆ ಕೊಡುವುದಕ್ಕೆ ಬರುತ್ತಾರೆ. ಇವತ್ತು ಪರಿಸರವನ್ನು ಉಳಿಸಬೇಕಾಗಿದೆ, ಪರಿಸರ ಉಳಿದರೆ ನಾವೆಲ್ಲರೂ ಉಳಿಯುತ್ತೇವೆ. ಆ ನಿಟ್ಟಿನಲ್ಲಿ ಇದಕ್ಕೆ ಎಷ್ಟು ಕೋಟಿ ರೂಪಾಯಿಗಳು ಖರ್ಚಾದರೂ ಪರವಾಗಿಲ್ಲ. ಜನಗಳನ್ನು ಉಳಿಸಬೇಕು, ಅರಣ್ಯವನ್ನು ಉಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ಇನ್ನೂ ಬಹಳ ಮಾತನಾಡುವುದಿತ್ತು, ಆದರೆ ಅವಕಾಶವಿಲ್ಲ. ತೊಂದರೆಯೇನಿಲ್ಲ, ನನಗೆ ಅವಕಾಶವನ್ನು ಕೊಟ್ಟಿಲ್ಲವೆಂದು ಹೇಳುವುದಿಲ್ಲ, ಕೊಟ್ಟಿದ್ದೀರಿ. ಆದರೆ ನಾನು ಇನ್ನೂ ತುಂಬಾ ಮಾತನಾಡಬೇಕಾಗಿತ್ತು. ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಇದುವರೆಗೂ ಸಮಾಧಾನಚಿತ್ತವಾಗಿ ಸಭಾಪತಿಯವರು ಮತ್ತು ತಾವೆಲ್ಲರೂ ಕೇಳಿದ್ದಕ್ಕೆ ತಮಗೂ ಕೂಡ ವಂದನೆಗಳನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ಸರ್ಕಾರ 02,65,720 ಕೋಟಿ ರೂಪಾಯಿಗಳ ನವಕರ್ನಾಟಕ ನಿರ್ಮಾಣ ಸಂಕಲ್ಪ ಹಾಗೂ ಸುಳ್ಳು ಭರವಸೆಗಳಿಲ್ಲದಂತಹ ಬಜೆಟನ್ನು ಮಂಡಿಸಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಬಹುಶಃ ಒಳ್ಳೆಯ ಬಜೆಟ್‌ಗಳನ್ನು ಮಂಡಿಸಿದಾಗ ವಿರೋಧ ಪಕ್ಷದಿಂದ ಅದನ್ನು ಸಹಿಸಿಕೊಳ್ಳಲಾಗದೇ, ವಿರೋಧ ವ್ಯಕ್ತಪಡಿಸುವುದು ಸಹಜ ಎನ್ನುವುದು ಸಾಮಾನ್ಯವಾಗಿ ನಮ್ಮೆಲ್ಲರಿಗೂ ಗೊತ್ತಿರುವಂತಹ ಸಂಗತಿಯಾಗಿದೆ.

**(ಈ ಹಂತದಲ್ಲಿ ವೈಸ್‌ಚೇರ್ಮನ್‌ರವರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರವರು ಪೀಠವನ್ನಲಂಕರಿಸಿದರು)**

ದೇಶದ ಪ್ರಧಾನಮಂತ್ರಿಯವರಾದಂತಹ ಸನ್ಮಾನ್ಯ ನರೇಂದ್ರ ಮೋದಿಯವರು ಒಂದು ಉದ್ದೇಶವನ್ನು ಇಟ್ಟುಕೊಂಡು "ಸಬ್ ಕಾ ಸಾಥ್, ಸಬ್ ಕಾ ವಿಶ್ವಾಸ್, ಸಬ್ ಕಾ ವಿಕಾಸ್, ಸಬ್ ಕಾ ಪ್ರಯಾಸ್" ಇದನ್ನು ಈ ದೇಶದ ಜನರೇ ಒಪ್ಪಿಕೊಂಡಿರುವಾಗ ವಿರೋಧ ಪಕ್ಷದವರು ವಿರೋಧ ಮಾಡುತ್ತಿದ್ದಾರೆ.

(ಮುಂದು)

(235) 10-03-2022 KH/BNS 1-10

**(ವೈಸ್ ಛೇರ್‌ಮನ್ ಉಪಸ್ಥಿತಿ)**

**ಶ್ರೀ ಎಂ.ಕೆ. ಪ್ರಾಣೇಶ್ (ಮುಂದು):-**

ನಮ್ಮ ದೇಶದ ಪ್ರಧಾನ ಮಂತ್ರಿಗಳು ಎಲ್ಲೂ ಕೂಡ "ಬಿಜೆಪಿ ಕ ಸಾಥ್", "ಬಿಜೆಪಿ ಕ ವಿಕಾಸ್", "ಬಿಜೆಪಿ ಕ ವಿಶ್ವಾಸ್", "ಬಿಜೆಪಿ ಕ ಪ್ರಯಾಸ್" ಎಂದು ಎಲ್ಲೂ ಹೇಳಲಿಲ್ಲ. ಎಲ್ಲೂ ರಾಜಕಾರಣದ ಮಾತುಗಳನ್ನು ಆಡಲಿಲ್ಲ. ದೇಶದ ಬಗ್ಗೆ ಮಾತನಾಡಿದಂತಹ ಮಾತು. ಇದರ ಮೂಲ ಉದ್ದೇಶಗಳೇನು? ಇವೆಲ್ಲವನ್ನೂ ಗುರಿಯಾಗಿಟ್ಟುಕೊಂಡು, ಇವತ್ತು ರಾಜ್ಯ ಸರ್ಕಾರವೂ ಕೂಡ ಈ ಬಜೆಟ್ ಅನ್ನು ಮಂಡಿಸಿದೆ. ಈ 4 ಶಬ್ದಗಳ ಅರ್ಥ ಏನು? ದೇಶ ಮೊದಲು, ಅಭಿವೃದ್ಧಿ ನಂತರ, ಹಾಗೆ ಜನರ ಸಮಸ್ಯೆಗಳು, ಪರಿಹಾರ ಮಾಡುವಂತಹದ್ದು, ಶ್ರದ್ಧಾ ಕೇಂದ್ರಗಳನ್ನು ಗೌರವದಿಂದ ನೋಡುವಂತಹದ್ದು ಮತ್ತು ಅಭಿವೃದ್ಧಿಯನ್ನು ಮಾಡುವಂತಹದ್ದು, ಹಾಗೆ ದೇಶದ ಬಗ್ಗೆ ದೂರದೃಷ್ಟಿಯನ್ನು ಹೊಂದಿಕೊಳ್ಳುವಂತಹದ್ದು ಎನ್ನುವಂತಹದ್ದೇ ಈ 4 ಪದಗಳ ಅರ್ಥಗಳು. ಹಾಗಾಗಿ, ನಾವು ಅರ್ಥ ಮಾಡಿಕೊಳ್ಳುವಂತಹ ರೀತಿಗಳು ಬೇರೆ ಬೇರೆ ರೀತಿಯಲ್ಲಿ ಯೋಚನೆ ಮಾಡಿದಾಗ ಇವೆಲ್ಲಾ ತಪ್ಪಾಗಿ ಅನಿಸುತ್ತದೆ. ಆದರೆ, ಇದು ಇಡೀ ದೇಶದ ದೃಷ್ಟಿಯಿಂದ ಆಗಿರುವಂತಹ ಚುನಾವಣೆಯಲ್ಲಿ mandate ಅನ್ನು ಕೊಟ್ಟಿದ್ದಾರೆ. ದೇಶದ ಪ್ರಧಾನ ಮಂತ್ರಿಯವರಾದಂತಹ ಮಾನ್ಯ ನರೇಂದ್ರ ಮೋದಿಯವರು ಮಂಡಿಸಿರುವಂತಹ ಬಜೆಟ್, ಹಾಗೆ ಅವರು ಹೇಳಿರುವಂತಹ 4 ಶಬ್ದಗಳು ಅರ್ಥಪೂರ್ಣವಾಗಿದೆ. ಹಾಗಾಗಿ, ನಾವು ತಮ್ಮ ಜೊತೆ ಇದ್ದೇವೆ ಎನ್ನುವಂತಹದನ್ನು ಇವತ್ತು ಬಂದಿರುವಂತಹ ಚುನಾವಣೆಯ ಫಲಿತಾಂಶದಲ್ಲಿ ಕಂಡಿದ್ದೇವೆ. ನನಗೆ ಗೊತ್ತಿದೆ. ಮಾನ್ಯ ವಿರೋಧ ಪಕ್ಷದ ನಾಯಕರ ಬಗ್ಗೆ ವೈಯಕ್ತಿಕವಾಗಿ ನನಗೆ

ತುಂಬಾ ಗೌರವ ಇದೆ. ಏಕೆಂದರೆ, ಅವರು ಕೂಡ ಹಲವು ಸದನಗಳನ್ನು ಪ್ರತಿನಿಧಿಸಿ ಬಂದಿದ್ದಾರೆ. ತುಂಬಾ ವಿಚಾರಗಳನ್ನು ಅರಿತಿದ್ದಾರೆ. ಈ ಸದನಕ್ಕೆ ಒಂದು ಮಾದರಿಯಾಗಿ ಭಾಷಣವನ್ನು ಮಾಡಿ, ಎಲ್ಲರಿಗೂ ಕಣ್ತೆರೆಸುವಂತಹ ಪ್ರಯತ್ನ ಮಾಡುತ್ತಾರೆ ಎನ್ನುವಂತಹ ನಿರೀಕ್ಷೆಯಲ್ಲಿಯೂ ಕೂಡ ನಾವಿದ್ದೆವು. ಆದರೆ, ಅವರ ಬಗ್ಗೆ ನನಗೆ ಕನಿಕರ ಕೂಡ ಆಗುತ್ತಿದೆ. ಏಕೆಂದರೆ, ಇಷ್ಟು ವರ್ಷದ ರಾಜಕಾರಣದ ಒಳಗೆ ಒಳ್ಳೆಯದನ್ನು ಒಳ್ಳೆಯದು ಎನ್ನುವಂತಹದನ್ನು, ಕೆಟ್ಟದ್ದನ್ನು ಕೆಟ್ಟದ್ದು ಎನ್ನುವಂತಹದನ್ನು ಮಾಡಿದ್ದಾರೆ. ಸರ್ಕಾರವನ್ನು ಕೆಲವು ಸಂದರ್ಭದಲ್ಲಿ ಕಿವಿ ಹಿಂಡುವಂತಹ ಕೆಲಸಗಳನ್ನು ಮಾಡುವಂತಹ ಜವಾಬ್ದಾರಿ ವಿರೋಧ ಪಕ್ಷದ ನಾಯಕರದು ಇರುತ್ತದೆ ಎಂದು ಭಾವಿಸಿದ್ದೇನೆ. ಇಂತಹ ಸಂದರ್ಭಗಳಲ್ಲಿ ಮಾತನಾಡಬೇಕಾದರೆ, ಕೆಲವು ವಿಚಾರಗಳು ಪ್ರಸ್ತಾಪ ಕೂಡ ಆಯಿತು. ಈ ರಾಜ್ಯದ ಖಜಾನೆಯನ್ನು ಬೆಂಗಳೂರು ಖಜಾನೆ ಎಂದು ಉಲ್ಲೇಖವಾಯಿತು. ಈ ದೇಶದ ಖಜಾನೆಯನ್ನು ಡೆಲ್ಲಿ ಖಜಾನೆ ಎಂದು ಉಲ್ಲೇಖವಾಯಿತು. ಆದರೆ, ಅದನ್ನು ಸರಿಪಡಿಸಿಕೊಳ್ಳಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ದೇಶದ ಖಜಾನೆ, ಈ ರಾಜ್ಯದ ಖಜಾನೆ. ಇವತ್ತು ನಾವು ಇಲ್ಲಿದ್ದೇವೆ. ನಾಳೆ ಅವರು ಇಲ್ಲಿರಬಹುದು. ಅದು ಬೇರೆ ಪ್ರಶ್ನೆ. ಆದರೆ, ಅಲ್ಲಿ ಕುಳಿತಂತಹ ಸಂದರ್ಭದಲ್ಲಿ ಅದನ್ನು ವಿರೋಧ ಮಾಡುವುದು, ಇಲ್ಲಿ ಕುಳಿತಂತಹ ಸಂದರ್ಭದಲ್ಲಿ ಸಮರ್ಥನೆಯನ್ನು ಮಾಡಿಕೊಳ್ಳುವಂತಹ ಪರಿಪಾಠ ಆಗಬಾರದು ಎಂದು ನಾನು ಅಂದುಕೊಂಡಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಸರ್ಕಾರ ಈಗ ಅತಿ ಹೆಚ್ಚಿನ ಸಾಲವನ್ನು ಮಾಡಿದೆ ಎಂದು ಗೊತ್ತಿರಬೇಕು. ಅವರು ವಿಮರ್ಶೆಯನ್ನು ಮಾಡಿಕೊಳ್ಳಲಿ. ಬಹುಶಃ ಅದು ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, ಈ ರಾಜ್ಯದಲ್ಲಿ ಅತಿ ಹೆಚ್ಚು ಸಾಲವನ್ನು ಮಾಡಿದಂತಹ ಮುಖ್ಯಮಂತ್ರಿಗಳು ಯಾರಾದರೂ ಇದ್ದರೂ ಎಂದು ಹೇಳಿದರೆ ಮಾನ್ಯ ಸಿದ್ಧರಾಮಯ್ಯನವರು ಎಂದು ಹೇಳಬಹುದು. ಅವರ ದೃಷ್ಟಿ ಒಳ್ಳೆಯದಿರಬಹುದು. ನಾನು ಅವರ ಬಗ್ಗೆ ವಿರೋಧ ಮತ್ತು ಆಕ್ಷೇಪವನ್ನು ವ್ಯಕ್ತಪಡಿಸುತ್ತಿಲ್ಲ. ನಾನು ಹೇಳುತ್ತಿರುವಂತಹದ್ದು, ಕೇವಲ ಸಂದರ್ಭಕ್ಕೆ ತಕ್ಕನಾಗಿ ಸಾರ್ವಜನಿಕ ಕ್ಷೇಮಾಭಿವೃದ್ಧಿಯ ದೃಷ್ಟಿಗೆ ಸಂದರ್ಭವಾಗಿ ಸಾಲವನ್ನು ಮಾಡುವಂತಹ ಅನಿವಾರ್ಯತೆಗಳು ಬರುವಂತಹದ್ದು ಸಹಜ. ಅಂತಹ ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ನಾನು ಏನು ಟೀಕೆ ಮಾಡುತ್ತಿಲ್ಲ. ವಿರೋಧ ಪಕ್ಷದಲ್ಲಿ ಕುಳಿತಿರುವಂತಹ ಎಲ್ಲಾ ಸದಸ್ಯರು ನನ್ನ ಸ್ನೇಹಿತರು.

ಪ್ರತಿಯೊಬ್ಬರು ಈ ಸಂದರ್ಭದಲ್ಲಿ ಇರಬೇಕಾದರೆ, ಪರ–ವಿರೋಧಗಳನ್ನು ಚರ್ಚೆ ಮಾಡುತ್ತೇವೆ. ಆದರೆ, ಹೊರಗಡೆ ಹೋದಾಗ ಪರಸ್ಪರ ನಾವು ಏನು ಚರ್ಚೆ ಮಾಡಿದ್ದೇವೆ, ಇದರಲ್ಲಿ ಏನು ವಿಚಾರಗಳು ಇವೆ ಎನ್ನುವಂತಹದನ್ನು ವಿನಿಮಯ ಕೂಡ ಮಾಡಿಕೊಳ್ಳುತ್ತೇವೆ. ಹಾಗಾಗಿ, ಸ್ನೇಹದ ಒಳಗಡೆ ರಾಜಕಾರಣ ಇರುವಂತಹದ್ದು ಇದೆ. ಸಹಜವಾಗಿ ರಾಜಕಾರಣದಲ್ಲಿ ವಿರೋಧಗಳು ಇದ್ದೇ ಇರುತ್ತದೆ. ಅವರು ಅಲ್ಲಿ ಕುಳಿತಾಗ ವಿರೋಧ ಮಾಡಬೇಕಾಗುತ್ತದೆ. ನಾವು ಸಮರ್ಥನೆ ಮಾಡಿಕೊಳ್ಳಬೇಕಾಗುತ್ತದೆ. ಇದು ಸಹಜವಾದಂತಹ ಪ್ರಕ್ರಿಯೆ ಎಂದು ನಾನು ಅಂದುಕೊಂಡಿದ್ದೇನೆ. ಆದರೆ, ಇವತ್ತು ಈ ಸಂದರ್ಭದೊಳಗೆ ಎರಡು ವರ್ಷದಲ್ಲಿ ಆದಂತಹ ಪರಿಸ್ಥಿತಿಗಳನ್ನು ಯೋಚನೆ ಮಾಡಬೇಕಲ್ಲವೇ, ಯಾರೇ ಇರಲಿ, ಅವರು ಆಡಳಿತವನ್ನು ಮಾಡುತ್ತಿದ್ದರೆ ಇದೇ ಪರಿಸ್ಥಿತಿ ಇರುತ್ತಿತ್ತಲ್ಲವೇ, ಏನಾದರೂ ಮೇಲಿಂದ ಉದುರುತ್ತಿತ್ತೆ, ಯಾವುದೇ ಆದಾಯಗಳು ಇಲ್ಲದಿದ್ದಂತಹ ಸಂದರ್ಭದಲ್ಲಿ ರಾಜ್ಯದಲ್ಲಿ ಜನ ಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿತ್ತಲ್ಲವೇ? ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತಲ್ಲವೇ, ಅಂತಹ ಸಂದರ್ಭಗಳಲ್ಲೂ ಯಶಸ್ವಿಯಾಗಿ ನಿಭಾಯಿಸಿರುವುದಕ್ಕೆ ಬೆನ್ನು ತಟ್ಟಬೇಕಲ್ಲವೇ, ಯಾರೇ ಮುಖ್ಯಮಂತ್ರಿಗಳು ಇರಬಹುದು, ಆಗ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಇದ್ದರು, ಈಗ ಮಾನ್ಯ ಬಸವರಾಜ ಬೊಮ್ಮಾಯಿಯವರು ಇದ್ದಾರೆ, ಅವರೆಲ್ಲರೂ ಕೂಡ ಕೊಟ್ಟಂತಹ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜೋಡಿಸಿದ್ದಾರಲ್ಲವೇ, ಇಂತಹ ಸಂದರ್ಭದಲ್ಲೂ 2.65 ಲಕ್ಷ ಕೋಟಿ ರೂಪಾಯಿಗಳ ಬಜೆಟ್‌ಅನ್ನು ಕ್ರೋಡೀಕರಿಸಿಕೊಂಡು ಮಾಡುವಂತಹ ಪ್ರಯತ್ನ ಮಾಡಿದ್ದಾರೆಯಲ್ಲವೇ, ಅದರ ಬಗ್ಗೆ ಮಾತನಾಡಬೇಕಲ್ಲವೇ, ಕೆಲವು ಸಂದರ್ಭಗಳಲ್ಲಿ ಕೆಲವು ಹಂತಗಳಲ್ಲಿ ತಪ್ಪುಗಳು ಆಗುವಂತಹದ್ದು ಸಹಜ. ಆ ತಪ್ಪುಗಳನ್ನು ಹೇಳುವಂತಹ ಸಂದರ್ಭದಲ್ಲಿ ಹೇಳಬೇಕು. ಅದನ್ನು ಬಿಟ್ಟು ಪ್ರಾರಂಭಿಕ ಹಂತದಿಂದ ಕೊನೆಯವರೆಗೂ ಟೀಕೆಗಳನ್ನೇ ಮಾಡುವುದಾದರೆ, ಈ ಸದನಕ್ಕೆ ಏನು ಅರ್ಥ ಬರುತ್ತದೆ? ಹಾಗಾಗಿ, ಈ ಒಂದು ಸಂದರ್ಭದೊಳಗೆ ನಾನು ಹೇಳುವುದಿಷ್ಟೇ. ಏಕೆಂದರೆ, ನನಗೆ ಮಾತನಾಡುವುದಕ್ಕೆ 22 ನಿಮಿಷಗಳನ್ನು ಕೊಟ್ಟಿದ್ದಾರೆ. ನಾನು ಅದನ್ನು ಕೂಡ ಮೀರುವುದಿಲ್ಲ. ಆ ಸಮಯದೊಳಗೆ ನಾನು ಎಲ್ಲಾ ವಿಚಾರಗಳನ್ನು ಮಾತನಾಡುವುದಕ್ಕೆ ಬಯಸುತ್ತೇನೆ. ಬಹುಶಃ ಈಗಲಾದರೂ ನನ್ನ ಸ್ನೇಹಿತರಾಗಿರುವಂತಹ ಕಾಂಗ್ರೆಸ್‌ನವರಿಗೆ ದೇಶದೊಳಗೆ ದೂರದೃಷ್ಟಿಯನ್ನು ಹೊಂದಿ ಮಾನ್ಯ ನರೇಂದ್ರ ಮೋದಿಯವರು

ಬಜೆಟ್ ಅನ್ನು ಮಂಡಿಸಿದ್ದಾರೆ. ಅದೇ ರೀತಿ ಇವತ್ತು ಕರ್ನಾಟಕದಲ್ಲಿಯೂ ಸಹ ದೂರದೃಷ್ಟಿಯನ್ನೇ ಹೊಂದಿರುವಂತಹ ಬಜೆಟ್ ಇದಾಗಿದೆ. ಈಗ ಸಹಜವಾಗಿ ಇರುವಂತಹ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಏನು ಮಾಡಬೇಕೆಂಬ ದೃಷ್ಟಿಕೋನದೊಳಗೆ ಮಾನ್ಯ ಮುಖ್ಯಮಂತ್ರಿಗಳು ಈ ಬಜೆಟ್ ಅನ್ನು ಮಂಡಿಸಿದ್ದಾರೆ. ಹಾಗಾಗಿ, ಆ ದೂರದೃಷ್ಟಿಯ ಬಜೆಟ್ ಅನ್ನು ನಾವೇನಾದರೂ ಉತ್ತರಪ್ರದೇಶ, ಪಂಜಾಬ್, ಬರುವಂತಹ ಚುನಾವಣೆಯನ್ನು ಯೋಚನೆ ಮಾಡಿ, ಆವತ್ತು ಅದಕ್ಕೆ ಅನುಕೂಲಕರವಾದಂತಹ ರೀತಿಯಲ್ಲಿ ಬಜೆಟ್ ಅನ್ನು ಸುಲಭವಾಗಿ ಮಾಡಬಹುದಾಗಿತ್ತು. ಆದರೆ, ಆ ರೀತಿ ಮಾಡಲಿಲ್ಲ. ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಲಿಲ್ಲ. ದೇಶದ ಯುವಕರ ಭವಿಷ್ಯದ ದೂರದೃಷ್ಟಿಯನ್ನಿಟ್ಟುಕೊಂಡು ಬಜೆಟ್ ಅನ್ನು ಕೇಂದ್ರ ಸರ್ಕಾರ ಮಂಡಿಸಿತು. ಇದಕ್ಕೆ ಜನ ಸ್ಪಂದಿಸಿದರು. ಜನ ಸ್ಪಂದನೆಯನ್ನು ಮಾಡಿ, ಆಗಿರುವಂತಹ ಚುನಾವಣೆಯೊಳಗೆ ಇವತ್ತು ನಮಗೆ ಎಲ್ಲಾ ಭಾಗಗಳಲ್ಲಿ ಮಾನ್ಯ ನರೇಂದ್ರ ಮೋದಿಯವರು ದೇಶದ ದೃಷ್ಟಿಯಿಂದ ಕೈಹಿಡಿಯುವಂತಹ ಕೆಲಸವನ್ನು ಮಾಡಿದ್ದಾರೆ. ಈಗ ಇವರು ಏನು ಮಾತನಾಡುತ್ತಾರೆ. ಜನರು ಕೊಟ್ಟಿರುವಂತಹ mandate ವಿರುದ್ಧ ಮಾತನಾಡುವುದಕ್ಕೆ ಸಾಧ್ಯವೇ, ಇವರಿಗೆ ಧ್ವನಿ ಇದೆಯೇ, ನಮ್ಮ ಬಗ್ಗೆ ಇರಲಿ, ಚುನಾಯಿತ ಪ್ರತಿನಿಧಿಗಳ ಬಗ್ಗೆ, ಸರ್ಕಾರದ ಆಡಳಿತವನ್ನು ನಡೆಸುತ್ತಿರುವವರ ಬಗ್ಗೆ ಮಾತನಾಡುವಂತಹ ಧ್ವನಿ ಇದೆ. ಆದರೆ, ಇವತ್ತು ಜನಸಾಮಾನ್ಯರು ಕೊಟ್ಟಿರುವಂತಹ ತೀರ್ಪು, ಅದರ ವಿರುದ್ಧ ಧ್ವನಿಯನ್ನು ಎತ್ತುವುದಕ್ಕೆ ಆಗುತ್ತದೆಯೇ? ದೇಶದ ಪ್ರಧಾನ ಮಂತ್ರಿಯವರ ಬಗ್ಗೆ ಅವಹೇಳನಕಾರಿ ರೀತಿಯಲ್ಲಿ ಮಾತನಾಡುವುದಕ್ಕೆ ಇವರಿಗೆ ಧ್ವನಿ ಇದೆಯೇ, ಆದರೆ, ಈಗಲಾದರೂ ನಾವು ಬುದ್ಧಿಯನ್ನು ಕಲಿಯಬೇಕಾಗುತ್ತದೆ. ದೇಶ ನನಗೆ ಮೊದಲು. ಯಾರ ಕುಟುಂಬಕ್ಕೋಸ್ಕರ ರಾಜಕಾರಣ ಮಾಡಲಿಲ್ಲ. ಯಾರ ಕುಟುಂಬದ ವ್ಯಕ್ತಿಯನ್ನು ಇವತ್ತು ಮುಂದೆ ತರುವಂತಹ ಪ್ರಯತ್ನಗಳಾಗಲಿಲ್ಲ. ಜನಸಾಮಾನ್ಯರು ನೋಡಿದರು. ಎಂತಹ ಸಂದರ್ಭದಲ್ಲಿಯೂ ಈ ದೇಶವನ್ನು ಬಿಟ್ಟುಕೊಡದೇ ಇರುವಂತಹ ಪರಿಸ್ಥಿತಿಯೊಳಗೆ ಈ ದೇಶದ ಆಡಳಿತ ನಡೆಯುತ್ತಿದೆ. ಹಾಗಾಗಿ, ಇವತ್ತು ನಮ್ಮ ಸಂಕಷ್ಟಗಳು ಇದ್ದರೂ ಕೂಡ ಎರಡು ವರ್ಷಗಳಲ್ಲಿ ಎರಡು ಬಾರಿ ಕೋವಿಡ್ ಬಂದು ನಮಗೆ ತುಂಬಾ ಸಂಕಷ್ಟ ಬಂದಿದೆ. ಇದು ಪರಿಹಾರವಾಗಿದೆ ಎಂದು ಹೇಳುವುದಕ್ಕೆ ಬಯಸುವುದಿಲ್ಲ. ಆ ಸಂಕಷ್ಟದೊಳಗೆ ಜನಸಾಮಾನ್ಯರು ಸಂಕಷ್ಟವನ್ನು ಮರೆತು, ದೇಶ ಮೊದಲು ಎನ್ನುವಂತಹ ಯೋಚನೆ

ಇರುವಂತಹ ದೇಶದ ಪ್ರಧಾನ ಮಂತ್ರಿಗಳ ಕೈಹಿಡಿಯಬೇಕು. ಏಕೆಂದರೆ, ಇವತ್ತು ನಾವಿರುತ್ತೇವೆ. ನಾಳೆ ಇನ್ನೊಬ್ಬರಿರುತ್ತಾರೆ. ನಾವೇನು ಇಲ್ಲೇ ಮೊಳೆ ಹೊಡೆದುಕೊಂಡು ಯಾರು ಕೂರುವುದಿಲ್ಲ. ಇಲ್ಲಿರುವಂತಹ ಸದಸ್ಯರೆಲ್ಲಾ ಶಾಶ್ವತವಾಗಿ ಇಲ್ಲಿರುತ್ತೇವೆಯೇ, ಮುಂದೆ ಯುವ ಪೀಳಿಗೆಗಳು ಬರುತ್ತದೆ. ಯುವ ಜನಾಂಗದ ಭವಿಷ್ಯ ಇದರಲ್ಲಿ ಅಡಗಿದೆ. ಹಾಗಾಗಿ, ಇವೆಲ್ಲಾ ದೂರದೃಷ್ಟಿಕೋನದಿಂದ ಮಾಡಿದಂತಹ ಬಜೆಟ್‌ನೊಳಗೆ ಏಕಾಏಕಿ ಟೀಕೆಗಳನ್ನು ಮಾಡುವಂತಹದ್ದು ಸರಿಯೇ ಎನ್ನುವಂತಹದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಈಗಾಗಲೇ ನಾನು ಹೇಳಿದೆ. ನಾನು ಯಾರನ್ನು ಚುಚ್ಚಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಚುಚ್ಚಿ ಮಾತನಾಡಿದಂತಹ ಸಂದರ್ಭದಲ್ಲಿ ಅವರು ಹೇಳುವಂತಹದ್ದು, ನನಗೆ ಸಿಕ್ಕಿರುವಂತಹ ಸಮಯ ಕಾಲಹರಣವಾಗುವಂತಹದ್ದು ಬೇಡ ಎನ್ನುವಂತಹ ದೃಷ್ಟಿಯಲ್ಲಿ ನಾನಿದ್ದೇನೆ. ಇನ್ನಾದರೂ ಆಡಳಿತ ಪಕ್ಷ ಇದ್ದಂತಹ ಸಂದರ್ಭದಲ್ಲಿ ವಿರೋಧ ಪಕ್ಷಗಳು ಇರಬೇಕು. ವಿರೋಧ ಪಕ್ಷಗಳು ಯಾವತ್ತು ಅಷ್ಟೆ, ಒಂದು ಆರೋಗ್ಯಕರವಾದಂತಹ ಟೀಕೆ-ಟಿಪ್ಪಣಿಗಳನ್ನು ಮಾಡುವಂತಹ ಕೆಲಸಗಳು ಈ ಸಂದರ್ಭಗಳಲ್ಲಿ ಆಗಲೇ ಬೇಕಾಗುತ್ತದೆ. ಇವತ್ತು ಸಮಸ್ಯೆ ಇದೆ. ನಾನು ಮಲೆನಾಡು ಭಾಗದಿಂದ ಬಂದಿರುವಂತಹವನು. ಅಲ್ಲಿ ನೂರಾರು ಸಮಸ್ಯೆಗಳಿವೆ. ಅಲ್ಲಿರುವ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಇವತ್ತು ಸರ್ಕಾರಗಳು ಕಣ್ತೆರೆದು ನೋಡುವಂತಹ ಅಗತ್ಯತೆಗಳು ಕೂಡ ಇದೆ ಎನ್ನುವಂತಹದಾದರೆ, ಈ ಸಂದರ್ಭದಲ್ಲಿ ನಾನು ಒತ್ತಿ ಹೇಳುವುದಕ್ಕೆ ಏಕೆ ಹೋಗುವುದಿಲ್ಲವೆಂದರೆ, ಆರ್ಥಿಕ ಪರಿಸ್ಥಿತಿ ಇವತ್ತು ಹದಗೆಟ್ಟಿದೆ. ಅದನ್ನು ಒಂದು ಸರಿ ಹಂತಕ್ಕೆ ತರುವಂತಹ ಪ್ರಯತ್ನವನ್ನು ಸನ್ಮಾನ್ಯ ಬಸವರಾಜ ಬೊಮ್ಮಾಯಿಯವರ ನೇತೃತ್ವದ ಸರ್ಕಾರ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಈ ಬಜೆಟ್ ಅನ್ನು ಮಂಡಿಸಿದೆ. ಇವತ್ತು ನಾವು ಮಾಧ್ಯಮದಲ್ಲಿ ನೋಡಿದ್ದೇವೆ. ಕಟ್ಟಕಡೆಯ ಮನುಷ್ಯನಿಂದ ಹಿಡಿದು ಪ್ರತಿಯೊಬ್ಬ ಮನುಷ್ಯನಿಗೂ ಈ ಬಜೆಟ್ ನಲ್ಲಿ ಅವಕಾಶಗಳನ್ನು ನಿರ್ಮಾಣ ಮಾಡಿಕೊಟ್ಟಿದೆ. ನಿರ್ಮಾಣ ಮಾಡಿಕೊಟ್ಟು, ಇದನ್ನು ಕಾರ್ಯಗತ ಮಾಡುವಂತಹ ಜವಾಬ್ದಾರಿಗಳು ಸರ್ಕಾರದಲ್ಲಿ ಇದೆ. ಹಿಂದೆ ಆಗಿರುವಂತಹ ಬಜೆಟ್‌ನ ಬಗ್ಗೆ ಉಲ್ಲೇಖಗಳನ್ನು ಮಾಡಿದಾಗ ನಾವು ಯೋಚನೆಯನ್ನು ಮಾಡಬೇಕು. ಇವತ್ತು ಅದನ್ನು ಮಾಡಲಿಲ್ಲ, ಇದನ್ನು ಮಾಡಲಿಲ್ಲ. ಎಷ್ಟು ವರ್ಷಗಳ

ಆಡಳಿತಗಳನ್ನು ವಿರೋಧ ಪಕ್ಷದವರು ಮಾಡಿದ್ದರು. ಆಡಳಿತ ಪಕ್ಷದಲ್ಲಿರುವಂತಹ ಸರ್ಕಾರಗಳು ಇವತ್ತು ಎಷ್ಟು ವರ್ಷಗಳ ಆಡಳಿತವನ್ನು ಮಾಡಿದ್ದಾರೆ ಎನ್ನುವುದನ್ನು ತುಲನೆ ಮಾಡಲಿ.

(ಮುಂದು)

(236) ಎಸ್‌ಪಿಆರ್/ಕೆಎಸ್/1:20/10/03/2022

(ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎಂ.ಕೆ.ಪ್ರಾಣೇಶ್(ಮುಂದು):-**

ಈ ಬಗ್ಗೆ ವಿರೋಧ ಪಕ್ಷದವರೇ ಯೋಚನೆ ಮಾಡಬೇಕು ಹಾಗೂ ಯೋಚನೆ ಮಾಡಿ ಮಾಡನಾಡಬೇಕು. ಇವತ್ತಿನ ಸಂದರ್ಭಗಳಲ್ಲಿ ಮಾತನಾಡುವಾಗ, ನಾವು ನಮ್ಮ ಮೂಗಿನ ನೇರಕ್ಕೆ ಮಾತ್ರವೇ ಮಾತನಾಡುವ ಕೆಲಸಗಳನ್ನು ಮಾಡಿದಾಗ ನಾವು ಖಂಡಿತವಾಗಿಯೂ ಸಹ ಯಶಸ್ವಿಯಾಗುವುದಿಲ್ಲ. ಇವತ್ತಿನ ದಿವಸ ದೇಶದಲ್ಲಿ ಯಶ್ವಸಿಯಾದ ರಾಜಕಾರಿಣಿಗಳಿದ್ದಾರೆ ಎಂದರೆ ಹೌದು ಎನ್ನಬೇಕಾಗುತ್ತದೆ. ಈ ಹಿಂದೆ ಶ್ರೀ ಅಟಲ್ ಬಿಹಾರಿ ವಾಜಪೇಯಿರವರು ಇದ್ದಾಗ..., ಈ ಬಗ್ಗೆ ಈ ಸದನದಲ್ಲಿಯೇ ನಮ್ಮ ಪಕ್ಷದವರೇ ಉಲ್ಲೇಖಿಸಿದ್ದಾರೆ. ದೇಶವು ಸಂಕಷ್ಟಕ್ಕೊಳಗಾದ ಸಂದರ್ಭದಲ್ಲಿ, ಎಲ್ಲರೂ ಒಟ್ಟಾಗಿ ಕೈಜೋಡಿಸಿ ಕೆಲಸಗಳನ್ನು ಮಾಡುವ ಸಂದರ್ಭಗಳು ಬರುತ್ತದೆ ಆಗ ಅವತ್ತಿನ ದೇಶದ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರನ್ನು ಈ ದೇಶದ ದುರ್ಗಿ ಎಂಬುದಾಗಿ ನಮ್ಮ ಪಕ್ಷದವರು ಸಂಭೋದಿಸಿದರು. ಆಗ ನಾವು ವಿರೋಧ ಪಕ್ಷದ ಸ್ಥಾನದಲ್ಲಿದ್ದೇವು. ಆ ಸಂದರ್ಭದಲ್ಲಿ ದೇಶದ ಪ್ರಧಾನ ಮಂತ್ರಿಗಳಿಗೆ ಮಾನಸಿಕ ಸ್ಥೈರ್ಯವನ್ನು ತುಂಬಬೇಕಾಗಿತ್ತು. ಆಗ ದೇಶವನ್ನು ಉಳಿಸುವ ಪ್ರಯತ್ನಗಳನ್ನು ಮಾಡಬೇಕಾಗಿತ್ತು. ಆಗಿನ ಸಂದರ್ಭದಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿರವರು ಇದ್ದರು. ಆಗಿನ ವಿರೋಧ ಪಕ್ಷದವರು ವಿರೋಧಿಸುವ ಬದಲು ಹೊಗಳುವ ಕೆಲಸವನ್ನು ಮಾಡಿದ್ದರು. ಇದರ ಅಗತ್ಯತೆಯಾದರೂ ಏನಿತ್ತು ಎಂದು ನಾನು ಕೇಳುತ್ತೇನೆ. ಅವರಲ್ಲಿನ ತಪ್ಪುಗಳನ್ನು ಹೆಕ್ಕಿ ಹೆಕ್ಕಿ ತೆಗೆಯುವ ಕೆಲಸವು ನಮಗೆ ತಿಳಿದಿರಲಿಲ್ಲವೇ? ಈ ರೀತಿಯ ಕೆಲಸಗಳ ಬಗ್ಗೆ ತಿಳಿದಿದ್ದರೂ ಸಹ ದೇಶದ ಬಗ್ಗೆ ಯೋಚನೆಯನ್ನು ಮಾಡುವ ಸಂದರ್ಭ ಅದಾಗಿತ್ತು. ಯಾರು ದೇಶದ ಬಗ್ಗೆ ಯೋಚನೆಯನ್ನು ಮಾಡುತ್ತಾರೋ, ಅವರುಗಳಿಗೆ ಸಹಕಾರವನ್ನು ನೀಡುವ ವ್ಯವಸ್ಥೆ ನಮ್ಮ ಪಕ್ಷದಲ್ಲಿದೆ ಹಾಗೂ ಇದು ಬೆಳೆದುಕೊಂಡು ಬಂದಿದೆ. ನಮ್ಮನ್ನು ಕೇವಲವಾಗಿ ನಾಗಾಪುರವನ್ನು ಅಥವಾ ಭಗವಾಧ್ವಜವನ್ನು ಟೀಕೆ ಮಾಡುವ ಅಗತ್ಯತೆಯಾದರೂ ಏನಿದೆ? ನಾವು

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇವಲ ದೇಶದ ಬಗ್ಗೆ ಮಾತ್ರವೇ ಯೋಚನೆ ಮಾಡಬೇಕು. ನಾವೇನಾದರೂ ಪಾಕಿಸ್ತಾನ ದೇಶದವರೇ? ಒಂದು ವೇಳೆ ನಾವು ಇನ್ನಿತರೆ ದೇಶದಳೊಂದಿಗೆ ಸಹಕಾರ ನೀಡಿದ್ದರೆ, ಆಗ ವಿರೋಧ ಪಕ್ಷದವರು ಟೀಕಿಸಲಿ; ಇಲ್ಲವೆಂದಲ್ಲ. ಅದನ್ನು ಬಿಟ್ಟು ದೇಶಗಳನ್ನು ಉಳಿಸುವ ಪ್ರಯತ್ನಗಳನ್ನು ಮಾಡುತ್ತಿರುವಾಗ ನಮ್ಮೊಳಗೆ ಗೊಂದಲಗಳನ್ನು ಹುಟ್ಟುಹಾಕುವ ಪ್ರಯತ್ನಗಳನ್ನು ಮಾಡುವುದು ಸರಿಯೇ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನಿಸುತ್ತೇನೆ. ಈ ಎಲ್ಲಾ ಮಜಲುಗಳಲ್ಲಿ ನಾವು ಯೋಚನೆಗಳನ್ನು ಮಾಡಬೇಕು. ಮೇಲ್ಮನೆಗೆ ಆಯ್ಕೆಗೊಂಡ ನಾವುಗಳು ಸಾಮಾನ್ಯ ಪ್ರಜೆಗಳಲ್ಲ. ನಮ್ಮ ಆಯ್ಕೆ ಮಾಡಿ ಇಲ್ಲಿಗೆ ಕಳುಹಿಸಿರುವವರು ನಾವು ಯಾವ ರೀತಿಯ ಮಾತುಗಳನ್ನಾಡುತ್ತೇವೆ ಎನ್ನುವುದನ್ನು ಗಮನಿಸುತ್ತಾರೆ. ನಾವು ಮಾತನಾಡುವುದು ಕೆಳಹಂತದವರೆಗೆ ತಲುಪುತ್ತದೆ. ನಮ್ಮನ್ನು ನಂಬಿ ಆಯ್ಕೆ ಮಾಡಿರುವವರು ಹಾಗೂ ನಮ್ಮ ನಾಯಕರಾಗಿ ಗುರ್ತಿಸುವವರು ನಮ್ಮ ಹಿಂಬಾಲಕರು ಆಗುತ್ತಾರೆ. ಹೀಗಾಗಿ ಒಳ್ಳೆಯ ವಿಚಾರಗಳ ಬಗ್ಗೆ ಮಾತನಾಡುವಂತಾಗಬೇಕು ಎಂದು ನಾನು ತಮ್ಮ ಮೂಲಕ ಹೇಳುತ್ತೇನೆ.

'ಈ ದೇಶಕ್ಕೆ ರಾಹುಕಾಲ ಬಂದಿವೆ' ಎಂಬುದಾಗಿ ನಿನ್ನೆಯ ದಿನ ಮಾತನಾಡುವ ಸಂದರ್ಭದಲ್ಲಿ ಸದಸ್ಯರೊಬ್ಬರು ಪ್ರಸ್ತಾಪಿಸಿದರು. ಆ ರೀತಿಯಾಗಿ ಮಾತನಾಡುವವರಿಗೆ ಮಾತ್ರವೇ ರಾಹುಕಾಲ ಬಂದಿದೆ ವಿನಃ ದೇಶಕ್ಕಲ್ಲ. ಈ ದೇಶಕ್ಕೆ ಹಾಗೂ ದೇಶದ ಜನತೆಗೆ ಸುಗ್ಗಿ ಕಾಲ ಬಂದಿದೆ. ಹೀಗಾಗಿ ಇದರ ಫಲಿತಾಂಶಗಳು ಇಂದು ನಮಗೆ ಗೋಚರಿಸುತ್ತಿವೆ. ಈ ಹಿಂದೆ ರಾಹುಕಾಲವಿತ್ತು. 60–70 ವರ್ಷಗಳ ಕಾಲ ಈ ದೇಶದ ಆಡಳಿತವನ್ನು ಮಾಡಿ, ಸಾಕಷ್ಟು ಆಯವ್ಯಯಗಳನ್ನು ಮಂಡಿಸಿದ ನಂತರವೂ ಸಹ ಜನಸಾಮಾನ್ಯರಿಗೆ ಮೂಲಭೂತ ಸೌಕರ್ಯಗಳು ಸಿಗದಿದ್ದ ಸಂದರ್ಭಗಲು ಈ ಹಿಂದೆ ಇತ್ತು. ಈ ಹಿಂದಿನ ಸರ್ಕಾರಗಳು 20 ಅಂಶದ ಹಾಗೂ ಗರೀಬಿ ಹಠಾವೋ ಎನ್ನುವ ಕಾರ್ಯಕ್ರಮಗಳನ್ನು ಜಾರಿಗೆ ತಂದವು. ಆದರೆ ಅವುಗಳು ಏನಾದವು? ಇವುಗಳಿಂದ ಏನಾದರೂ ವ್ಯತ್ಯಾಸಗಳಾಯಿತೇ? ಆಗ ಕೇವಲ ಘೋಷಣೆಗಳನ್ನು ಮಾಡಲಾಯಿತೇ ವಿನಃ ಯಾವುದೇ ಯೋಜನೆಗಳು ಕಾರ್ಯಗತವಾಗಲಿಲ್ಲ. ಪ್ರಸ್ತುತ ಅಂತಹ ಯೋಜನೆಗಳನ್ನು ಕಾರ್ಯಗತಗೊಳಿಸುವ ಕೆಲಸಗಳಾಗುತ್ತಿವೆ. ನಮ್ಮ ಭಾರತ ದೇಶದಲ್ಲಿ ಬದುಕುವ ಪರಿಸ್ಥಿತಿಗಳನ್ನು ನಮ್ಮ ಪಕ್ಷದ ಸರ್ಕಾರವು ನಿರ್ಮಿಸಿದೆ. ಈ ದೇಶದ ಒಬ್ಬ ಸಾಮಾನ್ಯ ಪ್ರಜೆಯೂ ಸಹ ತಲೆ ಎತ್ತಿ ಗೌರವದಿಂದ ತಾನು ಭಾರತೀಯ ಎಂದು ಹೇಳಿಕೊಳ್ಳುವ ಪರಿಸ್ಥಿತಿಯನ್ನು ಇಂದಿನ ದಿನ ನಿರ್ಮಿಸಲಾಗಿದೆ. ಈ ಹಿಂದೆ ಪ್ರಪಂಚದ ಇನ್ನಿತರೆ ದೇಶಗಳಲ್ಲಿ ನಾವು ಭಾರತೀಯರು ಎಂದು ಹೇಳಿದರೆ, ಅಲ್ಲಿ ನಮ್ಮನ್ನು

ಸೇರಿಸುತ್ತಿರಲಿಲ್ಲ. ಅಂತಹ ಪರಿಸ್ಥಿತಿಯು ಈ ಹಿಂದೆ ಬಂದೊದಗಿತ್ತು. ಈ ಹಿಂದೆ ನಮ್ಮ ದೇಶದ ಪ್ರಧಾನ ಮಂತ್ರಿಗಳು ಬೇರೆ ದೇಶಕ್ಕೆ ಹೋದರೆ, ಅಲ್ಲಿನ ವಿದೇಶಾಂಗ ವ್ಯವಹಾರಗಳ ಮಂತ್ರಿಗಳು ಸ್ವಾಗತ ಕೋರುತ್ತಿದ್ದರು. ಆದರೆ, ಇವತ್ತಿನ ದಿವಸ ಪ್ರಪಂಚದ ಯಾವುದೇ ದೇಶಕ್ಕೆ ನಮ್ಮ ದೇಶದ ಪ್ರಧಾನ ಮಂತ್ರಿಗಳು ಹೋದರೂ ಸಹ ಅಲ್ಲಿನ ಅಧ್ಯಕ್ಷರು ಬಂದು 'ಕೆಂಪು ಹಾಸಿನ' ಮೇಲೆ ಸ್ವಾಗತಿಸುತ್ತಾರೆ. ಈ ರೀತಿಯ ವ್ಯವಸ್ಥೆಗಳು ಇಂದಿನ ದಿನ ಆಗುತ್ತಿದೆ. ಏಕೆಂದರೆ ಇವತ್ತಿನ ದಿವಸ ನಾವು ಅಷ್ಟೊಂದು ಸದೃಢ ಮತ್ತು ಬಲಾಢ್ಯರಾಗಿದ್ದೇವೆ. ನಮ್ಮನ್ನು ಎದುರು ಹಾಕಿಕೊಳ್ಳುವ ಶಕ್ತಿಯು ಇನ್ಯಾವುದೇ ದೇಶಕ್ಕೆ ಇಲ್ಲ. ಇದರರ್ಥ ಇವತ್ತಿನ ದಿವಸ ನಮ್ಮ ದೇಶ ಈ ಹಂತಕ್ಕೆ ಬಲಿಷ್ಠವಾಗಿ ನಿಂತಿದೆ. ನಮ್ಮ ದೇಶವು ಇಷ್ಟೊಂದು ಬಲಿಷ್ಠತೆಯನ್ನು ಪಡೆದುಕೊಂಡ ಸಂದರ್ಭದಲ್ಲಿ ದುರಾದೃಷ್ಟವಶಾತ್ ನಾವು ಕೋವಿಡ್-19 ರಂತಹ ಸಾಕ್ರಾಂಮಿಕ ಕಾಯಿಲೆಯ ಸಂಕಷ್ಟಕ್ಕೆ ಸಿಲುಕಿಕೊಂಡೆವು. ಆಗ ಆರ್ಥಿಕವಾಗಿ ಹಿಂಜರಿಯುವ ಪರಿಸ್ಥಿತಿಯು ಒದಗಿಬಂದಿತು. ಆದರೆ, ಎದೆಗುಂದದೇ ಎಲ್ಲರ ಸಹಕಾರವನ್ನು ಪಡೆದುಕೊಂಡೆವು. ಈ ಕಾರಣಕ್ಕಾಗಿಯೇ *"ಸಬ್ಕಾ ಸಾತ್, ಸಬ್ಕಾ ವಿಕಾಸ್, ಸಬ್ಕಾ ವಿಶ್ವಾಸ್, ಸಬ್ಕಾ ಪ್ರಯಾಸ್"* ಎಂಬುದಾಗಿ ಹೇಳಲಾಗಿದೆ. ದೇಶದ ಅಭಿವೃದ್ಧಿಗಾಗಿ ಆಡಳಿತ ಮತ್ತು ವಿರೋಧ ಪಕ್ಷಗಳು ಹಾಗೂ ಎಲ್ಲಾ ಜನ ಸಾಮಾನ್ಯರು ಕೈಜೋಡಿಸಬೇಕು. ಆಗ ಮಾತ್ರವೇ ನಾವು ಯಶಸ್ವಿಯನ್ನು ಹೊಂದಲು ಸಾಧ್ಯವಾಗುತ್ತದೆ. ನನ್ನ ಒಬ್ಬನಿಂದಲೇ ಎಲ್ಲವೂ ಆಗುತ್ತದೆ ಎಂದು ಶ್ರೀ ನರೇಂದ್ರ ಮೋದಿಯವರು ಯಾವತ್ತಿಗೂ ಸಹ ಹೇಳಿಲ್ಲ. ಎಲ್ಲರ ಸಹಕಾರವಿದ್ದರೆ ಮಾತ್ರವೇ ನಾವು ಯಶಸ್ವಿ ಹೊಂದಲು ಸಾಧ್ಯ ಎನ್ನುವ ಮಾತನ್ನು ಈ ದೇಶದ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಹೀಗಾಗಿ ಇದನ್ನು ತಪ್ಪಾಗಿ ಅರ್ಥೈಸುವುದು ಬೇಡವೆಂದು ನಾನು ಕೈಮುಗಿದು ಬೇಡುತ್ತೇನೆ. ಈ ಹೇಳಿಕೆಗೆ ಇಲ್ಲ ಸಲ್ಲದ ಶಬ್ದಗಳನ್ನು ಸೇರಿಸಿ, ದೇಶದ ಒಬ್ಬ ಪ್ರಧಾನ ಮಂತ್ರಿಯ ಬಗ್ಗೆ ಅವಹೇಳನವಾಗಿ ಮಾತನಾಡುವ ಕೆಲಸವನ್ನು ಮಾಡಬೇಡಿ. ಇಲ್ಲಿ ಎಲ್ಲರೂ ಹಿರಿಯ ಸದಸ್ಯರಿದ್ದಾರೆ; ಇನ್ನೂ ಹಲವಾರು ವರ್ಷಗಳ ಕಾಲ ರಾಜಕಾರಣ ಮಾಡಬೇಕಾಗಿದೆ. ಎಲ್ಲರ ಬಗ್ಗೆಯೂ ಸಹ ನನಗೆ ಗೌರವವಿದೆ. ಬಹಳ ಕಷ್ಟದ ಪರಿಸ್ಥಿತಿಯಿಂದ ರಾಜಕಾರಣವನ್ನು ಮಾಡಿ ಬೆಳೆದು, ಈ ದೇಶವನ್ನು ಕಟ್ಟಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ನೀವುಗಳು ಬಂದಿದ್ದೀರಿ. ಈ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ನಮ್ಮ ಬಳಿ ಸಂಪೂರ್ಣವಾದ ಮಾಹಿತಿ ಲಭ್ಯವಾಗಿದೆ. ಆಯವ್ಯಯದಲ್ಲಿ ಹಂಚಿಕೆ ಮಾಡಿರುವ ಅನುದಾನದ ಬಗ್ಗೆ ಪುಸ್ತಕದಲ್ಲಿ ವಿವರಿಸಲಾಗಿದೆ. ಹೀಗಾಗಿ ಅವುಗಳನ್ನೇ ಪುನಃ ಓದಿ ಹೇಳುವ ಕೆಲಸಗಳನ್ನು ನಾನು ಮಾಡುವುದಿಲ್ಲ. ಆ ಪುಸ್ತಕದಲ್ಲಿ ಪ್ರತಿಯೊಂದು ಅಂಶವನ್ನೂ ಸಹ ವಿವರಿಸಲಾಗಿದೆ. ಶ್ರೀ

ಎಸ್.ಎಲ್.ಭೋಜೇಗೌಡರು ಮಾತನಾಡುವ ಸಂದರ್ಭದಲ್ಲಿ ಸಾಕಷ್ಟು ವಿಚಾರಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಿದರು. ಇವುಗಳೆಲ್ಲವೂ ನಿಜವಾಗಿಯೂ ಸಹ ಪ್ರಾಯೋಗಿಕವಾಗಿರುವ ಸಮಸ್ಯೆಗಳಾಗಿವೆ. ಹೀಗಾಗಿ ಇದರ ಬಗ್ಗೆಯೂ ಸಹ ನಾನು ಮಾತನಾಡಲು ಬಯಸುವುದಿಲ್ಲ. ಈ ಬಗ್ಗೆ ಸ್ಪಂದಿಸುವ ಕೆಲಸಗಳಾಗಬೇಕೆಂದು ಸರ್ಕಾರದ ಗಮನಕ್ಕೆ ತರುವ ಕೆಲಸಗಳನ್ನು ಸದಸ್ಯರು ಮಾಡಿದ್ದು, ಇದು ಖಂಡಿತವಾಗಿಯೂ ಸಹ ಸರಿಯಾಗಿದೆ. ಎಲ್ಲಿಯೂ ಸಹ ಸದಸ್ಯರು ಆರೋಪಗಳನ್ನು ಮಾಡಿಲ್ಲ. ಇಂತಹ ಸಮಸ್ಯೆಗಳಿಗೆ ಸರ್ಕಾರವು ಸ್ಪಂದಿಸುವ ಅಗತ್ಯತೆ ಇದೆ ಎನ್ನುವ ಮಾತನ್ನು ಉಲ್ಲೇಖಿಸಿದ್ದಾರೆ. ಇಂತಹ ಎಲ್ಲಾ ಕಾರ್ಯಕ್ರಮಗಳನ್ನು ಸರ್ಕಾರವು ಅನುಷ್ಠಾನಗೊಳಿಸಬೇಕು.

ನಾನು ಪ್ರತಿನಿಧಿಸುವ ಚಿಕ್ಕಮಗಳೂರು ಜಿಲ್ಲೆಗೆ ಹಲವಾರು ಯೋಜನೆಗಳನ್ನು ಘೋಷಿಸಿರುವುದರಿಂದ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಈ ಹಿಂದೆ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಸಾಕಷ್ಟು ಅನುದಾನವನ್ನು ನಮ್ಮ ಜಿಲ್ಲೆಗೆ ನೀಡಿದ್ದರು. ಪ್ರಸಕ್ತ ಸಾಲಿನ ಆಯವ್ಯಯದಲ್ಲಿಯೂ ಸಹ ನಮ್ಮ ಜಿಲ್ಲೆಗೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಯೋಜನೆಗಳನ್ನು ಘೋಷಿಸಿದ್ದಾರೆ. ನಮ್ಮ ಜಿಲ್ಲೆಗೆ ಪ್ರತ್ಯೇಕವಾದ ಹಾಲು ಒಕ್ಕೂಟವನ್ನು ನೀಡಿದ್ದಾರೆ. ಇದರ ಬಗ್ಗೆ ಮಾನ್ಯ ಸದಸ್ಯರು ಆಗಲೇ ಮಾತನಾಡುತ್ತಿದ್ದರು. ಇದು ಬಹು ದಿನದ ಬೇಡಿಕೆ ಮತ್ತು ಹೋರಾಟವಾಗಿದೆ. ಇವತ್ತಿನ ದಿವಸ ಇದನ್ನು ಸರ್ಕಾರ ನಮಗೆ ನೀಡಿದೆ.

ಮುಖ್ಯಮಂತ್ರಿ ಆರೋಗ್ಯ ವಾಹಿನಿ ಯೋಜನೆಯಡಿ ಸಂಚಾರಿ ಕ್ಲಿನಿಕ್‌ಗಳನ್ನು ನಮ್ಮ ಜಿಲ್ಲೆಗೆ ನೀಡಲಾಗಿದೆ. ಬಯಲು ಪ್ರದೇಶಗಳಲ್ಲಿ ಇರುವಂತಹ ವ್ಯವಸ್ಥೆಗಳು ನಮ್ಮ ಭಾಗದಲ್ಲಿ ಇಲ್ಲ. ನಮ್ಮ ಭಾಗದಲ್ಲಿ ಒಂದು ಮನೆಯಿಂದ ಮತ್ತೊಂದು ಮನೆಗೆ ಹೋಗಬೇಕಾದರೆ, ಬಹಳಷ್ಟು ದೂರ ಕ್ರಮಿಸಬೇಕು ಹಾಗೂ ಇವುಗಳು ಕುಗ್ರಾಮಗಳಾಗಿವೆ. ಅಲ್ಲಿ ಸಂಚಾರಿ ವ್ಯವಸ್ಥೆಗಳಿಲ್ಲ; ಅದರಲ್ಲೂ ವಿಶೇಷವಾಗಿ ಮಳೆಗಾಲದಲ್ಲಿ ಈ ಪ್ರದೇಶಗಳಿಗೆ ಭೇಟಿ ನೀಡಲೂ ಸಹ ಸಾಧ್ಯವಿಲ್ಲ; ಏಕೆಂದರೆ ಆಗ ವಿಪರೀತವಾದ ಮಳೆ ಬೀಳುತ್ತಿರುತ್ತದೆ. ಇಂತಹ ಸಂದರ್ಭಗಳಲ್ಲಿ ಈ ಸಂಚಾರಿ ಕ್ಲಿನಿಕ್‌ಗಳ ಅವಶ್ಯಕತೆಯು ಬಹಳಷ್ಟು ಇತ್ತು. ಹೀಗಾಗಿ ಈ ವಾಸ್ತವಾಂಶವನ್ನು ನಾವು ಮನವರಿಕೆ ಮಾಡಿಕೊಟ್ಟಾಗ ನಮಗೆ ಸಂಚಾರಿ ಕ್ಲಿನಿಕ್‌ನ್ನು ನೀಡಿದ್ದಾರೆ. ಈ ವ್ಯವಸ್ಥೆಯು ರಾಜ್ಯದ ಇನ್ನಿತರೆ ಜಿಲ್ಲೆಗಳಲ್ಲಿ ಇತ್ತು. ಕೆಲವು ಸಂದರ್ಭಗಳಲ್ಲಿ ಆರ್ಥಿಕವಾಗಿ ಬಲಾಢ್ಯರಾಗಿರುವವರು ಹಾಗೂ ಸಾಮಾನ್ಯ ಜನರು ಇರುವ ಪ್ರದೇಶಗಳಲ್ಲಿ ವ್ಯವಸ್ಥೆಗಳಾಗಿವೆ. ಈಗಾಗಲೇ ನಮ್ಮ ಭಾಗದಲ್ಲಿ ಒಂದು ಒಳ್ಳೆಯ

ವೈದ್ಯಕೀಯ ಕಾಲೇಜೂ ಸಹ ಸ್ಥಾಪಿತವಾಗುತ್ತಿದೆ. ವೈದ್ಯಕೀಯ ಕಾಲೇಜಿನೊಂದಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನೂ ಸಹ ಮಂಜೂರು ಮಾಡಲಾಗಿದೆ. ಇದರ ಜೊತೆಗೆ ನಾವು ವಾಯು ಮಾರ್ಗದ ಸಂಪರ್ಕ ವ್ಯವಸ್ಥೆಯನ್ನು ಕೋರಿದ್ದೇವೆ. ಈ ವ್ಯವಸ್ಥೆಯನ್ನು ಒದಗಿಸುವ ಕೆಲಸವನ್ನೂ ಸಹ ಇವತ್ತಿನ ದಿವಸ ಸರ್ಕಾರ ಮಾಡಿದೆ.

ಶ್ರದ್ಧಾ ಕೇಂದ್ರಗಳ ಬಗ್ಗೆ ನಾವು ಮಾತನಾಡಿದ್ದೇವೆ. ಮುಳ್ಳಯ್ಯನ ಗಿರಿಯ ದತ್ತ ಪೀಠಕ್ಕೆ ರೋಪ್ ವೇ ಮಾಡಿಕೊಡಬೇಕೆಂದು ನಾವು ಮನವಿ ಮಾಡುತ್ತೇವೆ. ಏಕೆಂದರೆ, ಬೆಂಗಳೂರು ಹಾಗೂ ಇದರ ಸುತ್ತಮುತ್ತಲಿನ ಜನರು ಇವತ್ತಿನ ದಿವಸ ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸ ಕೈಗೊಳ್ಳುತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ಕಸ್ತೂರಿ ರಂಗನ್ ರವರ ವರದಿಯನ್ವಯ ಪಶ್ಚಿಮ ಘಟ್ಟಗಳು, ಚಿಕ್ಕಮಗಳೂರಿನ ಮುಳ್ಳಯ್ಯನ ಗಿರಿ ಮತ್ತು ಬಾಬಾ ಬುಡನ್ ಗಿರಿ ಇವುಗಳನ್ನು ಅತಿ ಸೂಕ್ಷ್ಮ ಪ್ರದೇಶಗಳು ಅಥವಾ eco-sensitive zones ಎಂದು ಈಗಾಗಲೇ ಘೋಷಿಸಲಾಗಿದೆ. ಹೀಗಾಗಿ ಇಲ್ಲಿ ರೋಪ್‌ವೇಗಳನ್ನು ನಿರ್ಮಿಸಲು ಪುನಃ ಸಮಸ್ಯೆಗಳುಂಟಾಗುತ್ತವೆ. ಹೀಗಾಗಿ ಈ ವಿಚಾರವಾಗಿ ನಾನು ಪ್ರಸ್ತಾಪಿಸಬಯಸುತ್ತೇನೆ. Eco-sensitive zones ಎಂದು ಘೋಷಿಸಿರುವ ಸಂದರ್ಭದಲ್ಲಿ ರೋಪ್ ವೇ ಅನ್ನು ಯಾವ ರೀತಿಯಾಗಿ ಹಾಕಲು ಸಾಧ್ಯವಾಗುತ್ತದೆ? ಪರಿಸರವಾದಿಗಳೂ ಸಹ ಇದಕ್ಕೆ ಸಹಮತ ವ್ಯಕ್ತಪಡಿಸುವುದಿಲ್ಲ. ಈ ಕಾರಣದಿಂದಾಗಿ ಸದಸ್ಯರು ಈ ಅಂಶದ ಬಗ್ಗೆ ಬೆಳಕನ್ನು ಚೆಲ್ಲಬೇಕು.

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾವು ಯಾವ ಕಾರಣಕ್ಕಾಗಿ ರೋಪ್ ವೇ ಒತ್ತಾಯಿಸುತ್ತಿದ್ದೇವೆ ಎನ್ನುವುದರ ಹಿನ್ನೆಲೆಯನ್ನು ನಾನು ಹೇಳದೇ, ಕೇವಲ ಉಲ್ಲೇಖ ಮಾತ್ರ ಮಾಡುತ್ತಿದ್ದೇನು. ಆದರೆ ಶ್ರೀ ಎಸ್.ಎಲ್.ಭೋಜೇಗೌಡರು ಈ ಬಗ್ಗೆ ಪ್ರಸ್ತಾಪಿಸಿದರು. ಇಡೀ ರಾಜ್ಯದ ಜನರು, ಬೆಂಗಳೂರು ಹಾಗೂ ಇದರ ಸುತ್ತ-ಮುತ್ತಲಿನ ಎಲ್ಲಾ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇವತ್ತಿನ ದಿವಸ ಚಿಕ್ಕಮಗಳೂರು ಜಿಲ್ಲೆಗೆ ವಾರಾಂತ್ಯದಲ್ಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಆ ಪ್ರದೇಶದಲ್ಲಿನ ಪ್ರಕೃತಿಯನ್ನು ನೋಡಿ, ಆನಂದಿಸಿ, ಅದನ್ನು ಸವಿಯಲು ಸಾಧ್ಯವಾಗುತ್ತಿಲ್ಲ. ಈ ದೃಷ್ಟಿಯಿಂದ ಅಂತಹ ದೃಷ್ಟಿಕೋನವನ್ನಿಟ್ಟುಕೊಂಡು ಪ್ರಸ್ತಾಪ ಮಂಡಿಸಲಾಗಿದೆ. ಪರಿಸರವಾದಿಗಳು ಸಹಜವಾಗಿಯೇ ಎಲ್ಲದನ್ನೂ ವಿರೋಧಿಸುತ್ತಾರೆ

ಎನ್ನುವುದು ನನಗೂ ಹಾಗೂ ಸದಸ್ಯರಿಗೂ ಸಹ ತಿಳಿದಿದೆ. ಎಲ್ಲದ್ದಕ್ಕೂ ಅವರದ್ದೇ ಆದ ಸ್ವಭಾವಗಳಿವೆ. ನಾವೂ ಸಹ ಪ್ರಕೃತಿಯ ಪರವಾಗಿದ್ದು, ಅದನ್ನು ಉಳಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡುವವರಾಗಿದ್ದೇವೆ. ನಾವು ಕಾಫೀ ತೋಟದಲ್ಲಿ ಹುಟ್ಟಿ ಬೆಳೆದು ಬಂದವರಾಗಿದ್ದು, ಕಾಫೀ ಬೆಳೆಗಾರರೂ ಸಹ ಆಗಿದ್ದೇವೆ. ಹೀಗಾಗಿ ಪ್ರಕೃತಿಯನ್ನು ಉಳಿಸುವ ಜವಾಬ್ದಾರಿಯೂ ಸಹ ನಮ್ಮ ಮೇಲಿದೆ. ಈ ದೃಷ್ಟಿಯಿಂದ ನಾನು ಸರ್ಕಾರಕ್ಕೆ ಮನವಿಯನ್ನು ಮಾಡಿದ ಸಂದರ್ಭದಲ್ಲಿ, ಇದಕ್ಕೂ ಸಹ ಸರ್ಕಾರವು ಅವಕಾಶ ಮಾಡಿಕೊಟ್ಟಿದೆ.

ನಮ್ಮ ಭಾಗದಲ್ಲಿ ಆನೆಗಳ ಹಾವಳಿಯು ಹೆಚ್ಚಿನ ಸಂಖ್ಯೆಯಲ್ಲಿದೆ. ನಿನ್ನೆಯ ದಿವಸ ಶ್ರೀಎನ್.ರವಿಕುಮಾರ್ ರವರು ಮಾತನಾಡುವ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ಉಲ್ಲೇಖಿಸಿದರು. ಆಗ ನಾನು ಆ ಭಾಗದಲ್ಲಿನ ಕಾಡು ಪ್ರಾಣಿಗಳ ಸಮಸ್ಯೆಯ ವಿಚಾರವನ್ನು ಪ್ರಸ್ತಾಪಿಸಿದೆನು. ಈ ಸಮಸ್ಯೆಗಳು ಕೇವಲ ನಮಗೆ ಮಾತ್ರವೇ ತಿಳಿದಿದೆಯೆ ಹೊರತು ಬೆಂಗಳೂರು ನಗರ ಪ್ರದೇಶ ನಿವಾಸಿಗಳಿಗೆ ತಿಳಿದಿರುವುದಿಲ್ಲ. ಆ ಭಾಗದಲ್ಲಿನ ಆನೆಗಳ ಹಾವಳಿಯ ಬಗ್ಗೆ ನಾವೇನೂ ಮಾಡುವುದಕ್ಕೆ ಸಾಧ್ಯವಿಲ್ಲ; ಆದರೆ ಅವುಗಳನ್ನು ತಡೆಗಟ್ಟುವ ಪ್ರಯತ್ನಗಳನ್ನಾದರೂ ಸಹ ನಾವು ಮಾಡಬೇಕಲ್ಲವೇ? ಈ ಸಂಗತಿಗಳನ್ನು ಸರ್ಕಾರಕ್ಕೆ ಮನವಿ ಮಾಡಿಕೊಟ್ಟ ಸಂದರ್ಭದಲ್ಲಿ ಸರ್ಕಾರವು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ 100 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ ಹಾಗೂ ಅಲ್ಲಿ ಬ್ಯಾರಿಕೇಡ್‌ಗಳ ನಿರ್ಮಿಸುವ ಕೆಲಸಗಳಾಗಬೇಕು. ಬ್ಯಾರಿಕೇಡ್‌ಗಳನ್ನು ನಿರ್ಮಿಸಿದಾಗ ಆನೆಗಳು ಯಾವುದೇ ರೈತನ ಹೊಲ, ಗದ್ದೆ, ತೋಟ ಇತ್ಯಾದಿಗಳೆಡೆಗೆ ಬಾರದ ರೀತಿಯಲ್ಲಿ ತಡೆಗಟ್ಟುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡುವ ಬಗ್ಗೆ ಸರ್ಕಾರವು ನಮ್ಮ ಜಿಲ್ಲೆಗೆ 100 ಕೋಟಿ ರೂಪಾಯಿಗಳನ್ನು ಮೀಡಲಿಡುವ ಕೆಲಸಗಳನ್ನು ಮಾಡಿದೆ.

ನಮ್ಮ ಜಿಲ್ಲೆಯ ತರಿಕೆರೆ ತಾಲ್ಲೂಕು ವ್ಯಾಪ್ತಿಯಲ್ಲಿ ಬಯಲುಸೀಮೆ ಪ್ರದೇಶಗಳಿವೆ. ಹೀಗಾಗಿ ಅಲ್ಲಿನ ಕೆರೆಗಳನ್ನು ತುಂಬಿಸುವ ಕಾರ್ಯಕ್ರಮಗಳಾಗಬೇಕೆಂದು ನಾನು ಸರ್ಕಾರವು ಒತ್ತಾಯಿಸಿದಾಗ, ಸರ್ಕಾರವು ಕೂಡಲೇ ಸ್ಪಂದಿಸಿತು. ಅಲ್ಲಿ ಭಾರತೀಯ ಜನತಾ ಪಕ್ಷವು ಇದೆ ಹಾಗೂ ಅಲ್ಲಿ ಕೇವಲ ನಮ್ಮ ಪಕ್ಷದವರು ಮಾತ್ರವೇ ಹೋಗುತ್ತಾರೆ ಎನ್ನುವ ಕಾರಣಕ್ಕಾಗಿ ಈ ಎಲ್ಲಾ ರೀತಿಯ ಕೆಲಸಗಳನ್ನು ಮಾಡಿಲ್ಲ. ಈ ಎಲ್ಲಾ ರೀತಿಯ ಕೆಲಸಗಳಿಂದ ಇಡೀ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಅಲ್ಲಿನ ಒಟ್ಟು 79 ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿಗಳಿಗೆ ಸರ್ಕಾರವು 3,000

ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ. ಇಂತಹ ಎಲ್ಲಾ ಮನವಿಗಳಡಿ ಪ್ರಸಕ್ತ ಸಾಲಿನ ಆಯವ್ಯವನ್ನು ಮಂಡಿಸಲಾಗಿದೆ. ರಾಜ್ಯದ ಹಲವಾರು ಯೋಜನೆಗಳ ಬಗ್ಗೆ ಆಯವ್ಯಯದಲ್ಲಿ ಉಲ್ಲೇಖಿಸಲಾಗಿದೆ. ಎಲ್ಲವನ್ನೂ ಉಲ್ಲೇಖಿಸುವಷ್ಟು ಸಮಯವು ನನಗೆ ಇಲ್ಲ. ಎಲ್ಲಾ ಯೋಜನೆಗಳ ಬಗ್ಗೆ ಮಾತನಾಡಲು ನಾನು ಸಿದ್ಧನಾಗಿ ಬಂದಿದ್ದೆನು. ಸಮಯ ಅಭಾವದಿಂದಾಗಿ ಇವುಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಮ್ಮ ಪಕ್ಷದ ಸಾಕಷ್ಟು ಸದಸ್ಯರು ಆಯವ್ಯದ ಮೇಲೆ ಮಾತನಾಡುವವರಿದ್ದಾರೆ.

(ಮುಂದು)

(237)/10-3-2022/1-30/ಎಲ್‌ಎಂ/ಕೆಎಸ್

**ಶ್ರೀ ಎಂ.ಕೆ.ಪ್ರಾಣೇಶ್(ಮುಂದು)**:-

ಇನ್ನು ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ. ಕೆಲವು ಅಂಶಗಳು ಬಜೆಟ್‌ನಲ್ಲಿ ಬಿಟ್ಟುಹೋಗಿವೆ. ಅವುಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ. ಇಂದು ಕಾಫಿ ಬೆಳೆಗಾರರು ತುಂಬಾ ಆರ್ಥಿಕ ಸಂಕಷ್ಟದಲ್ಲಿದ್ದಾರೆ. ನಾವು ಸದೃಢರಾಗಿದ್ದಾಗ ನಮ್ಮ ಕೈಲಾದ ಸಹಾಯವನ್ನು ಮಾಡಿದ್ದೇವೆ. ಈಗ ನಮಗೆ ವಿದ್ಯುತ್ ಸಂಪರ್ಕ ತಂಬಾ ಅವಶ್ಯಕವಾಗಿದೆ. ಮೂರು ತಿಂಗಳವರೆಗೆ ನಮಗೆ ವಿದ್ಯುತ್ ಸಂಪರ್ಕವನ್ನು ನಿರಂತರವಾಗಿ ಕೊಡಿ ಎನ್ನುವ ಅಹವಾಲನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ಇದು ಅಲ್ಲದೆ 10 ಎಚ್‌ಪಿ ಸಾಮರ್ಥ್ಯದ ವಿದ್ಯುತ್ ಹೊಂದಿರುವ ಕಾಫಿ ಬೆಳೆಗಾರರು ಶುಲ್ಕವನ್ನು ಕಟ್ಟುತ್ತಾ ಬಂದಿದ್ದಾರೆ. ಈಗ 10 ಎಚ್‌ಪಿ ಸಾಮರ್ಥ್ಯದ ವಿದ್ಯುತ್ ಸಂಪರ್ಕ ಹೊಂದಿರುವ ಕಾಫಿ ಬೆಳೆಗಾರರಿಗೆ ಶುಲ್ಕದಿಂದ ವಿನಾಯಿತಿ ಕೊಡಿ ಎನ್ನುವ ಅಹವಾಲನ್ನು ಸರ್ಕಾರದ ಮುಂದೆ ಇಟ್ಟಿದ್ದೇವೆ. ಈ ಅಹವಾಲುಗಳನ್ನು ಸರ್ಕಾರ ಸ್ವೀಕಾರ ಮಾಡಿ ಕಾರ್ಯಗತ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಬಜೆಟ್‌ನಿಂದ ಬಿಟ್ಟು ಹೋಗಿರುವ ಕೆಲವು ಅಂಶಗಳನ್ನು ಬಜೆಟ್‌ಲ್ಲಿ ಸೇರಿಸಲು ಇನ್ನು ಕಾಲಾವಕಾಶವಿದೆ.

ಇನ್ನು ಅಕ್ರಮವಾಗಿರುವ ಜಮೀನನ್ನು ಸಕ್ರಮವಾಗಿ ಮಾಡಿಕೊಡಬೇಕು. ಸಣ್ಣ-ಸಣ್ಣ ರೈತರು ಇರುವ ಸ್ವಲ್ಪ ಜಮೀನಿನಲ್ಲಿ ದೊಡ್ಡ-ದೊಡ್ಡ ಮರಗಳನ್ನು ಬೆಳೆಸಿದ್ದಾರೆ. ಅದಕ್ಕಾಗಿ ಅವರಿಗೆ ಸಕ್ರಮ

ಮಾಡಿಕೊಡಬೇಕು. ಅವರಿಗೆ ಉಚಿತವಾಗಿ ಕೊಡುವುದೇನು ಬೇಡ, ಲೀಸ್ ಆಧಾರದ ಮೇಲೆ ಕೊಡಿ. ಸಂಕಷ್ಟದ ಪರಿಸ್ಥಿತಿಯಲ್ಲಿರುವ ಸರ್ಕಾರಕ್ಕೂ ಆದಾಯವಾಗುತ್ತದೆ. ಇಂತಿಷ್ಟು ಹಣ ಎಂದು ನಿಗದಿ ಮಾಡಿ ಲೀಸ್ ಆಧಾರದ ಮೇಲೆ ಕೊಟ್ಟರೆ ಅವರಿಗೂ ಒಳ್ಳೆಯದಾಗುತ್ತದೆ. ಎರಡು-ಮೂರು-ಐದು ಎಕರೆ ಜಮೀನನ್ನು ಹೊಂದಿರುವ ಸಣ್ಣ-ಸಣ್ಣ ಹಿಡುವಳಿದಾರರು ಇದ್ದಾರೆ. ಅವರಿಗೆ ಶಕ್ತಿಗೆ ಅನುಸಾರವಾಗಿ ಹಣವನ್ನು ನಿಗದಿ ಮಾಡಿದರೆ ಅವರು ಕಟ್ಟಿಕೊಂಡು ಹೋಗುತ್ತಾರೆ. ಇದರ ಬಗ್ಗೆಯು ಸರ್ಕಾರ ಗಮನಹರಿಸಿ ಈ ಬಜೆಟ್‌ನಲ್ಲಿ ಸೇರಿಸಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗಾಗಲೇ ಸಾಕಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ದೇಶದ್ರೋಹಿಗಳು ಎನ್ನುವ ಪದವನ್ನು ಬಳಸಲಾಗಿದೆ. ಈ ಹೊರದೇಶದಿಂದ ಬಂದವರು ದೇಶದ್ರೋಹ ಮಾಡಬಹುದು ವಿನಃ ಈ ದೇಶದ ಒಳಗೆ ಇರುವವರು ಯಾರು ದೇಶದ್ರೋಹವನ್ನು ಮಾಡಲು ಸಾಧ್ಯವಿಲ್ಲ. ಎಲ್ಲಿಂದಲೋ ಬಂದವರು ಎಲ್ಲೋ ಅನ್ನವನ್ನು ತಿಂದು, ಎಲ್ಲೋ ನೀರನ್ನು ಕುಡಿಯುತ್ತಾ ಹೋಗುವರಿಗೆ ದೇಶಪ್ರೇಮ ಬರಲು ಸಾಧ್ಯವಿಲ್ಲ. ಈಗ ನನ್ನ ಮನೆಯಲ್ಲಿ ನಾನು ನನ್ನ ತಂದೆ-ತಾಯಿಯವರನ್ನು ತುಂಬಾ ಪ್ರೀತಿ ಮಾಡುತ್ತೇನೆ. ಆದರೆ ನನ್ನ ಮದುವೆಯಾಗಿ ಹೊರಗಿನಿಂದ ಬಂದ ಪತ್ನಿಯಿಂದ ನನ್ನ ರೀತಿಯ ಪ್ರೀತಿಯನ್ನು ನಿರೀಕ್ಷೆ ಮಾಡಲು ಆಗುವುದಿಲ್ಲ. ಅವಳು ನನ್ನ ರೀತಿ ನನ್ನ ತಂದೆ-ತಾಯಿಯವರನ್ನು ಪ್ರೀತಿಸಲು ಸಾಧ್ಯವೇ? ಅದೇ ರೀತಿಯ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಈ ದೇಶದ ಒಳಗೆ ಇರುವವರು ದೇಶವನ್ನು ಆಳಬೇಕು, ಇಂತಹ ಬಜೆಟ್ ಮಂಡಿಸಲು ಈ ದೇಶದಲ್ಲಿ ಹುಟ್ಟಿ ಬೆಳೆದು ಹೋರಾಟ ಮಾಡಿದವರಿಗೆ ಮಾತ್ರ ಸಾಧ್ಯ. ನಮ್ಮನ್ನು ವಿರೋಧ ಮಾಡುವವರು ಯೋಚನೆ ಮಾಡಬೇಕು. ಸಂಸ್ಕೃತಿಯನ್ನು ಕಲಿಯಬೇಕು. ನಾಗಾಪೂರವನ್ನು ಬೇರೆ ಶಬ್ದದಲ್ಲಿ ಬಳಸುವವರು ಕೂಡಾ ಯೋಚನೆಯನ್ನು ಮಾಡಬೇಕಾಗುತ್ತದೆ. ದೇಶ ಮೊದಲು ಎನ್ನುವ ಸಂಸ್ಕೃತಿಯಲ್ಲಿ ನಾವು ಬೆಳೆದವರು. ನಮಗೆ ಕಲಿಸಿರುವುದು, "ಜೀವವನ್ನು ಬಿಟ್ಟೇವು ಆದರೆ ದೇಶವನ್ನು ಬಿಡುವುದಿಲ್ಲ" " ನಾವು ರಾಜಕಾರಣವನ್ನು ಬಿಟ್ಟೇವು ದೇಶವನ್ನು ಬಿಡುವುದಿಲ್ಲ" ನಾವು ರಾಜಕಾರಣದಿಂದ ದೂರ ಸರಿದ್ದೇವು, ದೇಶವನ್ನು ಬಿಡುವುದಿಲ್ಲ" ಈ ದೇಶದಲ್ಲಿಯು ಜನರಿಗೆ ಸಮಸ್ಯೆಗಳು ಬಂದಾಗ ನಮ್ಮ ಜೀವವನ್ನು ಕೊಡಲು ನಾವು ತಯಾರಿದ್ದೇವೆ ಎನ್ನುವಂತಹ ಸಂಸ್ಕೃತಿಯಲ್ಲಿ ಬೆಳೆದಿದ್ದೇವೆ. ಆದ್ದರಿಂದ ಈ ಬಜೆಟ್‌ನ್ನು

ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಬಜೆಟ್‌ನಲ್ಲಿರುವ ಎಲ್ಲ ಅಂಶಗಳು ಕಾರ್ಯಗತವಾಗಬೇಕು ಎನ್ನುವ ಒತ್ತಾಯವನ್ನು ಮಾಡುತ್ತೇನೆ. ಇಲ್ಲಿ ಆಡಳಿತ ಮತ್ತು ವಿರೋಧ ಪಕ್ಷದವರು ಒಟ್ಟಾಗಿ ಸೇರಿ, 2,61,977 ಕೋಟಿ ರೂಪಾಯಿಗಳ ಬಜೆಟ್‌ನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಮಂಡಿಸಿದ್ದಾರೆ. ಅವರಿಗೆ ರಾಜ್ಯದ ಬಗ್ಗೆ ಇರುವ, ಜನಸಾಮಾನ್ಯರ ಮೇಲೆ ಇರುವ ಕಾಳಜಿಯನ್ನು ತೋರಿಸುತ್ತದೆ. ದೇಶದ ಆರ್ಥಿಕ ಮಂತ್ರಿಗಳು ಮಂಡಿಸಿದ ಬಜೆಟ್‌ಗೆ ಇದು ಪೂರಕವಾಗಿ ಸಹಕಾರಿಯಾಗಿದೆ ಎನ್ನುವ ಮಾತನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಸಭಾಪತಿಯವರಿಗೆ ವಂದಿಸಿ  ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಸಾಹೇಬರು ಮಂಡಿಸಿರುವ 2022-23ನೇ ಸಾಲಿನ ಬಜೆಟ್ ನೋಡಿ ನಮಗೆ ತಂಬಿಗೆ ಹಾಲು ಕುಡಿದ ಹಾಗೆ ಆಗಿದೆ. ಏಕೆಂದರೆ ಎರಡು ವರ್ಷಗಳಿಂದ ರಾಜ್ಯ ಕೋವಿಡ್-19ರ  ಸಂಕಷ್ಟಕ್ಕೆ ಸಿಲುಕಿ ತುಂಬಾ ಜನರು ಬಡವರಾಗಿದ್ದಾರೆ. ಆದರೆ ಬಜೆಟ್ ಗಾತ್ರವನ್ನು 7% ಜಾಸ್ತಿ ಮಾಡಿ 2,61,977 ಕೋಟಿ ರೂಪಾಯಿಗಳ ಶ್ರೀಮಂತಿಕೆಯ ಬಜೆಟ್ ಮಂಡಿಸಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. "ಅಣುರೇನು ತೃಣ ಮಾತ್ರ" ಎಂದು ಹೇಳುತ್ತಾರೆ. ಏಕೆಂದರೆ ಯಾವ ಅಂಶವನ್ನು ಬಿಟ್ಟಿರುವುದಿಲ್ಲ. ಅತಳವಿತಳಪಾತಾಳ ಎಲ್ಲಿ ದುರ್ಬೀನ್ ಹಾಕಿ ನೋಡಿದರೂ ಯಾರನ್ನು ಬಿಟ್ಟಿರುವುದಿಲ್ಲ. ಎಲರೂ ಬೆನ್ನು ತಟ್ಟಿ ಭೇಷ್ ಅನ್ನಬೇಕು ಅಂತಹ ಬಜೆಟ್ ಮಂಡಿಸಿದ್ದಾರೆ. ಆದರೆ ಅದನ್ನು ಬಿಚ್ಚಿ ನೋಡುತ್ತಾ ಹೋದರೆ, "ಬರಿ ಕೈ ಕ್ಯಾಬಿ ನಹಿ" ಇದು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರ ವಿಶ್ವರೂಪ ಎಂದು ಹೇಳಬಹುದು. ಮಾನ್ಯ ಬೊಮ್ಮಾಯಿಯವರು ವೃತಿಪರರಾಗಿ ಇಂಜಿನೀಯರ್. ಅವರಿಗೆ ತಂತ್ರಗಾರಿಕೆಯ ಕಲಾಗಾರಿಕೆ ಓದಿನಿಂದಲೇ ಇದೆ. ಅದರ ಜೊತೆಗೆ ಮಂತ್ರಜ್ಞಾನವನ್ನು ಸೇರಿಸಿಕೊಂಡು ಈ ಬಜೆಟ್‌ನ್ನು ಕೊಟ್ಟಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಬಜೆಟ್ ಎಂದು ಹೇಳುವುದೇ ಒಂದು ಕಗ್ಗಂಟು ಎಲ್ಲೇಲ್ಲಿ ಏನು ಹುಡುಕಬೇಕು ಎನ್ನುವುದು ಯಾರಿಗೂ ಗೊತ್ತಾಗುವುದಿಲ್ಲ. ಕಳೆದ ಬಾರಿ ಬಜೆಟ್ ಮೇಲೆ ಮಾತನಾಡುವಾಗ ಹೋದ ವರ್ಷ ಮಂಡಿಸಿರುವ ಬಜೆಟ್‌ನಲ್ಲಿ ಏನೇನು ಘೋಷಣೆ ಮಾಡಲಾಗಿದೆ,

ಅದರಲ್ಲಿ ಎಷ್ಟು implement ಆಗಿವೆ, ಏಕೆ ಆಗಿಲ್ಲ, ಇನ್ನು ಮುಂದೆ ನಾವು ಏನು ಮಾಡಬೇಕು ಎನ್ನುವುದನ್ನು ಮೊದಲು ಹೇಳಬೇಕು ಎಂದು ಹೇಳಿದ್ದೆವು. Action taken report ಕುರಿತು ಹೇಳುತ್ತಿದ್ದರು, ಆದರೆ ಅದು ಸಹ ಆಗಿರುವುದಿಲ್ಲ. ಹೋದ ವರ್ಷದ ಪುಸ್ತಕ ಹೋದ ವರ್ಷಕ್ಕೆ, ಈ ವರ್ಷಕ್ಕೆ ಹೊಸ ಪುಸ್ತಕ ಎಂದು ಹೇಳುತ್ತಾರೆ. ಹಿಂದಿನ ಬಜೆಟ್ ಘೋಷಣೆಗಳು ಕಾರ್ಯಗತವಾಗಿವೆಯೇ? ನಮ್ಮ ಸ್ನೇಹಿತರು ನಮ್ಮನ್ನು ದೂಷಣೆ ಮಾಡುತ್ತಿದ್ದಾರೆ ಎಂದು ಹೇಳಿದರು. ಚೆನ್ನಾಗಿ ಬಜೆಟ್ ಕೊಟ್ಟಿದ್ದಾರೆ, ಚೆನ್ನಾಗಿದೆ ಎಂದು ಹೇಳಿದ್ದೇವೆ. ಅದನ್ನು ದೂಷಣೆ ಎಂದು ಏಕೆ ತಿಳಿದುಕೊಳ್ಳಬೇಕು? ಯಾವಾಗಲೂ positive ಆಗಿ ತೆಗೆದುಕೊಳ್ಳಿ 'ಅಂದರಕಿ ಮಂಚಿವಾಡು ಅನಂತಯ್ಯ' ಎಂದು ಹೇಳಿ ಯಾರಿಗೂ ಏನು ಕೊಡದೆ ಪ್ರಯೋಜನ ಏನು ಸ್ವಾಮಿ? ಮಾನ್ಯ ಮುಖ್ಯಮಂತ್ರಿಗಳದ್ದು ಇನ್ನು probationary period ಈಗಾಗಲೇ ಅವರ ಸೀಟ್‌ಗೆ ಕೆಲವರು ಟವಲ್ ಹಾಕಿದ್ದಾರೆ. ಅವರು ಇವರನ್ನು ನೋಡಿಕೊಳ್ಳಬೇಕು. ದೆಹಲಿಯವರು ಇವರು ಇದ್ದಾರೊ ಇಲ್ಲವೊ ಎಂದು ಕಣ್ಣು ಬಿಟ್ಟು ನೋಡಬೇಕು. ಇಂತಹ ಪರಿಸ್ಥಿತಿಯಲ್ಲಿ ಬಜೆಟ್ ಬಂದಿದೆ. ಇದು ಬಜೆಟ್ ಅಲ್ಲ, ಮುಂದಿನ ವರ್ಷದ ಚುನಾವಣೆಯ ಪ್ರಣಾಳಿಕೆ ಎಂದು ಹೇಳಿದರೆ ತಪ್ಪಾಗಲಾರದು. ಇವರು ಐದು ವರ್ಷದ ಹಿಂದೆ ಚುನಾವಣೆಯ ಸಮಯದಲ್ಲಿ ಹಾಕಿಕೊಂಡ ಪ್ರಣಾಳಿಕೆಯನ್ನು ಬಿಟ್ಟುಬಿಟ್ಟಿದ್ದಾರೆ. ನನಗೆ ಗೊತ್ತಿರುವ ಹಾಗೆ ಅದರಲ್ಲಿ 10% ಕೂಡಾ implement ಆಗಿರುವುದಿಲ್ಲ. ಇದರಲ್ಲಿ ತಪ್ಪಿದ್ದರೆ ಜ್ಞಾನವಂತರು ಸರಿ ಮಾಡಿ ಹೇಳಬಹುದು. ಮಾನ್ಯ ಸ್ನೇಹಿತರಾದ ಶ್ರೀ ಪ್ರಾಣೇಶ್‌ರವರು ಎಲ್ಲವು ಕಾರ್ಯಗತವಾಗಿದೆ ಎಂದು ಹೇಳುತ್ತಿದ್ದರು. ಹಾಗಿದ್ದರೆ 2018 ರಿಂದ 2023ರವರೆಗಿನ 5 ವರ್ಷಗಳ ಬಜೆಟ್ ತೆಗೆದು ನೋಡಿ. ಯಾವಾಗಲೂ surplus budget. ಮಾನ್ಯ ಸಿದ್ಧರಾಮಯ್ಯವರ ಅವಧಿಯಲ್ಲಿಯು ಸಾಲ ಮಾಡಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದ ಹಿಡಿದು ಮಾನ್ಯ ಸಿದ್ಧರಾಮಯ್ಯನವರ ಮಂಡಿಸಿರುವ ಬಜೆಟ್‌ವರೆಗೆ 2.42.000 ಕೋಟಿ ರೂಪಾಯಿಗಳ ಸಾಲವನ್ನು ಮಾಡಲಾಗಿದೆ. ಈಗ ಮೂರು ವರ್ಷದಲ್ಲಿ 5 ಲಕ್ಷ ಕೋಟಿಗೆ ಸಾಲ ಹೋಗುತ್ತಿದೆ. ಸಾಲ ಮಾಡಿ ಏನಾದರೂ assets create ಮಾಡಿದ್ದಾರೆಯೇ ಇಲ್ಲ. ಈ ವರ್ಷ 40,000 ಕೋಟಿ ರೂಪಾಯಿಗಳು ಅಸಲು ಮತ್ತು ಬಡ್ಡಿಗೆ ಹೋಗುತ್ತದೆ. Committed expenditure ನಲ್ಲಿ ಸಂಬಳ, ಪಿಂಚಣಿ ಎಲ್ಲ ಕಳೆದು ಎಷ್ಟು ಉಳಿಯುತ್ತದೆ? 72,000 ಕೋಟಿ ರೂಪಾಯಿಗಳ ಸಾಲ ಮಾಡಿದರೆ, 48,000

“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಕೋಟಿ ರೂಪಾಯಿಗಳ assets create ಮಾಡಲಾಗುತ್ತದೆ. ಸಾಲ ಮಾಡಿ ಹೋಳಗೆ ತಿನ್ನುವುದಕ್ಕೆ ಇವರು ಅವಕಾಶ ಮಾಡಿಕೊಡುತ್ತಿದ್ದಾರೆ. ಮಾನ್ಯ ಪ್ರಧಾನ ಮಂತ್ರಿಗಳಾದ ಮೋದಿಯವರು ಹಾಗೆ ಮಾಡಿದ್ದಾರೆ ಹೀಗೆ ಮಾಡಿದ್ದಾರೆ, ಎಂದು ಎಲ್ಲವನ್ನು ಹೇಳಿದರು. ಆದರೆ ನಾವೇನು ಮಾನ್ಯ ಮೋದಿಯವರ ವಿರೋಧಿಗಳಾ? ಮಾನ್ಯ ಮೋದಿಯವರು ಸಹ ಈ ಭಾರತ ದೇಶದ ಪ್ರಜೆಗಳೆ.

…..(ಮುಂದು)

(238)10-03-2022(01-40)bsd-gr

**ಶ್ರೀ ಯು.ಬಿ. ವೆಂಕಟೇಶ್ (ಮುಂದು)**

ನಮ್ಮಲ್ಲಿ ಸಂವಿಧಾನಾತ್ಮಕವಾಗಿ ನಡೆದುಕೊಂಡು ಬಂದಿದ್ದಕ್ಕೆ ಮೋದಿರವರು ಪ್ರಧಾನ ಮಂತ್ರಿಯಾಗಿದ್ದಾರೆ. ಇಲ್ಲದಿದ್ದರೆ ಅವರು ಆ seat ಗೆ ಹೇಗೆ ಹೋಗುತ್ತಿದ್ದರು? ನಾವು ಸಂವಿಧಾನವನ್ನು ರಕ್ಷಣೆ ಮಾಡಿದ್ದೇವೆ. ಅವರು ಸಂವಿಧಾನವನ್ನು ಮುಗಿಸುವುದಕ್ಕೆ ಹೊರಟಿದ್ದಾರೆ. ಏನು ಮಾಡಬೇಕೋ ಅದನ್ನು ಬಿಟ್ಟು ಜನರ ಹತ್ತಿರ vote ತೆಗೆದುಕೊಳ್ಳುವುದಕ್ಕೆ ….. ಅವರು development ಕೆಲಸಗಳನ್ನು ಮಾಡುವುದಿಲ್ಲ, ಭಾವನಾತ್ಮಕವಾಗಿ ಜನರ ಮುಂದೆ ವಿಷಯ ಇಡುತ್ತಾರೆ. Development ಗಾಗಿ ಎತ್ತಿನಹೊಳೆಯ ಹೂಳು ತೆಗೆಯುವ ಬಗ್ಗೆ ಹೇಳುತ್ತಾರೆ.

**ಶ್ರೀ ಆಯನೂರು ಮಂಜುನಾಥ:-** ಮಾನ್ಯ ಸಭಾಪತಿಯವರೇ, ಸಂವಿಧಾನವನ್ನು ಅವರು ಯಾವಾಗ…..

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು yield ಆಗಿಲ್ಲ, ನಾವು ಮಾನ್ಯ ಪ್ರಾಣೇಶ್‌ರವರು ಮಾತನಾಡುವಾಗ ಒಬ್ಬರೂ ಎದ್ದು ನಿಲ್ಲಲಿಲ್ಲ. ನಾನು ಮಾನ್ಯ ಸಭಾನಾಯಕರಲ್ಲಿ ಕೇಳಿಕೊಳ್ಳುತ್ತೇನೆ.

**ವೈಸ್ ಚೇರ್ಮನ್:-** ನೀವು yield ಆಗದಿದ್ದರೆ ಅವರು ಮಾತನಾಡುವುದಿಲ್ಲ. ತಾವು ಮುಂದುವರೆಸಿ.

**ಶ್ರೀ ಯು.ಬಿ. ವೆಂಕಟೇಶ್:-** ನಾವು ಮಾನ್ಯ ಪ್ರಾಣೇಶ್‌ರವರು ಮಾತನಾಡುವಾಗ ಒಬ್ಬರೂ ಎದ್ದು ನಿಲ್ಲಲಿಲ್ಲ. ಅದಕ್ಕೆ ಅವರು respect ಕೊಡಬೇಕು. ಮಾನ್ಯ ಸಭಾನಾಯಕರಿಗೆ ಹೇಳುತ್ತಿದ್ದೇನೆ. ಇಲ್ಲದಿದ್ದರೆ ಅವರು ಮಾತನಾಡುವಾಗ ನಾವು ಮಾತನಾಡುವುದಕ್ಕೆ ಕೊಡುವುದಿಲ್ಲ.

VICE CHAIRMAN:- Don't be excited. Please continue.

**ಶ್ರೀ ಯು.ಬಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಪ್ರತಿ ಬಾರಿ ಮಾತನಾಡುವಾಗ ಅವರಿಗೆ ಮಧ್ಯೆ ಮಾತನಾಡಿದಿದ್ದರೆ ಆಗುವುದಿಲ್ಲ. ಅವರು ಸಾಧನೆ ಮಾಡಲಿ, ಅವರ ಕೈಯಲ್ಲಿ ಅಧಿಕಾರ ಕೊಟ್ಟಿದ್ದಾರೆ. ಅವರು ಪೂರ್ತಿ ಗೆದ್ದ ಸರ್ಕಾರವಾಗಿ ಬರಲಿಲ್ಲ. ನೈತಿಕವಾದ ಸರ್ಕಾರವಾಗಿ ಬಂದಿದ್ದಾರೆ. ಏಕೆಂದರೆ ಅನೈತಿಕ ಎಂದರೆ ಅವರಿಗೆ ಬೇಜಾರಾಗುತ್ತದೆ. ಮೂರು ವರ್ಷದಿಂದ ರಾಜ್ಯಭಾರ ಮಾಡುತ್ತಿದ್ದಾರೆ. ಪ್ರಧಾನ ಮಂತ್ರಿಯವರು ಈ ದೇಶವನ್ನು ಮಾರುತ್ತಿದ್ದಾರೆ. ನಮ್ಮಲ್ಲಿ 63 Public Sector Undertakings ಗಳಿದ್ದು, 23 Public Sector Undertakings ಅನ್ನು already ಮಾರಿಕೊಂಡು ಜೀವನ ಮಾಡುತ್ತಿದ್ದಾರೆ. ಮಾನ್ಯ ಮನಮೋಹನ್ ಸಿಂಗ್ ರವರ 10 ವರ್ಷಗಳ ಕಾಲದಲ್ಲಿ ರೂ.2 ಲಕ್ಷ ಕೋಟಿ ರೈತರ ಸಾಲ ಮತ್ತು ಇತ್ಯಾದಿಗಳನ್ನು ವಜಾ ಮಾಡಿದ್ದರು. ಅವರು businessmen ಗಳ ರೂ.11 ಲಕ್ಷ ಕೋಟಿ ಸಾಲವನ್ನು 7 ವರ್ಷಗಳಲ್ಲಿ ವಜಾ ಮಾಡಿದ್ದಾರೆ. ಇದು ಅವರ ನಡೆತೆಯೇ? ದೇಶಕ್ಕೆ ಬುದ್ಧಿ ಹೇಳುವವರು ಮಾಡುವ ಕೆಲಸವೇ? ಅವರಿಗೆ mandate ಬಂದಿದೆ ಎಂದರೆ mandate ಬರುವುದು ಬೇರೆ ವಿಚಾರ. Mandate ಬಂದಿದೆ ಎಂದು ಜನರನ್ನು ಸಾಯಿಸಬೇಕೆ? ಅವರು ಅಧಿಕಾರಕ್ಕೆ ಬಂದ ನಂತರದಿಂದ ಇವತ್ತು23% ನಿರುದ್ಯೋಗ ಇದೆ. ಒಂದು ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡುತ್ತೇವೆ, ಒಬ್ಬರಿಗೆ ರೂ.15 ಲಕ್ಷ ಹಾಕುತ್ತೇವೆ ಎಂದೆಲ್ಲಾ ಹೇಳಿದರು. ಏನಾದರೂ ಸಾಧನೆ ಮಾಡಿ ನಂತರ ಹೇಳಬೇಕು. ಕೇವಲ ಸುಳ್ಳು ಹೇಳುವುದು. Budget ನಲ್ಲಿ ಒಂದು ಎಕರೆಗೆ ರೂ.250 ಗಳನ್ನು petrol and diesel ಗೆ ಎಂದು ಕೊಟ್ಟಿದ್ದು, ಒಂದು litre petrol ಬೆಲೆ ಎಷ್ಟಿದೆ? ನೂರು ರೂಪಾಯಿ ಅಥವಾ ನೂರಾ ಇಪ್ಪತ್ತು ರೂಪಾಯಿ ಇದೆಯಾ? ಇವತ್ತು ನಾಳೆಗೆ ನೂರಾ ಐವತ್ತು ರೂಪಾಯಿಗಳಾಗುತ್ತದೆ. ಒಬ್ಬ ರೈತನಿಗೆ ಒಂದು ಎಕರೆಗೆ ಒಂದು litre ಎರಡು litre petrol -- ಕೊಡಬೇಕೆ? ಇದೊಂದು ಘೋಷಣೆಯೇ? ಇಂತಹದ್ದಕ್ಕೆ ಬಜೆಟ್

ಮಂಡಿಸಬೇಕೆ? ಕಳೆದ ವರ್ಷದಲ್ಲಿ ಕ್ರಮ ಸಂಖ್ಯೆ 57 ರಲ್ಲಿ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರಿಗೆ ಕಾರ್ಯಕ್ರಮ ನಡೆಸಲಾಗುವುದು, 58 ನೇ Item ನಲ್ಲಿ ಸಮಿತಿ ರಚಿಸಲಾಗಿದೆ, 60ನೇ Item ಪರಿಶೀಲನೆಯಲ್ಲಿದೆ, 65 ನೇ Item ಅನುಮೋದನೆ ಪಡೆಯಲಾಗುತ್ತದೆ, ಈ ರೀತಿ ಏಕೆ ಮಂಡಿಸುತ್ತಾರೆ? ಮುಂದಿನ ವರ್ಷ ಕೆಲಸ ಮಾಡಬೇಕು ಎಂದು ಹೇಳಿ ಇನ್ನೂವರೆಗೆ ಅನುಷ್ಠಾನವಾಗದಿದ್ದರೆ ಹೇಗೆ? ಇದಲ್ಲದೇ ಚಾಮರಾಜ ನಗರದಲ್ಲಿ ಅರಿಶಿನ ಮಾರುಕಟ್ಟೆಯನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದು Item No.83ರ ಹೋದ ವರ್ಷದ ಯೋಜನೆಯನ್ನು ಕೈಬಿಡಲಾಗಿದೆ. ಇದನ್ನು ಏಕೆ announce ಮಾಡಬೇಕಾಗಿತ್ತು? ಯಾರಾದರೂ ಬಲವಂತ ಮಾಡಿದ್ದರೇ? ಈ ರೀತಿ 50 Item ಗಳಿವೆ. ನಾವು ಒಂದತ್ತು ಹೇಳುತ್ತೇನೆ. ತುಂಗಭದ್ರಾ ಜಲಾಶಯದ ಹೂಳಿನ ಬಗ್ಗೆ ಯೋಜನಾ ಕಾರ್ಯ ಪ್ರಗತಿಯಲ್ಲಿದ್ದು, ತೆಲಂಗಾಣ ಮತ್ತು ಆಂಧ್ರ ಪ್ರದೇಶಗಳೊಂದಿಗೆ ಸಮಾಲೋಚಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದು Item No.90 ರಲ್ಲಿ ಇದೆ. ಮಾನ್ಯ ಸಭಾಪತಿಯವರೇ, ನಾವು ಮೇಕೆದಾಟು ಯೋಜನೆಗಾಗಿ ಪಾದಯಾತ್ರೆ ಮಾಡಿದೆವು ಎಂದು ಅವರಿಗೆ ಹೊಟ್ಟೆ ಹುರಿ ಬಂದು, ತಡೆದುಕೊಳ್ಳುವುದಕ್ಕೆ ಆಗದೇ, ನಮಗೆ ಜನ ಬೆಂಬಲ ಬರುತ್ತದೆ ಎಂದು ರೂ.1,000 ಕೋಟಿ ಹಣ ಇಟ್ಟಿದ್ದಾರೆ. ನಾವು ನೂರ್ಕಾಲ ಮಾನ್ಯ ಬೊಮ್ಮಾಯಿಯವರ ಸರ್ಕಾರ ಇರಲಿ ಎಂದು ಹೇಳುತ್ತೇವೆ, ನೀರು ಕೊಡಿಸಲಿ, ಸಾವಿರ ಕೋಟಿ ಇಡುತ್ತಾರೆ. ಅವರದ್ದೇ Double Engine ಸರ್ಕಾರವಾಗಿದೆ. ಅಲ್ಲಿ ಒಂದು Environment Clearance ತರುವುದಕ್ಕೆ ಆಗಲಿಲ್ಲ ಎಂದರೆ ಹೇಗೆ? 25 ಜನ Member of Parliament ಗಳಿದ್ದಾರೆ. – All-Party Member ಗಳನ್ನು ಕರೆದುಕೊಂಡು ಹೋಗಲಿ, ಯಾವುದಾದರೂ ಒಂದು delegation ಅನ್ನು ಕರೆದುಕೊಂಡು ಹೋಗಲಿ. ಅವರು ಹೇಳಿದ್ದನ್ನೇ ರಾಜ್ಯವು ಕೇಳಬೇಕು ಎನ್ನಲು ಅವರೇನು ಚಕ್ರಾಧಿಪತಿಗಳೇ? Annual Report ಅನ್ನು ಈಗಾಗಲೇ ಕಳುಹಿಸಿದ್ದು, Annual Report ನಲ್ಲಿ ಹೇಳಿರುವುದು correct? ಅಥವಾ Budget ನಲ್ಲಿ ಹೇಳಿರುವುದು correct ಆಗಿದೆಯೇ ಎಂದು ಸರ್ಕಾರದಿಂದ clarification ಮಾಡಿಸಬೇಕು. Annual Report ನಲ್ಲಿ 2021-22 ರಲ್ಲಿ 2.96 ಲಕ್ಷ ಮನೆಗಳನ್ನು ಕಟ್ಟಿರುವ ಬಗ್ಗೆ ಹೇಳಿದ್ದು, 2022-23 ರಲ್ಲಿ ಇನ್ನೂ 3 ಲಕ್ಷ ಮನೆ ಕಟ್ಟುವ ಬಗ್ಗೆ ಹೇಳುತ್ತಾರೆ. ಆದರೆ Annual Report ನಲ್ಲಿ

ಕೇವಲ 1.14 ಲಕ್ಷ ಮನೆಗಳು complete ಆಗಿವೆ ಎಂದು report ಕಳುಹಿಸುತ್ತಾರೆ. ನಾನು ಯಾವುದನ್ನು ನಿಜ ಎಂದು ನಂಬಬೇಕು? ಎಲ್ಲಾ figures ಗಳನ್ನು ಸರ್ಕಾರವೇ ಕೊಡುವುದಲ್ಲವೇ? One plus one is two. ಹೇಗೆ ಕೊಟ್ಟರೂ ಒಂದೇ figure ಕೊಡಬೇಕಲ್ಲವೇ? ಇಲ್ಲೊಂದು ಅಲ್ಲೊಂದು ಏಕೆ ಕೊಡುತ್ತಾರೆ? ಹೇಳುವುದೊಂದು ಮತ್ತು ಮಾಡುವುದೊಂದು ಆಗಿದೆ. ಇದಲ್ಲದೇ ನೀತಿ ಬಗ್ಗೆ ಹೇಳುತ್ತಾರೆ. ಮಾನ್ಯ ಗೃಹ ಮಂತ್ರಿಗಳು ಸದನದಲ್ಲಿ ಇದ್ದು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಪರಿಸ್ಥಿತಿ ಎಲ್ಲಿಗೆ ಹೋಗಿದೆ? Order under Section 144, I.P.C., ಹಾಕಿದರೆ ಏನು ಮಾಡಬೇಕು? ಆಗ 5 ಜನರ ಮೇಲೆ ಯಾರೂ ಸೇರಬಾರದು. ಮಂತ್ರಿಗಳು ಸರ್ಕಾರದ ಭಾಗವಾಗಿ ಸರ್ಕಾರ ಎಂದರೆ ಮಂತ್ರಿಗಳು, ಮಂತ್ರಿಗಳು ಎಂದರೆ ಸರ್ಕಾರ ಆಗಿರುತ್ತದೆ. ಮಂತ್ರಿಗಳು dead body ಜೊತೆ procession ಹೋಗುತ್ತಾರೆಂದಾಗ ಸರ್ಕಾರಕ್ಕೆ ಬದ್ಧತೆ ಇದೆಯೇ? ಮಾನ್ಯ ಗೃಹ ಮಂತ್ರಿಗಳು ಅವರ ಮೇಲೆ ಏಕೆ case ಹಾಕಲಿಲ್ಲ? ನಾವು ಪಾದಯಾತ್ರೆಯಲ್ಲಿ ನಡೆಯುವಾಗ ನಮ್ಮ ಮೇಲೆ case ಹಾಕುತ್ತಾರೆ., ಶ್ರೀ ಮಲ್ಲಿಕಾರ್ಜುನ ಖರ್ಗೆ, ಶ್ರೀ ಡಿ.ಕೆ. ಶಿವಕುಮಾರ್, ಶ್ರೀ ಸಿದ್ದರಾಮಯ್ಯನಂತಹವರ ಮೇಲೆ case ಹಾಕುತ್ತಾರೆ, ಆದರೆ ಮಾನ್ಯ ಈಶ್ವರಪ್ಪನವರ ಮೇಲೆ ಏಕೆ case ಹಾಕಲಿಲ್ಲ? ಒಬ್ಬರು ಗಣಪತಿ ಎನ್ನುವವರು ಕೊಡಗಿನಲ್ಲಿ ಸತ್ತಾಗ ಮಾನ್ಯ ಮಂತ್ರಿಗಳಾಗಿದ್ದ ಜಾರ್ಜ್‌ರವರು ರಾಜೀನಾಮೆ ಕೊಡುವವರೆಗೂ ಅವರು ಬಿಡಲಿಲ್ಲ. ನಾವುಗಳೇ murder ಮಾಡಿದ್ದೇವೆನೋ ಎನ್ನುವಂತೆ ಮಾಡಿದರು. ಆದರೆ ಈ case ನಲ್ಲಿ ಅವರದ್ದೇ ಪಕ್ಷದ ರಾಷ್ಟ್ರಾಧ್ಯಕ್ಷರು ಹೇಳಿದರೂ action ತೆಗೆದುಕೊಳ್ಳಲಿಲ್ಲ ಎಂದಾಗ ಅವರ ಬದ್ಧತೆ ಏನಿದೆ? ಯಾವಾಗಲೂ ಒಂದೇ ಇರುವುದಿಲ್ಲ. ಮಾನ್ಯ ಭೋಜೇಗೌಡರು ಬೇಡದೇ ಇರುವಾಗ ಒಂದೊಂದು ಹಾಡು ಹಾಡುತ್ತಾರೆ, ಅದು ಹೀಗೆ, ಮುನಿಸು ಮನವೆ ಎಂದೆಲ್ಲಾ ಹಾಡು ಹಾಡುತ್ತಾರೆ. ಅವರು ಈ ಸಾವು ನ್ಯಾಯವೇ ಎಂದು ಒಂದು ಹಾಡನ್ನು ಹಾಡಬೇಕಾಗಿತ್ತು. ಮಾನ್ಯ ಧರ್ಮೇಗೌಡರಿಗೆ ಹೆಚ್ಚು-ಕಡಿಮೆಯಾದಾಗ ಈ ಸಾವು ನ್ಯಾಯವೇ ಎಂದು ಒಂದು ಹಾಡನ್ನು ಹಾಡಬೇಕಾಗಿತ್ತು. ಆ ಕೆಲಸ ಅವರು ಮಾಡಲಿಲ್ಲ.

**ವೈಸ್ ಚೇರ್ಮನ್:-** ನೀವು tempt ಮಾಡಿದರೆ ಈಗಲೂ ಹಾಡಿಬಿಡುತ್ತಾರೆ.

**ಶ್ರೀ ಯು.ಬಿ. ವೆಂಕಟೇಶ್:-** ನಾನು ಹಾಡಿಸುವಾಗ ಹಾಡಿಸುತ್ತೇನೆ, ಅವರು ಯಾವುದಕ್ಕೆ ಹಾಡು ಹಾಡಬೇಕೋ ಅದಕ್ಕೆ ಹಾಡುವುದಿಲ್ಲ. ಬೇರೆಯದ್ದಕ್ಕೆ ಹೇಳುತ್ತಾರೆ, ಸೀತೆ ವಿಚಾರ ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ನಾನು law and order ಬಗ್ಗೆ ಹೇಳುತ್ತಿದ್ದು, ಧಾರವಾಡದಲ್ಲಿ ಒಬ್ಬ S.P., ರವರುಗಳು ಸಂವಿಧಾನದ ಪೀಠದಲ್ಲಿರುವವರ ಮೇಲೆ ರಾತ್ರೋರಾತ್ರಿ case book ಮಾಡುತ್ತಾರೆ. ಸರ್ಕಾರವು suo moto ಏನಾದರೂ action ತೆಗೆದುಕೊಳ್ಳಬೇಕಲ್ಲವೇ? ಅವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲವೇ? ಮಾನ್ಯ ಸಭಾಪತಿಯವರ ಮೇಲೆ case ಹಾಕಲು Governor ಹತ್ತಿರ permission ತೆಗೆದುಕೊಳ್ಳಬೇಕು. Spot ನಲ್ಲಾದರೂ ಇರಬೇಕು. ಊರಿನಲ್ಲಿ ಇಲ್ಲದೇ ಇರುವವರ ಮೇಲೆ ಇಲಾಖೆಯವರು case ಹಾಕುತ್ತಾರೆ ಎಂದಾಗ ಇದು ಯಾವ ಅಧಿಕಾರ? ಅವರು ಏನು ಮಾಡುತ್ತಿದ್ದಾರೆ? ಏಕೆ? ಏನಾಗಿದೆ ಅವರಿಗೆ? ಅಧಿಕಾರಿಗಳು ಮಾತು ಕೇಳುವುದಿಲ್ಲವೇ? ಇದೆಲ್ಲವನ್ನೂ ನಾನು ಹೇಳಬಾರದು. ಈಗ Budget ಬಗ್ಗೆ ಮಾತನಾಡೋಣ. ಈಗ G.S.T., ಜೂನ್‌ಗೆ ಮುಗಿಯುವುದಿದ್ದು, ಇನ್ನೂ ೩ ವರ್ಷ ಮುಂದುವರೆಸುತ್ತಾರೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಾರೆ, ಆದರೆ ಅದು ಬರುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ as on today, ಜೂನ್ ೩೦ ಕ್ಕೆ G.S.T., compensation ಕೊಡುವುದು ಮುಗಿದುಹೋಗುತ್ತದೆ. ರೂ.5 ಕೋಟಿ ಮಾತ್ರ ಈ ವರ್ಷ ಬರುವುದಿದ್ದು, ಇನ್ನೂ Cess ಬರಬೇಕು. ಆದರೆ Cess ಅವರಿಗೆ ಬರುವುದಿಲ್ಲ. Already ಸಾಲ ಎಂದು ಕೊಟ್ಟಿದ್ದು, ಅದರ ಭಾಗಕ್ಕೆ ತೆಗೆದುಕೊಂಡು ಹೋಗುತ್ತಾರೆ. ನೈತಿಕತೆ ಬಗ್ಗೆ ನಮಗೆ ಪಾಠ ಮಾಡಿ ಮಂತ್ರಿಗಳು ನ್ಯಾಯಾಲಯಗಳಿಂದ ತಡೆಯಾಜ್ಞೆ ತೆಗೆದುಕೊಳ್ಳುತ್ತಾರೆ. ಇಂತಹ ಪರಿಸ್ಥಿತಿ ಎಲ್ಲಾದರೂ ಕೇಳಿದ್ದೀರಾ? ರಾಜ ಪ್ರಜೆಗಳಿಗೆ ಮಾದರಿಯಾಗಿರಬೇಕು. ರಾಜನೇ Court ಗೆ ಹೋಗಿ ಆತನ ಬಗ್ಗೆ ತಡೆಯಾಜ್ಞೆ ತಂದಾಗ ನಾವು ಯಾರಿಗೆ ಹೇಳಬೇಕು?

ಇನ್ನು 2-3 ವರ್ಷಗಳಿಂದ ಕೋವಿಡ್‌ನಲ್ಲಿಯೇ ಹೋದೆವು. ಅವರು ಖರ್ಚು ಮಾಡಿರುವ ಹಣದಲ್ಲಿ infrastructure create ಮಾಡಿದ್ದರೆ ಇನ್ನೂ 10 ವರ್ಷಗಳ ಕಾಲ ಬೇರೆ ಬೇರೆ ಆಸ್ಪತ್ರೆಗಳು ಆಗುತ್ತಿದ್ದವು. Bangalore International Exhibition Centre ನಲ್ಲಿ 10,000

bed ಗಳ ಒಂದು ಆಸ್ಪತ್ರೆಯನ್ನು ಮಾಡಿ, 3 ತಿಂಗಳಿಗೆ dismantle ಮಾಡಿದರು. ಆ ಮಂಚ, ಇತರ ಸಾಮಗ್ರಿಗಳನ್ನು ಯಾವುದಾದರೂ hostel ಗಳಿಗೆ ಕೊಡಬಹುದಿತ್ತು. ಅವುಗಳನ್ನು ಕೋವಿಡ್‌ನಿಂದಾಗಿ ಎಲ್ಲವನ್ನು ಸುಟ್ಟು ಹಾಕಿದೆವು ಎಂದು ಹೇಳುತ್ತಾರೆ. Steel ಸಾಮಾನುಗಳು ಸುಟ್ಟು ಹೋಗುವುದನ್ನು ಎಲ್ಲಾದರೂ ಕೇಳಿದ್ದೀರಾ? ಎಷ್ಟು ಹಣ ಖರ್ಚಾಯಿತು? ಇವತ್ತಿನವರೆಗೂ ಕೋವಿಡ್ ಬಗ್ಗೆ ಅನೇಕ ಪ್ರಶ್ನೆಗಳನ್ನು ಹಾಕಿದರೂ ಒಂದು ಶ್ವೇತ ಪತ್ರವನ್ನು ಹೊರಡಿಸಲಿಲ್ಲ. ಕೋವಿಡ್ ಬಂದಾಗಿನಿಂದ ಇಷ್ಟು ಸಾವಿರ ಕೋಟಿ ಖರ್ಚು ಮಾಡಿದ್ದೇವೆ, ಇಂತಹದ್ದಕ್ಕೆ ಖರ್ಚು ಮಾಡಿದ್ದೇವೆ ಎಂದು ಇವತ್ತಿನವರೆಗೂ ಒಬ್ಬರು ಲೆಕ್ಕ ಕೊಡಲಿಲ್ಲ. ಅವರ ಪಕ್ಷದವರಾದ ಮಾನ್ಯ ನಾರಾಯಣಸ್ವಾಮಿ ರವರು ಸಚಿವಾಲಯದಲ್ಲಿಯೇ ಲಂಚ ಕೊಟ್ಟು ಕೆಲಸ ಮಾಡಿಸಬೇಕು ಎಂದು ಹೇಳುತ್ತಿದ್ದರು. ಅವರ ಪಕ್ಷದವರೇ ಹೇಳುತ್ತಾರೆ, ಆದರೆ ನಮಗೆ ಮೇಲೆ ಹೇಳುತ್ತಾರೆ. 40 per cent Commission ಬಗ್ಗೆ Contractors ಪ್ರಧಾನ ಮಂತ್ರಿಗಳಿಗೆ ಬರೆಯುತ್ತಾರೆ.

ಇನ್ನು Fiscal Deficit ಬಗ್ಗೆ ಹೇಳಬೇಕೆಂದರೆ, ಮಾನ್ಯ ಪ್ರಾಣೇಶ್ ಆರ್ಥಿಕ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದರು. ಮಾನ್ಯ ಸಿದ್ದರಾಮಯ್ಯನವರು ಇರುವವರೆಗೂ Fiscal Deficit 25% ಒಳಗೆ ಇರುತ್ತಿತ್ತು. Fiscal Budget ಕೆಳಗಡೆ ಇರುತ್ತಿತ್ತು. ಈಗ ಏನಾಗಿದೆ? ಇದನ್ನು three to four per cent ಎಂದು amend ಮಾಡಿಕೊಂಡಿದ್ದಾರೆ. ನಾಳೆ ಸಾಲ ಜಾಸ್ತಿ ತೆಗೆದುಕೊಂಡರೆ four to five per cent ಎಂದು ಮಾಡಿಕೊಳ್ಳುವುದು. ಆದರೆ ಮುಂದಿನ 5 ವರ್ಷಗಳಿಗೆ ರೂ.1 ಲಕ್ಷ ಕೋಟಿಗಳನ್ನು ಅಸಲು ಮತ್ತು ಬಡ್ಡಿ ಎಂದು ಕಟ್ಟಬೇಕಾಗುತ್ತದೆ. ಸರ್ಕಾರದಲ್ಲಿ ಹಣ ಎಲ್ಲಿದೆ?

(ಮುಂದು)

(239) 10.03.2022 1.50 hv.gr

**ಶ್ರೀ ಯು.ಬಿ.ವೆಂಕಟೇಶ್(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ನಿರುದ್ಯೋಗ ಸಮಸ್ಯೆಯನ್ನು ಇವರಿಂದ ನಿವಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರ ಖಾಲಿ ಇರುವಂತಹ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತಿಲ್ಲ. ಶಾಲೆಗಳಲ್ಲಿ

ಮತ್ತು ಕಛೇರಿಗಳಲ್ಲಿ ಹುದ್ದೆಗಳು ಖಾಲಿ ಇವೆ. ಆದರೆ, ಕೆಲವೊಂದು ಇಲಾಖೆಗಳಲ್ಲಿ ಅಂದರೆ, ಲೋಕೋಪಯೋಗಿ ಇಲಾಖೆ ಮತ್ತು ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಖಾಲಿ ಇರುವಂತಹ ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿಕೊಳ್ಳುತ್ತಿದ್ದಾರೆ. ಇವರಿಗೆ ಎಲ್ಲಿ ಹಣ ಬರುತ್ತದೆ, ಅಲ್ಲಿ ನೇಮಕಾತಿ ಮಾಡಿಕೊಳ್ಳುತ್ತಾರೆ. ಉಳಿದಂತೆ, ಶಿಕ್ಷಕರು ಕಾರಕೂನರು ಇನ್ನಿತರೆ ಸಿಬ್ಬಂದಿಗಳನ್ನು ಭರ್ತಿ ಮಾಡಿಕೊಳ್ಳುತ್ತಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ನಡೆಸುವವರು ಹೊಗಳಿಕೆ ಮತ್ತು ತೆಗಳಿಕೆ ಎರಡನ್ನು ಸಮಾನವಾಗಿ ಸ್ವೀಕರಿಸಬೇಕಾಗುತ್ತದೆ. ನಾವು ಏನಾದರು ಮಾತನಾಡಿದರೆ 'ಅವರು ಮಾತನಾಡಿರುವುದು ಸರಿಯಿಲ್ಲ' ಎಂದು ಹೇಳುತ್ತಾರೆ. ಸರ್ಕಾರ ನಡೆಸುವುದು ಬಾಡಿಗೆ ಮನೆಯಲ್ಲಿ ಇರುವಂತೆ ಆ ಮನೆ ಶಾಶ್ವತವಲ್ಲ. 11 ತಿಂಗಳುಗಳ ಕಾಲ ಬಾಡಿಗೆ ಕರಾರು ಇರುತ್ತದೆ. ಪುನಃ ಕರಾರನ್ನು ನವೀಕರಿಸಿದರೆ ಮಾತ್ರ ಅದೇ ಮನೆಯಲ್ಲಿ ಇರಬಹುದು, ಇಲ್ಲದಿದ್ದರೆ ಬೇರೆ ಮನೆಗೆ ಹೋಗಬೇಕಾಗುತ್ತದೆ. ಅದೇ ರೀತಿಯಲ್ಲಿ ಇವತ್ತು ಅವರು ಆಡಳಿತ ಪಕ್ಷದಲ್ಲಿ ಇರಬಹುದು ನಾಳೆ ವಿರೋಧ ಪಕ್ಷಕ್ಕೆ ಬರಬಹುದು.

ಶ್ರೀ ಎನ್.ರವಿಕುಮಾರ್:- ಸನ್ಮಾನ್ಯ ಸಭಾಪತಿಯವರೇ, ನಾವು ಸ್ವಂತ ಮನೆಯಲ್ಲಿದ್ದೇವೆ. ಬಾಡಿಗೆ ಮನೆಯಲ್ಲಿ ಇಲ್ಲ. ಮನೆಯನ್ನು ಕೊಂಡುಕೊಂಡಿದ್ದೇವೆ.

ಶ್ರೀ ಯು.ಬಿ.ವೆಂಕಟೇಶ್:- ಸನ್ಮಾನ್ಯ ಸಭಾಪತಿಯವರೇ, ಮುಂದಿನ 11 ತಿಂಗಳುಗಳ ನಂತರ ಅವರು ನಮ್ಮ ಸ್ಥಾನದಲ್ಲಿ ಇರುತ್ತಾರೆ. ಅದನ್ನು ಅವರು ಬರೆದಿಟ್ಟುಕೊಳ್ಳಲಿ.

ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):- ಸನ್ಮಾನ್ಯ ಸಭಾಪತಿಯವರೇ, ಪಂಚ ರಾಜ್ಯಗಳ ಚುನಾವಣೆಯ ಫಲಿತಾಂಶವನ್ನು ನೋಡಿದ ಮೇಲೆಯೂ ಇವರು ಈ ಮಾತುಗಳನ್ನು ಆಡುತ್ತಿದ್ದಾರೆ. ಇವರು ಎಲ್ಲಿದ್ದಾರೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಲಿ.

ಶ್ರೀ ಯು.ಬಿ.ವೆಂಕಟೇಶ್:- ಸನ್ಮಾನ್ಯ ಸಭಾಪತಿಯವರೇ, ಚುನಾವಣೆ ಫಲಿತಾಂಶವನ್ನು ಗಣನೆಗೆ ತೆಗೆದುಕೊಳ್ಳುವುದು ಬೇಡ. ಜನರು ಭಾವನಾತ್ಮಕವಾಗಿ ನಮ್ಮ ಜೊತೆಗಿದ್ದಾರೆ. ನಾವು ಇನ್ನೂ ಟಾಪ್‌ನಲ್ಲಿಯೇ ಇದ್ದೇವೆ. ನಮ್ಮ ಪಕ್ಷದಲ್ಲಿದ್ದ ಅರ್ಧದಷ್ಟು ಜನರು ಅವರ ಪಕ್ಷಕ್ಕೆ ಹೋಗಿರುವ ಹಿನ್ನೆಲೆಯಲ್ಲಿ ಅವರು ಇವತ್ತು ಆಡಳಿತ ಪಕ್ಷದಲ್ಲಿ ಕುಳಿತುಕೊಂಡಿದ್ದಾರೆ. ಅವರಾಗಿಯೇ ಆ ಸ್ಥಾನವನ್ನು ಪಡೆದುಕೊಂಡಿಲ್ಲ. ಜನರು ಅವರನ್ನು ಎಲ್ಲಿ ಕೂಡಿಸಿದ್ದರು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಆರಗ ಜ್ಞಾನೇಂದ್ರ:- ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಇವತ್ತು ಶೋಕಾಚರಣೆಯ ದಿನವಾಗಿದೆ. ಕರಾಳ ದಿನವಾಗಿದೆ.

ಶ್ರೀ ಯು.ಬಿ.ವೆಂಕಟೇಶ್:- ಸನ್ಮಾನ್ಯ ಸಭಾಪತಿಯವರೇ, ನಮಗೆ ಈ ದಿನ ಸಂತೋಷದ ದಿನವಾಗಿದೆ. "ದೂದ್ ಕ ದೂದ್, ಪಾನಿ ಕಾ ಪಾನಿ" ಆಗಿದೆ.

ಶ್ರೀ ಎಸ್.ರವಿ:- ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಧೈರ್ಯವಿದ್ದರೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಬಿ.ಬಿ.ಎಂ.ಪಿ. ಚುನಾವಣೆಗಳನ್ನು ಈಗಲೇ ನಡೆಸಲಿ. ನಾವು ಅದಕ್ಕೆ ತಯಾರಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

ಶ್ರೀ ಸಲೀಂ ಅಹಮದ್:- ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಧೈರ್ಯವಿದ್ದರೆ ಕಾರ್ಪೋರೇಶನ್ ಚುನಾವಣೆಗಳನ್ನು ನಡೆಸಲಿ.

ಶ್ರೀ ಯು.ಬಿ.ವೆಂಕಟೇಶ್:- ಸನ್ಮಾನ್ಯ ಸಭಾಪತಿಯವರೇ, ಕೋವಿಡ್-19 ವಾರಿಯರ್ಸ್‌ಗಳಾಗಿರುವ ವೈದ್ಯರು, ಆಶಾ ಕಾರ್ಯಕರ್ತರು ಮತ್ತು ಪೋಲೀಸಿನವರು ಮೃತ ಹೊಂದಿದರೆ ೩೦ ಲಕ್ಷ ರೂಪಾಯಿಗಳ ಪರಿಹಾರಧನವನ್ನು ಘೋಷಣೆ ಮಾಡಿದ್ದರು. ಈ ಪರಿಹಾರಧನವನ್ನು ಎಷ್ಟು ಜನರಿಗೆ ವಿತರಿಸಲಾಗಿದೆ? ಎಷ್ಟು ಜನರಿಗೆ ವಿತರಣೆ ಮಾಡುವುದು ಬಾಕಿ ಇದೆ? ಯಾಕೆ ಪರಿಹಾರಧನವನ್ನು ಕೊಡುತ್ತಿಲ್ಲವೆನ್ನುವುದಕ್ಕೆ ಸರ್ಕಾರದಿಂದ ಸ್ಪಷ್ಟೀಕರಣವನ್ನು ಬಯಸುತ್ತಿದ್ದೇನೆ. ಕೇಂದ್ರ ಸರ್ಕಾರ ಒಂದು ಲಕ್ಷ ರೂಪಾಯಿಗಳನ್ನು ಮತ್ತು ರಾಜ್ಯ ಸರ್ಕಾರ ಐವತ್ತು ಸಾವಿರ ರೂಪಾಯಿಗಳನ್ನು ಒಟ್ಟು ಒಂದೂವರೆ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ನಿನ್ನೆ ಮಾನ್ಯ ಸಚಿವರಾದ ಬಿ.ಎ.ಬಸವರಾಜುರವರು ನಮ್ಮ ಪಾಲನ್ನು ಸಹ ಅದರಲ್ಲಿಯೇ ಸೇರಿಸಿದ್ದೇವೆಂದು ಹೇಳಿದ್ದರು. ನಮ್ಮ ಕಣ್ಣಿಗೆ ದುಡ್ಡು ತೆಗೆದುಕೊಳ್ಳದೇ ಇರುವವರೇ ಸಿಗುತ್ತಿದ್ದಾರೆ. ಆದರೆ ಇವರು ನೂರಾರು ಕೋಟಿ ರೂಪಾಯಿಗಳನ್ನು ಪರಿಹಾರ ರೂಪದಲ್ಲಿ ನೀಡಿದ್ದೇವೆಂದು ಹೇಳುತ್ತಿದ್ದಾರೆ. ಸರಿತೂಗಿಸುವುದು ಹೇಗೆ? ಕೇವಲ ಅವರು ಗೆದ್ದು ಬಂದಿರುವ ಕ್ಷೇತ್ರಕ್ಕೆ ಅಷ್ಟೇ ಅಲ್ಲ, ರಾಜ್ಯದ 224 ಕ್ಷೇತ್ರಗಳಗೂ ಅವರು ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳಾಗಿದ್ದಾರೆ. ಆದರೆ, ಅನುದಾನವನ್ನು ಹಂಚಿಕೆ ಮಾಡುವ ಸಮಯದಲ್ಲಿ ಮಲತಾಯಿ ಧೋರಣೆಯನ್ನು ತಾಳುತ್ತಾರೆ. ಯಾವುದೇ ಅನುದಾನವನ್ನು ಹಂಚಿಕೆ ಮಾಡುವಾಗ ಎಲ್ಲರಿಗೂ ಸರಿ ಸಮನಾಗಿ ಹಂಚಿಕೆ ಮಾಡಬೇಕಾಗುತ್ತದೆ. ಇವರಿಗೆ ಆ ಧೋರಣೆಯೇ ಇಲ್ಲ. ಬರೀ ಮಲತಾಯಿ ಧೋರಣೆಯನ್ನು ಮಾಡುತ್ತಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ನಾನು ಬ್ರಾಹ್ಮಣ ಸಮುದಾಯಕ್ಕೆ ಸೇರಿದವನಾಗಿದ್ದೇನೆ. ಬ್ರಾಹ್ಮಣ ಮಂಡಲಿಗೆ ಈ ಬಾರಿ ಒಂದು ರೂಪಾಯಿಯನ್ನು ಸಹ ಕೊಟ್ಟಿಲ್ಲ. ಹಿಂದಿನ ಸಾಲಿನ ಆಯವ್ಯಯದಲ್ಲಿ ೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ, ೩.೫ ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದರು. ಆರ್ಯವೈಶ್ಯ ನಿಗಮಕ್ಕೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು ಅದರಲ್ಲಿ ಕೇವಲ 5

ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆ ಮಾಡಿದ್ದಾರೆ. ಸರ್ಕಾರ ತನ್ನ ಬೆನ್ನು ತಟ್ಟಿಕೊಳ್ಳುವುದಕ್ಕಾಗಿ ಆಯವ್ಯಯದಲ್ಲಿ 500 ಕೋಟಿ 1000 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆಂದು ಘೋಷಣೆ ಮಾಡಿ, ಹಣವನ್ನೇ ಬಿಡುಗಡೆ ಮಾಡುವುದಿಲ್ಲ. ಸರ್ಕಾದಿಂದ ಎಷ್ಟು ಕೊಡುವುದಕ್ಕೆ ಸಾಧ್ಯವಾಗುತ್ತದೆ ಅಷ್ಟನ್ನು ಮಾತ್ರ ಘೋಷಣೆ ಮಾಡಿದರೆ ಸಾಕು. 3.5 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿ 3.5 ಕೋಟಿಗಳನ್ನು ಬಿಡುಗಡಡೆ ಮಾಡಿದ್ದರೆ, ಶೇಕಡಾ ನೂರಕ್ಕೆ ನೂರರಷ್ಟು ಹಣ ಬಿಡುಗಡೆ ಮಾಡಿದಂತಹ ಹೆಗ್ಗಳಕೆ ಅವರಿಗೆ ಬರುತ್ತಿತ್ತು. ಆಯವ್ಯಯದಲ್ಲಿ 50 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿ 3.5 ಕೋಟಿ ರೂಪಾಯಿಗಳನ್ನು ಕೊಟ್ಟರೆ, ನಾವು ವಿಷ ಕುಡಿಯಬೇಕೇ? ಆ ರೀತಿ ಘೋಷಣೆ ಮಾಡಲು ಯಾರಾದರು ಅವರಿಗೆ ಬಲವಂತ ಮಾಡಿದ್ದರೆಯೇ? ವಿರೋಧ ಪಕ್ಷದವರಾದ ನಾವು ಏನಾದರು ಹೇಳುವುದಕ್ಕೆ ಹೋದರೆ, ತಪ್ಪು ಮಾತನಾಡುತ್ತಿದ್ದಾರೆಂದು ಹೇಳುತ್ತಾರೆ.

ಸನ್ಮಾನ್ಯ ಸಭಾಪತಿಯವರೇ, ಯಶಸ್ವಿನಿ ಯೋಜನೆಯನ್ನು ಪುನಃ ಜಾರಿಗೆ ತರಲಾಗಿದೆ. ಇದು ಹೊಸ ಯೋಜನೆಯಲ್ಲ. ಮಾನ್ಯ ಎಸ್.ಎಂ.ಕೃಷ್ಣಾರವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿಯೇ ಜಾರಿಗೆ ಬಂದಿತ್ತು. ಇದೊಂದು ಒಳ್ಳೆಯ ಯೋಜನೆಯಾಗಿದೆ. ಹಿಂದೆ ಇಡೀ ರಾಜ್ಯದಲ್ಲಿರುವ ರೈತರಿಂದ ಒಂದು ವರ್ಷಕ್ಕೆ 700 ರೂಪಾಯಿಗಳನ್ನು ಸಂಗ್ರಹ ಮಾಡಲಾಗುತ್ತಿತ್ತು. ಆ ಹಣ ಏನಾಯಿತ್ತೆಂದು ಹೇಳಿಲ್ಲ. ಅದು ಎಷ್ಟಿದೆ? ಏನಾಗಿದೆ ಎನ್ನುವ ಮಾಹಿತಿಯನ್ನು ಸರ್ಕಾರ ಕೊಡಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಯಾವುದೇ ಸಹಕಾರ ಸಂಘದಲ್ಲಿ ನೋಂದಾಯಿಸ್ಪಟ್ಟ ಸದಸ್ಯರು ಅವರ ಭಾಗವನ್ನು ಹಾಕಿ, ಸೊಸೈಟಿಯವರು ಒಂದು ಭಾಗವನ್ನು ಹಾಕಿದರೆ, ಆ ಯಶಸ್ವಿನಿ ಯೋಜನೆ ಆರೋಗ್ಯ ವಿಮೆಯಾಗಿ ಮಾರ್ಪಡುತ್ತದೆ. ರೈತಾಪಿ ವರ್ಗದವರು ನಮಗೆ ಪುನಃ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಬೇಕು ಎನ್ನುವ ಒತ್ತಾಯವನ್ನು ತಂದ ಹಿನ್ನೆಲೆಯಲ್ಲಿ ಪುನಃ ರಾಜ್ಯಾದ್ಯಂತ ಜಾರಿಗೆ ತರಲಾಗಿದೆ. ಮೊದಲು 700 ರೂಪಾಯಿಗಳನ್ನು ತೆಗೆದುಕೊಳ್ಳಲಾಗುತ್ತಿತ್ತು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಈಗ ಆ

ಪದ್ಧತಿ ಇಲ್ಲ. ಆರೋಗ್ಯ ಕಾರ್ಡ್ ಜಾರಿಗೆ ಬಂದ ಸಂದರ್ಭದಲ್ಲಿ ಯಶಸ್ವಿನಿ ಯೋಜನೆಯನ್ನು ನಿಲ್ಲಿಸಲಾಗಿತ್ತು. "ಆಯುಷ್ಮಾನ್ ಭಾರತ್" ಯೋಜನೆ ಜಾರಿಗೆ ಬಂದಂತಹ ಸಂದರ್ಭದಲ್ಲಿ ಕರ್ನಾಟಕದಲ್ಲಿ ಆರೋಗ್ಯ ಕಾರ್ಡ್ ಮುಂದುವರೆದಿತ್ತು. ಆರೋಗ್ಯ ಕಾರ್ಡ್ ಮತ್ತು ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಕೆಲವು ಕಾಯಿಲೆಗಳಿಗೆ ಮಾತ್ರ ಚಿಕಿತ್ಸೆ ದೊರೆಯುತ್ತದೆ. ಆದರೆ, ಯಶಸ್ವಿನಿ ಯೋಜನೆಯಡಿಯಲ್ಲಿ ಎಲ್ಲ ಕಾಯಿಲೆಗಳಿಗೂ ಚಿಕಿತ್ಸೆ ದೊರೆಯುತ್ತದೆ. ಆದ್ದರಿಂದ ಯಶಸ್ವಿನಿ ಯೋಜನೆಯನ್ನು ಜಾರಿಗೊಳಿಸಬೇಕೆನ್ನುವುದು ರೈತಾಪಿ ವರ್ಗದವರ ಮತ್ತು ಸಹಕಾರ ಸಂಘಗಳ ಬೇಡಿಕೆಯಾಗಿತ್ತು. ಆದ್ದರಿಂದ ಈ ಸಾಲಿನ ಆಯವ್ಯಯದಲ್ಲಿ ಯಶಸ್ವಿನಿ ಯೋಜನೆಯನ್ನು ಪುನಃ ಜಾರಿಗೆ ತರಲಾಗಿದೆ. ಯಶಸ್ವಿನಿ ಯೋಜನೆ ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಬಂದಿದೆಯೋ ಅಥವಾ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಕಾಲದಲ್ಲಿ ಬಂದಿದೆಯೇ ನನಗೆ ಗೊತ್ತಿಲ್ಲ.

ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):- ಸನ್ಮಾನ್ಯ ಸಭಾಪತಿಯವರೇ, ಯಶಸ್ವಿನಿ ಯೋಜನೆ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗ ಪ್ರಾರಂಭ ಮಾಡಿದಂತಹ ಯೋಜನೆಯಾಗಿದೆ. ಯಾರು ಸೊಸೈಟಿಯ ಷೇರ್ ಹೋಲ್ಡರ್ ಇದ್ದರು ಅವರಿಗೆ ನೀಡಿದಂತಹ ಯೋಜನೆ ಇದಾಗಿತ್ತು. ಅದನ್ನು ತೆಗೆದು ಹಾಕಲಾಗಿತ್ತು. ಈಗ ಪುನಃ ಜಾರಿಗೆ ತರಲಾಗಿದೆ.

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಸಹಕಾರ ಸಂಘಗಳ ಷೇರುದಾರರಲ್ಲಿ ಬಿ.ಪಿ.ಎಲ್ ಕಾರ್ಡುದಾರರು ಯಾರಿದ್ದಾರೆ ಅವರಿಗೆ ಈ ಸೌಲಭ್ಯವನ್ನು ನೀಡಲಾಗುತ್ತಿತ್ತು. ಈ ಯೋಜನೆಯನ್ನು ಪುನಃ ಮುಂದುವರಿಸಬೇಕೆಂದು ಮತ್ತು ತಮಗೂ ಸಹ ವಿಸ್ತರಣೆ ಮಾಡಬೇಕೆಂದು ಎ.ಪಿ.ಎಲ್. ಕಾರ್ಡುದಾರರು ಬೇಡಿಕೆಯನ್ನು ಸಲ್ಲಿಸಿದ ಹಿನ್ನೆಲೆಯಲ್ಲಿ ಪುನಃ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಮಾನ್ಯ ರಮೇಶ್‌ಕುಮಾರ್‌ರವರು ಆರೋಗ್ಯ ಸಚಿವರಾಗಿದ್ದ ಕಾಲದಲ್ಲಿ ಆರೋಗ್ಯ ಕಾರ್ಡ್ ಮತ್ತು ಆಯುಷ್ಮಾನ್ ಭಾರತ್ ಯೋಜನೆ ಹೀಗೆ ಎರಡೆರಡು ಇರುವುದು ಬೇಡ ರಾಜ್ಯದಲ್ಲಿ ಒಂದೇ ರೀತಿಯ ಆರೋಗ್ಯ ಯೋಜನೆ ಇರಲಿ ಎನ್ನುವ ದೃಷ್ಟಿಯಿಂದ ಎರಡನ್ನು ಮರ್ಜ್ ಮಾಡಿದ್ದರು.

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ವಿಧಾನಸಭೆಯಿಂದ ಚುನಾಯಿತರು):–** ಸನ್ಮಾನ್ಯ ಸಭಾಪತಿಯವರೇ, ಯಶಸ್ವಿನಿ ಪರಿಕಲ್ಪನೆ ಯಾವಾಗ ಪ್ರಾರಂಭವಾಯಿತ್ತೆಂದರೆ, ಮಾನ್ಯ ಹೆಚ್.ವಿಶ್ವನಾಥ್‌ರವರು ಸಹಕಾರ ಸಚಿವರಾಗಿದ್ದಾಗ, ನಾನು ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷನಾಗಿದ್ದೆ. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು. ಪ್ರಧಾನ ಕಾರ್ಯದರ್ಶಿಯವರು, ಸಹಕಾರ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಡಾ॥ ದೇವಿಶೆಟ್ಟಿಯವರು ಮತ್ತು 4 ಜನ ಪ್ರಮುಖ ವೈದ್ಯರು ಸೇರಿಕೊಂಡು ಒಂದು ಸಂಸ್ಥೆಯನ್ನು ಕಟ್ಟಿದರು. ಇಡೀ ರಾಜ್ಯದಲ್ಲಿರುವ ಸಹಕಾರಿ ಸಂಘಗಳಲ್ಲಿನ ಸದಸ್ಯರು 40 ರೂಪಾಯಿಗಳನ್ನು ಕಟ್ಟುವುದು, 40 ರೂಪಾಯಿಗಳನ್ನು ರಾಜ್ಯ ಸರ್ಕಾರ ಕಟ್ಟಿ, ಒಟ್ಟು ೮೦ ರೂಪಾಯಿಗಳನ್ನು ಆ ಸಂಸ್ಥೆಗೆ ಕಟ್ಟಿದ ಮೇಲೆ ರಾಜ್ಯದಲ್ಲಿರುವ ಎಲ್ಲ ಸಹಕಾರಿ ಸಂಘಗಳಲ್ಲಿನ ಸದಸ್ಯರುಗಳ ಆರೋಗ್ಯ ಕೆಟ್ಟಾಗ, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರದಲ್ಲಿ ಉತ್ತಮವಾದ ಆಸ್ಪತ್ರೆಗಳನ್ನು ಗುರುತಿಸಿ ಔಷಧೋಪಚಾರವನ್ನು ನೀಡುವಂತಹ ವ್ಯವಸ್ಥೆ ಮಾಡಲಾಗಿತ್ತು. ಸದಸ್ಯರುಗಳು ಅಲ್ಲಿಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡು ಬಿಲ್ ಅನ್ನು ಪಡೆದುಕೊಂಡು ಅದನ್ನು ಯಶಸ್ವಿನಿ ಸಂಸ್ಥೆಗೆ ತಂದು ಕೊಟ್ಟಾಗ, ಸಂಪೂರ್ಣವಾಗಿ ಆ ಬಿಲ್ ಅನ್ನು ಕೊಡುವಂತಹ ವ್ಯವಸ್ಥೆ ಇತ್ತು. ಆಗ 3 ಕೋಟಿ, 6 ಕೋಟಿ ಮತ್ತು 9 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಆ ಟ್ರಸ್ಟ್‌ಗೆ ನೀಡಲಾಗುತ್ತಿತ್ತು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ನಾನು ಸಹಕಾರ ಸಚಿವನಾಗಿದ್ದ ಸಂದರ್ಭದಲ್ಲಿ ಒಂದು ವರ್ಷದಲ್ಲಿ 20 ಕೋಟಿ ರೂಪಾಯಿಗಳನ್ನು ಮತ್ತೊಂದು ವರ್ಷಕ್ಕೆ 25 ಕೋಟಿ ರೂಪಾಯಿಗಳನ್ನು ಹಾಗೂ ಅದರ ಮುಂದಿನ ವರ್ಷದಲ್ಲಿ 30 ಕೋಟಿ ರೂಪಾಯಿಗಳನ್ನು ಯಶಸ್ವಿನಿ ಟ್ರಸ್ಟ್‌ಗೆ ಕೊಟ್ಟು, ಆ ಟ್ರಸ್ಟ್ ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಯುವುದಕ್ಕೆ ಸಹಾಯ ಮಾಡಿದರು. ಸಹಕಾರ ಸಂಘಗಳ ಸದಸ್ಯರುಗಳು ಬಹಳ ದೊಡ್ಡ ಪ್ರಮಾಣದಲ್ಲಿ ಇದರ ಅನುಕೂಲತೆಯನ್ನು ಪಡೆದುಕೊಳ್ಳುತ್ತಿದ್ದರು. ಮಾನ್ಯ ಸಿದ್ಧರಾಮಯ್ಯನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಾನ್ಯ ರಮೇಶ್‌ಕುಮಾರ್‌ರವರು ವೈದ್ಯಕೀಯ ಸಚಿವರಾಗಿದ್ದಾಗ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳು ಬೇರೆಬೇರೆಯಾಗಿರುವುದು ಸರಿಯಲ್ಲ. ಅವುಗಳನ್ನು ಒಟ್ಟುಗೂಡಿಸೋಣ ಎಂದು ಅದನ್ನು ತಂದು ಇದರಲ್ಲಿ ಮರ್ಜ್ ಮಾಡಿದರು.

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(240) 10.3.2022 2.00 ಪಿಕೆ:ಎಂಡಿ

**ಶ್ರೀ ಲಕ್ಷ್ಮಣ ಸಂಗಪ್ಪ ಸವದಿ(ಮುಂದು)**

ಆದರೆ, ಇಡೀ ರಾಜ್ಯದಲ್ಲಿರುವ ಅನೇಕ ಸಹಕಾರಿಗಳು, ಇದು ಮಾಡಿರುವುದು ತಪ್ಪು; ಇದನ್ನು ಮತ್ತೆ ಪ್ರಾರಂಭ ಮಾಡಬೇಕು; ರಾಜ್ಯ ಸರ್ಕಾರ ಹೀಗೆ ಮಾಡಿರುವಂಥದ್ದು ಸರಿಯಲ್ಲ ಎನ್ನುವ ಭಾವನೆ ವ್ಯಕ್ತಪಡಿಸಿದ ಮೇಲೆ ಇವತ್ತಿನ ಸರ್ಕಾರ ಮತ್ತೆ "ಯಶಸ್ವಿನಿ" ಯೋಜನೆಯನ್ನು ಪುನಸ್ಥಾಪನೆ ಮಾಡುವುದಕ್ಕೆ ಪ್ರಸ್ತಾವನೆ ತಂದಿದೆ. ನಾಳೆ ಇದಕ್ಕೆ ಒಪ್ಪಿಗೆ ಸಿಕ್ಕಿದರೆ, ಬಿಪಿಎಲ್ ಮತ್ತು ಎಪಿಎಲ್ ಸೇರಿದಂತೆ ಇಡೀ ರಾಜ್ಯದ ಸಹಕಾರಿ ಸಂಘಗಳಲ್ಲಿರುವ ಯಾವುದೇ ಸದಸ್ಯರಿಗೆ ತೊಂದರೆಯಾದಾಗ, ಅದು ಎಲ್ಲರಿಗೂ ಅನ್ವಯವಾಗುತ್ತದೆ. ಸದಸ್ಯ ಏನು ಹಣ ಕಟ್ಟಿರುತ್ತಾನೋ ಅದು ಟ್ರಸ್ಟ್‌ಗೆ ಜಮೆ ಆಗುತ್ತದೆ ಮತ್ತು ರಾಜ್ಯ ಸರ್ಕಾರ ತನ್ನ ಅನುದಾನ ಕೊಡುವುದರ ಮೂಲಕ ಎಲ್ಲರಿಗೂ ಲಾಭವಾಗುತ್ತದೆ ಎನ್ನುವ ಮಾತನ್ನು ನಾನು ಒಬ್ಬ ಸಹಕಾರಿಯಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ಸಲೀಂ ಅಹ್ಮದ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರಾದ ಅಶೋಕ್‌ರವರು ಇಂದು ಊಟಕ್ಕೆ ಕರೆದಿದ್ದಾರೆ. ಹಾಗಾಗಿ ಸದನವನ್ನು ಮುಂದೂಡಬೇಕೆಂದು ಕೇಳಿಕೊಳ್ಳುತ್ತೇನೆ.

**ವೈಸ್ ಚೇರ್ಮನ್:-** ಈಗ ಸದನವನ್ನು 3 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವನ್ನು ಮಧ್ಯಾಹ್ನ 2 ಗಂಟೆ 1 ನಿಮಿಷದಿಂದ ಮಧ್ಯಾಹ್ನ 3 ಗಂಟೆಯವರೆಗೆ ಮುಂದೂಡಲಾಯಿತು)**

**(241) 10.03.2022 03.20 ಎಸ್‌ವಿ-ಎಕೆ**

**(ಸಭಾಪತಿಯವರ ಉಪಸ್ಥಿತಿ)**

**(ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟಿದ್ದ ಸದನವು ಮಧ್ಯಾಹ್ನ 03 ಗಂಟೆ 25 ನಿಮಿಷಗಳಿಗೆ ಪುನಃ ಸಮಾವೇಶಗೊಂಡಿತು)**

## 2022-23ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಮುಂದುವರೆದ ಚರ್ಚೆ

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಭೋಜನ ವಿರಾಮಕ್ಕೂ ಮುನ್ನ ಈ ಆಯವ್ಯಯದ ಮೇಲೆ ಮಾತನಾಡುತ್ತಿದ್ದೆನು. ಇದು second innings. 2022-23ರ ಆಯವ್ಯಯವು ಒಂದು ಚುನಾವಣಾ ಪ್ರಣಾಳಿಕೆ ಎಂದು ನಾನು ಪ್ರಾರಂಭ ಮಾಡಿದ್ದೆನು. 2022-23ರ ಆಯವ್ಯಯವನ್ನು ನೋಡಿದರೆ revenue deficit 136% ಇದೆ. ಯಾವಾಗಲೂ ಇಷ್ಟಿರಲಿಲ್ಲ. ಯಾವಾಗಲೂ surplus ಇರುತ್ತಿದ್ದುದನ್ನು ಬಿಟ್ಟರೆ negative figure ಯಾವಾಗಲೂ ಇಲ್ಲ. Primary deficit 48% ಇದೆ. Fiscal deficit 26% ಇದೆ. ಮೊದಲೆಲ್ಲಾ ಇಲಾಖಾವಾರು ಮಂಡಿಸುತ್ತಿದ್ದರು. ಈಗ ಯಾರಿಗೂ ಅರ್ಥವಾಗಬಾರದೆಂದು ವಲಯವಾರು ಎಂದು ಮಾಡಿಕೊಂಡಿದ್ದಾರೆ. ಆದರೆ 5-6 core sector ಗಳಲ್ಲಿ national average ಗಿಂತಲೂ ಕರ್ನಾಟಕ ಯಾವಾಗಲೂ ಮುಂದಿರುತ್ತಿತ್ತು. ಅದು ಯಾವುದೇ ಸೆಕ್ಟರ್ ಆಗಿರಬಹುದು. ಈಗ ಶಿಕ್ಷಣಕ್ಕೆ ಸಂಬಂಧಿಸಿದಂತೆ the national average is 15.2%. ನಮ್ಮಲ್ಲಿ 12.9% ಇದೆ. ನಾವು ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಚಯಿಸುತ್ತೇವೆ ಎಂದು ಅವರ ಬೆನ್ನನ್ನು ಅವರೇ ತಟ್ಟಿಕೊಳ್ಳುತ್ತಾರೆ. ಆದರೆ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಜಿ.ಡಿ.ಪಿ.ಯಲ್ಲಿ ಇಷ್ಟು ಶೇಕಡಾ ಹಣವನ್ನು ಇಡಬೇಕೆಂದು ಇದೆ. ಸರ್ಕಾರ ಅದಕ್ಕೇನಾದರೂ ಮಂಜೂರು ಮಾಡಿದೆಯೇ? ಅದರ ಉಲ್ಲೇಖವೇ ಇಲ್ಲ. ಕಾನೂನಿನಲ್ಲಿ ಇದೆ. ಸರ್ಕಾರ ಅದಕ್ಕೆ ಎಷ್ಟು ಇಟ್ಟಿದೆ ಎಂಬುದಿಲ್ಲ. ಒಟ್ಟು 12.9% ಇಟ್ಟಿದ್ದಾರೆ. N.E.P (National Education Policy) ಯಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಎಷ್ಟು ಶಿಕ್ಷಕರಿರಬೇಕು? ಕೊಠಡಿಗಳೆಷ್ಟಿರಬೇಕು? ಈ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ನಾವೇ ಮೊದಲು ಎಂದು ಎದೆ ತಟ್ಟಿಕೊಳ್ಳುವುದಕ್ಕೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಚಯಿಸಿದ್ದಾರೆ. ಇದು ಬಹಳ ಅನ್ಯಾಯ.

Spending on Health - ಕೋವಿಡ್ ಬಂದ ಮೇಲೆ ಆರೋಗ್ಯ ವಲಯ ಬಹಳ ಪ್ರಮುಖವಾದುದು. National average 6% ಇದೆ. ನಾವು 5.8% ನಲ್ಲಿ ಇದ್ದೇವೆ. ಸರ್ಕಾರ ಹೇಗೆ ಜನರಿಗೆ ಆರೋಗ್ಯವನ್ನು ಕೊಡುತ್ತದೆ? ನಾನು ಆಗಲೇ B.I.E.C (Bengaluru

International Exhibition Centre) ಕಥೆ ಹೇಳಿದೆ. ಮೂರು ತಿಂಗಳಗಾಗಿ ಒಂದು ಆಸ್ಪತ್ರೆಯನ್ನು ಮಾಡಿ ನೂರಾರು ಕೋಟಿ ದುಡ್ಡು ಹೊಡೆದು ಅದನ್ನು ಮುಚ್ಚಿಬಿಟ್ಟರು. ಅದರಿಂದ ಯಾರಿಗೂ ಅನುಕೂಲವೂ ಆಗಲಿಲ್ಲ. ಕೇವಲ ಸರ್ಕಾರಕ್ಕೆ ಮತ್ತು ಅಧಿಕಾರಿಗಳಿಗೆ ಅನುಕೂಲವಾಯಿತು. ಕಡೆಗೆ ಅದೇನಾಯಿತು ಎಂದು ಇಂದಿನವರೆವಿಗೂ ನಾನು 10 ಬಾರಿ ಪ್ರಶ್ನೆಯನ್ನು ಕೇಳಿದ್ದೇನೆ. ಒಂದು ಬಾರಿಯೂ ಅದಕ್ಕೆ ಉತ್ತರ ಬರಲಿಲ್ಲ.

As far as Rural Development is concerned, the national average is 5.7%. ನಾವು ಖರ್ಚು ಮಾಡುತ್ತಿರುವುದು 3.7%. ನಮ್ಮ ಊರುಗಳು ಎಲ್ಲಿ ಉದ್ಧಾರವಾಗುತ್ತವೆ? ಆಗಲೇ ಗೃಹ ಮಂತ್ರಿಗಳು ಇಲ್ಲಿ ಇದ್ದರು. As far as spending on police is concerned, the national average is 4.3%. ಸರ್ಕಾರ ಖರ್ಚು ಮಾಡುತ್ತಿರುವುದು 3.2%. Roads and Bridges ಗೆ ಸಂಬಂಧಿಸಿದಂತೆ national average 4.7% ಇದೆ. ಸರ್ಕಾರ ಖರ್ಚು ಮಾಡುತ್ತಿರುವುದು 4.1%. ಒಂದು ವಿಷಯದಲ್ಲಿ ಇವರು ಸಾಧಿಸಿದ್ದಾರೆ. ಅದನ್ನು ನಾವು ಒಪ್ಪಬೇಕು. The national average on agriculture is 6.2%. ಅದನ್ನು 6.9% ಮಾಡಿದ್ದಾರೆ. ನಾನು ಅದಕ್ಕಾಗಿ ಅಭಿನಂದನೆಗಳನ್ನು ಹೇಳಬಯಸುತ್ತೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ತಮ್ಮ ಸ್ಥಾನದಲ್ಲಿ ಕುಳಿತು):–** ನೀವು double income ಮಾಡುವುದು ಹೇಗೆ ಎಂದು ಹೇಳಿ.

**ಶ್ರೀ ಯು.ಬಿ.ವೆಂಕಟೇಶ್:–** ಆ ವಿಷಯಕ್ಕೂ ಬರುತ್ತೇನೆ.

**ಸಭಾಪತಿಯವರು:–** ಮಾನ್ಯ ಭೋಜೇಗೌಡರನ್ನು ನೀವು ಅಡ್ವೈಸರ್ ಆಗಿ ಇಟ್ಟುಕೊಳ್ಳಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನನ್ನ ದೌರ್ಭಾಗ್ಯ, ನಾನು ಮಾತನಾಡುವಾಗ ತಾವು ಇರುವುದಿಲ್ಲ. ಆಗಲೇ ನಾನು ಒಂದು ಕೇಸ್ ಅನ್ನು ಹೇಳಿದೆ. ಮಾನ್ಯ

ಗೃಹ ಸಚಿವರು ಇದ್ದರು. "ಏನು ಸರ್? ಸೆಕ್ಷನ್ 144 ಅರ್ಥ ಏನು? ಮಾನ್ಯ ಈಶ್ವರಪ್ಪನವರು procession ಮಾಡುತ್ತಾರೆ. ನೀವು ಕೇಸ್ ಹಾಕಲ್ಲ. ನಾವು ಮೇಕೆದಾಟಿಗೆ ನಡೆದರೆ ಕೇಸ್ ಹಾಕುತ್ತೀರಿ." ಎಂದು ಕೇಳಿದೆ. ಸಭಾಪತಿ ಸ್ಥಾನದಲ್ಲಿ ಇರುವ ನಿಮ್ಮ ಮೇಲೆ ಇವರು ರಾತ್ರೋರಾತ್ರಿ ಕೇಸ್ ಹಾಕುತ್ತಾರೆ. ತಾವು ಭೀಷ್ಮನಂತೆ ದಯಾಮರಣಕ್ಕಾಗಿ ಕಾಯುತ್ತಿದ್ದೀರಿ ಎನ್ನಿಸುತ್ತದೆ. ಇದು ಅನ್ಯಾಯ. ನಾವು ಹೊರಟ್ಟಿ ಎಂದು ಹೇಳುತ್ತಿಲ್ಲ. ಒಂದು ಸ್ಥಾನಕ್ಕೆ ಅಗೌರವ ಬಂದಾಗ ನಾವು ಅದನ್ನು ಸರ್ಕಾರಕ್ಕೆ ಹೇಳದೆ ಹೋದರೆ ಸರ್ಕಾರ ಅದನ್ನು suo-moto ಏನೂ ಮಾಡದೆ ಹೋದರೆ ಹೇಗೆ? ಅಧಿಕಾರಿಗಳೇ ದೇಶವನ್ನು ಆಳಬೇಕೆ? ಅವರು ಹೇಳಿದ ಹಾಗೆ ನಾವು ಕೇಳಬೇಕೆ? ಸದನದಲ್ಲಿ ಯಾರೂ ಈ ವಿಷಯವನ್ನು ಪ್ರಸ್ತಾಪಿಸಲೇ ಇಲ್ಲ. ನಾನು ಹೇಳುತ್ತಿದ್ದೇನೆ, ಅದು ಬೇರೆಯ ಕಥೆ. ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ. ಒಂದು ಸ್ಥಾನದಲ್ಲಿರುವವರಿಗೆ, ಒಬ್ಬ ಮಂತ್ರಿ ಇಂತಹವರ ಮೇಲೆ ಕೇಸ್ ಹಾಕಬೇಕೆಂದರೆ ರಾಜ್ಯಪಾಲರಿಂದ ಅನುಮತಿಯನ್ನು ಪಡೆದುಕೊಳ್ಳಬೇಕೆಂಬ ಕನಿಷ್ಟ ಜ್ಞಾನ ಅಧಿಕಾರಿಗಳಿಗಿಲ್ಲವೇ? ಅಥವಾ ನೀವು ಅವರಿಗೆ ಸಿಕ್ಕುತ್ತಿರಲಿಲ್ಲವೇ?

(...ಮುಂದು)

(242) 10-**03-2022 (3.30) ಕೆಜಿ-ಆರ್‌ಎನ್**

**(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ನಾನು ಇದನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಏಕೆಂದರೆ, ನಾನು 25ನೇ ತಾರೀಖು ರಾತ್ರಿ 8.30ಕ್ಕೆ ಅಲ್ಲಿ ಬಿಟ್ಟಿದ್ದೇನೆ. ನಾನು 8.30ಕ್ಕೆ ಅಲ್ಲಿ ಬಿಟ್ಟರೆ, ಅಲ್ಲಿಂದ ಬೆಂಗಳೂರಿಗೆ ಬರಬೇಕಾದರೆ, ಹತ್ತಿರದ ಜಿಲ್ಲೆಯವರು ಸುಮಾರು 10 ಮಂದಿ escort ನವರು ಬಂದಿದ್ದಾರೆ. Minute to minute programme ಇರುತ್ತದೆ. ನಾನು ಬೆಂಗಳೂರಿನಲ್ಲಿ ಬಂದು meeting ಮಾಡಿದ್ದೇನೆ. ಆಗ ಯಾರೋ ಒಬ್ಬರು ಮಾನ್ಯ ಬಸವರಾಜ ಹೊರಟ್ಟಿಯವರ ಚಿತಾವಣೆಯ ಮೇರೆಗೆ ಯಾವುದೋ ಒಂದು ಶಾಲೆಯಲ್ಲಿ ಗಲಾಟೆಯಾಗಿದೆ ಎಂದು ದೂರು ಕೊಟ್ಟಿದಕ್ಕೆ, ರಾತ್ರಿ 12.30 ಕ್ಕೆ ನನ್ನ ವಿರುದ್ಧ atrocity case book ಮಾಡಿ FIR ಮಾಡಿ ಆಗಲೇ ನ್ಯಾಯಾಲಯಕ್ಕೆ ಕಳುಹಿಸಿದ್ದಾರೆ. ಅವರಿಗೆ ನಮ್ಮನ್ನು ಕೇಳಬೇಕು ಎನ್ನುವ ಸೌಜನ್ಯ ಸಹ ಇಲ್ಲ. ಆಗ ನಾನು ಏನು ಮಾಡುವುದೆಂದು ಸುಮ್ಮನಾದೆ. ಈ ಹುದ್ದೆ ನನ್ನ individual ಅಲ್ಲ. ನಾಳೆ ದಿವಸ

ಯಾರು ಬೇಕಾದರೂ ಮುಖ್ಯಮಂತ್ರಿಗಳು ಆಗುತ್ತಾರೆ. ಯಾರು ಬೇಕಾದರೂ ರಾಜ್ಯಪಾಲರು ಆಗುತ್ತಾರೆ. ಅದಕ್ಕೆ ಏನಾದರೊಂದು ರೀತಿ ನೀತಿ ಬೇಕಲ್ಲವೇ? ನಾವೆಲ್ಲರೂ ಸದನದಲ್ಲಿ ಇಂತಹ ಹುದ್ದೆಯಲ್ಲಿ ಇದ್ದಾಗ, ಇದು ನಮ್ಮ ವೈಯಕ್ತಿಕವಾದುದಲ್ಲ. ರಾತ್ರಿ 12.30 ಗಂಟೆಯ ಮೇಲೆ FIR ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ನನಗೆ ರಾತ್ರಿ 3.00 ಗಂಟೆಗೆ ಎಸ್‌ಪಿ ರವರು ಪೋನ್ ಮಾಡಿದ್ದಾರೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾನಾಯಕರೇ, ಮಾನ್ಯ ಸಭಾನಾಯಕರು ಸದನದಲ್ಲಿದ್ದಾರೆ. ಇಲ್ಲಿ ಲೋಪದೋಷವಾಗಿದೆ. ಇದು ತಮಗೆ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರಿಗೆ ಆಗಿರುವಂತಹದಲ್ಲ. ಅವರು ಸದನದ ಪೀಠಕ್ಕೆ ಅವಮಾನ ಮಾಡಿದ್ದಾರೆ. ಹಾಗಾಗಿ, ದಯವಿಟ್ಟು ಆ ಅಧಿಕಾರಿಗಳ ವಿರುದ್ಧ ಕ್ರಮತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಮ್ಮ ಅನುಭವದ ಪ್ರಕಾರ, ಯಾವುದೇ ಶಾಸಕರ ಸಹಿತ ಸಭಾಪತಿಯವರ ಪೀಠವು ಸೇರಿದಂತೆ ಯಾರ ಮೇಲಾದರೂ ಪ್ರಕರಣವನ್ನು ದಾಖಲು ಮಾಡುವುದಕ್ಕಿಂತ ಮುಂಚೆ ಸಂಬಂಧಪಟ್ಟ Chairman ರವರ ಅನುಮತಿಯನ್ನು ಪಡೆಯಬೇಕೆಂದು ನಿಯಮದಲ್ಲಿದೆ. ಕೆಲವು ಕಾರಣಗಳಿಗಾಗಿ ನಾವೆಲ್ಲ ಪ್ರತಿಭಟನೆ ಮಾಡುವಂತಹ ಸಂದರ್ಭದಲ್ಲಿ ನಮ್ಮನ್ನು ಬಂಧನ ಮಾಡಿದರೆ, ಅದನ್ನು ತಮ್ಮ ಗಮನಕ್ಕೆ ತರುತ್ತಾರೆ. ಆ ನಂತರವಾದರೂ ಸಹ ತಮ್ಮ ಗಮನಕ್ಕೆ ತರುತ್ತಾರೆ. ಇದು ನಿಯಮ. ಈ ನಿಯಮ ಉಲ್ಲಂಘನೆ ಆಗುವುದಕ್ಕೆ ಏನಾದರೂ ಕಾರಣ ಇದೆಯೇ ಎಂಬ ಬಗ್ಗೆ ಎಲ್ಲವನ್ನು ನೋಡೋಣ,. ತಮಗೆ ಏನಾದರೂ ಅದರಿಂದ ನೋವಾಗಿದ್ದರೆ ಅಥವಾ ತಮ್ಮ ಪೀಠಕ್ಕೆ ಏನಾದರೂ ಅಗೌರವವಾಗಿದ್ದರೆ, ಅದು ಎಲ್ಲಾ ವ್ಯವಸ್ಥೆಗೂ ಆಗಿರುವಂತಹ ಅಗೌರವ. ಅಲ್ಲಿ ಏನಾಗಿದೆ ಎಂದು ನೋಡೋಣ. ನ್ಯಾಯಯುತವಾಗಿ ನಡೆಯುವುದಕ್ಕೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ, ಅದೆಲ್ಲವನ್ನು ಕೈಗೊಳ್ಳೋಣ. ಮಾನ್ಯ ಸದಸ್ಯರು ಹೇಳಿದಕ್ಕೆ ನಮ್ಮ ಸಹಮತ ಇದೆ. ಇದಕ್ಕೆ ನಮ್ಮ ಗೊಂದಲವಿಲ್ಲ.

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಈಗ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆಂದು ಸುಮ್ಮನೆ ಇದ್ದೇನೆ. ಇದನ್ನು ಸರ್ಕಾರ ನೋಡಬೇಕಲ್ಲವೇ? ಈ ವಿಷಯ ದಿನಪತ್ರಿಕೆಗಳಲ್ಲಿ ಬಂತು. ಅಲ್ಲಿ ಗಲಾಡೆ ನಡೆದ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ಇದ್ದೇನೆ. ನಾನು ಬೆಂಗಳೂರಿನಲ್ಲಿ ಇದ್ದಂತಹ ಸಂದರ್ಭದಲ್ಲಿ ಅಲ್ಲಿ ಯಾವುದೋ ಒಂದು ಶಾಲೆಯಲ್ಲಿ ಗಲಾಟೆ

ಆಗಿರುವುದಕ್ಕೆ ನನ್ನ ವಿರುದ್ಧ ಯಾರೋ ಒಬ್ಬರು ದೂರು ಕೊಟ್ಟರೆ, ಆ ದೂರನ್ನು ತೆಗೆದುಕೊಂಡು FIR ಮಾಡಿ ಮತ್ತೆ atrocity case ಹಾಕಿ ರಾತ್ರಿ 12.30 ಗಂಟೆಯ ಮೇಲೆ ನ್ಯಾಯಾಲಯಕ್ಕೆ ಸಲ್ಲಿಸುತ್ತಾರೆಂದರೆ ಹೇಗೆ? ಅ ವಿಷಯ ದಿನಪತ್ರಿಕೆಗಳಲ್ಲಿ ಬಂದಿದೆ. ಅದನ್ನು ಸರ್ಕಾರ ನೋಡಬೇಕಾಗಿತ್ತು. ಅದನ್ನು ಮಾನ್ಯ ಗೃಹ ಸಚಿವರು ನೋಡಬೇಕಾಗಿತ್ತು. ಬೇರೆ ಸಚಿವರು ನೋಡಬೇಕಾಗಿತ್ತು. ಇದು ನನ್ನ ವೈಯಕ್ತಿಕವಲ್ಲ. ಈ ರೀತಿಯಾದರೆ, ನಾಳೆ ದಿವಸ ಯಾರು ಏನೂ ಬೇಕಾದರೂ ಮಾಡುತ್ತಾರೆ. ಆಗ ಯಾರು ಇದನ್ನು ಹೇಳುವವರು, ಕೇಳುವವರು ಇಲ್ಲದಂತಾಗುತ್ತದೆ.

**ಶ್ರೀ ಬಿ.ಕೆ,ಹರಿಪ್ರಸಾದ್(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ತಮಗೆ ಆಗಿರುವಂತಹ ಅವಮಾನ ಅಲ್ಲ. ತಾವು ಕುಳಿತ್ತಿರುವಂತಹ ಜಾಗ ಸಂವಿಧಾನಿಕವಾಗಿ ರಕ್ಷಣೆ ಇರುವಂತಹ ಜಾಗ. ನಾಳೆ ದಿವಸ ಯಾರಾದರೂ ಮಾನ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು arrest ಮಾಡುವುದಕ್ಕೆ ಆಗುತ್ತದೆಯೇ? ಒಬ್ಬ MLA or MLC arrest ಮಾಡಬೇಕೆಂದರೆ, ತಮ್ಮ ಅನುಮತಿಯನ್ನು ಪಡೆದುಕೊಳ್ಳಬೇಕಾಗುತ್ತದೆ. ತಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದರೆ ಸರ್ಕಾರದಿಂದ ಅಥವಾ ರಾಜ್ಯಪಾಲರಿಂದ ಅನುಮತಿ ಪಡೆದುಕೊಂಡು ಮಾಡಬೇಕಾಗುತ್ತದೆ. ಈ ರೀತಿ ಏಕಾಏಕಿ ಮಾಡಿರುವಂತಹದ್ದು ಅದು ಕಾನೂನಿನ ಉಲ್ಲಂಘನೆ. ಈ ರೀತಿ ಮಾಡಿರುವಂತಹ ಅಧಿಕಾರಿಗಳನ್ನು ತಕ್ಷಣ suspend ಮಾಡಬೇಕಾಗುತ್ತದೆ.

**ಸಭಾಪತಿಯವರು:-** ನನಗೆ ರಾತ್ರಿ 3 ಗಂಟೆಗೆ ಎಸ್‌ಪಿಯವರು ಪೋನ್ ಮಾಡಿ Sorry Sir, ನಿಮ್ಮ ಮೇಲೆ FIR ಆಗಿದೆ. Case register ಆಗಿದೆ ಎಂದು ಹೇಳುತ್ತಾನೆ.

**ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ಎಸ್‌ಪಿ ಯವರ ವಿರುದ್ದ ಕ್ರಮತೆಗೆದುಕೊಳ್ಳಬೇಕು. ತಮಗೆ ರಾತ್ರಿ 3.00 ಗಂಟೆಗೆ ಎಸ್‌ಪಿ ಯವರು ಪೋನ್ ಮಾಡುತ್ತಾರೆಂದರೆ, ಅವರಿಗೆ ಎಷ್ಟು ಧೈರ್ಯ. ಅಷ್ಟೋತ್ತಿನಲ್ಲಿ ಪೋನ್ ಮಾಡಿ ತಮ್ಮ ವಿರುದ್ದ case register ಆಗಿದೆ ಎಂದು ಹೇಳಿದ್ದಾರೆಂದರೆ, ಇದು ನಮ್ಮ ರಾಜ್ಯಕ್ಕೆ ಒಂದು ದುರಂತ. ಹಾಗಾಗಿ, ಆ ಅಧಿಕಾರಿಯ ವಿರುಧ್ಧ ಕ್ರಮತೆಗೆದುಕೊಳ್ಳಬೇಕು. ನಮ್ಮ ರಾಜ್ಯಕ್ಕೆ ಒಂದು ಸಂದೇಶ ಹೋಗಲಿ. ಇಂತಹ ದೊಡ್ಡ ಸ್ಥಾನದಲ್ಲಿ ಇರುವವರ ಮೇಲೆಯೇ ಈ ರೀತಿಯಾದರೆ, ಇನ್ನೂ ಜನ ಸಾಮಾನ್ಯರ ಗತಿ ಏನು?

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದನ್ನು ಸರ್ಕಾರ ಸಂಪೂರ್ಣವಾಗಿ ನೋಡಿದೆ. ಅಲ್ಲಿ incident ಏನಾಗಿದೆಂದು ನಾನು ಪತ್ರಿಕೆಗಳಿಂದ ಮತ್ತು ಮಾಧ್ಯಮಗಳಿಂದ ತಿಳಿದುಕೊಂಡಿದ್ದೇನೆ. ಇದರಲ್ಲಿ ಎರಡು ವಿಷಯ ಇದೆ. ಒಂದು FIR. FIR ನಲ್ಲಿ atrocity ಇದೆ. Is there any exchange words between the complainant and ಸಭಾಪತಿ ಎಂದು ಬೇಕಾಗುತ್ತದೆ. There is no chance. Because, Hon'ble Chairman is in the tour and very much He is in Bangalore. ಆ ಸಮಯದಲ್ಲಿ atrocity ಹೇಗೆ attract ಆಗುತ್ತದೆ? Atrocity attract ಆಗಬೇಕಾದರೆ, exchange of words ಏನೂ ಇಲ್ಲ. ಮಾನ್ಯ ಸಭಾಪತಿಯವರು ಗಲಾಟೆ ನಡೆದ ಜಾಗದಲ್ಲಿ ಇಲ್ಲ. ಯಾರೋ ಒಬ್ಬರು ಈ ರೀತಿಯಾಗಿದೆ ಎಂದು ದೂರನ್ನು ಕೊಟ್ಟ ಮಾತ್ರಕ್ಕೆ should they not aware of that? ಸಭಾಪತಿಯವರು ಇಲ್ಲಿ ಇದ್ದಾರೆಯೇ ಅಥವಾ ಎಲ್ಲಿ ಇದ್ದಾರೆ ಇದು atrocity attract ಆಗುತ್ತದೆಯೇ ಅಥವಾ ಇಲ್ಲವೇ ಎನ್ನುವುದು ಒಬ್ಬ ಜಿಲ್ಲೆಯ ಆಡಳಿತವನ್ನು ನೋಡಿಕೊಳ್ಳುವಂತಹ Superintendent of Police ರವರಿಗೆ ಇಲ್ಲವೆಂದರೆ, ನಾಳೆ ದಿವಸ ಸಾಮಾನ್ಯ ಜನರ ಪರಿಸ್ಥಿತಿ ಏನಾಗುತ್ತದೆ? ಸಭಾಪತಿಯವರು ಬೆಂಗಳೂರಿನಲ್ಲಿ ಇರುವಂತಹ ಸಂದರ್ಭದಲ್ಲಿ first citizen of the State, ಅವರ ಅನುಮತಿ ಬೇಕು. ಅವರ ಅನುಮತಿ ತೆಗೆದುಕೊಂಡು ಆ ಮೇಲೆ ಏನಾದರೂ ಮಾಡಲಿ. ಹಾಗಾಗಿ, ಇದು atrocity attract ಆಗದಯೇ atrocity case ಹಾಕಿರುವಂತಹ ಸಂದರ್ಭದಲ್ಲಿ ಇದು ಸಭಾಪತಿಯವರ ಸ್ಥಾನಕ್ಕೆ ಬಹಳ ದೊಡ್ಡ ಅಗೌರವ ಮಾಡಿದಂತಾಗಿದೆ. ಇದರಿಂದ ನಾವೆಲ್ಲರೂ ತಲೆ ತಗ್ಗಿಸುವಂತಹ ವಿಚಾರವಾಗಿದೆ. ಹಾಗಾಗಿ, ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ನಾವು ಮಾನ್ಯಸಭಾಪತಿಯವರನ್ನು ಪೀಠದ ಮೇಲೆ ಕುಳಿಸಿ ಮಾತನಾಡುವುದು ಸರಿಯಲ್ಲ. ಆದರೂ ಸಹ ಅನಿವಾರ್ಯ ಪರಿಸ್ಥಿತಿ ಇದೆ. ಇದು ಅವರಿಗೆ ಆಗಿರುವಂಥದ್ದು ಅಲ್ಲ. ಆ ಪೀಠಕ್ಕೆ ಆಗಿರುವಂತಹ ವಿಚಾರವನ್ನು ನಾವೆಲ್ಲರೂ ಗಂಭೀರವಾಗಿ ತೆಗೆದುಕೊಳ್ಳಬೇಕು, ಇದನ್ನು ಸರ್ಕಾರ ಕೂಡಲೇ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದು ಗಂಭೀರವಾಗಿ ಪರಿಗಣಿಸಬೇಕಾದಂತಹ ವಿಚಾರ. ಸಭಾಧ್ಯಕ್ಷರ ಮತ್ತು ಸಭಾಪತಿಯವರ ಪೀಠಕ್ಕೆ ವಿಶೇಷವಾದಂತಹ ಅವಕಾಶಗಳು ಇವೆ. ನಮ್ಮ ಸಂವಿಧಾನದಲ್ಲಿಯೂ ಇವೆ. Rules of Procedure ನಲ್ಲಿದೆ. ತಮಗೆ ಕೇವಲ ವಿಧಾನ ಮಂಡಲದ ಆಡಳಿತ ಮತ್ತು ಅಧಿವೇಶನ ನಡೆಸುವುದಷ್ಟೇ ಅಲ್ಲ, judicial power ಸಹ ಇದೆ. ತಮ್ಮ ಎಷ್ಟೋ ನಿರ್ಣಯಗಳನ್ನು

ನ್ಯಾಯಾಲಯದಲ್ಲಿಯೂ ಸಹ ಪ್ರಶ್ನೆ ಮಾಡುವಂತಿಲ್ಲ. ಆ ರೀತಿಯ ಪೀಠದ ಸ್ಥಾನಮಾನದ ಬಗ್ಗೆ ಒಂದು FIR ಮಾಡಿರುವುದೇ ದೊಡ್ಡ ತಪ್ಪು. ಅದು ಅಪರಾಧ. ತಮ್ಮ ಜವಾಬ್ದಾರಿಯಲ್ಲಿ ಬರುವಂತಹ ನಮ್ಮ ಮೇಲೆ FIR ಹಾಕಿ arrest ಮಾಡಬೇಕೆಂದರೆ, ತಮ್ಮ ಅನುಮತಿಯನ್ನು ಪಡೆಯಬೇಕು. ಅಂತಹದ್ದರಲ್ಲಿ ತಮ್ಮ ಮೇಲೆ High Court Chief Justice and Supreme Court Chief Justice ಮೇಲೆ FIR ಮಾಡಿದಂತೆ ಇದು. ಇದನ್ನು ಮಾನ್ಯ ಗೃಹ ಸಚಿವರು ಸದನದಲ್ಲಿಯೇ ಇದ್ದಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಅದಕ್ಕೆ ಇದನ್ನು ಯಾರು ಮಾಡಿದ್ದಾರೆ, ಅವರ ವಿರುದ್ದ ಕ್ರಮ ಜರುಗಿಸಬೇಕು. ಏಕೆಂದರೆ, ಅವರಿಗೆ ಒಂದು lesson teach ಮಾಡಬೇಕಲ್ಲವೇ; ಆ ರೀತಿ ಮಾಡಲಿಲ್ಲವೆಂದರೆ, ಅವರು ಮುಂದೆಯೂ ಸಹ , ಇದೇ ರೀತಿ ಮಾಡಿಕೊಂಡು ಹೋಗುತ್ತಿರುತ್ತಾರೆ. ಇದು ತಮಾಷೆಯೇ? ಇದು ಉಡುಗಾಟವೇ? ಹಾಗಾದರೆ, ನಾವು ಎಲ್ಲಿ ಇದ್ದೇವೆ? ಇದರ ಅರ್ಥ ಏನು? ತಾವು ಬೆಂಗಳೂರಿನಲ್ಲಿ ಇದ್ದೀರಿ. ತಾವು ತಮ್ಮ ಜವಾಬ್ದಾರಿ ನಿರ್ವಹಣೆಯಲ್ಲಿದ್ದೀರಿ. ಅಲ್ಲಿ ಯಾರೋ ಒಬ್ಬರು ಒಂದು ದೂರು ಕೊಟ್ಟಿರುವುದಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಪೀಠದ ಮೇಲೆ FIR ಮಾಡಿದ್ದಾರೆಂದರೆ, ಇದಕ್ಕೆ ಅರ್ಥ ಏನು? ಹಾಗಾಗಿ, ಇದು ಗುರುತರವಾದ ಅಪರಾಧವಾಗಿದೆ. ದಯಮಾಡಿ ಮಾನ್ಯ ಗೃಹ ಸಚಿವರು ಸದನದಲ್ಲಿ ಇದರ ಬಗ್ಗೆ ಹೇಳಿಕೆ ಮಾಡಬೇಕು. ಯಾರು FIR ಮಾಡಿದ್ದಾರೆ, ಅವರ ವಿರುದ್ಧ ಕ್ರಮವಹಿಸಬೇಕೆಂದು ಅಗ್ರಹ ಮಾಡುತ್ತೇನೆ.

**ಸಭಾಪತಿಯವರು:–** ಎರಡು ದಿವಸವಗಳ ನಂತರ ಎಸ್‌ಪಿಯವರು ನಮ್ಮ ಮನೆಗೆ ಬಂದು ತಮ್ಮ ಕಡೆಯಿಂದ ತಪ್ಪಾಗಿದೆ ಎಂದು ಹೇಳಿದರು.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೇ, ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಈ ವಿಷಯದ ಮೇಲೆ ನಮ್ಮ ರಾಜ್ಯಕ್ಕೆ ಒಂದು ಸಂದೇಶ ಹೋಗಬೇಕು.

**ಡಾ||ಕೆ.ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅವರನ್ನು ಸದನಕ್ಕೆ ಕರೆಸಿ. ನಾವು ಅವರಿಗೆ ಛೀಮಾರಿ ಹಾಕಬೇಕಾಗುತ್ತದೆ. ಇದು ಈಗ ತಮಗೆ ಆಗಿದೆ. ನಾಳೆ ದಿವಸ ಎಲ್ಲರಿಗೂ ಆಗುತ್ತದೆ. ತಾವು ಬೆಂಗಳೂರಿನಲ್ಲಿ ಇದ್ದಾಗ, ಅಲ್ಲಿ ರಾತ್ರಿ 12.30 ಕ್ಕೆ FIR ಮಾಡುವಂತಹ ಅವಶ್ಯಕತೆ ಏನಿತ್ತು?

**Sri ALLAM VEERABHADRAPPA:** Superintendent should take action on those people who have filed this FIR. He cannot say apology. Hon'ble Chairman's part is not at all there. So, people have done it. Whether it is politically or non-politically, whoever done that mistake should be punished.

**ಶ್ರೀ ಹೆಚ್.ಎಂ.ರಮೇಶ್‌ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ಧನ್ಯವಾದಗಳು. ಮೊದಲನೆಯದಾಗಿ, ಎಸ್‌ಪಿ ಯವರು ಬಂದು sorry ಕೇಳಿರುವುದು ದೂರದ ಮಾತು. ತಾವು ಇಲ್ಲಿ ಶ್ರೀ ಬಸವರಾಜ ಹೊರಟ್ಟಿಯವರು ಮಾತ್ರವಲ್ಲ. ತಾವು ಇಲ್ಲಿ ಸಭಾಪತಿಗಳಾಗಿದ್ದೀರಿ. ಅಲ್ಲದೇ, ತಾವು ಹಿರಿಯ ಸದಸ್ಯರು ಇದ್ದೀರಿ. ನಮ್ಮ ದೇಶದಲ್ಲಿ ಯಾವ ಯಾವ ರಾಜ್ಯದಲ್ಲಿ ಮೇಲ್ಮನೆ ಇದೆ, ಅಂತಹ ಎಲ್ಲಾ ಮೇಲ್ಮನೆಗಳ ಪೈಕಿ ನಮ್ಮ ರಾಜ್ಯದಲ್ಲಿ ತಾವು ಹೆಚ್ಚು ಬಾರಿ ಆಯ್ಕೆಯಾಗಿ ಬಂದಿದ್ದೀರಿ. ತಮಗೆ ತಮ್ಮದೇ ಆದಂತಹ ಇತಿಹಾಸ ಇದೆ. ತಮ್ಮನ್ನು ಎಸ್‌ಪಿಯವರು ಬಂದು sorry ಕೇಳಿದ್ದಾರೆಂದರೆ, ಅದು ಅವರು ಮಾಡಿರುವಂತಹ ಮೊದಲನೇ ತಪ್ಪು. ಅವರು ಏನು ಮಾಡುತ್ತಿದ್ದರು? ಅಲ್ಲಿ ಯಾರೋ ಒಬ್ಬ ಬಂದು ದೂರು ಕೊಡುತ್ತಾನೆ. ತಾವು ಅಲ್ಲಿ spot ನಲ್ಲಿದ್ದು, FIR ಮಾಡಿದರೆ that is correct. ಯಾರೋ ಒಬ್ಬ ತಲೆ ಕೆಟ್ಟವನು ಬಂದು ಇಲ್ಲಿ ಇರುವಂತಹ 20 ಜನರ ಹೆಸರನ್ನು ಕೊಟ್ಟು ಇವರೆಲ್ಲರೂ ನಮ್ಮನ್ನು ಬೈದರು, ಹೊಡೆದರು ಎಂದು ಹೇಳುತ್ತಾನೆ. ಅಷ್ಟಕ್ಕೆ ಇವರೆಲ್ಲರ ಮೇಲೆ FIR ಮಾಡಿ ಬಿಡುತ್ತಾರೆಯೇ? Still FIR is there. ಈಗ ಪೋಲೀಸರು B-Report ಮಾಡಿದರೂ ಸಹ, ನಾಳೆ ದಿವಸ ಆ ದೂರುದಾರರು ಅದನ್ನು challenge ಮಾಡಬಹುದು. ಅವರು ಏನಾದರೂ ಅದನ್ನು challenge ಮಾಡಿದರೆ, ನಾವು ಸುಮಾರು 4-5 ವರ್ಷಗಳ ಕಾಲ ನ್ಯಾಯಾಲಯಕ್ಕೆ ಅಲೆಯಬೇಕಾಗುತ್ತದೆ. ಅಲ್ಲಿನ ಮೇಲಾಧಿಕಾರಿಗಳು, Investigation Officer ರವರು ಅದನ್ನು ನೋಡಿ FIR ಮಾಡಬೇಕಾಗಿತ್ತು. ಅದನ್ನು ನೋಡಿ ಮಾಡದಿರುವುದರಿಂದ ಅವರು suspend ಆಗಲೇ ಬೇಕಾಗುತ್ತದೆ.

(ಮುಂದು.,)

(243) 10.03.2022 03.40 LL-RN

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಎಂ. ರಮೇಶ್‌ಗೌಡ(ಮುಂದು...)**

ಏಕೆಂದರೆ, ತಮ್ಮ ವಿರುದ್ಧ ಎಫ್.ಐ.ಆರ್. ಮಾಡಿದಂತಹ ಸಬ್ ಇನ್ಸ್‌ಪೆಕ್ಟರ್, ಇನ್ಸ್‌ಪೆಕ್ಟರ್ ಅಥವಾ Investigation Officer ಯಾರು ಇರುತ್ತಾರೋ, ಅವರು ಆ ಸಂದರ್ಭದಲ್ಲಿ ಅದನ್ನು ನೋಡಿ ಎಫ್.ಐ.ಆರ್. ಮಾಡದೇ ಇರುವುದರಿಂದ ದಯಮಾಡಿ ಅವರು ಸಸ್ಪೆಂಡ್ ಆಗಲೇಬೇಕು. ಅವೊತ್ತಿನ ದಿವಸ ತಮ್ಮ ವಿರುದ್ಧ ಎಫ್.ಐ.ಆರ್. ಆದ ವಿಷಯ ಕೆಲವೊಂದು ಮಾಧ್ಯಮಗಳಲ್ಲಿ ಚರ್ಚೆ ಆಗುತ್ತಿತ್ತು ಹಾಗೂ ದಿನಪತ್ರಿಕೆಯಲ್ಲಿಯೂ ಸಹ ವರದಿಯಾಗಿರುತ್ತದೆ. ಅದರ ಬಗ್ಗೆ ಕೆಲವರು, "ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಯಾರಾದರೂ ದೂರು ನೀಡಿದರೆ, ತತ್‌ಕ್ಷಣವೇ ಸಂಬಂಧಪಟ್ಟವರ ವಿರುದ್ಧ ಎಫ್.ಐ.ಆರ್. ಮಾಡಬೇಕು. ಎಫ್.ಐ.ಆರ್. ಮಾಡಿದ ನಂತರ ವಿಚಾರಣೆ ಮಾಡಬೇಕು" ಎಂದು ಹೇಳುತ್ತಿದ್ದರು. ಆದರೆ, ನಾನು ಹೇಳುವುದೇನೆಂದರೆ, ಹೌದು, ಈ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಇದೆ; ಅದನ್ನು ನಾನು ಸಹ ಒಪ್ಪುತ್ತೇನೆ. ಎಫ್.ಐ.ಆರ್. ಯಾವಾಗ ಮಾಡಬೇಕೆಂದರೆ ಸಂಬಂಧಪಟ್ಟ ಐ.ಓ. ನವರು ಅಲ್ಲಿ ಕೂಲಂಕಷವಾಗಿ ಪರಿಶೀಲನೆ ಮಾಡಿದ ನಂತರ ಎಫ್.ಐ.ಆರ್. ಮಾಡಬೇಕು.

ಕೆಲವರು ಯಾವುದೋ ದುರುದ್ದೇಶದಿಂದ ದೂರು ಕೊಡುತ್ತಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಈ ಸದನದಲ್ಲಿ ಇದ್ದಾರೆ. ನಾನು ಉದಾಹರಣೆಗೆ ಹೇಳುವುದೇನೆಂದರೆ, ಇತ್ತೀಚೆಗೆ ನಡೆಯುವಂತಹ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರಾದ ತಮ್ಮ ವಿರುದ್ಧ ಏನು ಎಫ್.ಐ.ಆರ್. ಆಗುತ್ತದೆ, ಅದೇ ರೀತಿ ದೇವನಹಳ್ಳಿಯಲ್ಲಿ ಕೆಲವರು ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿದ್ದಾರೆಂದು ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಿರುತ್ತೇನೆ. ಅದಕ್ಕೆ ಮಾನ್ಯ ಕಂದಾಯ ಸಚಿವರು ಸಂಬಂಧಪಟ್ಟವರ ವಿರುದ್ಧ ದಂಡ ವಸೂಲಿ ಮಾಡಬೇಕೆಂದು ಆದೇಶ ನೀಡಿರುತ್ತಾರೆ. ಅದರ ಮೇರೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ಅಕ್ರಮ ಗಣಿಗಾರಿಕೆ ಮಾಡುವವರಿಂದ ಎರಡೂವರೆ

ಕೋಟಿಯಿಂದ ಮೂರು ಕೋಟಿ ರೂಪಾಯಿ ದಂಡ ವಸೂಲಿ ಮಾಡಿರುತ್ತಾರೆ. ಇತ್ತೀಚೆಗೆ ಚುನಾವಣೆ ನಡೆಯುವಂತಹ ಸಂದರ್ಭದಲ್ಲಿ ನಾನು ಕನಕಪುರದಲ್ಲಿದ್ದೆನು. ಆದರೆ, ಒಬ್ಬ ವ್ಯಕ್ತಿ, "ಶ್ರೀ ರಮೇಶ್‌ಗೌಡ ಪರವಾಗಿ ಕೆಲವು ಜನರು ಮತ್ತು ಶ್ರೀ ರಮೇಶ್‌ಗೌಡರವರು ನನ್ನ ಬಳಿ ಬಂದು ನನಗೆ ಗನ್ ಇಟ್ಟಿರುತ್ತಾರೆ. ಆದುದರಿಂದ ಅವರ ವಿರುದ್ಧ ಎಫ್.ಐ.ಆರ್. ಮಾಡಬೇಕು" ಎಂದು ಹೇಳಿರುತ್ತಾನೆ. ಆದರೆ, ನಾನು ಅವೊತ್ತಿನ ದಿವಸ ಆ ಸ್ಥಳದಲ್ಲಿ ಇರಲೇ ಇಲ್ಲ. ಅಲ್ಲದೇ, ನನ್ನ ವಿರುದ್ಧ ಒಂದು ದಿನ ಪೂರ್ತಿ ಅಂದರೆ, 24 ಗಂಟೆ ಧರಣಿ ಮಾಡುತ್ತಾರೆ. ಆದರೆ, "ಶ್ರೀ ರಮೇಶ್‌ಗೌಡರವರ ಫೋನ್ ಕಾಲ್ಸ್ ಡಿಟೇಲ್ಸ್ ನಮ್ಮ ಬಳಿ ಇದ್ದು, ಆ ಸಂದರ್ಭದಲ್ಲಿ ಅವರು ಸಂಬಂಧಪಟ್ಟ ಸ್ಥಳದಲ್ಲಿ ಇರಲೇ ಇಲ್ಲ. ಹಾಗಾಗಿ, ಅವರ ವಿರುದ್ಧ ಎಫ್.ಐ.ಆರ್. ಮಾಡುವುದಕ್ಕೆ ಬರುವುದೇ ಇಲ್ಲ" ಎಂದು ಕಮೀಷನರ್ ಮತ್ತು ಡಿ.ಸಿ.ಪಿ.ಯವರು ನನ್ನ ವಿರುದ್ಧ ಎಫ್.ಐ.ಆರ್. ಮಾಡುವುದಿಲ್ಲ. ನಮ್ಮ ವಿರುದ್ಧವೇ ಆ ರೀತಿ ಆಗಬೇಕಾದರೆ ಜನಸಾಮಾನ್ಯರ ವಿರುದ್ಧ ಕಾನೂನನ್ನು ಯಾವರೀತಿ ದುರುಪಯೋಗ ಪಡಿಸಿಕೊಳ್ಳುತ್ತಾರೆ ಎಂಬುದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಒಂದು ವೇಳೆ ಇನ್ಸ್‌ಪೆಕ್ಟರ್ ಮನಸ್ಸು ಮಾಡಿದರೆ ನನ್ನ ವಿರುದ್ಧ ಎಫ್.ಐ.ಆರ್. ದಾಖಲು ಮಾಡಬಹುದಿತ್ತು. ಹಾಗಾಗಿ, ತಮ್ಮ ವಿರುದ್ಧ ಎಫ್.ಐ.ಆರ್. ಮಾಡಿರುವಂತ ಅಧಿಕಾರಿ ಯಾರು ಇದ್ದಾನೆ ಆತ ಪೀಠಕ್ಕೆ ಮಾಡಿರುವಂತಹ ದೊಡ್ಡ ಅಪಮಾನ ಮತ್ತು ಅಧಿಕಾರ ದುರುಪಯೋಗ. ಹಾಗಾಗಿ, ಆ ಅಧಿಕಾರಿ ತಕ್ಷಣವೇ ಸಸ್ಪೆಂಡ್ ಆಗಲೇಬೇಕು.

**ಡಾ: ತೇಜಸ್ವಿನಿ ಗೌಡ(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅತ್ಯಂತ ಸೂಕ್ಷ್ಮ ಮತ್ತು ಗಂಭೀರವಾದ ವಿಚಾರವನ್ನು ನಾವು ಇವೊತ್ತಿನ ದಿವಸ ಚರ್ಚೆ ಮಾಡುತ್ತಿದ್ದೇವೆ. ಅನೇಕ ಬಾರಿ ಜನಪ್ರತಿನಿಧಿಗಳನ್ನು ನಿರ್ಲಕ್ಷಿಸುವುದು, ಅಗೌರವ ತೋರಿಸುವಂಥದ್ದು ಮತ್ತು ಗುರುತಿಸದೇ ಇರುವಂಥದ್ದು ಇವೆಲ್ಲವೂ ಕೂಡ ಸ್ವಪ್ರತಿಷ್ಠೆಯ ವಿಷಯಕ್ಕೆ ಸಂಬಂಧಿಸಿದ್ದು, ಅದರಲ್ಲಿಯೂ ಮುಖ್ಯವಾಗಿ ಸುರಕ್ಷತೆಯ ಭದ್ರತಾ ಲೋಪ ಕೂಡ ಆಗುತ್ತದೆ. ನಮ್ಮ ರಾಜ್ಯದ ಕೆಳಮನೆಯಲ್ಲಿ 225 ಶಾಸಕರು ಮತ್ತು ಮೇಲ್ಮನೆಯಲ್ಲಿ 75 ಜನ ಶಾಸಕರು ಇರುತ್ತೇವೆ. ಅನೇಕ ಬಾರಿ ಸಿಬ್ಬಂದಿಗಳು ನಮ್ಮನ್ನು ಪ್ರತಿನಿತ್ಯ ನೋಡುತ್ತಿದ್ದರೂ ಸಹ "who is who" ಎಂದು

ಗೊತ್ತಾಗುವುದಿಲ್ಲ. ಅದರ ಅರ್ಥ ಅಂತಹ ವ್ಯಕ್ತಿಗಳನ್ನು ಯಾರು ಅಲ್ಲಿಗೆ ನೇಮಕ ಮಾಡುತ್ತಾರೆ ಅವರು ಇದರಲ್ಲಿ ವಿಧಾನಸೌಧದ ಸುರಕ್ಷತೆ, ಶಾಸಕರ ಸುರಕ್ಷತೆ ಮತ್ತು ಶಿಸ್ತಿನ ವಿಚಾರದಿಂದ ಒಂದು ನಿರ್ದಿಷ್ಟವಾದ ಮಾನದಂಡವನ್ನು ಅನುಸರಿಸಬೇಕೆಂದು ನಾನು ಬಯಸುತ್ತೇನೆ.

ಎರಡನೆಯದಾಗಿ, ಈ ಕಾನೂನು ಯಾವ ದುರ್ಬಲ ವರ್ಗದವರಿಗೆ ಅಥವಾ ಯಾವ ಮಾನವ ಹಕ್ಕುಗಳ ರಕ್ಷಣೆಗೆ ಎಂದು ಸಂವಿಧಾನದಲ್ಲಿ ಮಾಡಲಾಗಿದೆ, ಆ ಕಾನೂನನ್ನು ಅರ್ಥ ಮಾಡಿಕೊಳ್ಳದೇ ಇರುವಂಥದ್ದು ಒಂದು. ಅರ್ಥ ಮಾಡಿಕೊಂಡು ದುರುಪಯೋಗ ಮಾಡುವಂಥದ್ದು ಇನ್ನೊಂದು ಹಾಗೂ ಕಾನೂನು ಗೊತ್ತಿದ್ದರೂ ಸಹ ಯಾರ ವಿರುದ್ಧ ಬಳಸಬಾರದು ಎಂಬ ಸೂಕ್ಷ್ಮತೆಗಳನ್ನು ಅರ್ಥ ಮಾಡಿಕೊಳ್ಳದೇ ಅದನ್ನು ಬಳಸುವುದರಿಂದಾಗಿ ಒಂದು ಕಡೆ ಯಾರಿಗೆ ರಕ್ಷಣೆ ಸಿಗಬೇಕೋ ಅವರಿಗೆ ಅನ್ಯಾಯ ಆಗುತ್ತಿದೆ. ಮತ್ತೊಂದು ಕಡೆ ಅನೇಕ ಜನಪ್ರತಿನಿಧಿಗಳ ವಿರುದ್ಧ ಸುಳ್ಳು ಮೊಕದ್ದಮೆಗಳನ್ನು ಹಾಕುವಂಥದ್ದು ಇರುತ್ತದೆ. ಚುನಾವಣೆ ಬಂತೆಂದರೆ ಈ ದೇಶದಲ್ಲಿ ಇಷ್ಟು ಮೊಕದ್ದಮೆ ಇರತಕ್ಕಂತಹ ರಾಜಕಾರಣಿ ಇದ್ದಾರೆಂದು ಇಡೀ ವಲಯಕ್ಕೆ ಕೆಟ್ಟ ಹೆಸರು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಈ ರಾಜ್ಯದ ಸಭಾಪತಿ ಪೀಠದ ಮೇಲೆ ಆ ವ್ಯಕ್ತಿತ್ವದ ಮೇಲೆ ರಾತ್ರಿ ೦3-೦೦ ಗಂಟೆಯಲ್ಲಿ ಎಫ್.ಐ.ಆರ್. ಹಾಕುತ್ತಾರೆ ಎಂದರೆ, ಅದೇನು ಅಂತರಾಷ್ಟ್ರೀಯ ಟೆರರಿಸ್ಟ್ ಕೇಸ್ ಆಗಿರುತ್ತದೆಯೇ?

**ಸಭಾಪತಿಯವರು:-** ನನ್ನ ವಿರುದ್ಧ ರಾತ್ರಿ 12-30 ಗಂಟೆಗೆ ಆನ್‌ಲೈನ್‌ನಲ್ಲಿ ಎಫ್.ಐ.ಆರ್. ರಿಜಿಸ್ಟರ್ ಮಾಡಿರುತ್ತಾರೆ. ತದನಂತರ, ಆ ಬಗ್ಗೆ ಬೆಳಗಿನ ಜಾವ ೦3-೦೦ ಗಂಟೆಗೆ ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ.

**ಡಾ: ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ತಪ್ಪು. ಹಾಗಾಗಿ, ಅವರನ್ನು ಸಂವೇದನಾಶೀಲಗೊಳಿಸಬೇಕು. ವಿ.ಐ.ಪಿ. ಕರ್ತವ್ಯ ಮಾಡುವವರಿಗೆ "who is who" ಕಲಿಸಬೇಕು ಮತ್ತು ಆ ಅಧಿಕಾರಿಗಳಿಗೆ ಗೃಹ ಇಲಾಖೆಯಲ್ಲಿ ಸಂಬಂಧಪಟ್ಟಂತಹ ಒಂದು ಪರಿಣಿತಿಯನ್ನು ಕೊಟ್ಟ ನಂತರವೇ ಇಂತಹ ಕೆಲಸಗಳಿಗೆ ನಿಯೋಜನೆ ಮಾಡಬೇಕು. ಇಲ್ಲದೇ ಹೋದರೆ, ತಮ್ಮ ಸ್ಥಾನಕ್ಕೆ ಇರತಕ್ಕಂತಹ ಮತ್ತು ಈ ಸದನದ ಸದಸ್ಯರ ಹಕ್ಕುಗಳ ರಕ್ಷಣೆಗಾಗಿ ಹಕ್ಕುಚ್ಯುತಿಯನ್ನು ಪ್ರಸ್ತಾಪಿಸಬೇಕಾಗುವ ಕಾರಣ ಇದು ಮುಂದುವರೆಯದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಹಾಗಾಗಿ,

ಆ ಕಾನೂನುಗಳ ದುರುಪಯೋಗ ಆಗದ ರೀತಿಯಲ್ಲಿ ಕ್ರಮ ವಹಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಡಾ: ಕೆ. ಗೋವಿಂದರಾಜು(ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಈ ಸದನಕ್ಕೆ ಬಂದಿದ್ದಾರೆ. ಹಾಗಾಗಿ, ತಮ್ಮ ಮೂಲಕ ನಾನು ಅವರನ್ನು ವಿನಂತಿಸುವುದೇನೆಂದರೆ, ತಮ್ಮ ವಿರುದ್ಧ ತಪ್ಪಾಗಿ ಎಫ್.ಐ.ಆರ್. ಮಾಡಿದಂತಹ ಪೊಲೀಸ್ ಅಧಿಕಾರಿಯನ್ನು ಈ ಸದನಕ್ಕೆ ಕರೆಯಿಸಿ ಛೀಮಾರಿ ಹಾಕಬೇಕೆಂದು ಮನವಿ ಮಾಡುತ್ತೇನೆ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಮ್ಮನ್ನು ರಕ್ಷಣೆ ಮಾಡಬೇಕಾಗಿರುವುದು ಪೀಠ. ಪೀಠದ ವಿರುದ್ಧ ಈ ರೀತಿಯ ಗುರುತರವಾದ ಕ್ರಮ ಆದಾಗ, ಸರ್ಕಾರ ಸಂಬಂಧಪಟ್ಟವರ ವಿರುದ್ಧ ಈಗಾಗಲೇ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಈ ವಿಚಾರದಲ್ಲಿ ಈಗಲೇ ತಡವಾಗಿದೆ. ಏಕೆಂದರೆ, ರಾತ್ರಿ 12–30 ಗಂಟೆಗೆ ಮಾನ್ಯ ಸಭಾಪತಿಯವರ ವಿರುದ್ಧ ಎಫ್.ಐ.ಆರ್. ಹಾಕಿ, ಆ ಬಗ್ಗೆ ಬೆಳಗಿನ ಜಾವ 03–00 ಗಂಟೆಗೆ ಅವರಿಗೆ ಫೋನ್ ಮಾಡಿ ತಿಳಿಸುತ್ತಾರೆಂದರೆ, ಅರ್ಥ ಏನು? ಆದುದರಿಂದ, ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು.

**(ಗೊಂದಲ)**

**ಶ್ರೀ ಎಂ.ಎಲ್. ಅನಿಲ್ ಕುಮಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಎಸ್.ಪಿ.ಯವರು ತಮಗೆ ಫೋನ್ ಮಾಡಿ ಈ ವಿಷಯದಲ್ಲಿ ತಪ್ಪಾಗಿದೆ ಎಂದು ಒಪ್ಪಿಕೊಂಡು ಕ್ಷಮೆ ಕೇಳಬೇಕಾದರೆ, ಅದರಲ್ಲಿ ತಪ್ಪು ಮಾಡಿದ ಅಧಿಕಾರಿಯ ವಿರುದ್ಧ ಶಿಕ್ಷೆ ಆಗಲೇಬೇಕಲ್ಲವೇ? **(ಗೊಂದಲ)** ಆದರೆ, ಸಭಾನಾಯಕರು ಪರಿಶೀಲನೆ ಮಾಡುತ್ತೇವೆಂದು ಹೇಳುತ್ತಾರೆ.

**(ಗೊಂದಲ)**

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**(ಗೊಂದಲ)**

**ಸಭಾಪತಿಯವರು:–** ದಯಮಾಡಿ, ಎಲ್ಲಾ ಸದಸ್ಯರು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ವಿರುದ್ಧ ಎಫ್.ಐ.ಆರ್. ಹಾಕಿರುವ ವಿಚಾರ ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿಯಾದ ವಿಚಾರ ಸರ್ಕಾರಕ್ಕೆ ತಿಳಿದ ನಂತರವೂ ಸಹ ಇಷ್ಟು ದಿನ ಸರ್ಕಾರ ಸುಮ್ಮನೆ ಇರುವುದು ದೊಡ್ಡ ವಿಚಾರ.

**ಸಭಾಪತಿಯವರು:–** ಈ ಬಗ್ಗೆ ಮಾನ್ಯ ಗೃಹ ಸಚಿವರು ನನ್ನ ಜೊತೆ ಮಾತನಾಡಿರುತ್ತಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ತಮ್ಮ ಬಳಿ ಚರ್ಚೆ ಮಾಡಿದರೆ ಆಗುವುದಿಲ್ಲ. Concerned authority….

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ತಮ್ಮ ಜೊತೆ ಚರ್ಚೆ ಮಾಡಿದ್ದಾರೆಂದರೆ ಏನು ಅರ್ಥ? ನಾವು ಇಲ್ಲಿ individual ಆಗಿ ಮಾತನಾಡುತ್ತಿದ್ದೇವೆಯೇ? ನಾವು ಪೀಠದ ಬಗ್ಗೆ ಮಾತನಾಡುತ್ತಿದ್ದೇವೆ. ಅದರ ಹೊರತಾಗಿ, ನಾವು ಶ್ರೀ ಬಸವರಾಜ ಹೊರಟ್ಟಿಯವರು ಎಂದು ಮಾತನಾಡುತ್ತಿರುವುದಿಲ್ಲ. ಸಭಾಪತಿ ಪೀಠಕ್ಕೆ ಈ ರೀತಿ ಆದರೆ ಹೇಗೆ ಎಂದು ನಾವು ಮಾತನಾಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು:–** ಆಯಿತು, ತಾವು ದಯಮಾಡಿ ಕುಳಿತುಕೊಳ್ಳಿ.

(**ಗೊಂದಲ**)

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ಹಿಂದೆ ಮಾಜಿ ಮುಖ್ಯಮಂತ್ರಿಗಳಾದಂತಹ ಶ್ರೀ ಬಿ.ಎಸ್. ಯಡಿಯೂರಪ್ಪನವರ ಮನೆಗೆ ಅರ್ಧ ರಾತ್ರಿಯಲ್ಲಿ ನುಗ್ಗಿ, ಅವರ ಮೇಲೆ ಕೂಡ ತಮ್ಮ ಅಧಿಕಾರದ ದರ್ಪವನ್ನು ಚಲಾವಣೆ ಮಾಡಿರುವುದನ್ನು ಹಿಂದಿನ ಸರ್ಕಾರದ ಅವಧಿಯಲ್ಲಿ ನಾವು ನೋಡಿರುತ್ತೇವೆ. ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ, ಪಕ್ಷಾತೀತವಾಗಿ ಈ ರೀತಿಯ ದುರ್ವರ್ತನೆಗಳು ಯಾರ ವಿರುದ್ಧ ಕೂಡ ಆಗಬಾರದು. ಈ ಹಿಂದೆ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ವಿರುದ್ಧ ಹಾಗೂ ಶ್ರೀ ಡಿ.ಕೆ. ಶಿವಕುಮಾರ್‌ರವರ ಪತ್ನಿಯ ವಿರುದ್ಧವೂ ಸಹ ಈ ರೀತಿಯ ದುರ್ವರ್ತನೆಗಳು ಆಗಿರುತ್ತವೆ. ಹಾಗಾಗಿ, ಈ ವಿಚಾರದಲ್ಲಿ ನಾನು ಹೇಳುವುದೇನೆಂದರೆ, ಪೊಲೀಸ್‌ನವರು ಸಂವೇದನಾಶೀಲತೆಯನ್ನು ಮರೆತು ಕೆಲಸ ಮಾಡುತ್ತಿರುತ್ತಾರೆ. ಆದಾಗ್ಯೂ, ಇಂತಹ ವಿಷಯಗಳಲ್ಲಿ ಮಾನ್ಯ ಗೃಹ ಸಚಿವರಾಗಲಿ ಅಥವಾ ಗೃಹ ಇಲಾಖೆಯ ಉನ್ನತ ಅಧಿಕಾರಿಗಳು ಆ ರೀತಿ ಮಾಡಿ ಎಂದು ಹೇಳಿರುವುದಿಲ್ಲ. ಆದುದರಿಂದ, ಈ ಸೂಕ್ಷ್ಮತೆಯನ್ನು ಯಾರು ಮರೆಯುತ್ತಾರೆ, ಅವರಿಗೆ ಆ ಒಂದು ಕರ್ತವ್ಯವನ್ನು ನೆನಪು ಮಾಡುವಂಥದ್ದು ಆಗಬೇಕು. ಎಲ್ಲಾ ಸರ್ಕಾರಗಳ ಅವಧಿಯಲ್ಲಿ ಲೋಪ–ದೋಷಗಳು ಆಗಿರುತ್ತವೆ.

**ಶ್ರೀ ಆರಗ ಜ್ಞಾನೇಂದ್ರ(ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಸಂಗತಿಯಲ್ಲಿ ಸಭಾಪತಿ ಪೀಠದ ಬಗ್ಗೆ ಅಥವಾ ತಮ್ಮ ಬಗ್ಗೆ ನನಗಾಗಲಿ ಅಥವಾ ನಮ್ಮ ಸರ್ಕಾರಕ್ಕೆ ಆಗಲಿ ಅಪಾರವಾದ ಗೌರವ ಇರುತ್ತದೆ. ಅದರಲ್ಲಿ ಯಾವ ಪ್ರಶ್ನೆ ಇರುವುದಿಲ್ಲ. ಈ ವಿಷಯದಲ್ಲಿ ಇಡೀ ಸದನದ ಸದಸ್ಯರು ಕಾಳಜಿಯನ್ನು ವ್ಯಕ್ತ ಮಾಡಿದ್ದಾರೆ; ಇದು ಆಗಬಾರದಿತ್ತು ಎನ್ನುವ ಕಾಳಜಿಯಿಂದ ಅವರೆಲ್ಲರೂ ಮಾತನಾಡಿದ್ದಾರೆ. ಇದೆಲ್ಲದರ ಹಿನ್ನೆಲೆಯಲ್ಲಿ ನಾನು ಸಹ ಸಹಮತಿಯನ್ನು ವ್ಯಕ್ತಪಡಿಸುತ್ತೇನೆ. ಈ ವಿಷಯದಲ್ಲಿ ಮೊದಲಿನಿಂದಲೂ ತಮ್ಮ ಜೊತೆ ಸಂಪರ್ಕದಲ್ಲಿರುತ್ತೇನೆ. ಆ ಘಟನೆ ಆದ ಮಾರನೆಯ ದಿನವೇ ನಾನು ಸಭಾಪತಿಯವರ ಬಳಿ ಬಂದು ಅವರನ್ನು ಮಾತನಾಡಿಸಿ, ನಾನು ಏನೇನು ಮಾಡಬೇಕು ಎಂದು ಸಮಾಲೋಚನೆ ಮಾಡಿರುತ್ತೇನೆ. ನಾನು ಅದರ ವಿವರಕ್ಕೆ ಹೋಗುವುದಿಲ್ಲ. ಏಕೆಂದರೆ, ಆ ಪ್ರಕರಣ ಈಗ ಒಂದು ಹಂತದಲ್ಲಿರುತ್ತದೆ. ಸಭಾಪತಿಯವರಾಗಲಿ

ಅಥವಾ ಸಭಾಪತಿಯವರ ಪೀಠಕ್ಕಾಗಲಿ ಕಳಂಕ ಆಗದ ರೀತಿಯಲ್ಲಿ ನಾವು ಜವಾಬ್ದಾರಿ ವಹಿಸುತ್ತೇವೆ ಮತ್ತು ಅದರ ಬಗ್ಗೆ ವಿಶೇಷವಾದ ವರದಿಯನ್ನು ತರಿಸುತ್ತೇನೆ. ಯಾವ ಅಧಿಕಾರಿ ಯಾವ ರೀತಿ ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾನೆ, ಆತನ ವಿರುದ್ಧ ಕಠಿಣವಾದ ಕ್ರಮ ಜರುಗಿಸುವಂತಹ ಎಲ್ಲಾ ಕೆಲಸವನ್ನು ನಾವು ಖಂಡಿತವಾಗಿ ಮಾಡುತ್ತೇವೆ.

**(ಗೊಂದಲ)**

**ಶ್ರೀ ಹೆಚ್.ಎಂ. ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಅಧಿಕಾರಿಯನ್ನು ಕೂಡಲೇ ಸಸ್ಪೆಂಡ್ ಮಾಡಬೇಕು.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆ ಅಧಿಕಾರಿಯ ವಿರುದ್ಧ ತಾವು ಕೂಡಲೇ ಅಮಾನತು ಘೋಷಣೆ ಮಾಡಬೇಕು. ಆಮೇಲೆ ಉಳಿದ ಕ್ರಮ.

**(ಗೊಂದಲ)**

**ಡಾ: ಕೆ. ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ತಾವು ಆಮೇಲೆ ಏನು ಬೇಕಾದರೂ ಮಾಡಿ. ವರದಿ ತರಿಸಿಕೊಳ್ಳುವುದಕ್ಕೂ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುವುದಕ್ಕೂ ಏನು ಸಂಬಂಧ ಇದೆ?

**ಶ್ರೀ ಅಲ್ಲಂ ವೀರಭದ್ರಪ್ಪ(ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಎಸ್.ಪಿ.ಯವರು ತಮ್ಮ ಬಳಿ ಬಂದು ಕ್ಷಮೆ ಕೇಳಬೇಕಾದರೆ, ಯಾರು ತಪ್ಪು ಮಾಡಿದ್ದಾರೆಂದು ಗೊತ್ತಾದ ಮೇಲೆಯೇ ತಾನೆ ತಮ್ಮ ಬಳಿ ಬಂದು ಅವರು ಕ್ಷಮೆ ಕೇಳಿರುತ್ತಾರೆ. ಹಾಗಾಗಿ, ಈ ವಿಷಯ ಎಸ್.ಪಿ.ಯವರಿಗೆ ಗೊತ್ತಾದ ಮೇಲೆ ಸರ್ಕಾರಕ್ಕೆ ಗೊತ್ತಾಗಿರುವುದಿಲ್ಲವೇ ಅಥವಾ ಗೃಹ ಸಚಿವರಿಗೆ ಗೊತ್ತಾಗಿರುವುದಿಲ್ಲವೇ? ಆದುದರಿಂದ, ಕೂಡಲೇ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಹೌದು. ಕೂಡಲೇ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು.

**ಶ್ರೀ ಆರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ತಾವುಗಳೆಲ್ಲರೂ ಈ ಹಿಂದೆ ಸದನ ನಡೆಸಿರುತ್ತೀರಿ ಹಾಗೂ ತಾವು ಹಿರಿಯರಿದ್ದೀರಿ. ನಾನು ಇದಕ್ಕಿಂತಲೂ ಹೆಚ್ಚು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಎಲ್ಲಾ ವಿಷಯ ನಮಗೆ ಗೊತ್ತಿರುತ್ತದೆ. ಉದಾಹರಣೆಗೆ, ಕೆಲವೊಂದು ಸಂದರ್ಭದಲ್ಲಿ ನ್ಯಾಯಾಧೀಶರ ಎದುರಿನಲ್ಲಿಯೇ ಕೊಲೆ ನಡೆದಿರುತ್ತದೆ. ಅಂತಹ ಸಂದರ್ಭದಲ್ಲಿ ಅವರು ತಕ್ಷಣವೇ ಅಲ್ಲಿಯೇ ತೀರ್ಪು ಕೊಡುವುದಕ್ಕೆ ಬರುತ್ತದೆಯೇ? ಈ ಬಗ್ಗೆ ತಾವು ತಿಳಿಸಬೇಕು. ಹಾಗಾಗಿ, ಇಂತಹ ವಿಷಯಗಳಲ್ಲಿ ಕೆಲವು ನಿಯಮಗಳು ಇರುತ್ತವೆ.

**(ಗೊಂದಲ)**

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಅಧಿಕಾರಿಯನ್ನು ಕೂಡಲೇ ಸಸ್ಪೆಂಡ್ ಮಾಡಿ, ಆ ನಂತರ ಅದರ ಬಗ್ಗೆ ವರದಿ ತರಿಸಿಕೊಳ್ಳಲಿ.

**(ಗೊಂದಲ)**

(ಮುಂದು...)

(244) 10.03.2022 3.50 ವೈಎಲ್–ವಿಕೆ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ಮೇಲೆ ಯಾರು ಎಫ್.ಐ.ಆರ್. ದಾಖಲಿಸಿದ್ದಾರೆ, ಅವರನ್ನು ಅಮಾನತುಗೊಳಿಸಬೇಕು. **(ಗೊಂದಲ)** ಮಾನ್ಯ ಗೃಹ ಸಚಿವರೇ, ಬರೀ ಮಾತಿನಲ್ಲಿ ಗೌರವದ ಪ್ರಶ್ನೆ ಬೇಡ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈಗಾಗಲೇ ಆ ವಿಷಯ ಕುರಿತು ಸಾಕಷ್ಟು ಚರ್ಚೆಯಾಗಿದೆ. ವಿಚಾರಣೆ ಮಾಡುತ್ತೇವೆ, ನಂತರ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವಂಥದು bureaucratic answers. ನಮಗೆ ಅದೆಲ್ಲಾ ಬೇಕಾಗಿಲ್ಲ. Prima facie ಎಸ್.ಪಿ.ಯವರು ರಾತ್ರಿ ೩.೦೦ ಗಂಟೆಗೆ ತಮ್ಮ ಹತ್ತಿರವೇ ಬಂದು ತಪ್ಪಾಗಿದೆ ಎಂದು ಕ್ಷಮೆ ಕೇಳಿದ್ದಾರೆ. ತಮ್ಮ ಮೇಲೆ ಎಫ್.ಐ.ಆರ್. ದಾಖಲಿಸಿರುವುದರಿಂದ ಹಾಗೂ ಅಪಮಾನ ಮಾಡಿರುವುದಕ್ಕಾಗಿ ತಪ್ಪಾಗಿರುವುದು. ಹಾಗಾಗಿ ಆ ರೀತಿ ಅಪಮಾನ ಮಾಡಿದ ಮೇಲೆ ನ್ಯಾಯಾಧೀಶರಿಗೂ ಸಹ ಅವಕಾಶ ಇರುತ್ತದೆ. ಹಾಗಾಗಿ ವರದಿ ಬರುವವರೆಗೂ ಕಾಯುವ ಅವಶ್ಯಕತೆಯಿಲ್ಲ. ತಕ್ಷಣವೇ ಎಸ್.ಪಿ. ಯವರು ತಪ್ಪು ಮಾಡಿದ್ದು, ಅವರನ್ನು ಅಮಾನತುಗೊಳಿಸಬೇಕು. ಮಾನ್ಯ ಗೃಹ ಸಚಿವರು ಒಂದು ವೇಳೆ ಎಸ್.ಪಿ. ಯವರನ್ನು ಅಮಾನತುಗೊಳಿಸಲು ಸಾಧ್ಯವಿಲ್ಲವೆಂದು ಹೇಳಿದರೆ, ನಾವೆಲ್ಲರೂ ಹೊರಗೆ ಹೋಗುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಯಾರು ತಮ್ಮ ಮೇಲೆ ಎಫ್.ಐ.ಆರ್. ದಾಖಲಿಸಿದ್ದಾರೆ, ಅವರನ್ನೂ ಈ ಕೂಡಲೇ ಅಮಾನತುಗೊಳಿಸಬೇಕೆಂದು ತಾವು ಘೋಷಣೆ ಮಾಡಬೇಕು. ಈ ಕ್ಷಣವೇ ಆ ಎಸ್.ಪಿ. ಅಮಾನತು ಆಗಬೇಕು.

**ಶ್ರೀ ಹೆಚ್.ಎಂ.ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಇದೊಂದು ರೀತಿ ಮಹಾ ಅಪರಾಧವಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಒಂದು ಗಂಭೀರತೆ ಏನೆಂದರೆ, ಈಗಾಗಲೇ ರಾತ್ರಿ ೩.೦೦ ಗಂಟೆಗೆ ತಮ್ಮ ಹತ್ತಿರ ಬಂದು ಈ ರೀತಿ ತಪ್ಪಾಗಿದೆ ಎಂದು ಕ್ಷಮೆ ಕೇಳಿದ್ದಾರೆ. "near suspension is not a punishment". ಈ ರೀತಿ ಇರುವಾಗ ಆ ಎಸ್.ಪಿ. ಯನ್ನು ಅದೇ ಜಾಗದಲ್ಲಿಟ್ಟು ವರದಿಯನ್ನು ತರಿಸುವುದು ಬಹಳ ತಪ್ಪು. ಹಾಗಾಗಿ ಮೊದಲು ಅಮಾನತುಗೊಳಿಸಿ, ನಂತರ ವರದಿಯನ್ನು ತರಿಸಿಕೊಳ್ಳಿ. ಎಸ್.ಪಿ. ಯನ್ನು ಅದೇ ಜಾಗದಲ್ಲಿಟ್ಟು ವರದಿಯನ್ನು ತರಿಸಿಕೊಂಡರೆ

ಯಾವ ರೀತಿ ನ್ಯಾಯ ಸಿಗುತ್ತದೆ. ಹಾಗಾಗಿ ಮೊದಲು ಆತನು ಇರುವ ಸೀಟನ್ನು ಖಾಲಿ ಮಾಡಿಸಿ, ನಂತರ ಆ ಜಾಗದಿಂದ ವರದಿ ತರಿಸಿ. ಈಗಾಗಲೇ ಸರ್ವೋಚ್ಛ ನ್ಯಾಯಾಲಯವೇ “near suspension is not a punishment” ಎಂದು ತಿಳಿಸಿದೆ. ಮೊದಲು ವಿಚಾರಣೆ ನಡೆಸಿ, ನಂತರ ಏನು ಬೇಕಾದರೂ ಮಾಡಿ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಭೋಜೇಗೌಡರಿಗೆ ವಿವರ ಗೊತ್ತಿದೆ. ಜೊತೆಗೆ ಅವರು ವಕೀಲರು ಸಹ ಆಗಿದ್ದವರು. Atrocity ಸಂಬಂಧ ದೂರು ಬಂದಿದೆ. ಆ ಸಂದರ್ಭದಲ್ಲಿ ಏನು ಮಾಡಬೇಕೆಂಬುದರ ಕುರಿತು ನ್ಯಾಯಾಲಯದ ಆದೇಶವನ್ನೆಲ್ಲಾ ನೋಡಲಾಗುತ್ತಿದೆ. ಆ ಹಿನ್ನಲೆಯಲ್ಲಿ ಎರಡೂ–ಮೂರು ಜನ ಅಧಿಕಾರಿಗಳು ಸಹ ಇದ್ದಾರೆ. ಯಾರು ಇದನ್ನು ಮೊದಲು ಮಾಡಿದ್ದಾರೆ ಎಂಬುದರ ಕುರಿತು ಈಗಾಗಲೇ ಹಿರಿಯ ಅಧಿಕಾರಿಗಳೊಂದಿಗೆ ಮಾತನಾಡುತ್ತಿದ್ದೇನೆ. ಯಾರು ನಿಜವಾಗಿ culprit ಎಫ್.ಐ.ಆರ್. ದಾಖಲಿಸಿದ್ದಾರೆ,...

**ಶ್ರೀ ಕೆ.ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಅವರಿಗೆ ಕರೆ ಮಾಡಿದವರು ಯಾರು?

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರು ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಟಿ.ಸೋಮಶೇಖರ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, ಮೊದಲು ಮಾನ್ಯ ಗೃಹ ಸಚಿವರು ಸಂಪೂರ್ಣವಾಗಿ ಉತ್ತರವನ್ನು ನೀಡಲಿ.

**ಶ್ರೀ ಕೆ.ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಸ್ಪಷ್ಟೀಕರಣವನ್ನು ಕೇಳುತ್ತಿದ್ದೇನೆ ಅಷ್ಟೆ.

**ಶ್ರೀ ಅರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಸೂಕ್ಷ್ಮವಾದಂಥ ವಿಚಾರ. ಈಗಾಗಲೇ ನಾನು ಒಂದು ಮಾತನ್ನು ಹೇಳಿದ್ದೇನೆ. ದಯವಿಟ್ಟು ಮಾನ್ಯ ಸದಸ್ಯರ ಕಾಳಜಿ ಜೊತೆಗೆ

ನನ್ನ ಸಹಮತಿ ಸಹ ಇದೆ. ಅವರು ಬೇರೆ ರೀತಿ, ನಾನು ಬೇರೆ ರೀತಿ ಯೋಜನೆ ಮಾಡಲು ಸಾಧ್ಯವೇ ಇಲ್ಲ. ಆ ಪೀಠವು ನಮ್ಮೆಲ್ಲರಿಗೂ ಶ್ರದ್ಧೆಯ ಕೇಂದ್ರ. ಆದ್ದರಿಂದ ನನ್ನ ವಿನಂತಿಯೇನೆಂದರೆ, ನನ್ನನ್ನು ಬಿಟ್ಟು ಬಿಡಿ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಭೋಜೇಗೌಡರಿಗೂ ಎಲ್ಲಾ ಸಂಗತಿಗಳು ತಿಳಿದಿವೆ. ಆ ಹಿನ್ನಲೆಯಲ್ಲಿ ನನಗೆ ಅವಕಾಶ ಮಾಡಿಕೊಡಿ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಕನಿಷ್ಠ ಪಕ್ಷ ಕೂಡಲೇ ಆತನನ್ನು ಅಮಾನತುಗೊಳಿಸುತ್ತೇವೆ ಎಂದು ಮಾನ್ಯ ಗೃಹ ಸಚಿವರು ಹೇಳಬಹುದು. ಏಕೆಂದರೆ, ದೂರು ನೀಡಿದ ಮಾತ್ರಕ್ಕೆ ಎಫ್.ಐ.ಆರ್. ದಾಖಲಿಸುವುದಾದರೆ, ಯಾರ ಮೇಲೆ ಬೇಕಾದರೂ ಎಫ್.ಐ.ಆರ್. ದಾಖಲಿಸಬಹುದೇ? ನೋಡಿ ಮಾಡಬೇಕಲ್ಲವೇ? ನಾಳೆ ದಿವಸ ಮಾನ್ಯ ಮುಖ್ಯಮಂತ್ರಿಯವರು, ಪ್ರಧಾನ ಮಂತ್ರಿಯವರ ಮೇಲೆ ದೂರು ನೀಡಿದರೆ ಎಫ್.ಐ.ಆರ್. ದಾಖಲಿಸುತ್ತಾರೆಯೇ?

**ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರ ಮೇಲೆ ನಮಗೆ ನಂಬಿಕೆ ಇದೆ. ಆದರೆ, ಇದಕ್ಕೊಂದು ತಾರ್ಕಿಕ ಅಂತ್ಯ ಕಾಣಿಸಬೇಕು. ನಿಜವಾದರೆ, ನಿಜವಾಗಲಿ. ಒಂದು ವೇಳೆ ಸುಳ್ಳಾದರೆ, ಸುಳ್ಳಾಗಲಿ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಬಿ.ವೆಂಕಟೇಶ್‌ರವರು ಹೇಳಿದ ಮಾತು ನಿಜ. ಆ ವಿಚಾರವನ್ನು ನನ್ನ ಜವಾಬ್ದಾರಿಗೆ ಅವರು ಬಿಡಲಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರಿಗೂ ಆ ಪೀಠದ ಮೇಲೆ ಪ್ರೀತಿ ಇದೆ. ಆದರೆ, ಅದೆಲ್ಲವನ್ನೂ ಮಾಡಲು ಮಾನ್ಯ ಗೃಹ ಸಚಿವರಿಗೆ ಪುರುಸತ್ತು ಇಲ್ಲ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಯವರೇ, ಆ ರೀತಿ ಏನಿಲ್ಲ. ಆ ಕೆಲಸ ಮಾಡಲು ನನಗೆ ಪುರುಸತ್ತು ಇಲ್ಲವೆಂದು ಏನಿಲ್ಲ.

**ಶ್ರೀ ಹೆಚ್.ಎಂ.ರಮೇಶ್ ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು atrocity ಕೊಡುತ್ತಾರೆ. Atrocity case ಕೊಟ್ಟ ಮಾತ್ರಕ್ಕೆ ನಾಳೆ ದಿವಸ ಪ್ರಧಾನ ಮಂತ್ರಿಗಳಾದ

ಶ್ರೀ ನರೇಂದ್ರ ಮೋದಿಯವರ ಮೇಲೆ, ಮಾನ್ಯ ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಕಾಗೇರಿಯವರ ಮೇಲೆ atrocity case ನೀಡಿದರೆ ಅವರ ಮೇಲೆಯು ಎಫ್.ಐ.ಆರ್. ದಾಖಲಿಸುತ್ತಾರೆಯೇ?

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಒಂದು ಮಾತನ್ನು ಹೇಳಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರೇ ನಮ್ಮದು,...

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಏನಾಗಿದೆ ಎಂದರೆ, ದೂರು ನೀಡಿದ ಮೇಲೆ atrocity ಎಂದು attract ಆಗಬೇಕಾದರೆ, ಈಗಾಗಲೇ ಹೇಳಿದ ಹಾಗೆ ಶೇಕಡ 100 ರಷ್ಟು exchange of the words ಇರಬೇಕು. Either over phone or in between atrocity words exchange ಆಗಿರಬೇಕು. He was not present over there and was in Bangalore. ಆ ಸಮಯದಲ್ಲಿ ದೂರನ್ನು ಬರೆದು ಕೊಟ್ಟಿದ್ದಕ್ಕೆ ಅದರಲ್ಲಿ ಎಲ್ಲಿಯೂ exchange of the words ಇಲ್ಲ ಅಥವಾ ಅವರು ದೂರವಾಣಿ ಮೂಲಕ ಮಾತನಾಡಿದ್ದು ಇಲ್ಲ, ಅದ್ಯಾವುದು ಕೂಡಾ ಇಲ್ಲದ ಪಕ್ಷದಲ್ಲಿ atrocity attract ಆಗುತ್ತದೆಯೇ, ಇಲ್ಲವೇ ಎಂಬ ಸಾಮಾನ್ಯ ಜ್ಞಾನವಾದರೂ ಆ ಅಧಿಕಾರಿಗೆ ಇರಬೇಕಾಗಿತ್ತು. ಆದರೆ, ಅದ್ಯಾವುದರ ಬಗ್ಗೆಯು ಆ ಅಧಿಕಾರಿ ಯೋಚನೆ ಮಾಡಲಿಲ್ಲ. ಆ ರೀತಿ ಯೋಚನೆ ಮಾಡಿದ್ದರೆ, ಮಾನ್ಯ ಸಭಾಪತಿಯವರ ಮೇಲೆ ಎಫ್.ಐ.ಆರ್. ದಾಖಲಿಸುತ್ತಿರಲಿಲ್ಲ. ಆದ್ದರಿಂದ ಆ ಎಸ್.ಪಿ. ಗೆ ಶಿಕ್ಷೆಯಾಗಬೇಕು ಮತ್ತು ಅಮಾನತುಗೊಳಿಸಬೇಕು. ದಯವಿಟ್ಟು ಈ ಬಗ್ಗೆ ಮಾನ್ಯ ಗೃಹ ಸಚಿವರು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಾವು ಸದನದ ಬಾವಿಗೆ ಹೋಗಬೇಕಾಗುತ್ತದೆ.

**ಶ್ರೀ ಅರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ಎಲ್.ಭೋಜೇಗೌಡರು ಸಹ ವಕೀಲರು.

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾವು ಮಾನ್ಯ ಗೃಹ ಸಚಿವರಿಗೆ atrocity ಕೇಸನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳುತ್ತಿಲ್ಲ. ಕಾನೂನಿನ ಚೌಕಟ್ಟಿನಲ್ಲಿ ಒಂದು ವ್ಯವಸ್ಥೆ ಇದೆ. ಅದರ ಪ್ರಕಾರ excessive ಆಗಿ ಪೀಠಾಧಿಪತಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದೆಂದರೆ, ಎಲ್ಲಿಯೂ ಸಹ ನೋಡಿಲ್ಲ. ಹಾಗಾಗಿ ದಯವಿಟ್ಟು ಯಾವ ಪ್ರಕರಣವನ್ನು ವಾಪಸ್ಸು ತೆಗೆದುಕೊಳ್ಳುವುದು ಬೇಡ. ಎಸ್.ಪಿ. ಯವರ ಮೇಲೆ ಕ್ರಮ ತೆಗೆದುಕೊಂಡು, ಅಮಾನತುಗೊಳಿಸಿ ಎನ್ನುವುದು ನಮ್ಮ ಬೇಡಿಕೆ. Atrocity case ಸಂಬಂಧಿಸಿದಂತೆ ನ್ಯಾಯಾಲಯವು ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ, ತೆಗೆದುಕೊಳ್ಳಲಿ. ಆದರೆ, ಮಾನ್ಯ ಸಭಾಪತಿಯವರ ಪೀಠಕ್ಕೆ ಗೌರವ ನೀಡದೇ, ರಾತ್ರಿ 3.00 ಗಂಟೆಗೆ ಹೋಗಿ, ತಪ್ಪಾಗಿದೆ ಎಂದು ಹೇಳಿದ್ದಾರೆ. ಆದರೆ, ಸಭಾಪತಿಯವರ ಮೇಲೆ ಎಫ್.ಐ.ಆರ್. ದಾಖಲಿಸುವುದು ತಪ್ಪು. ಹಾಗಾಗಿ ಮಾನ್ಯ ಗೃಹ ಸಚಿವರಲ್ಲಿ ಸಭಾಪತಿಯವರ ಪೀಠದ ಗೌರವವನ್ನು ಕಾಪಾಡಿ ಎಂದು ಒತ್ತಾಯ ಮಾಡುತ್ತಿದ್ದೇವೆ.

**ವೈಸ್ ಛೇರ್ಮನ್:–** ಮಾನ್ಯ ಸದಸ್ಯರೆ, ಈ ವಿಷಯವು ಸದನಕ್ಕೆ ಬಂದ ಮೇಲೆ ಒಂದು ಸಂದೇಶ ರವಾನೆಯಾಗಬೇಕಾಗಿತ್ತು ಅಲ್ಲವೇ?

**ಶ್ರೀ ಬಿ.ಕೆ.ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ತಮ್ಮ ಪೀಠದಿಂದ ಒಂದು ಆದೇಶ ನೀಡಿ.

**ವೈಸ್ ಛೇರ್ಮನ್:–** ಆಯಿತು.

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಒಂದು ನಿಮಿಷ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಅವರ ಮೇಲೆ ಎಫ್.ಐ.ಆರ್. ದಾಖಲಿಸಿ, ಅಮಾನತುಗೊಳಿಸಲೇಬೇಕು. ಆ ರೀತಿ ಮಾಡದೇ, ಬೇರೆ ದಾರಿಯೇ ಇಲ್ಲ. ನಾಳೆ ಬೆಳಗ್ಗೆ ನ್ಯಾಯಾಲಯದಲ್ಲಿ ಎಫ್.ಐ.ಆರ್. ದಾಖಲಿಸಿ ಒಂದು ಸೆಕೆಂಡ್‌ನಲ್ಲಿ quash ಮಾಡಬಹುದು. Hundred percent material ಇದೆ. ದೊಡ್ಡ ವಿಚಾರವೇನಲ್ಲ. ಸಭಾಪತಿಯವರ ಪೀಠಕ್ಕೆ

ಆಗಿರುವಂಥ ಅವಮಾನವಾಗಿದ್ದು, ಕೂಡಲೇ ಅವರನ್ನು ಅಮಾನತುಗೊಳಸಬೇಕು. ಇಲ್ಲದಿದ್ದರೆ ನಾವೆಲ್ಲರೂ ಸದನದ ಬಾವಿಗೆ ಹೋಗುತ್ತೇವೆ.

**(ಈ ಹಂತದಲ್ಲಿ ಮಾನ್ಯ ಸಿ.ಎನ್.ಮಂಜೇಗೌಡ, ಮಾನ್ಯ ಎಸ್.ಎಲ್.ಭೋಜೇಗೌಡ ಸದನದ ಬಾವಿಗೆ ತೆರಳಿ ಧರಣಿಯಲ್ಲಿ ನಿರತರಾದರು)**

**ಶ್ರೀ ಅರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ಈಗಾಗಲೇ ನಾನು ಎಲ್ಲವನ್ನೂ ಸಹ ಹೇಳದ್ದೇನೆ. ಇದು ಬಹಳ ಸೂಕ್ಷ್ಮವಾದ ವಿಚಾರ.

**(ಗೊಂದಲ)**

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಯಾವ ನ್ಯಾಯ?

**ಶ್ರೀ ಅರಗ ಜ್ಞಾನೇಂದ್ರ:–** ಮಾನ್ಯ ಸಭಾಪತಿಯವರೇ, ದೂರನ್ನು atrocity ಗೆ ನೀಡಿದ ಕೂಡಲೇ ಏನೇನು ಮಾಡಬೇಕು, ನಂತರ "ಬಿ" ವರದಿಯಲ್ಲಿ ಏನೇನು ಮಾಡಬೇಕೆಂದು ಕೆಲವು ಸಂಗತಿಗಳವೆ. ಎಲ್ಲವನ್ನೂ ಸಹ ನಾನು ಒಬ್ಬ ಗೃಹ ಸಚಿವನಾಗಿ ಇಲ್ಲಿ ಹೇಳಲು ಸಾಧ್ಯವಿಲ್ಲ. ದಯವಿಟ್ಟು ತಾವೆಲ್ಲರೂ ಅದನ್ನು ಗಮನಿಸಬೇಕು. ಈಗಾಗಲೇ ನಾನು ಆ ಪೀಠದ ಬಗ್ಗೆ ಹೇಳದ್ದೇನೆ. ನನಗೂ ಸಹ ಆ ಪೀಠದ ಮೇಲೆ ಮಾನ್ಯ ಸದಸ್ಯರುಗಳಂತೆ ಶ್ರದ್ಧೆ, ಕಾಳಜಿ ಇದೆ. ಜೊತೆಗೆ ವೈಯಕ್ತಿಕವಾಗಿ ಪೀಠಾಧಿಪತಿಗಳು ಯಾರಿದ್ದಾರೆ, ಅವರ ಮೇಲೆ ಸಹ ಗೌರವ ಇದೆ.

**(ಈ ಹಂತದಲ್ಲಿ ಮಾನ್ಯ ಹೆಚ್.ಎಂ.ರಮೇಶ್ ಗೌಡರು ಸದನದ ಬಾವಿಗೆ ತೆರಳಿ ಧರಣಿಯಲ್ಲಿ ನಿರತರಾದರು)**

ಆದ್ದರಿಂದ ಹಿರಿಯ ಅಧಿಕಾರಿಯೊಂದಿಗೆ ಈಗಾಗಲೇ ಮಾತನಾಡಿ, ಆ ಅಧಿಕಾರಿಗೆ ಏನು ಮಾಡಬೇಕೋ, ಆ ಕೆಲಸವನ್ನು ಮಾಡಿದ್ದಾರೆ. ಎಲ್ಲವನ್ನೂ ಈ ಸದನದಲ್ಲಿ ಹೇಳಲು ಸಾಧ್ಯವಿಲ್ಲ.

---

ಏಕೆಂದರೆ, ಇದು ಆ ಭಾಗದಲ್ಲಿ ಬಹಳ ಸೂಕ್ಷ್ಮವಾದ ವಿಚಾರ. ಆದ್ದರಿಂದ ಎರಡೂ-ಮೂರು ದಿವಸಗಳಲ್ಲಿ ಮಾನ್ಯ ಸದಸ್ಯರಿಗೆ ಏನು ನಿರ್ಧಾರವಾಗಿದೆ ಎಂಬುದನ್ನು ಹೇಳುತ್ತೇನೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಆಯಿತು. ಎರಡೂ-ಮೂರು ದಿವಸಗಳು ಸಮಯವನ್ನು ನೀಡೋಣ.

**(ಈ ಹಂತದಲ್ಲಿ ಮಾನ್ಯ ಸಿ.ಎನ್.ಮಂಜೇಗೌಡರು ಸದನ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಶರಣಗೌಡ ಬಯ್ಯಾಪುರ:-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಸೋಮವಾರದೊಳಗೆ ನ್ಯಾಯವನ್ನು ನೀಡಬೇಕು.

**(ಈ ಹಂತದಲ್ಲಿ ಮಾನ್ಯ ಎಸ್.ಎಲ್.ಭೋಜೇಗೌಡರು, ಮಾನ್ಯ ಹೆಚ್.ಎಂ.ರಮೇಶ್ ಗೌಡರು ಸದನ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)**

**ಡಾ॥ ಡಿ.ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಇದೊಂದು ಸೂಕ್ಷ್ಮ ಹಾಗೂ ಗಂಭೀರವಾದ ವಿಷಯ ಎಂದು ಹೇಳಿದರು. ಆ ಮಾತಿನಿಂದ ನಮಗೆ ಆ ಭಾಗದಲ್ಲಿ ಏನೋ ನಡೆದಿರಬಹುದೇನೋ, ಏನೋ ಆಗಿರಬಹುದೇನೋ ಎನ್ನುವಂಥ ಸಂಶಯ ಬರುತ್ತಿದೆ. ಹಾಗಾಗಿ ದಯವಿಟ್ಟು ಆ ರೀತಿ ಏನು ಆಗದೇ ಇದ್ದರೆ, ಏನು ನಡೆಯದೇ ಇದ್ದರೆ, ಪೋಲೀಸ್ ಅಧಿಕಾರಿ ನಿಜವಾಗಿಯೂ ತಪ್ಪು ಮಾಡಿದ್ದರೆ, ಸರಿಯಾಗಿ ವಿಚಾರಣೆ ಮಾಡದೇ ನಡುರಾತ್ರಿಯಲ್ಲಿ ಒಬ್ಬ ಉನ್ನತಾಧಿಕಾರಿ ಆಗಿರುವವರ ಮೇಲೆ ಎಫ್.ಐ.ಆರ್. ದಾಖಲಿಸಿದ್ದಾರೆ. ಇಡೀ ರಾಜ್ಯದ ಜನರು ಹಾಗೂ ಮಾನ್ಯ ಮುಖ್ಯಮಂತ್ರಿಗಳೇ ಈ ಸದನದಲ್ಲಿ ಅವರ ಪೀಠದ ಮುಂದೆ ನಿಂತುಕೊಳ್ಳುತ್ತಾರೆ. ಅಂತಹ ಪೀಠಾಧಿಕಾರಿಗೆ ಅವಮಾನ ಮಾಡಿರುವುದರಿಂದ ಮೊದಲು ಆ ಪೋಲೀಸ್ ಅಧಿಕಾರಿ ಮೇಲೆ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ಆಮೇಲೆ ವಿಚಾರಣೆ ಮಾಡಿ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, atrocity ಕೇಸ್ ಎನ್ನುವುದು ಸಾಮಾನ್ಯವಾದ ಕೇಸ್ ಆಗಿಲ್ಲ. ಏಕೆಂದರೆ, ನಾನು ಅದನ್ನು ಅನುಭವಿಸಿದ್ದೇನೆ, ಆಮೇಲೆ "ಬಿ" ವರದಿ ದಾಖಲಿಸಿದ್ದಾರೆ. 2008ನೇ ಸಾಲಿನಲ್ಲಿ ನಾನು ಚುನಾವಣೆಗೆ ನಿಂತುಕೊಂಡ ಸಂದರ್ಭದಲ್ಲಿ 3000 ಮತದಿಂದ ಸೋಲನ್ನು ಅನುಭವಿಸಿದ್ದೇನೆ. ಒಂದು ದಿನ ಮೊದಲೇ ನನ್ನ ಮೇಲೆ atrocity ಕೇಸ್ ದಾಖಲಿಸುತ್ತಾರೆ. ಎಲ್ಲಾ ಪತ್ರಿಕೆಯಲ್ಲಿಯೂ ಪ್ರಕಟವಾಗುತ್ತದೆ, ಮುಂದಿನ ವಾರದೊಳಗೆ "ಬಿ" ವರದಿ ದಾಖಲಿಸುತ್ತಾರೆ. ಅದರ ಉದ್ದೇಶವೇನೆಂದರೆ, ನನ್ನನ್ನು ಸೋಲಿಸಬೇಕಾಗಿತ್ತು. ಆ ಕೇಸನ್ನು ವಿಚಾರಣೆ ಮಾಡುವುದು, ಕೇಸು ಹಾಕುವ ಅಧಿಕಾರ ಡಿ.ವೈ.ಎಸ್.ಪಿ. ಗೆ ಇರುತ್ತದೆ. Investigation Officer should be the DySP and not the Circle Inspector. ಆ ಕೇಸನ್ನು ದಾಖಲಿಸಬೇಕಾದರೆ, ಸಾಕಷ್ಟು ಸಾಕ್ಷಿ ಬೇಕು. ಜೊತೆಗೆ ಪಕ್ಕದ ಬೇರೆ ಜಾತಿಯವರ witness ಸಹ ಬೇಕು.

(ಮುಂದು...)

(245) 10.03.2022/4.00/ಎಸ್‌ಕೆ-ವಿಕೆ

(ವೈಸ್‌ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಸಿ.ಎನ್. ಮಂಜೇಗೌಡ (ಮುಂದು):-**

ಇಷ್ಟೆಲ್ಲವನ್ನು ಕೂಡ ಸೇರಿಸಿಕೊಂಡು, ಮಾನ್ಯ ಸಭಾಪತಿಯವರ ಮೇಲೆ ಕೇಸ್ ಮಾಡಿ, ಅದಕ್ಕೆ ಪೊಲೀಸ್ ವರಿಷ್ಠಾಧಿಕಾರಿಯವರು ಕ್ಷಮೆ ಕೇಳುತ್ತಾರೆಂದರೆ, ಲೆಕ್ಕ ಹಾಕಿಕೊಳ್ಳಿ. ಜೀವನ ಮಟ್ಟ ಯಾವ ರೀತಿ ಹೋಗಬಹುದು. ಸಾಮಾನ್ಯ ಜನರ ಜೀವನ ಮಟ್ಟ ಏನಾಗಬಹುದು ಹಾಗೂ ನಮ್ಮಂತಹವರ ಕಥೆ ಏನಾಗಬಹುದು? ಆ ಪೀಠಕ್ಕೆ ಆಗುವಂತಹ ಅವಮಾನ ಯಾವ ರೀತಿ ಆಗಬಹುದು? ನಾನು ತಮ್ಮ ಮೂಲಕ ಮಾನ್ಯ ಗೃಹ ಸಚಿವರಿಗೆ ಕೇಳಬಯಸುವುದೇನೆಂದರೆ, ದಯವಿಟ್ಟು, ಯಾರನ್ನು ಕೂಡ ದಯದಾಕ್ಷಿಣ್ಯ ನೋಡಬೇಡಿ. ಈ ಸದನದಲ್ಲಿ ತಾವೊಂದು ಭರವಸೆಯನ್ನು ಕೊಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಚಿವರು ಎರಡ್ಮೂರ ದಿವಸ ಎಂದು ಹೇಳಿದ್ದಾರೆ.

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಮೂರು ದಿವಸದೊಳಗಡೆ, ಯಾವ ಅಧಿಕಾರಿ ಮಾಡಿದ್ದಾರೋ, ಅವನಿಗೆ ಖಚಿತವಾಗಿ ಶಿಕ್ಷೆಯಾಗಬೇಕು.

**ವೈಸ್ ಛೇರ್ಮನ್:–** ಮಾನ್ಯ ಸಚಿವರೇ, ಪ್ರಥಮ ವರ್ತಮಾನ ವರದಿಯನ್ನು ಯಾರು ದಾಖಲು ಮಾಡಿದ್ದಾರೋ, ಅವರನ್ನು ಗುರುತಿಸಿ, ತಾವು ಎರಡು ದಿವಸಗಳಲ್ಲಿ ಕ್ರಮ ತೆಗೆದುಕೊಂಡು, ಸದನದಲ್ಲಿ ಹೇಳಿಕೆಯನ್ನು ಕೊಡಿ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

**ವೈಸ್ ಛೇರ್ಮನ್:–** ಮಾನ್ಯ ವೆಂಕಟೇಶ್‌ರವರೇ, ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಯು.ಬಿ.ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ್ದು, ವೈಯಕ್ತಿಕವಾಗಿ ಮಾನ್ಯ ಬಸವರಾಜ ಎಸ್ ಹೊರಟ್ಟಿಯವರು ಎಂದು ಹೇಳುತ್ತಿಲ್ಲ. ತಮ್ಮ ಸರ್ಕಾರದಲ್ಲಿ ಒಂದು ಪೀಠಕ್ಕೆ ಈ ರೀತಿ ಅಪಚಾರ ಆಗಿದೆ.

**ವೈಸ್ ಛೇರ್ಮನ್:–** ಈ ವಿಚಾರ ಇಲ್ಲಿಗೆ ಮುಗಿಯಿತು. ತಾವು ಮುಂದೆ ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್ (ನಾಮ ನಿರ್ದೇಶನವನ್ನು ಹೊಂದಿದವರು):–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರದಲ್ಲಿ Law and Order ಯಾವ ರೀತಿ ಇದೆ ಎನ್ನುವುದನ್ನು ಸೂಕ್ಷ್ಮವಾಗಿ ಪರಿಚಯ ಮಾಡಿಕೊಡಿ ಎನ್ನುವುದಷ್ಟೆ. ಅವರ ಮೇಲೆ ಬೇರೇನೂ ವೈಯಕ್ತಿಕವಿಲ್ಲ. ನೀರಾವರಿ ಬಗ್ಗೆ ಸಾಕಷ್ಟು ಬಜೆಟ್‌ನಲ್ಲಿ ಹೇಳಿದ್ದಾರೆ. ಕಾಳಿ ನದಿಯಿಂದ ನೀರು ಕೊಡುತ್ತೇವೆಂದು ಹೇಳಿದ್ದಾರೆ. ಏನು ಸ್ವಾಮಿ, ಇದು ಆಗುವಂತಹ ಕೆಲಸವೇ? ಬಜೆಟ್‌ನಲ್ಲಿ ಸುಮ್ಮನೇ ಏತಕ್ಕಾಗಿ ಸುಳ್ಳು ಹೇಳುತ್ತೀರಾ? ಕಾಳಿ ನದಿಯಿಂದ ಉತ್ತರ ಕನ್ನಡ ಜಿಲ್ಲೆಗೆ ನೀರು ಕೊಡುತ್ತೇವೆ. ತುಂಗಾಭದ್ರಾ ಡ್ಯಾಂನಲ್ಲಿ ಹೂಳು ಎತ್ತುತ್ತೇವೆ. ಇದನ್ನು ಮಾಡುವುದಕ್ಕಾಗುತ್ತದೆಯೇ? ಇದು ಆಗದೇ ಇರುವಂತಹದ್ದನ್ನು ಬಜೆಟ್‌ನಲ್ಲಿ ಏತಕ್ಕಾಗಿ ಪ್ರಸ್ತಾಪ ಮಾಡುತ್ತೀರಾ? ಇರುವುದರಲ್ಲಿ ಮಹಾದಾಯಿ,

ಕೃಷ್ಣಾ, ಅಲಮಟ್ಟಿ, ಇವುಗಳನ್ನು ಪೂರ್ಣಗೊಳಸುವುದಕ್ಕೆ ಸರ್ಕಾರದಿಂದ ಒಂದು ಲಕ್ಷ ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಮ್ಮ ಪಕ್ಕದಲ್ಲಿರುವ ಸಣ್ಣ ರಾಜ್ಯವಾಗಿದ್ದು, ಅಲ್ಲಿ ಪ್ರಾಜೆಕ್ಟ್‌ನ್ನು ಪೂರ್ಣಗೊಳಿಸಿ, ಅದನ್ನು ಅವರು ಅನುಭವಿಸುತ್ತಿದ್ದಾರೆ. ಇಲ್ಲಿ ನೀವು ನೀರಿನ ಒಂದು bond ಎತ್ತಿ, ಇಲ್ಲವಾದರೆ ರೈತರಿಗೆ ಹೇಳ. ಸರ್ಕಾರ ಒಂದು ಲಕ್ಷ ಕೋಟಿ ರೂಪಾಯಿಗಳನ್ನು collection ಮಾಡುವುದಕಾಗುವುದಿಲ್ಲವೇ? ಒಂದು ದಿವಸ ನೀರಾವರಿ ಕಾರ್ಯಕ್ರಮವನ್ನು ಮಾಡಿ. ಬಿ.ಜೆ.ಪಿ. ಸರ್ಕಾರದ ಶ್ರೀ ಬಸವರಾಜ ಬೊಮ್ಮಾಯಿಯವರ ನೇತೃತ್ವದಲ್ಲಿ ಈ ಕರ್ನಾಟಕದ ಜನರಿಗೆಲ್ಲರಿಗೂ ನೀರು ಕೊಟ್ಟಿದ್ದೇವೆ ಎಂದು ಹೇಳುವುದಕ್ಕೆ ನಿಮಗೆ ಏನಾಗಿದೆ? ಕೃಷ್ಣಾ ನದಿ ಯೋಜನೆಗೆ ಸುಮಾರು ಐದು ಸಾವಿರ ಕೋಟಿ ರೂಪಾಯಿಗಳನ್ನು ಇಡುತ್ತೀರಾ. ಈ ಯೋಜನೆ ಯಾವಾಗ ಮುಗಿಯುವುದು? ಇದೊಂದು ಬಜೆಟ್. ಈ ಸದನದಲ್ಲಿರುವ ಮಾನ್ಯ ಸದಸ್ಯರುಗಳು ಹೇಳದರು. ಕಳೆದ ಬಾರಿ ಬಜೆಟ್‌ನಲ್ಲಿ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಕೊಟ್ಟಿರಲಿಲ್ಲ. ಅವರು ಎಲ್ಲವನ್ನು Supplementary Budget ಮಾಡಿದಾಗ, ಮಾರನೇ ದಿವಸ ಬಂದು, ಸಪ್ಲೆಮೆಂಟರಿ ಬಜೆಟ್‌ನಲ್ಲಿ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರು. ಅವರು ಏನು ಮಾಡಿದ್ದಾರೆಂಬುದು ಗೊತ್ತಿದೆಯೇ? ನನಗೆ ಅಷ್ಟು ಜ್ಞಾಪಕ ಬರುತ್ತಿಲ್ಲ. ಅವರು ಅಲಮಟ್ಟಿಗೆ ಹೋಗಿ, ಮೂವತ್ತು ಸಾವಿರ ಕೋಟಿ ರೂಪಾಯಿ ಇಡಬೇಕೆಂದು ಅಹೋರಾತ್ರಿ ಧರಣಿ ಮಾಡಿದರು. ನೀರಾವರಿಗೆ ಎಷ್ಟು ಖರ್ಚು ಮಾಡುತ್ತೇವೆ ಎಂಬುದರ ಬಗ್ಗೆ ಚುನಾವಣೆ ಪ್ರಣಾಳಕೆಯಲ್ಲಿಯೇ ಇದೆ. ಇದರಲ್ಲಿ ನೀವೇನಾದರೂ ಖರ್ಚು ಮಾಡುತ್ತಿದ್ದೀರಾ? ನೀವು ಏನೂ ಮಾಡಿದ್ದೀರಿ ಎಂದು ನಮಗೆ ಹೇಳುತ್ತಾರೆ. ನಮ್ಮ ಚುನಾವಣೆ ಪ್ರಣಾಳಕೆಯನ್ನು ತೆಗೆದು ನೋಡಿ. ನಾವು ಇದಕ್ಕೆ ಕೊಟ್ಟಿರುವಂತಹ ಹಣ ಎಷ್ಟು ಮತ್ತು ಖರ್ಚು ಮಾಡಿದ್ದು ಎಷ್ಟು? ಇಲ್ಲಿ ಪೇಪರ್ ತೆಗೆದು ನೋಡಿ. ಇದು ನಮ್ಮ ಕಣ್ಣುಂದೆ ಇದೆ. ಇದನ್ನು ಟೇಬಲ್ ಮೇಲೆ ಇಡಿ. ನಾವೇನಾದರೂ ಸುಳ್ಳು ಹೇಳದರೆ, ತಾವು ಏನು ಹೇಳುತ್ತೀರೋ, ಅದಕ್ಕೆ ನಾವು ರೆಡಿ ಇದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಮಗೆ ಯಾವಾಗಲೂ ಕೂಡ ಚರ್ಚೆ ಬರುತ್ತದೆ. ಕಾಂಗ್ರೆಸ್ ಪಕ್ಷದ ಮುಖಂಡರು ಕಾಂಗ್ರೆಸ್ ನಡಿಗೆ ಕೃಷ್ಣಾ

ಕಡೆಗೆ. ಆನಂತರ ಅಧಿಕಾರಕ್ಕೆ ಬರುತ್ತಾರೆ. ಪ್ರತಿ ವರ್ಷ ಬಜೆಟ್‌ನಲ್ಲಿ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದು ಇಡುತ್ತೇವೆ. ಸುಮಾರು ಐವತ್ತು ಸಾವಿರ ಕೋಟಿ ರೂಪಾಯಿಗಳಲ್ಲಿ ಕೃಷ್ಣಾ ನದಿ ಯೋಜನೆಯನ್ನು ಪೂರ್ಣಗೊಳಸುತ್ತೇವೆ ಎಂಬುದರ ಬಗ್ಗೆ ತಾವು ಇಲ್ಲಿ ಗಮನಹರಿಸಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಆನಂತರ ಇದಕ್ಕೆ ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಹೇಳಿ, ಇದರ ಬಗ್ಗೆ ಇವರು ನೆನಪು ಮಾಡಿಕೊಳ್ಳಬೇಕು ಎಂಬುದು ನನ್ನ ವಿನಂತಿಯಾಗಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹೇಳಿರುವಂತಹದ್ದನ್ನು ನಾನು ವಿರೋಧ ಮಾಡುತ್ತೇನೆ. ನೀರಾವರಿಗಾಗಿ ವರ್ಷಕ್ಕೆ ಸುಮಾರು ಹತ್ತು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ನಾವು ಹೇಳಿದ್ದೇವೆ. ನೀರಾವರಿಗಾಗಿ ಸುಮಾರು ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಾವು ಇವರ ರೀತಿ ಸುಳ್ಳು ಹೇಳುವುದಕ್ಕೆ ಹೋಗುವುದಿಲ್ಲ. ವರ್ಷಕ್ಕೆ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳು . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮೊನ್ನೆ ಕೊಟ್ಟಿರುವಂತಹ ಲೆಕ್ಕದ ಪ್ರಕಾರ ಐದು ವರ್ಷಗಳಿಗೆ ಸೇರಿದಂತೆ ಏಳೂವರೆ ಸಾವಿರ ಕೋಟಿ ರೂಪಾಯಿಗಳು. ಅವರೇ ಕೊಟ್ಟಿರುವಂತಹ ಲೆಕ್ಕ. ನಾವು ಕೊಟ್ಟ ಲೆಕ್ಕವಲ್ಲ.

**ಶ್ರೀ ಯು.ಬಿ.ವೆಂಕಟೇಶ್:-** ನಾವು ಸುಮಾರು ಐವತ್ತು ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿಗಾಗಿ ಖರ್ಚು ಮಾಡಿದ್ದೇವೆ. ನಾವು ಹೇಳಿರುವುದಕ್ಕಿಂತ ಇನ್ನು ಹೆಚ್ಚಿನದಾಗಿ ಹಣ ಖರ್ಚು ಮಾಡಿದ್ದೇವೆ.

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ನಾವು ನೀರಾವರಿಗಾಗಿ ಏಳು ಸಾವಿರದ ಐದುನೂರೈವತ್ತು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ಚುನಾವಣೆ ಪ್ರಣಾಳಿಕೆಯಲ್ಲಿ ಹೇಳುವುದೊಂದು, ಇಲ್ಲಿ ಮಾಡುವುದೊಂದು ನಾವು ಮಾಡುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ತಾವು ಹೇಳಿದ್ದಕ್ಕೆ, ನಾನು ತಮಗೆ ನೆನಪು ಮಾಡಿದಷ್ಟೆ. ನಿಖರವಾಗಿರುವಂತಹ ಪ್ರಕಾರ...

**(ಗೊಂದಲ)**

**ವೈಸ್ ಛೇರ್ಮನ್:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ ತಾವು ತಮ್ಮ ಮಾತನ್ನು ಮುಗಿಸಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಯು.ಬಿ.ವೆಂಕಟೇಶ್:-** ನಾನು ಇನ್ನು yield ಆಗಿಲ್ಲ. ತಾವು ಆನಂತರ ಮಾತನಾಡಿ.

**ವೈಸ್ ಛೇರ್ಮನ್:-** ಮಾನ್ಯ ಯು.ಬಿ. ವೆಂಕಟೇಶ್‌ರವರೇ, ತಮ್ಮ ಸಮಯ ಕಳೆದು ಹೋಗುತ್ತಿದೆ. ತಮ್ಮ ಮಾತನ್ನು ಬೇಗ ಮುಗಿಸಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಈ ರೀತಿಯ ವಿಷಯ ಬಂದಾಗ ನಾನು ಏನು ಮಾಡುವುದಕ್ಕಾಗುತ್ತದೆ?

**ವೈಸ್ ಛೇರ್ಮನ್:-** ತಾವು yield ಆಗಬಾರದು.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾನಾಯಕರಿಗೂ ಕೂಡ ನಾನು yield ಆಗಬಾರದಾ.

**ವೈಸ್ ಛೇರ್ಮನ್:-** ತಾವು yield ಆದರೆ, ತಮ್ಮ ಸಮಯ kill ಆಗುತ್ತದೆ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರಿಗೂ yield ಆಗಬಾರದು ಎಂದು ಪೀಠ ಒಂದು ಆದೇಶವನ್ನು ಕೊಟ್ಟರೆ, ಇಲ್ಲಿ ಯಾವ ರೀತಿ ಆಗಿದೆ ಎಂದರೆ, ನಮಗೆ ನೈತಿಕತೆಯ ಬಗ್ಗೆ ಬುದ್ಧಿ ಹೇಳುತ್ತಾರೆ. Rules of Procedure and Conduct of Business book ನಲ್ಲಿ ಯಾರಾದರೂ ಒಬ್ಬ ಸದಸ್ಯರು ಪೀಠಕ್ಕೆ ಏನಾದರೂ ಪ್ರಶ್ನೆ ಮಾಡುವುದು

ಇದೆಯೇ ಎಂಬ ಬಗ್ಗೆ ನನಗೆ ಹೇಳಿ. ನಾನೊಬ್ಬ ಹೊಸ ಸದಸ್ಯನಾಗಿದ್ದು, ಇಲ್ಲಿಗೆ ಮೂರು ವರ್ಷಗಳು ಕಳೆದಿದೆ. ತಾವು ಸುಮಾರು ಮೂವತ್ತು-ನಲವತ್ತು ವರ್ಷಗಳಿಂದ ಇದ್ದೀರಿ.

**VICE CHAIRMAN:-** There is no provision.

**ಶ್ರೀ ಯು.ಬಿ.ವೆಂಕಟೇಶ್:-** ತಾವು ಮಾಡುತ್ತೀರಿ. ನಮಗೆ ನೈತಿಕತೆಯ ಬಗ್ಗೆ ...

**ವೈಸ್ ಛೇರ್ಮನ್:-** ನೈತಿಕತೆಯ ಬಗ್ಗೆ ನಾನು ಒಂದು ಗಂಟೆ ಕಾಲ ಪಾಠ ಹೇಳಿದ್ದೇನೆ.

**ಶ್ರೀ ಯು.ಬಿ.ವೆಂಕಟೇಶ್:-** ನಮಗೆ ನೈತಿಕತೆಯ ಬಗ್ಗೆ ಪಾಠ ಹೇಳಿದ್ದೀರಿ. ಆದರೆ ಇಲ್ಲಿರುವ ಮಾನ್ಯ ಸದಸ್ಯರೆಲ್ಲರೂ ಮಾನ್ಯ ಸಭಾಪತಿಯವರುನ್ನು ಪ್ರಶ್ನೆ ಕೇಳುತ್ತಾರೆ. ನಮಗೆ ನೈತಿಕತೆಯ ಬಗ್ಗೆ ಪಾಠ ಹೇಳುತ್ತಾರೆ. ಇದಕ್ಕೆ ಉತ್ತರ ಏನು ಹೇಳೋಣ ಹೇಳಿ. ನಾವು ಇಲ್ಲಿ ಹೊಸದಾಗಿ ಬಂದಿದ್ದೇವೆ. ನಮಗೆ ಗೊತ್ತಿಲ್ಲ. ನಮಗೆ ಗೊತ್ತಿಲ್ಲದಿರುವುದನ್ನು ಕೇಳಿದರೆ, ನಾವು ಹೇಗೆ ಹೇಳುವುದು ಹೇಳಿ.

**ವೈಸ್ ಛೇರ್ಮನ್:-** ತಾವು ಬಜೆಟ್ ಬಗ್ಗೆ ಮಾತನಾಡಿ.

**ಶ್ರೀ ಯು.ಬಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಬಜೆಟ್ ಬಗ್ಗೆ ಬೆಂಗಳೂರನ್ನು ತೆಗೆದುಕೊಳ್ಳುವುದಾದರೆ, ಮಾನ್ಯ ಉಚ್ಚ ನ್ಯಾಯಾಲಯ ಪ್ರತಿ ದಿನ ಛೀಮಾರಿ ಹಾಕುತ್ತಿದೆ. ಪ್ರತಿ ವರ್ಷ ಬಜೆಟ್‌ನಲ್ಲಿ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಇಡುತ್ತಾರೆ. ಬಿ.ಬಿ.ಎಂ.ಪಿ.ಯಲ್ಲಿಯೂ ಕೂಡ ಪ್ರತಿ ವರ್ಷ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಇಡುತ್ತಾರೆ. ಈ ಹಣ ಎಲ್ಲಿ ಹೋಗುತ್ತದೆ? ಈ ಹಿಂದೆ ನಮ್ಮ ಸರ್ಕಾರ ರಸ್ತೆಯನ್ನು ಮಾಡುವಾಗ, white topping, ಹನ್ನೆರಡು ಕೋಟಿ ರೂಪಾಯಿಗಳಿಗೆ ಒಂದು ಕಿಲೋ ಮೀಟರ್ ರಸ್ತೆಯಾದರೆ, ಇದರಲ್ಲಿ ಹೆಚ್ಚು ಹಣವನ್ನು ಲೂಟಿ ಮಾಡುತ್ತಿದ್ದಾರೆಂದು ದೊಡ್ಡ ಪ್ರತಿಭಟನೆ ನಡೆಸಿದ್ದರು. ಒಂದು ಕಿಲೋ ಮೀಟರ್‌ಗೆ ಸುಮಾರು ೩೦ ರಿಂದು ೩೫ ಕೋಟಿ ರೂಪಾಯಿಗಳಷ್ಟು ಹಣವನ್ನು ಇವತ್ತಿನ ಸರ್ಕಾರ ಲೂಟಿ ಮಾಡುತ್ತಿದೆ. ಇವತ್ತಿನ ದಿನ ಕೆಲಸ ಮಾಡದೇ, ಬಿಲ್ ಹೊಡೆಯುತ್ತಿರುವ ಸರ್ಕಾರ. ನಮಗೆ ನೈತಿಕತೆ ಹೇಳುತ್ತಾರೆ. ಡಬಲ್ ಇಂಜಿನ್ ಸರ್ಕಾರ ಎಂತಲೂ ಹೇಳುತ್ತಾರೆ. PM CARES Fund ಎನ್ನುವಂತಹದ್ದು ಇದೆ.

**ವೈಸ್ ಛೇರ್ಮನ್:–** ಈ ಹಂತದಲ್ಲಿ ಮಾತನಾಡಿದ್ದು ಕಡತಕ್ಕೆ ಹೋಗುವುದು ಬೇಡ.

**(ಮಾನ್ಯ ವೈಸ್ ಛೇರ್ಮನ್‌ರವರ ಆದೇಶದ ಮೇರೆಗೆ ಮಾನ್ಯ ಸದಸ್ಯರು ಮಾತನಾಡಿರುವುದನ್ನು ದಾಖಲಿಸಿರುವುದಿಲ್ಲ.)**

**Sri U.B.VENKATESH:–** PM CARES Fund transparent ಆಗಿ ಇರಬೇಕಲ್ಲವೇ! ಅದನ್ನು ಯಾರೂ ಲೆಕ್ಕ ಕೇಳುವಾಗಿಲ್ಲ. ಅದರಿಂದ ಕರ್ನಾಟಕ ಸರ್ಕಾರಕ್ಕೆ ಏನು ಬಂತು ಹೇಳಿರಿ ಎಂದು ಕೇಳಿದರೆ, ಅದು ಕೂಡ ಹೇಳುವುದಿಲ್ಲ. ಇದು ಏನು ಅನ್ಯಾಯ. ಈ ದೇಶದ ರಾಜನಿಗೆ ಈ ರೀತಿ ಗತಿಯಾದರೆ, ಪ್ರಜೆಗಳ ಗತಿ ಏನಾಗಬೇಕು? ರಾಜ ಸರಿಯಾಗಿಲ್ಲವೆಂದರೆ, ಬೇರೆಯವರಿಗೆ ಹೇಳಿದರೆ ಹೇಗೆ? ಬೆಂಗಳೂರಿನ ರಸ್ತೆಯ ಬಗ್ಗೆ ಹೇಳುತ್ತಿದ್ದೆ. ಯಾವ ರಸ್ತೆ ಬೆಂಗಳೂರು ಸ್ಮಾರ್ಟ್ ಸಿಟಿ ಎಂದು ಹೇಳುತ್ತಾರೆ. ಸ್ಮಾರ್ಟ್ ಸಿಟಿ ಹೋಗಿ, ಅವು worst ಸಿಟಿಯಾಗಿದೆ. ಬೆಂಗಳೂರಿನ ರಸ್ತೆಗಳಲ್ಲಿ ಜನರು ಸಾಯುತ್ತಿದ್ದಾರೆ. ನಾವು ಏನಾದರೂ ಹೇಳಿದರೆ, ಚುನಾವಣೆ ಬರುತ್ತಿದೆ ಎಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ಚುನಾವಣೆ ಮಾಡಿ, ಯಾರು ಬೇಡ ಎಂದು ಹೇಳುತ್ತಿದ್ದಾರೆ? ಕಳೆದ ಬಾರಿ ಚುನಾವಣೆ ಮಾಡಿದಾಗಲೂ ಕೂಡ ಮಾನ್ಯ ಸದಸ್ಯರಾದ ಶ್ರೀ ಪಿ.ಆರ್ ರಮೇಶ್‌ರವರು ಮತ್ತು ಇನ್ನೊಬ್ಬರು ಯಾರೋ ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದರು. ಈ ಬಾರಿ ಚುನಾವಣೆ ಮಾಡಿ ಎಂದು ಮಾನ್ಯ ಶಿವರಾಜ್ ಎನ್ನುವವರ ಕೈಯಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ನಾವು ಹಾಕಿಸಿದ್ದೇವೆ. ನಾವು ಗೆಲ್ಲುತ್ತೇವೆಂದು ಹೇಳುತ್ತಿದ್ದೀರಲ್ಲ, ಜಿಲ್ಲಾ ಪರಿಷತ್ ಚುನಾವಣೆ ಮಾಡಿ. ತಮ್ಮ ಸರ್ಕಾರದಲ್ಲಿ ಚುನಾವಣೆ ಮಾಡುವ ಧೈರ್ಯನೇ ಇಲ್ಲ. ಈಗಾಗಲೇ ನಾನು ಹೇಳಿದ್ದೇನೆ. ಇಲ್ಲಿ ಅಭಿವೃದ್ಧಿಯ ಅವಲೋಕನ ಆಗುವುದಿಲ್ಲ. ಭಾರಿ ಭಾವನಾತ್ಮಕವಾಗಿ ಹಸು ಕಟ್ಟಿ, ಹಾಲು ಕಟ್ಟಿ, ನೀರು ಕಟ್ಟಿ ಇಂತಹದ್ದನ್ನು ಹೇಳುವುದನ್ನು ಬಿಟ್ಟರೆ, ಈ ಬಜೆಟ್ ಇದೆಯೆಲ್ಲಾ, ಎಲ್ಲರನ್ನೂ ಸಂತೈಸುವುದಕ್ಕೆ ಹೋಗಿ, ಈ ಬಜೆಟ್‌ನಲ್ಲಿ ದೂರದೃಷ್ಟಿನೇ ಇಲ್ಲ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು):–** ಉತ್ತರ ಪ್ರದೇಶ, ಗೋವಾ, ಉತ್ತರಖಂಡ, ಮಣಿಪುರದಲ್ಲಿ ಚುನಾವಣೆ ನಡೆದಿದೆ. ಇನ್ನು ಎಂತಹ ಚುನಾವಣೆ ಮಾಡಬೇಕು. ನಿಮಗೆ ಸಂತೋಷ ತರುವ ತರಹ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-** ನಾನು yield ಆಗಿಲ್ಲ. 'ಬಿ' ಖಾತೆಯನ್ನು 'ಎ' ಖಾತೆ ಮಾಡುತ್ತೇವೆಂದು ಹೇಳುತ್ತಾರೆ...

**(ಗೊಂದಲ)**

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸದಸ್ಯರು yield ಆಗಿಲ್ಲ.

**(ಗೊಂದಲ)**

**Sri SHARANAGOUDA BAYYAPUR:-** EVM (Electronic Voting Machine) ಯಾರು ಮಾಡಿದ್ದಾರೆ ಎಂಬುದು ಗೊತ್ತು.

**(ಗೊಂದಲ)**

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸದಸ್ಯರು yield ಆಗಿಲ್ಲ.

**(ಗೊಂದಲ)**

**ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು):-** ಪಂಚ ರಾಜ್ಯಗಳ ಚುನಾವಣೆ ಮಾಡುವುದು ಹೇಗೆ ಮತ್ತು ಬೆಂಗಳೂರಿನ ಚುನಾವಣೆ ಮಾಡುವುದು ಹೇಗೆ ಎಂಬುದು ಗೊತ್ತು.

**(ಗೊಂದಲ)**

**ಶ್ರೀ ಯು.ಬಿ. ವೆಂಕಟೇಶ್:-**ನಾನು yield ಆಗಿಲ್ಲ.

**(ಗೊಂದಲ)**

**ವೈಸ್ ಛೇರ್ಮನ್:–** ಮಾನ್ಯ ಮುನಿರಾಜು ಗೌಡರವರೇ, ಮಾನ್ಯ ಸದಸ್ಯರ ಮಾತನ್ನು ಮುಗಿಸಲಿ.

**ಶ್ರೀ ಯು.ಬಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಈಗ 'ಬಿ' ಖಾತೆಯನ್ನು 'ಎ' ಖಾತೆಯಾಗಿ ಮಾಡುತ್ತೇವೆಂದು ಹೇಳುತ್ತಾರೆ. ಬೆಂಗಳೂರು ಜನರಿಗೆ ಎಷ್ಟು ವರ್ಷಗಳಿಂದ ಹೇಳುತ್ತಿದ್ದಾರೆ. ಯಾವುದೋ ಒಂದು ಕಾಲದಲ್ಲಿ ಸನ್ಮಾನ್ಯ ದೇವೇಗೌಡರು 'ಬಿ' ಖಾತೆಯನ್ನು 'ಎ' ಖಾತೆಯನ್ನಾಗಿ ಮಾಡಿದ್ದರು. ನನಗೆ ನೆನಪಿರುವ ಪ್ರಕಾರ ನೂರು ರೂಪಾಯಿಗೆ square meter ನಂತೆ ಕಟ್ಟಿಸಿಕೊಂಡಿದ್ದರು. ಅವೊತ್ತಿನ ದಿವಸದಿಂದ ಇವತ್ತಿನ ದಿವಸದವರೆಗೂ ಆಗಲಿಲ್ಲ. ಚುನಾವಣೆ ಸಂದರ್ಭ ಬಂದಾಗ, 'ಬಿ' ಖಾತೆಯನ್ನು 'ಎ' ಖಾತೆ ಮಡುತ್ತೇವೆಂದು ಜನರಿಗೆ ಈ ರೀತಿ ಸುಳ್ಳು ಏಕೆ ಹೇಳುತ್ತಾರೆ? ನಾಳೆಯಿಂದ ಬೆಂಗಳೂರಿನಲ್ಲಿರುವ ಅಕ್ರಮಗಳಿರುವ ಎಲ್ಲಾ ಜಾಗವನ್ನು ಸಕ್ರಮ ಮಾಡುತ್ತೇವೆಂದು ಒಂದು ಆದೇಶ ಮಾಡಿಬಿಟ್ಟು ಹೇಳಿ. ಚುನಾವಣೆ ಘೋಷಣೆಗಾಗಿಯೇ, ಈ ಬಜೆಟ್ ಘೋಷಣೆ ಮಾಡಿರುವುದಾಗಿದೆಯಾ. ಅನುಕಂಪದ ಆಧಾರದ ಮೇಲೆ ಹಣವನ್ನು ಕೊಡುತ್ತೀರಿ. ಅದನ್ನು ಕೊಡಿ. ಮೊನ್ನೆ ನಡೆದಿರುವ ಶಿವಮೊಗ್ಗ ಘಟನೆಯೊಂದರಲ್ಲಿ ಅನುಕಂಪದ ಆಧಾರದ ಮೇಲೆ ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಸುಮಾರು ಐವತ್ತು ಲಕ್ಷ ರೂಪಾಯಿಗಳನ್ನು ಕೊಡಿ ನಮ್ಮದೇನೂ ಅಭ್ಯಂತರವಿಲ್ಲ. ಅದೇ ಮಾನದಂಡ ಬೇರೆಯವರಿಗೆ ಮಾಡಬೇಕಲ್ಲ. ಬೆಳ್ತಂಗಡಿಯಲ್ಲಿ ಭಜರಂಗದವನು  ಒಬ್ಬ ದಲಿತನನ್ನು ಸಾಯಿಸಿದರೆ, ನಿಮ್ಮ ಮನೆಯ ನಾಯಿ ಕೂಡ ಮೂಸು ನೋಡುವುದಿಲ್ಲ. ಇದು ಯಾವ ಧರ್ಮ? ಎಲ್ಲರಿಗೂ ಒಂದೇ ರೀತಿಯ ಪರಿಹಾರವನ್ನು ಕೊಡಿ. ಐವತ್ತು ಸಾವಿರ ರೂಪಾಯಿಗಳು ಅಥವಾ ಒಂದು ಕೋಟಿ ರೂಪಾಯಿ ಸರ್ಕಾರದಿಂದ ಏನೂ ಕೊಡುತ್ತೀರಾ ಕೊಡಿ. ನಮ್ಮದೇನೂ ಅಭ್ಯಂತರವಿಲ್ಲ. ಅನುಕಂಪದ ಆಧಾರದ ಮೇಲೆ ಯರ‍್ಯಾರಿಗೆ ಕೊಡುತ್ತೀರಾ ಕೊಡಿ. ಎಲ್ಲರಿಗೂ ಒಂದೇ ರೀತಿಯ ಮಾನದಂಡ ಇರಬೇಕಲ್ಲ. ಒಬ್ಬೊಬ್ಬರಿಗೆ ಒಂದು ರೀತಿಯ ಮಾನದಂಡವಾದರೆ ಹೇಗೆ? ಇದು ಸರ್ಕಾರದ ಅವೈಜ್ಞಾನಿಕ ನೀತಿ ಎಂದು ನಾನು ಹೇಳುತ್ತಾ, ಈ ಬಜೆಟ್‌ನ್ನು ಇದೇ ರೀತಿ ಮುಂದುವರೆಸಿಕೊಂಡು ಹೋದರೆ, ನಾಳೆ ದಿನ ಈ ರಾಜ್ಯ ಆರ್ಥಿಕ ದಿವಾಳಿ ಕಡೆ ಹೋಗುತ್ತದೆ. ಈ ರೀತಿ ಸಾಲ ಮಾಡುತ್ತಾ ಹೋದರೆ, ಮುಂದೆ ಬರುವಂತಹ ಸರ್ಕಾರ ಅಥವಾ

ಈ ಸರ್ಕಾರ ಇದ್ದರೂ ಕೂಡ ಬರೀ ಅಸಲು ಬಡ್ಡಿ ಕಟ್ಟುವುದಕ್ಕೆ ಕೂಡ ಆಗುವುದಿಲ್ಲ. ಈ ಸರ್ಕಾರ ಮೊದಲು Fiscal discipline ತರಬೇಕು. Parameters ಏನಿದೆ, ಅದರೊಳಗಡೆ ನಮ್ಮ ಸಂಪನ್ಮೂಲಗಳು ಬರಬೇಕು. ಅದರೊಳಗಡೆ ಖರ್ಚುಗಳು ಆಗಬೇಕು. ಶೇಕಡ 136 percent Deficit Budget ಮಾಡಿದರೆ, ಸರ್ಕಾರಕ್ಕೆ ಹಣ ಬರುವುದಕ್ಕಿಂತ ಹೆಚ್ಚಿಗೆ ಹಣ ಖರ್ಚು ಮಾಡಿದರೆ, ಸರ್ಕಾರ ನಡೆಸಲು ಕಷ್ಟವಾಗುತ್ತದೆ. ಇನ್ನೂ ಎರಡು ದಿನ ಸರ್ಕಾರ ಇರಬೇಕೆಂದರೆ, ಇಂತಹದೆನ್ನೆಲ್ಲಾ ಬಿಟ್ಟು, ನ್ಯಾಯ ಮಾರ್ಗದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿ. ತಾವು ಡಬಲ್ ಇಂಜಿನ್ ಸರ್ಕಾರ ಅಂತಾ ಹೇಳಕೊಳ್ಳುತ್ತೀರಲ್ಲ, ಇದನ್ನು ಸಾರ್ಥಕ ಮಾಡಿ. ಬರೀ ಪತ್ರಿಕೆಯಲ್ಲಿ ಹೇಳುವುದಕ್ಕೆ ಹೋಗಬೇಡಿ. ಒಳ್ಳೆಯ ಕೆಲಸ ಮಾಡಿ ತೋರಿಸಿ ಎಂದು ಹೇಳ, ನನ್ನ ಮಾತನ್ನು ಮುಗಿಸುತ್ತೇನೆ.

**ವೈಸ್ ಛೇರ್ಮನ್:-** ಮಾನ್ಯ ರಮೇಶ್‌ಗೌಡರೇ, ತಾವು ಮಾತನಾಡಿ.

**ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನಸಭೆಯಿಂದು ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಈ ಬಜೆಟ್...

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುವುದು ಇತ್ತು.

**ವೈಸ್ ಛೇರ್ಮನ್:-** ಮಾನ್ಯ ರಮೇಶ್‌ಗೌಡರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಮಾತನಾಡಿದ ನಂತರ ತಮಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ.

(ಮುಂದು)

**(246) 10-03-2022 4.10 ಟಿಸಿಹೆಚ್-ಕೆಎಸ್ (ವೈಸ್ ಚೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಹೆಚ್.ಎಂ.ರಮೇಶ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಪ್ರತಿ ವರ್ಷ ಬಜೆಟ್ ಮಂಡನೆ ಮಾಡುತ್ತಾರೆ. ಅದೇ ರೀತಿ ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿಯವರು

ಕೂಡ ಬಜೆಟ್ ಮಂಡನೆ ಮಾಡಿದ್ದಾರೆ. 2022-23ನೇ ಸಾಲಿನ ಬಜೆಟ್ ಗಾತ್ರ ರೂ. 2,61,977 ಕೋಟಿಗಳ ಬಹಳ ದೊಡ್ಡ ಗಾತ್ರದ ಬಜೆಟ್ ಮಂಡನೆ ಮಾಡಿದ್ದಾರೆ. ಈ ಹಿಂದಿನ ಬಜೆಟ್ ಪುಸ್ತಕದಲ್ಲಿ ಡಿ.ವಿ.ಜಿ.ಯವರು ತಮ್ಮ 'ಮಂಕುತಿಮ್ಮನ ಕಗ್ಗ' ಕೃತಿಯಲ್ಲಿ

**"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು।**

**ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ॥**

**ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ।**

**ಎಲ್ಲರೊಳಗೊಂದಾಗು-ಮಂಕುತಿಮ್ಮ "** ಎಂದು ಬರೆದಿದ್ದಾರೆ.

ಈ ಸಾಲುಗಳು ನನಗೆ ಸದಾ ಸ್ಫೂರ್ತಿ. ಕಷ್ಟಕಾರ್ಪಣ್ಯಗಳಿಗೆ ಅಂಜದೆ ಆತ್ಮವಿಶ್ವಾಸದಿಂದ ಮುನ್ನುಗ್ಗಲು ಪ್ರೇರಕ ಎಂದು ಈ ಹಿಂದೆಯೂ ಕೂಡ ಇದೇ ಸರ್ಕಾರ ಬಜೆಟ್ ಮಂಡನೆ ಮಾಡಿತ್ತು. ರಾಷ್ಟ್ರಕವಿ ಕುವೆಂಪುರವರು "ಕರ್ನಾಟಕ ಸರ್ವ ಜನಾಂಗದ ಶಾಂತಿಯ ತೋಟ" ಎಂದು ಹೇಳಿದ್ದಾರೆ. ಎಲ್ಲಾ ಸಮುದಾಯಗಳ ಸಮಗ್ರ ಅಭಿವೃದ್ಧಿಗೆ ನಮ್ಮ ಸರ್ಕಾರದ ಆಶಯ ಎಂದು ಸರ್ಕಾರ ಹೇಳಿದೆ. ಈ ಹಿಂದಿನ ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಏಳಿಗೆಗಾಗಿ ರೂ. 1500/- ಕೋಟಿಗಳನ್ನು ಮೀಸಲಿಟ್ಟಿದ್ದರು. ಅದೇ ರೀತಿ ಕ್ರಿಶ್ಚಿಯನ್ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ರೂ.200 ಕೋಟಿಗಳನ್ನು ಮೀಸಲಿಟ್ಟಿದ್ದರು. ಆಮೇಲೆ 2020-21ನೇ ಸಾಲಿನಲ್ಲಿ 400 ಸರ್ಕಾರಿ ಉರ್ದು ಶಾಲೆಗಳಿಗೆ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭಿಸಲು ಸರ್ಕಾರಿ ಆದೇಶ ಹೊರಡಿಸಲಾಗಿದೆ ಎಂದು ಹೇಳಿದ್ದರು. ಅದಕ್ಕೂ ಕೂಡ ಒಂದು ರೂಪಾಯಿ ಕೂಡ ಮೀಸಲಿಟ್ಟಿರುವುದಾಗಿ ಹೇಳಲಿಲ್ಲ. ಬಜೆಟ್‌ನಲ್ಲಿ ಅದು ಯಾವುದನ್ನೂ implement ಮಾಡಲೇ ಇಲ್ಲ. ಬಜೆಟ್‌ನಲ್ಲಿ ಘೋಷಣೆ ಮಾಡುತ್ತೀರಿ. ಆ ಘೋಷಣೆ ಮಾಡಿದ ನಂತರ ನೀವು ಅದನ್ನು implement ಮಾಡುವುದಿಲ್ಲವೆಂದರೆ ನಾವು ಸುಮ್ಮನೆ ಏಕೆ ವೃಥಾ ಬಜೆಟ್ ಮೇಲೆ ಮಾತನಾಡಬೇಕು. ಕಳೆದ ಬಾರಿ ನಾವು ಮಾತನಾಡುವಾಗ ಮಾನ್ಯ ಸಭಾನಾಯಕರು "ಈಗ ನೀವು ಇದ್ದೀರಿ. ನಾವು ಅವೊತ್ತಿನ ದಿವಸ ಏನು ಹೇಳಿದ್ದೇವೆ ಎಂಬುದನ್ನು ಹೇಳುತ್ತೇವೆ. ಬೇಕಾದರೆ ದಾಖಲೆ ತೆಗೆಸಿ ನೋಡಲಿ. ಕಳೆದ ಬಾರಿ ಜಿಎಸ್‌ಟಿ ಬಗ್ಗೆ ಮಾತನಾಡಬೇಕಾದರೆ ಅವೊತ್ತು ಸಹ ನಾವು ಒಂದಷ್ಟು ಕ್ಲಾರಿಫಿಕೇಷನ್ ಕೇಳಿದ್ದೆವು. ಅದನ್ನು

ಕೊಡಲಿಲ್ಲ. ನಮ್ಮ ರಾಜ್ಯಕ್ಕೆ ಅನುದಾನ ಎಷ್ಟು ಬರುತ್ತಿದೆ, ಜಿಎಸ್‌ಟಿಯಿಂದ ನಮಗೆ ಬರಬೇಕಾದಂಥ ಪಾಲು ಎಷ್ಟು ಎಂದರೆ, ಅದು ಕೂಡ ಬರುತ್ತಿಲ್ಲವೆಂದು ಅದರ ಬಗ್ಗೆ ಬಹಳಷ್ಟು ಚರ್ಚೆಗಳಾಯಿತು. ಅದೇ ರೀತಿ ಇವತ್ತಿನ ದಿವಸ ದೊಡ್ಡ ಗಾತ್ರದ ಬಜೆಟ್ ಮಂಡನೆ ಮಾಡಿದ್ದಾರೆ. ಇದುವರೆಗೆ ಸಾಕಷ್ಟು ಸರ್ಕಾರಗಳು ಬಂದಿವೆ. ಪ್ರತಿಬಾರಿ ನಮ್ಮ ರಾಜ್ಯದ ಆದಾಯದ ಮಿತಿ ಏನಿದೆ, ಟ್ಯಾಕ್ಸ್ ಇರಬಹುದು, ರೆವೆನ್ಯೂ ಇರಬಹುದು ಇದೆಲ್ಲದರ ಬಗ್ಗೆಯೂ ಎಷ್ಟು ಅನುಕೂಲವಾಗುತ್ತದೆ. ನಮಗೆ ಎಷ್ಟು ಟ್ಯಾಕ್ಸ್ ಕಲೆಕ್ಷನ್ ಇದೆ; ಅದು ಕೇಂದ್ರ ಸರ್ಕಾರದಿಂದ ಇರಬಹುದು ನಮ್ಮ ರಾಜ್ಯ ಸರ್ಕಾರದಿಂದ ಯಾವ್ಯಾವ ರೀತಿ ಟ್ಯಾಕ್ಸ್ ಮತ್ತು ರೆವೆನ್ಯೂ ಬರುತ್ತದೆ ಇದೆಲ್ಲವನ್ನೂ ಕೂಡ ನೋಡಿ ಬಜೆಟ್ ಮಂಡನೆ ಮಾಡುತ್ತಾರೆ. ಅಂತಹ ಒಂದು ಸಂದರ್ಭದಲ್ಲಿ ಪ್ರತಿಬಾರಿ ನಮ್ಮ ರಾಜ್ಯದ ಸಾಲಕ್ಕೆ ಬಡ್ಡಿ ಕಟ್ಟುವುದೇ ಹೆಚ್ಚಾಗುತ್ತಿದೆ. ನಮ್ಮ ರಾಜ್ಯದ ಸಾಲ 2018-19ರಲ್ಲಿ ರೂ.1,93,967 ಕೋಟಿಗಳು. ಅದೇ ರೀತಿ 2019-20ನೇ ಸಾಲಿನಲ್ಲಿ ರೂ.2,34,245 ಕೋಟಿಗಳು. 2020-21ನೇ ಸಾಲಿನಲ್ಲಿ ರೂ. 2,95,350 ಕೋಟಿಗಳು. ಈಗ ಅವರೇ ಬಜೆಟ್ ಮಂಡನೆ ಮಾಡಿರತಕ್ಕಂಥ ರೂ.2,61,977 ಕೋಟಿಗಳಲ್ಲಿ ರೂ. 65,000 ಕೋಟಿಗಳು shortage ಇದೆಯೆಂದು ಹೇಳಿದ್ದಾರೆ. 2021-22ನೇ ಸಾಲಿನಲ್ಲಿ ರಾಜ್ಯ ಸರ್ಕಾರ ರೂ.3,48,117 ಕೋಟಿಗಳು ಸಾಲ ಮಾಡಿದೆ. ಯಾವುದೇ ಒಂದು ರಾಜ್ಯ ಸರ್ಕಾರಕ್ಕೆ ಬಜೆಟ್ ಮಂಡಿಸಲು limitation ಇರುತ್ತದೆ. ರಾಜ್ಯದ ಬಜೆಟ್‌ನ ಗಾತ್ರವನ್ನು ಪ್ರತಿವರ್ಷ ಏನು ಹೆಚ್ಚಿಸಿಕೊಂಡು ಹೋಗುತ್ತಿದೆ, ನೀವೇನು ಅದರ ಮೇಲೆ ಸಾಲ ಮಾಡುವುದಕ್ಕೆ ಮಂಡಿಸುತ್ತಿದ್ದೀರಾ. ನೀವು ಬಜೆಟ್ implement ಮಾಡುವುದಕ್ಕೆ ಆಗುವುದಿಲ್ಲ. ಕೆಳಮನೆಯಲ್ಲಿ ಅನೇಕ ಶಾಸಕರು ಮಾತನಾಡುವಾಗ ಶೇ.50 ಬಜೆಟ್‌ನ್ನು implement ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದರು. ಯಾವುದೇ ಸರ್ಕಾರ ಇರಬಹುದು, ಸರ್ಕಾರ ನಡೆಸುವವರು ನಾವೇನು ಬಜೆಟ್ ಮಂಡನೆ ಮಾಡುತ್ತೇವೆ, ಆ ಬಜೆಟ್ ಮಂಡನೆ ಮಾಡುವುದಕ್ಕೆ ಶೇ.50 implement ಮಾಡುವುದಕ್ಕೆ ಆಗುವುದಿಲ್ಲ. ಪ್ರತಿವರ್ಷ ಬಜೆಟ್ ಗಾತ್ರವನ್ನೇಕೆ ಹೆಚ್ಚಿಗೆ ಮಾಡಿಕೊಂಡು ಹೋಗುತ್ತೀರಿ ಎಂದು ಕೇಳುವುದು ಸಹಜ. ಅಂದರೆ ನಿಮ್ಮ ಉದ್ದೇಶ ಸಾಲ ಮಾಡುವುದಕ್ಕೋಸ್ಕರ ಈ ಒಂದು ಬಜೆಟ್ ಗಾತ್ರವನ್ನು ಹೆಚ್ಚಿಸಿಕೊಂಡು ಹೋಗುವುದೇ? ಅದೇ ರೀತಿ 2022-23ನೇ ಸಾಲಿನಲ್ಲಿ ರಾಜ್ಯ ಸರ್ಕಾರ ರೂ.3,48,117 ಕೋಟಿಗಳ ಸಾಲಕ್ಕೆ ರೂ. 29,395 ಕೋಟಿಗಳು ಬಡ್ಡಿ ಕಟ್ಟುತ್ತದೆ.

ಸುಮಾರು 10 ವರ್ಷದ analysis ಮಾಡಿದಾಗ ನೀವು ಪ್ರತಿ ವರ್ಷ ಸಾಲವನ್ನೂ ಕೂಡ ಹೆಚ್ಚಿಗೆ ಮಾಡುತ್ತಿದ್ದೀರಿ. ಬಡ್ಡಿ ಕೂಡ ಅದಕ್ಕಿಂತ double ಆಗುತ್ತಾ ಹೋಗುತ್ತಿದೆ. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಕೂಡ ಒಂದು ವರ್ಷಕ್ಕೆ ರೂ. 29,000 ಕೋಟಿಗಳು ಸಾಲಕ್ಕೆ ಬರೀ ಬಡ್ಡಿಯನ್ನು ಕಟ್ಟುತ್ತಿದ್ದರೆ, ನಮ್ಮ ಸ್ಟೇಟ್ ಡೆವಲಪ್‌ಮೆಂಟ್ ಹೇಗೆ ಆಗುತ್ತದೆ? ಸ್ಟೇಟ್ ಡೆವಲಪ್‌ಮೆಂಟ್ ಆಗುವುದಕ್ಕೆ ಸಾಧ್ಯ ಇದೆಯೇ? ಈಗ ಉದಾಹರಣೆಗೆ ಬೆಂಗಳೂರಿನಲ್ಲಿ ಬಿಬಿಎಂಪಿ ರೂ.10,000 ಕೋಟಿಗಳ ಗಾತ್ರದ ಬಜೆಟ್ ಮಂಡನೆ ಮಾಡುತ್ತದೆ. ಆ ರೂ.10,000 ಕೋಟಿಗಳಲ್ಲಿ ರೂ.3,000 ಕೋಟಿಗಳ ಬಜೆಟ್ implement ಆಗುವುದಿಲ್ಲ. ಇದು ಬರೀ ಬೆಂಗಳೂರು ಬಿಬಿಎಂಪಿಯದ್ದು ಮಾತ್ರ ಹೇಳುತ್ತಿದ್ದೇನೆ.  ಸರ್ಕಾರ ಕಳೆದ ಬಾರಿ ಬಿಬಿಎಂಪಿಗೆ ಏನೂ ಟ್ಯಾಕ್ಸ್ ಕಲೆಕ್ಷನ್ ಆಗಿಲ್ಲ, ಬಿಬಿಎಂಪಿಯಲ್ಲಿ ಅನುದಾನವಿಲ್ಲವೆಂದು ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ರಾಜ್ಯ ಸರ್ಕಾರದಿಂದ ರೂ.1,500 ಕೋಟಿಗಳ ಅನುದಾನವನ್ನು ಕೊಟ್ಟಿದ್ದಾರೆ. ಮಾನ್ಯ ಸಭಾಪತಿಯವರೇ, ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ, 2006ರಲ್ಲಿ ಬಿಎಂಪಿ ಎಂದಿದ್ದದ್ದು ಬಿಬಿಎಂಪಿ ಎಂದಾಯಿತು. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಇಂಜಿನಿಯರ್‌ಗಳನ್ನು ಹೈಕೋರ್ಟ್ ದಿನಾಲು ಕರೆಸಿ ಛೀಮಾರಿ ಹಾಕುತ್ತಿದೆ. ನಾವು ನಿಮ್ಮನ್ನು ಜೈಲಿಗೆ ಕಳುಹಿಸಬೇಕಾಗುತ್ತದೆ, ಆ ದಿನಗಳು ಬಹಳ ದೂರವಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ನಾನು ಸರ್ಕಾರಕ್ಕೆ ಆಗ್ರಹ ಮಾಡುವುದೇನೆಂದರೆ, ಅದು ಕೋರ್ಟಿನ ಕೆಲಸವಲ್ಲ. ಅದು ಮಾನ್ಯ ಸಚಿವರು ಹಾಗೂ ಸರ್ಕಾರದ ಕೆಲಸ. ನಿಮಗೆ ಬಿಬಿಎಂಪಿ ಇಂಜಿನಿಯರ್‌ಗಳಿಂದ ಅಥವಾ ಅಧಿಕಾರಿಗಳ ಕೈಯಲ್ಲಿ ಕೆಲಸ ಮಾಡಿಸುವುದಕ್ಕೆ ಆಗುವುದಿಲ್ಲವೇ? ಶಾಸನಸಭೆ ಮಾಡಬೇಕಾಗಿರತಕ್ಕಂಥ ಕೆಲಸವನ್ನು ಕೋರ್ಟ್‌ಗಳು ಮಾಡಬೇಕೇ? ಸರ್ಕಾರ ಒಬ್ಬರು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿಲ್ಲ. ಬಿಬಿಎಂಪಿಯಿಂದ ಬೆಳ್ಳಂದೂರಿನ ರಿಂಗ್ ರಸ್ತೆಯಲ್ಲಿ ಗುಂಡಿ ಮುಚ್ಚುವುದಕ್ಕೆ ರೂ.1,100 ಕೋಟಿಗಳನ್ನು ಖರ್ಚು ಮಾಡಿದ್ದಾರೆ. ಸಮರ್ಥವಾಗಿರತಕ್ಕಂಥ ಒಬ್ಬರು ಗುತ್ತಿಗೆದಾರನಿಗೆ ಆ ದುಡ್ಡು ಕೊಟ್ಟಿದ್ದರೆ ಇಡೀ ಬೆಂಗಳೂರಿನಲ್ಲಿರತಕ್ಕಂಥ ಎಲ್ಲಾ ರಸ್ತೆಗಳ ಗುಂಡಿಗಳನ್ನು ಮುಚ್ಚುತ್ತಿದ್ದರು. ರೂ.1,100 ಕೋಟಿಗಳು ಎಲ್ಲಿಗೆ ಹೋಯಿತು? ಅದು ಅಧಿಕಾರಿಗಳ ಜೇಬಿಗೆ ಹೋಯಿತೇ?

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, ನಾವು ಪದೇ ಪದೇ ಕೋರ್ಟ್‌ನವರು ಆ ಇಂಜಿನಿಯರ್‌ರವರನ್ನು ಕರೆದು, 'ನಿಮ್ಮನ್ನು ಜೈಲಿಗೆ ಕಳುಹಿಸಬೇಕಾಗುತ್ತದೆ' ಎಂದು ಹೇಳುತ್ತಿದ್ದಾರೆ. ಆ ಕೋರ್ಟ್‌ನವರೇನು ಆಕಾಶದಿಂದ ಇಳಿದಿದ್ದಾರೆಯೇ? ಅವರಿಗೂ ಕೂಡ ಒಂದು ಲಿಮಿಟ್ ಎನ್ನುವುದು ಇದೆಯಲ್ಲವೇ? ಅದು ಸುಪ್ರೀಂ ಕೋರ್ಟ್ ಜಡ್ಜ್ ಇರಬಹುದು ಅಥವಾ ಹೈಕೋರ್ಟ್ ಜಡ್ಜ್ ಇರಬಹುದು, ಅವರು ಏನು ಹೇಳಬೇಕೋ ಅದನ್ನು ಹೇಳಬೇಕು. ಹಾಗಾದರೆ ಅವರಿಗೆ ಅಷ್ಟೊಂದು ವರ್ಕ್ ಬಗ್ಗೆ conscious ಮತ್ತು ಈ ನಾಡಿನ ಜನರ ಬಗ್ಗೆ ಪ್ರೀತಿ ಇದ್ದರೆ, ಅವರ ಹತ್ತಿರ ಕೋಟಿಗಟ್ಟಲೇ ಕೇಸ್‌ಗಳು ಪೆಂಡಿಂಗ್ ಇದೆಯಲ್ಲವೇ? ಅವರೇಕೆ ಆ ಎಲ್ಲಾ ಪ್ರಕರಣಗಳನ್ನು ಇತ್ಯರ್ಥ ಮಾಡುವಂತಹ ಕೆಲಸವನ್ನು ಮಾಡುತ್ತಿಲ್ಲ? ಹೈಕೋರ್ಟ್‌ನಲ್ಲೇ ಲಕ್ಷಾನುಗಟ್ಟಲೇ ಕೇಸ್‌ಗಳು ಪೆಂಡಿಂಗ್ ಇದೆಯಲ್ಲವೇ? ಅವರ ಕೆಲಸವನ್ನು ಅವರು ಮಾಡಬೇಕು, ನಮ್ಮ ಕೆಲಸವನ್ನು ನಾವು ಮಾಡುತ್ತೇವೆ. ಆದರೆ ಎಷ್ಟು ಹೇಳಬೇಕೋ, ಅಷ್ಟು ಹೇಳಬೇಕು. ಕೋರ್ಟ್‌ಗಳು ಈ ರೀತಿ ಹೇಳಿದ್ದಾವೆ ಎನ್ನತಕ್ಕಂಥ ವಿಚಾರವನ್ನು ನಾವು ಪದೇ ಪದೇ ಹೇಳಬಾರದು. ನಮಗೂ ಕೂಡ ಜವಾಬ್ದಾರಿಗಳಿವೆ. ಆ ಜವಾಬ್ದಾರಿಯಿಂದಲೇ ಹೆಚ್ಚು ಕೆಲಸ ಮಾಡುತ್ತೇವೆ. ಅವರು ಕೂಡ ಆ ಜವಾಬ್ದಾರಿ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ, ಅದು ಸುಪ್ರೀಂ ಕೋರ್ಟ್ ಇರಬಹುದು ಅಥವಾ ಹೈಕೋರ್ಟ್ ಇರಬಹುದು; ಅವರ ಕೆಲಸವನ್ನು ಅವರು ಮಾಡಲೇಬೇಕಾಗುತ್ತದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:-** ಮಾನ್ಯ ಸಭಾಪತಿಯವರೇ, ನಿಜ. ಅದಕ್ಕಾಗಿ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಏಕೆಂದರೆ ಮಾನ್ಯ ಸಭಾಪತಿಯವರೇ, ನಾವು ಗಂಗಾ ಕಲ್ಯಾಣ ಸದನ ಸಮಿತಿಯಿಂದ ತನಿಖೆಗೆ ಹೋದಾಗ ಹಿರಿಯ ಅಧಿಕಾರಿಗಳು ಆ ಯೋಜನೆಯಲ್ಲಿ ಕೊಳವೆಬಾವಿಗಳನ್ನು ಕೊರೆಸುತ್ತಾರೆ. ಆ ಯೋಜನೆಯಲ್ಲಿ ಸುಮಾರು ರೂ. 650 ಕೋಟಿಗಳ ಹಗರಣ ಆಗಿರುವುದು ನಮ್ಮ ಕಣ್ಣಮುಂದೆಯೇ ಕಾಣಿಸುತ್ತಿದೆ. ಆ ಸದನ ಸಮಿತಿಯಲ್ಲಿನ ಅಧ್ಯಕ್ಷರಾದ ಡಾ.ವೈ.ಎ.ನಾರಾಯಣಸ್ವಾಮಿಯವರು ಕೂಡ ಇಲ್ಲೇ ಇದ್ದಾರೆ. ನಾವೆಲ್ಲಾ ಅವೊತ್ತು ಸ್ಥಳಪರಿಶೀಲನೆ ಮಾಡಿದ್ದು, ಮೇಲ್ನೋಟಕ್ಕೆ ದುಡ್ಡು ಹೊಡೆದಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

**(ಮುಂದು...)**

(247)10.3.2022/4.20/ಎಂ.ಎಂ-ಕೆ.ಎಸ್

(ವೈಸ್ ಚೇರ್ಮನ್‌ರವರ ಉಪಸ್ಥಿತಿ)

**ಶ್ರೀ ಹೆಚ್. ಎಂ. ರಮೇಶ್‌ಗೌಡ (ಮುಂದು):-**

ಮೇಲ್ನೋಟಕ್ಕೆ ಕೊಳವೆಬಾವಿಗಳನ್ನು ಕೊರೆದಿರುವುದು ಕೇವಲ 650-700 ಅಡಿ ಮಾತ್ರ. ಅದರೆ ಅವನು ಬಿಲ್ ಮಾಡಿರುವುದು 1100 ರಿಂದ 1300 ಅಡಿ ಎಂದು ಬಿಲ್ ಮಾಡಿದ್ದಾನೆ. ಅಂತಹದ್ದು ಈ ಯೋಜನೆಯಲ್ಲಿ 650 ಕೋಟಿ ರೂಪಾಯಿಗಳಷ್ಟು ಹಣವನ್ನು ಹೊಡೆದಿದ್ದಾರೆ ಎಂದರೆ ದಯಮಾಡಿ ಇದನ್ನು ಅರ್ಥಮಾಡಿಕೊಳ್ಳಿ. ನಾನು ಆ ಕಮಿಟಿಗೆ ಬಂದಂತಹ ಸಂದರ್ಭದಲ್ಲಿ; ಸಸ್ಪೆಂಡ್ ಮಾಡುವುದು ದೂರದ ಮಾತು. ಮೊದಲು ಅವನ ಮೇಲೆ ಎಫ್.ಐ.ಆರ್., ಮಾಡಿ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದೆ. ಅಲ್ಲಿರುವಂತಹ ಎಲ್ಲಾ ಹಿರಿಯ ಅಧಿಕಾರಿಗಳು ಎಫ್.ಐ.ಆರ್. ಬೇಡ, ಅವನ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ನಂತರ ಕಮಿಟಿ ಚೇಂಜ್ ಆಯಿತು ನಾನು ಬೇರೆ ಕಮಿಟಿಗೆ ಬಂದೆ. ಅದು ಹಾಗೆಯೇ ಹಾಳು ಬಿದ್ದುಹೋಯಿತು. ಇದೇ ರೀತಿ ಬಿ.ಡಿ.ಎ., ದಲ್ಲಿ ಒಂದು ಕಾರ್ನರ್ ಸೈಟ್ ಬಗ್ಗೆ ಇದೇ ಸದನದಲ್ಲಿ ಚರ್ಚೆಯಾಯಿತು. ಇದನ್ನೇತಕ್ಕೆ ಹೇಳುತ್ತಿದ್ದೇನೆ ಎಂದರೆ, ಬಿ.ಬಿ.ಎಂ.ಪಿ.,ಯಲ್ಲಿ ಸಂಬಳ ಕೊಡುವುದಕ್ಕೆ ಹಣವಿಲ್ಲ ಎಂದು ಹೇಳುತ್ತೀರಿ. ಆದರೆ ರಾಜ್ಯಸರ್ಕಾರದಿಂದ 1100 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಬಿ.ಡಿ.ಎ., ದಲ್ಲಿ ಒಂದು ಕಾರ್ನರ್ ಸೈಟ್ ಅನ್ನು ಒಂದು ಎಕರೆ ಜಾಗವೆಂದು ಕೊಡುತ್ತಾರೆ. ಅದು ನಮ್ಮ ಹಕ್ಕುಬಾಧ್ಯತಾ ಸಮಿತಿಗೆ ಬಂದಿತ್ತು. ಹಕ್ಕುಬಾಧ್ಯತಾ ಸಮಿತಿಗೆ ಬಂದಂತಹ ಸಂದರ್ಭದಲ್ಲಿ ಶ್ರೀ ಶ್ಯಾಂ ಭಟ್‌ರವರನ್ನೂ ಸೇರಿಸಿ ಹಿಂದೆ ಇದ್ದಂತಹ ಬಿ.ಡಿ.ಎ., ಅಧ್ಯಕ್ಷರನ್ನು ಮತ್ತು ಕಮೀಷನರ್‌ರವರನ್ನು ಸೇರಿಸಿ ಎಫ್.ಐ.ಆರ್., ಮಾಡಿಸಿದರು. ಆ ವಿಚಾರ ಸುಮಾರು 7-8 ತಿಂಗಳು ನಡೆಯಿತು. ಮಾನ್ಯ ಸದಸ್ಯರಾದ ಆಯನೂರು ಮಂಜುನಾಥ್‌ರವರು ಅದಕ್ಕೆ ಅಧ್ಯಕ್ಷರಾಗಿದ್ದರು. ಮೇಲ್ನೋಟಕ್ಕೆ ಯಾವುದೋ ಒಂದು ಸೊಸೈಟಿಗೆ ಕೊಟ್ಟಿದ್ದಂತಹ ಜಾಗವದು. ಅಲ್ಲಿ ಸುಮಾರು 500 ಕೋಟಿ ರೂಪಾಯಿಗಳ ಅವ್ಯವಹಾರವಾಗಿತ್ತು. ಎಫ್.ಐ.ಆರ್ ಮಾಡಿದರು ಆಮೇಲೆ ಏನಾಯಿತು ಎಂಬುದು ನಮಗೆ ಗೊತ್ತಿಲ್ಲ. ಅದಕ್ಕೆ ಬಿ-ರಿಪೋರ್ಟ್ ಹಾಕಿದರು ಎಂದು ಮೊನ್ನೆ ಯಾರೋ ಹೇಳಿದರು. ಎಂಟು ತಿಂಗಳ ಕಾಲ

ಪ್ರಧಾನ ಕಾರ್ಯದರ್ಶಿಯವರಿರಬಹುದು, ಬಿ.ಡಿ.ಎ., ಕಮೀಷನರ್ ಎಲ್ಲರೂ ಆ ಸಮಿತಿಗೆ ಬಂದಿದ್ದರು. ೫೦೦ ಕೋಟಿ ರೂಪಾಯಿಗಳ ಅವ್ಯವಹಾರವನ್ನು ಕಷ್ಟಪಟ್ಟು ಎಫ್.ಐ.ಆರ್ ಮಾಡಿಸಿದರೆ, ಚಾರ್ಜ್ ಶೀಟ್ ಮಾಡಬೇಕಾದಂತಹ ಕೇಸನ್ನು; ಆ ಪ್ರಕರಣ ಸದನದಲ್ಲಿಯೇ ಬಂದಿತ್ತು ಅದನ್ನು ನಮ್ಮ ಕಮಿಟಿಗೆ ರೆಫರ್ ಮಾಡಿದ್ದರು. ಆದರೂ ಆ ಕೇಸನ್ನು ಮತ್ತೆ ಬಿ–ರಿಪೋರ್ಟ್ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಯಾವುದೇ ಸರ್ಕಾರಗಳಿರಬಹುದು. ಯಾರಾದರೂ ಅಧಿಕಾರಿಗಳಿರಬಹುದು, ಭ್ರಷ್ಟಾಚಾರ ಮಾಡಿರುವಂತಹ ಒಬ್ಬ ಅಧಿಕಾರಿಗೆ ಇದುವರೆಗೂ ಸಹ ಯಾವುದೇ ರೀತಿಯಾದ ಶಿಕ್ಷೆಯಾಗಿಲ್ಲ. ಅವರು ಇನ್ನೂ ಒಳ್ಳೆಯ ಆಯಕಟ್ಟಿನ ಜಾಗಕ್ಕೆ ಬಂದು ಕೂರುತ್ತಾರೆ. ಯಾರು ಭ್ರಷ್ಟಾಚಾರ ಮಾಡಿ ಸಸ್ಪೆಂಡ್ ಆಗುತ್ತಾರೆ; ಬರೀ ಕಣ್ಣೊರೆಸುವುದಕ್ಕಷ್ಟೇ ಮೂರು ತಿಂಗಳು. ಮತ್ತೆ ಅವರು ಒಳ್ಳೆಯ ಜಾಗಕ್ಕೆ ಬಂದು ಕೂರುತ್ತಾರೆ. ಬಿ.ಬಿ.ಎಂ.ಪಿ., ಇಂಜಿನಿಯರ್ ಇದ್ದರೆ ಅವರು ಮತ್ತೆ ಬಿ.ಡಿ.ಎ., ಗೆ ಬರುತ್ತಾರೆ. ಇಂತಹ ಒಂದು ಪರಿಸ್ಥಿತಿ ಇದೆ. ರಾಜ್ಯದಲ್ಲಿ ಇಷ್ಟು ದೊಡ್ಡ ಗಾತ್ರದ ಬಜೆಟನ್ನು ಮಂಡನೆ ಮಾಡಿದ್ದಾರೆ, ಹಿಂದೆ ಶಾಲಾ ಕಾಲೇಜುಗಳಿಗೆ ಕೊಟ್ಟಿದ್ದು ಇರಬಹುದು, ಅವತ್ತು ಬಜೆಟ್ ಗಾತ್ರ ಬಹಳ ಕಡಿಮೆ ಇತ್ತು. ಆದರೆ ಇವತ್ತು ಇಷ್ಟು ದೊಡ್ಡ ಗಾತ್ರದ ಬಜೆಟ್ ಮಂಡನೆ ಮಾಡಿದರೂ ಸಹ ಸರ್ಕಾರ ನಡೆಸುವವರು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಒಂದು ವರ್ಷಕ್ಕೆ ೩೦,೦೦೦ ಕೋಟಿ ರೂಪಾಯಿಗಳ ಬಡ್ಡಿಯನ್ನು ಕಟ್ಟಿದರೆ ಬರಬೇಕಾದ State revenue ಮತ್ತು ತೆರಿಗೆ; ನಾನು ಆಗಲೇ ಹೇಳಿದೆ, ೨೦೦೬ರಲ್ಲಿ ಬಿ.ಎಂ.ಪಿ., ಇದ್ದುದನ್ನು ಬಿ.ಬಿ.ಎಂ.ಪಿ ಎಂದು ಮಾಡಿದರು. ಬಿ.ಬಿ.ಎಂ.ಪಿ ಮಾಡಿದಂತಹ ಸಂದರ್ಭದಲ್ಲಿ ೨೦೦೬ರಲ್ಲಿ betterment charges ಅನ್ನು ನಿಲ್ಲಿಸಿದರು. ನೀವು ರಿಸರ್ವ್ ಬ್ಯಾಂಕ್ ಚಲನ್ ಕಟ್ಟಬೇಕಾಗಿತ್ತು. ಚಲನ್ ಕಟ್ಟಿ ಖಾತಾ ಮಾಡುವುದಕ್ಕೆ ಪ್ರಾವಿಜನ್ ಇತ್ತು. ಅದರಲ್ಲೂ ಸಹ ಕೋರ್ಟ್ ಹೇಳಿತು . . .

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ರಮೇಶ್‌ಗೌಡರವರೇ, ತಾವು ಬಜೆಟ್ ಪರವಾಗಿ ಮಾತನಾಡುತ್ತಿದ್ದೀರಾ ಅಥವಾ ವಿರೋಧವಾಗಿ ಮಾತನಾಡುತ್ತಿದ್ದೀರಾ?

**ಶ್ರೀ ಹೆಚ್.ಎಂ. ರಮೇಶ್‌ಗೌಡ:–** ಮಾನ್ಯ ನಾರಾಯಣಸ್ವಾಮಿಯವರೇ, ದಯಮಾಡಿ ಒಂದೇ ನಿಮಿಷ ಅದನ್ನು ಹೇಳುತ್ತೇನೆ, ಕೇಳಿಸಿಕೊಳ್ಳಿ. ಬಿ–ಖಾತಾವನ್ನು ಎ–ಖಾತಾ ಮಾಡುತ್ತೇವೆಂದು ಮಾನ್ಯ

ಮುಖ್ಯಮಂತ್ರಿಯವರು ಹೇಳಿದ್ದಾರೆ. 2006ರಿಂದ ಇದುವರೆಗೂ ಸಹ ಇದು 2021ನೇ ಇಸವಿ. ಇಲ್ಲಿಯವರೆಗೆ ಯಾವ ಯಾವ ಸರ್ಕಾರಗಳು ಬಂದು ಹೋಗಿವೆ. ಈ ವಿಚಾರವನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಕೋರ್ಟ್ ಹೇಳಿದೆ, ಯಾರ್ಯಾರು ಪ್ಲ್ಯಾನ್ ಇಲ್ಲದೇ ಕಟ್ಟಡಗಳನ್ನು ಕಟ್ಟಿದ್ದಾರೆ ಅದೆಲ್ಲವನ್ನೂ demolish ಮಾಡಬೇಕೆಂದು ಹೇಳಿದೆ. ಯಾವುದಾದರೂ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿ ಕಟ್ಟಿಕೊಂಡಿದ್ದರೆ ನೀವು ಅದನ್ನು ನಿರ್ದಾಕ್ಷಿಣ್ಯವಾಗಿ ಹೊಡೆದು ಹಾಕಿ. ನಮ್ಮದೇನೂ ಅಭ್ಯಂತರವಿಲ್ಲ. 2006 ರಿಂದ ಬಿ.ಎಂ.ಪಿ ಇದ್ದುದನ್ನು ಬಿ.ಬಿ.ಎಂ.ಪಿ ಮಾಡಿಬಿಟ್ಟು betterment charges ನ್ನು ಸಹ stop ಮಾಡಿ; ಯಾರಾದರೂ ಮನೆ ಕಟ್ಟಬೇಕಾದರೆ it is a fundamental right. ನೀವು ಅವನಿಗೆ ಪ್ಲ್ಯಾನ್ ಕೊಡುವುದಿಲ್ಲ, ಅವನಿಗೆ ಖಾತೆ ಮಾಡಿ ಕೊಡುವುದಿಲ್ಲ. ಎ-ಖಾತಾ ಆಗದಿದ್ದರೆ ಅವನಿಗೆ ನಕ್ಷೆ ಮಂಜೂರಾತಿ ಆಗುವುದಿಲ್ಲ. ಅವನು ಮನೆ ಕಟ್ಟಿಕೊಂಡಿರುತ್ತಾನೆ, ಯಾರೋ ಒಬ್ಬರು ಹೋಗಿ ಹೈಕೋರ್ಟ್‌ನಲ್ಲಿ ಪಿ.ಐ.ಎಲ್ ಹಾಕಿದರು. ಹೈಕೋರ್ಟ್ ಯಾರ್ಯಾರು ಪ್ಲ್ಯಾನ್ ಇಲ್ಲದೇ ಬಿಲ್ಡಿಂಗ್ ಕಟ್ಟಿದ್ದಾರೆ ಎಲ್ಲವನ್ನೂ ಒಡೆದು ಹಾಕಿ ಎಂದು ಹೇಳಿತು. ಬಿ.ಬಿ.ಎಂ.ಪಿ., ಕಮೀಷನರ್‌ರವರನ್ನು ಹೈಕೋರ್ಟ್‌ಗೆ ದಿನವೂ ಕರೆಸಿ ಝಾಡಿಸುತ್ತಾರೆ. ಅವರು ಎಲ್ಲಾ ಇಂಜಿನಿಯರುಗಳನ್ನು ಕರೆಸಿ ಇಡೀ ಬೆಂಗಳೂರು ನಗರದಲ್ಲಿ ಎಷ್ಟು ಕಟ್ಟಡಗಳಿವೆ ಎಲ್ಲವನ್ನೂ ಪಟ್ಟಿ ಮಾಡಲು ಹೇಳುತ್ತಾರೆ. ಅವರು ಒಂದೊಂದು ವಾರ್ಡ್‌ನಲ್ಲೂ 3,000-4,000 ಪಟ್ಟಿ ಮಾಡಿ ಕೊಟ್ಟಿದ್ದಾರೆ. ಇದನ್ನು ಪ್ರಾಯೋಗಿಕವಾಗಿ ನೋಡುವುದಾದರೆ ಒಡೆಯುವುದಕ್ಕಾಗುತ್ತದೆಯೇ? ಹಾಗೆ ನೋಡಿದರೆ ಇಡೀ ಬೆಂಗಳೂರನ್ನೇ ಒಡೆಯಬೇಕಾಗುತ್ತದೆ. ಉಕ್ರೇನ್‌ನಲ್ಲಿ ರಷ್ಯಾದವರು ಒಡೆದು ಹಾಕಿರುವಂತೆ, demolish ಮಾಡಿದರೆ ಆಗ ಇಡೀ ಬೆಂಗಳೂರು ಸ್ಮಶಾನದ ರೀತಿ ಇರುತ್ತದೆ.

**ಶ್ರೀ ಎಂ.ಟಿ.ಬಿ. ನಾಗರಾಜು (ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಒಳ್ಳೆಯ ಪ್ರಶ್ನೆಗಳನ್ನು ಕೇಳಿ ಮಾತನಾಡುತ್ತಿದ್ದಾರೆ. ಮಹಾನಗರಪಾಲಿಕೆ ಮತ್ತು ನಗರ ಸ್ಥಳೀಯ ಸಂಸ್ಥೆಗಳು ಹಿಂದೆ ಇದ್ದಂತಹ ಸರ್ಕಾರಗಳು ಅಕ್ರಮ-ಸಕ್ರಮ ಎಂದು ಆದೇಶ ಹೊರಡಿಸಿದ್ದಾರೆ. ಅಕ್ರಮ-ಸಕ್ರಮ ಆದೇಶದ ಮೇಲೆ ಸುಪ್ರೀಂ ಕೋರ್ಟ್‌ಗೆ ಹೋಗಿ ಅದನ್ನು ಸ್ಟೇ ಮಾಡಿಸಿದರು. ಅದಿನ್ನೂ ಸ್ಟೇ

ನಲ್ಲಿಯೇ ಇದೆ. ಅದಕ್ಕೆ ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಮಾನ್ಯ ಕೆ.ಎಸ್.ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ರಚಿಸಲಾಗಿತ್ತು. ಈಗ ನಮ್ಮ ಗೃಹ ಸಚಿವರ ಅಧ್ಯಕ್ಷತೆಯಲ್ಲಿಯೂ ಕೂಡ ಒಂದು ಕಮಿಟಿ ರಚಿಸಲಾಗಿದೆ. ನಿನ್ನೆ ಕೂಡ ಆ ಕಮಿಟಿಯ ಮೀಟಿಂಗ್‌ಗೆ ನಾನು ಹೋಗಿದ್ದೆ. ಅವರು ಕೇಳುವ ಪ್ರಶ್ನೆ ಸರಿಯಾಗಿದೆ.

**ಡಾ: ಕೆ. ಗೋವಿಂದರಾಜ್:-** ಮಾನ್ಯ ಸಚಿವರೇ, ಅವರು ಪ್ರಶ್ನೆ ಕೇಳಿಲ್ಲ, ಬಜೆಟ್ ಮೇಲೆ ಮಾತನಾಡುತ್ತಿದ್ದಾರೆ.

**ಶ್ರೀ ಎಂ.ಟಿ.ಬಿ. ನಾಗರಾಜು:-** ನಿನ್ನೆ ಆದಂತಹ ತೀರ್ಮಾನದ ಬಗ್ಗೆ ಹೇಳುತ್ತಿದ್ದೇನೆ.

**ಡಾ: ಕೆ. ಗೋವಿಂದರಾಜ್:-** ಅದಕ್ಕೆ ಈಗ ಏತಕ್ಕೆ ಉತ್ತರ ಕೊಡಬೇಕು?

**ಶ್ರೀ ಸಿ.ಎನ್. ಮಂಜೇಗೌಡ:-** ಬಜೆಟ್ ಮೇಲೆ ಭಾಷಣ ಮಾಡಿಕೊಳ್ಳಲಿ ಬಿಡಿ.

**ಶ್ರೀ ಎಂ.ಟಿ.ಬಿ. ನಾಗರಾಜು:-** ಈಗ ಎ-ಖಾತಾ ಮಾಡುವುದಕ್ಕೆ ಪುರಸಭೆ, ನಗರಸಭೆ ಮಹಾನಗರಪಾಲಿಕೆಗಳಲ್ಲಿ DC conversion ಆಗಿರುವಂತಹವು ಮತ್ತು ಮೇಲ್ದರ್ಜೆಗೇರಿಸಿದಂತಹ ಸಂದರ್ಭದಲ್ಲಿ ಏನು ಬಾಕಿ ಉಳಿದುಕೊಂಡಿದೆ ಅವೆಲ್ಲವನ್ನೂ ಕೂಡ ಸಕ್ರಮ ಮಾಡುವುದಕ್ಕೆ ಎ-ಖಾತಾ ಮಾಡಬೇಕೆಂದು ನಿನ್ನೆ ನಡೆದಂತಹ ಸಮಿತಿ ಸಭೆಯಲ್ಲಿಯೇ ತೀರ್ಮಾನವಾಗಿದೆ, ಅದು ಖಂಡಿತವಾಗಿ ಆಗುತ್ತದೆ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, . . .

**ವೈಸ್ ಚೇರ್ಮನ್:-** ಮಾನ್ಯ ಪ್ರಾಣೇಶ್‌ರವರೇ, ಮಾನ್ಯ ರಮೇಶ್‌ಗೌಡರು ಮಾತನಾಡಿ ಮುಗಿಸಲಿ.

**ಶ್ರೀ ಎಂ.ಕೆ. ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕ್ಲಾರಿಫಿಕೇಷನ್ ಅಷ್ಟೇ. ಮಾನ್ಯ ಸದಸ್ಯರಾದ ಭೋಜೇಗೌಡರು ಹೇಳಿದರು ಕೋರ್ಟ್‌ನಲ್ಲಿ ಕೆಲವು

ನಿರ್ಧಾರಗಳಾಗಿವೆ. ಆ ನಿರ್ಧಾರಗಳನ್ನು ನಾವೇಕೆ ಕೇಳಬೇಕು ಎನ್ನುವುದು ಪ್ರಶ್ನೆ. ಅವರು ಸಹ ಅಡ್ವೊಕೇಟ್ ಆಗಿದ್ದಂತಹವರು. ಕೋರ್ಟ್‌ನಲ್ಲಾದರೆ;

**ವೈಸ್ ಚೇರ್ಮನ್:-** ಏತಕ್ಕೆ ಕೇಳಬೇಕೆಂದಲ್ಲ, ಪದೇ ಪದೇ ಏತಕ್ಕೆ intervene ಎಂದು (ಗೊಂದಲ)

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, Contempt of Court ಆಗುವುದಿಲ್ಲವೇ ಎನ್ನುವುದನ್ನು; ಏಕೆಂದರೆ ಕೋರ್ಟ್‌ನಿಂದಾದ ನಿರ್ಧಾರಗಳು ಮತ್ತು ನಿರ್ಣಯಗಳನ್ನು ನಾವು ಏತಕ್ಕೆ ಕೇಳಬೇಕೆಂಬುದು ಪ್ರಶ್ನೆ.

**ಶ್ರೀ ಸಿ.ಎನ್. ಮಂಜೇಗೌಡ:-** ಮಾನ್ಯ ಪ್ರಾಣೇಶ್‌ರವರೇ, ದಯವಿಟ್ಟು ಅವರು ಬಜೆಟ್ ಮೇಲೆ ಮಾತನಾಡಲಿ ಬಿಡಿ.

**ಶ್ರೀ ಎಂ.ಕೆ. ಪ್ರಾಣೇಶ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಭೋಜೇಗೌಡರು ಮಧ್ಯದಲ್ಲಿ ಎದ್ದು ನಿಂತು; ಏಕೆಂದರೆ, ಮಾತನಾಡಿದ್ದು ನಾಳೆ contempt ಆಗಬಾರದು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಮಾನ್ಯ ರಮೇಶ್‌ರವರು, ಮಾನ್ಯ ಭೋಜೇಗೌಡರು ಅದರ ಬಗ್ಗೆ ಮಾತನಾಡಿದರು. ಈಗ ಅದನ್ನು ಇಲ್ಲಿ ಉಲ್ಲೇಖ ಮಾಡಬಹುದೇ? ಕಾನೂನಿನೊಳಗೆ ಅದಕ್ಕೆ ಅವಕಾಶ ಇದೆಯೇ ಎನ್ನುವುದು ಪ್ರಶ್ನೆ.

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, I have not spoken on the Judgement. ನಾನೀಗ ಮಾತನಾಡಿದ ವಿಚಾರ ಜಡ್ಜ್‌ಮೆಂಟ್ ವಿಚಾರ ಅಲ್ಲ. ಗುಂಡಿ ಏತಕ್ಕೆ ಬಿದ್ದಿದೆ ಎಂದು ಕರೆದು ಕೇಳಿದ ಸಂದರ್ಭದಲ್ಲಿ ಅದು ಜಡ್ಜ್‌ಮೆಂಟ್‌ಗೆ ಬರುತ್ತದೆ. ಜಡ್ಜ್‌ಮೆಂಟ್ ಅನ್ನು ನಾನು ಪ್ರಶ್ನೆ ಮಾಡಿಲ್ಲ. I have not spoken on the Judgement. ಬೆಂಚ್‌ನಲ್ಲಿ ಕುಳಿತಾಗ ಅಧಿಕಾರಿಗಳನ್ನು ಕರೆದು, ರಾಜಕಾರಣಿಗಳನ್ನು ಕರೆದು ಛೀಮಾರಿ ಹಾಕುವುದು ಎಂದಿದೆಯಲ್ಲಾ ಅದು ನಮ್ಮ ಜವಾಬ್ದಾರಿ ನಾವು ಮಾಡುತ್ತೇವೆ, ನಿಮ್ಮ ಜವಾಬ್ದಾರಿಯನ್ನು ನೀವು ಮಾಡಿ ಎಂದು ಆಗುತ್ತದೆ.

**ವೈಸ್ ಚೇರ್ಮನ್:-** ಮಾನ್ಯ ರಮೇಶ್‌ಗೌಡರೇ, ನಿಮ್ಮ ಸಮಯ ಮೀರುತ್ತಿದೆ ಮುಗಿಸಿ.

**ಶ್ರೀ ಹೆಚ್.ಎಂ. ರಮೇಶ್‌ಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಎಂ.ಟಿ.ಬಿ. ನಾಗರಾಜುರವರು ಹೇಳಿದ್ದು ನಿಜ. ಹಿಂದೆ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಇದ್ದಾಗ ಅಕ್ರಮ-ಸಕ್ರಮ ಎಂಬ ಕಾನೂನನ್ನು ತಂದಿದ್ದಕ್ಕೆ ರಾಜ್ಯಸಭಾ ಸದಸ್ಯರಾದ ಶ್ರೀ ರಾಜೀವ್ ಚಂದ್ರಶೇಖರ್‌ರವರು ಸುಪ್ರೀಂ ಕೋರ್ಟ್‌ನಲ್ಲಿ ಸ್ಟೇ ಮಾಡಿಸಿದ್ದಾರೆ. ಅದು ಪೆಂಡಿಂಗ್ ಇದೆ. ಅವರು ಸ್ಟೇ ತೆಗೆದುಕೊಂಡು ಬರದಿದ್ದರೂ ಸಹ ಬೆಂಗಳೂರಿನ್ಲಲಿರುವ ಯಾವುದೇ ಕಟ್ಟಡವನ್ನೂ ಅಕ್ರಮ-ಸಕ್ರಮ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಅವರೇನು ಆದೇಶ ಮಾಡಿದ್ದಾರೆ ಅದರಲ್ಲಿ ಏನಿದೆ ಎಂದರೆ ಸರ್ಕಾರಕ್ಕೆ ಸಾವಿರಾರು ಕೋಟಿ ರೂಪಾಯಿಗಳ ವರಮಾನ ಬರುತ್ತದೆ. ಏಕೆಂದರೆ, ಬೆಂಗಳೂರು ನಗರದಲ್ಲಿ ಯಾರೇ ಕಟ್ಟಡವನ್ನು ಕಟ್ಟಿದರೂ ಅವನು ಏನು ಅಕ್ರಮ-ಸಕ್ರಮದಲ್ಲಿ ತಂದಿದ್ದಾರೆ ಶೇ.50ಕ್ಕಿಂತ ಕಡಿಮೆ ಉಲ್ಲಂಘನೆ ಮಾಡಿರುವುದನ್ನು ಸಕ್ರಮ ಮಾಡಬಹುದು. ಶೇ.50ಕ್ಕಿಂತ ಹೆಚ್ಚು ಉಲ್ಲಂಘನೆ ಮಾಡಿದ್ದರೆ ಸಕ್ರಮ ಮಾಡುವುದಕ್ಕಾಗುವುದಿಲ್ಲ. ಅದನ್ನು ಅಕ್ರಮವೆಂದೇ ಪರಿಗಣಿಸಲಾಗುವುದು ಎಂದು ಹೇಳಿದ್ದಾರೆ. ಇಡೀ ಬೆಂಗಳೂರು ನಗರದಲ್ಲಿ ಬಿ.ಡಿ.ಎ., acquisition ಆಗಿರಬಾರದು ಎಂದು ಅವರು ಹೇಳುತ್ತಾರೆ. ಇಡೀ ಬೆಂಗಳೂರು ನಗರ outskirts ಎಲ್ಲವೂ ಸಹ ಬಿ.ಡಿ.ಎ ನೋಟಿಫಿಕೇಷನ್ ಆಗಿದೆ. ನೀವು ಕಟ್ಟಿರುವ ಮನೆ ಇರಬಹುದು, ನಾವು ಕಟ್ಟಿರುವ ಮನೆ ಇರಬಹುದು ಪಹಣಿ ತೆಗೆದು ನೋಡಿದರೆ ಬಿ.ಡಿ.ಎ., ಅಂತಲೇ ಬರುತ್ತದೆ. ಅದರಲ್ಲಿ ಒಂದು ಕಂಡೀಷನ್ ಇದೆ ಹಾಗಾಗಿ ಮಾಡುವುದಕ್ಕೆ ಬರುವುದಿಲ್ಲ.

(ಮುಂದು)

(248) 10-03-2022 KH/GR 4-30 **(ವೈಸ್ ಛೇರ್‌ಮನ್ ಉಪಸ್ಥಿತಿ)**

**ಶ್ರೀ ಹೆಚ್.ಎಂ. ರಮೇಶ್‌ಗೌಡ (ಮುಂದು):-**

ಸರ್ಕಾರ ಒಂದು criteria ವನ್ನು ಮಾಡಬಹುದು. ಜನ ನೆಮ್ಮದಿಯಿಂದ ಬದುಕಿ ಜೀವನ ಮಾಡಬೇಕು. ಸರ್ಕಾರಕ್ಕೂ ಸಹ ವರಮಾನ ಬರಬೇಕೆಂದರೆ, ಈಗ ತಾವು ಒಂದು duration

ಇಡಬಹುದು. 2021 ರಲ್ಲಿ ಯಾರ್ಯಾರು ಕಟ್ಟಡಗಳನ್ನು ಕಟ್ಟಿದ್ದಾರೆ, ಯಾರು ಮನೆಗಳನ್ನು ಅಕ್ರಮವಾಗಿ ಕಟ್ಟಿದ್ದಾರೆ, ಇವರು ಸಕ್ರಮವಾಗಿ ಕಟ್ಟಿದ್ದಾರೋ ಗೊತ್ತಿಲ್ಲ. ಮನೆಗಳನ್ನು ಕಟ್ಟಿಬಿಟ್ಟಿದ್ದಾರೆ. ಆವತ್ತಿನ ದಿವಸ ಯಾರು ಇಂಜಿನಿಯರ್‌ರವರು ಇದ್ದರೋ, ಅವರು ಕಟ್ಟಬೇಕಾದರೆ ನೋಡಿಕೊಳ್ಳಬೇಕಾಗಿತ್ತು. ಆಗ ನೋಡಲಿಲ್ಲ. ಮಾಡಿಯಾಯಿತು. ಆಂಧ್ರಪ್ರದೇಶದಲ್ಲಿ ಅಕ್ರಮ-ಸಕ್ರಮ ಯೋಜನೆಯನ್ನು ಜಾರಿಗೆ ತೆಗೆದುಕೊಂಡು ಬಂದರು. ಇದು one time settlement. ಯಾರ್ಯಾರು 2018 ರಿಂದ 2019 ರವರೆಗೂ ಯಾರು violation ಮಾಡಿ ಮನೆಯನ್ನು ಕಟ್ಟಿದ್ದಾರೆ. 30' x 40' ನಿವೇಶನಕ್ಕೆ ಇಷ್ಟು, 60' x 40' ನಿವೇಶನಕ್ಕೆ ಇಷ್ಟು, above 5,000 sq.ft. ಇಷ್ಟು ಎಂದು penalty ಹಾಕಿದರು. ಅದನ್ನು ಮಾಡಿ ಒಟ್ಟಾರೆಯಾಗಿ ಸಕ್ರಮ ಮಾಡಿದರು. ಅಲ್ಲಿಗೆ ಸರಿಹೋಯಿತು. ಇಲ್ಲಿ ಇವರು ಮಾಡಿರುವಂತಹದ್ದು, ಬೆಂಗಳೂರು ನಗರದಲ್ಲಿ ಎಲ್ಲಾ ಕಟ್ಟಡಗಳು ಕೂಡ 100% violation ಆಗಿದೆ. ಯಾವುದೂ ಸಹ below 50% violation ಇಲ್ಲ. ಚಿಕ್ಕಪೇಟೆ, ನಗರ್ ಪೇಟೆ, ಗಾಂಧಿ ಬಜಾರ್ ಮತ್ತು ಗಾಂಧಿ ನಗರಕ್ಕೆ ಹೋಗಿ ನೋಡಿ, 5 ಅಡಿ ಜಾಗದಲ್ಲಿ 5 ರಿಂದ 7 ಮಹಡಿಗಳನ್ನು ಕಟ್ಟಿದ್ದಾರೆ. ಹಾಗಾಗಿ, ಎಲ್ಲಿಯೂ ಸಹ ಸಕ್ರಮ ಮಾಡುವುದಕ್ಕೆ ಆಗುವುದಿಲ್ಲ. ಹಾಗಾಗಿ, ಸರ್ಕಾರಕ್ಕೆ ಇಚ್ಛಾಶಕ್ತಿ ಇದ್ದರೆ, ಬೆಂಗಳೂರು ಜನಕ್ಕೆ ನಿಜವಾಗಿಯೂ ಸಹ ನೆಮ್ಮದಿಯಾಗಿ ಜೀವನ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುವುದಾದರೆ, ಅವರಿಗೊಂದು duration fix ಮಾಡಲಿ. ಇದನ್ನು 2018 ಕ್ಕೆ ನಿಗದಿ ಮಾಡುತ್ತಾರೋ, 2020 ಕ್ಕೆ fix ಮಾಡುತ್ತಾರೋ, 2021 ಕ್ಕೆ fix ಮಾಡುತ್ತಾರೋ ಮಾಡಿ. ಇದಕ್ಕೆ cut-off date fix ಮಾಡಿ. 'Below violation' or 'above violation' ಇದೆಯಲ್ಲವೇ ಅದನ್ನು ಮಾಡಬಾರದು. ಏನು ಕಟ್ಟಿದ್ದಾನೋ, ಅದನ್ನು ಕಟ್ಟಿದ್ದಾನೆ. ಸರ್ಕಾರಿ ಜಾಗದಲ್ಲಿ ಕಟ್ಟಿದ್ದಾನೆಯೇ, ರಸ್ತೆಯಲ್ಲಿ ಕಟ್ಟಿದ್ದಾನೆಯೇ, ಅದನ್ನು ಒಡೆದು ಹಾಕಿ, ಅದನ್ನು ಸಕ್ರಮ ಮಾಡಬೇಡಿ. ಅವನ ಜಾಗದಲ್ಲಿ ಅವನು ಕಟ್ಟಿಕೊಂಡಿದ್ದಾನೆಯೇ, ದಯಮಾಡಿ, ಅದಕ್ಕೆ penalty ಹಾಕಿ, ಅದನ್ನು ಸಕ್ರಮ ಮಾಡಿಕೊಡಿ. ಅವನು ನೆಮ್ಮದಿಯಾಗಿರುತ್ತಾನೆ. ಸರ್ಕಾರದ ಬೊಕ್ಕಸಕ್ಕೂ ಸಹ ಸಾವಿರಾರು ಕೋಟಿ ರೂಪಾಯಿಗಳ ಹಣ ಬರುತ್ತದೆ. ಇದಿಲ್ಲವೆಂದರೆ, ಇವರು ಏನೇ ಮಾಡಿದರೂ ಸಹ ಅಕ್ರಮ-ಸಕ್ರಮ implantation ಆಗುವುದಿಲ್ಲ. ಬೆಂಗಳೂರು ಜನ ನೆಮ್ಮದಿಯಾಗಿ

ಇರುವುದಕ್ಕೆ ಆಗುವುದಿಲ್ಲ. ಯಾರಿಗೆ ಇದರಿಂದ ಅನುಕೂಲವೆಂದರೆ, ಬಿ.ಬಿ.ಎಂ.ಪಿ., ಇಂಜಿನಿಯರ್‌ರವರಿಗೆ, R.T.I., ಕಾರ್ಯಕರ್ತರಿಗೆ ಅನುಕೂಲವಾಗುತ್ತದೆಯೇ ಹೊರತಾಗಿ . . .

**ವೈಸ್ ಛೇರ್‌ಮನ್:–** ಇದರ ಜೊತೆಗೆ ಇನ್ನೊಂದು ರಾಜ್ಯದ್ಯಂತ ದೂರು ಇದೆ. ಅವರು ಅಕ್ರಮವಾಗಿ ಕಟ್ಟಿರುವಂತಹದ್ದು ಶೇಕಡಾ 50 ರಷ್ಟು ಭಾಗಕ್ಕೆ ಸಕ್ರಮಕ್ಕಾಗಿ ಲೈಸೆನ್ಸ್ ತೆಗೆದುಕೊಂಡು ಕಟ್ಟಿರುತ್ತಾರೆ. ಇನ್ನು ಉಳಿದ ಶೇಕಡಾ 30 ರಿಂದ ಶೇಕಡಾ 50 ರಷ್ಟು ಭಾಗ ಅಕ್ರಮವಾಗಿ ಕಟ್ಟಿರುತ್ತಾರೆ. ಈಗ ದಂಡ ಮತ್ತು ಟ್ಯಾಕ್ಸ್ ಅನ್ನು over all ಆಗಿ ಹಾಕುತ್ತಿದ್ದಾರೆ ಎನ್ನುವಂತಹ ದೂರು ಇದೆ. ಇದನ್ನು ಮಾನ್ಯ ಸಚಿವರು ಗಮನಿಸಬೇಕು. ಅಕ್ರಮ ಭಾಗಕ್ಕೆ ದುಪ್ಪಟ್ಟು ದಂಡ ಮತ್ತು ಟ್ಯಾಕ್ಸ್ ಹಾಕುವುದು ಸರಿ. ತಾವು ಇಡೀಯಾಗಿ ಲೈಸೆನ್ಸ್ ಕೊಟ್ಟಿರುವುದಕ್ಕೂ ಕೂಡ ದಂಡ ಮತ್ತು ಟ್ಯಾಕ್ಸ್ ಹಾಕಿಬಿಟ್ಟರೆ ಹೇಗೆ? ಇದರ ಬಗ್ಗೆ ಬಹಳ ದೂರುಗಳು ಇವೆ. ಮಾನ್ಯ ಹೆಚ್. ಎಂ.ರಮೇಶ್‌ಗೌಡರವರೇ, ತಾವು ಮುಂದುವರೆಸಿ ಮತ್ತು ಮುಗಿಸಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಈಗ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ಎಂದು ಹೇಳಿದ್ದಾರೆ.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಹೆಚ್.ಎಂ.ರಮೇಶ್‌ಗೌಡರವರೇ, ಬಜೆಟ್ ಬಗ್ಗೆ 4 ಒಳ್ಳೆಯ ಮಾತುಗಳನ್ನು ಹೇಳಿ.

**ಶ್ರೀ ಹೆಚ್.ಎಂ.ರಮೇಶ್‌ಗೌಡ:–** ಮಾನ್ಯ ಸಭಾಪತಿಯವರೇ, ಬಜೆಟ್‌ನಲ್ಲಿ ಒಂದು ಕಡೆ ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ಎಂದು ಹೇಳಿದ್ದಾರೆ. ಅದರಲ್ಲಿ "ಸರ್ವೋದಯಕ್ಕೆ ಭದ್ರವಾದ ಆಧಾರ ಮತ್ತು ಬಲಿಷ್ಠ ಆಸ್ತಿಭಾರವಿರುವುದು, ಸರ್ವರಿಗೆ ಸಮಬಾಳು, ಸರ್ವರಿಗೆ ಸಮಪಾಲು ಎಂಬ ಆರ್ಥಿಕ ಸಮತೆಯಲ್ಲಿ" ಎಂದು ಕುವೆಂಪುರವರದು ಮಂಡನೆ ಮಾಡಿದ್ದಾರೆ.

ಇಡೀ ರಾಜ್ಯದಲ್ಲಿ ಕೆ.ಎಸ್.ಆರ್.ಟಿ.ಸಿ., ಬಸ್ಸುಗಳು ಓಡಾಡುತ್ತವೆ. ನಾವು ಈಗ 21ನೇ ಶತಮಾನದಲ್ಲಿದ್ದೇವೆ. ಈ ಸರ್ಕಾರ ಇಷ್ಟು ದೊಡ್ಡ ಗಾತ್ರದ ಬಜೆಟ್ ಅನ್ನು ಮಂಡನೆ ಮಾಡಿದೆ. ಇವತ್ತು ಪ್ರತಿ ಹಳ್ಳಿಗೂ ಬಸ್ಸು ಹೋಗುತ್ತದೆ ಎಂದು ಹೇಳುತ್ತಾರೆ. ಇವತ್ತು ಸಹ ಎಷ್ಟೋ ಹಳ್ಳಿಗಳಿಗೆ ಬಸ್ಸಿನ

ಸೌಕರ್ಯ ಮತ್ತು ಸೇವೆ ಇಲ್ಲ. ಈ ಬಜೆಟ್‌ನಲ್ಲಿ ಕೆ.ಎಸ್.ಆರ್.ಟಿ.ಸಿ.,ಗೆ ಏನಾದರೊಂದಷ್ಟು ಅನುದಾನ ಇಡಬೇಕಲ್ಲವೇ, ಈಗ ಕೆ.ಎಸ್.ಆರ್.ಟಿ.ಸಿ., ಮುಳುಗಿ ಹೋಗುತ್ತಿದೆ. ಅಲ್ಲಿರುವಂತಹ ಸಿಬ್ಬಂದಿಗಳಿಗೆ ಸಂಬಳ ಕೊಡುವುದಕ್ಕೆ ಆಗುವುದಿಲ್ಲವೆಂದು ಮತ್ತು ನನಗೆ ಏಕೆ ಈ ಖಾತೆ ಕೊಟ್ಟಿದ್ದೀರಿ ಎಂದು ಸಂಬಂಧಪಟ್ಟ ಮಂತ್ರಿಗಳು ಬಾಯಿ ಬಾಯಿ ಹೊಡೆದುಕೊಳ್ಳುತ್ತಿದ್ದಾರೆ. ಈ ರೀತಿ ಇರುವುದಕ್ಕೆ ಈ ಬಜೆಟ್‌ನಲ್ಲಿ ಒಂದಷ್ಟು ಅನುದಾನ ಇಡಬೇಕಲ್ಲವೇ, ಇಂತಹದೊಂದು ಸಂದರ್ಭದಲ್ಲಿಯೂ ಮತ್ತು ನಮ್ಮ ದೇಶ ಇಷ್ಟೆಲ್ಲಾ ಮುಂದುವರೆದಿದ್ದರೂ, ಇವತ್ತು ಆ ಹಳ್ಳಿಗಳಿಗೆ ಖಾಸಗಿ ಬಸ್ಸುಗಳು ಹೋಗುತ್ತವೆ. ಆದರೆ, ಕೆ.ಎಸ್.ಆರ್.ಟಿ.ಸಿ., ಬಸ್ಸುಗಳು ಹೋಗುವುದಿಲ್ಲ. ಅಲ್ಲಿ ಯಾವುದೇ ಬಸ್ಸಿನ ಸೇವೆ ಇಲ್ಲ. ಅಂತಹ ಸಾಕಷ್ಟು ಉದಾಹರಣೆಗಳು ಇವೆ. ಅದಕ್ಕಾಗಿ ಇದರ ಬಗ್ಗೆ ಸರ್ಕಾರ ಬಜೆಟ್‌ನಲ್ಲಿ ಮಾಡಬೇಕಾಗಿತ್ತು. ಆದರೆ, ಮಾಡಲಿಲ್ಲ.

ಗಿಡ ನೆಡುವ ಕಾರ್ಯಕ್ರಮ ಎಂದು ಪ್ರತಿವರ್ಷ 600 ರಿಂದ 750 ಕೋಟಿ ರೂಪಾಯಿಗಳನ್ನು ಮೀಸಲಿಡುತ್ತಾರೆ. ಇವರು ಗಿಡಗಳನ್ನು ನೆಡುತ್ತಾರೆ ಅಷ್ಟೆ. ಗಿಡ ನೆಡುವುದಕ್ಕೆ 750 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಆದರೆ, ಆ ಗಿಡಗಳನ್ನು ಪೋಷಣೆ ಮಾಡಬೇಕಲ್ಲವೇ, ಅದಕ್ಕೆ ತಾವು ಬೆಂಗಳೂರು ನಗರದಲ್ಲಿ ಯಾವುದೋ ಒಂದಷ್ಟು ವಾಹನಗಳನ್ನು ಇಟ್ಟು ನೀರನ್ನು ಹಾಕಿಸುತ್ತಾರೆ. Outskirt ನಲ್ಲಿ ತಾವು ಗಿಡಗಳನ್ನು ನೆಡುತ್ತಿದ್ದೀರಲ್ಲವೇ, ಒಂದು ದಿವಸ ಎಲ್ಲಿಯೂ ಸಹ ಸುಮಾರು 5 ರಿಂದ 10 ಸಾವಿರ ಗಿಡಗಳನ್ನು ಪೋಷಣೆ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಇಂತಹದ್ದನ್ನು ಘೋಷಣೆ ಮಾಡುವುದು ನಿಜ. ಇದಕ್ಕೆ Forest Department ಇದೆ, ಇದಕ್ಕೆ ಬಿ.ಬಿ.ಎಂ.ಪಿ.,ಯಲ್ಲಿ ಒಂದು ಇಲಾಖೆ ಇದೆ. ರಾಜ್ಯಾದ್ಯಂತ ಇದಕ್ಕೆ wing, department ಇದೆ. ಈ ಇಲಾಖೆಗೆ ಸಂಬಂಧಪಟ್ಟಂತಹವರು ಇಷ್ಟು ಗಿಡಗಳನ್ನು ನೆಟ್ಟಿದ್ದೇವೆ. ಇಷ್ಟು ಹಣವನ್ನು ಮೀಸಲಿಟ್ಟಿದ್ದೇವೆ. ಇಷ್ಟು ಹಣ ಖರ್ಚು ಮಾಡಿದ್ದೇವೆ, ಎಷ್ಟು ಗಿಡ ಬೆಳೆಸಿದ್ದೇವೆ ಎಂದು ಸರ್ಕಾರ ವರದಿಯನ್ನು ತರಿಸಿಕೊಂಡು ಸರ್ಕಾರ ಮತ್ತು ಸದನದ ಮುಂದೆ ಇಡುವುದಕ್ಕೆ ಆಗುತ್ತದೆಯೇ, ಆಗುವುದಿಲ್ಲ.

ಮಹಿಳೆಯರ ಸ್ವ-ಸಹಾಯ ಸಂಘಗಳಿಗೆ ಈ ಬಜೆಟ್‌ನಲ್ಲಿ ಒಂದು ರೂಪಾಯಿ ಇಟ್ಟಿಲ್ಲ. ಇಡೀ ರಾಜ್ಯದಲ್ಲಿ ನೆನ್ನೆ ನಾವು "ಅಂತರಾಷ್ಟ್ರೀಯ ಮಹಿಳಾ ದಿನ" ವನ್ನು ಆಚರಣೆ ಮಾಡಿದ್ದೇವೆ. ಆದರೆ,

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಜೆಟ್‌ನಲ್ಲಿ ಸ್ವ-ಸಹಾಯ ಸಂಘದ ಮಹಿಳೆಯರಿಗೆ ಹಣವನ್ನು ಮೀಸಲಿಟ್ಟಿಲ್ಲ. ಕನಿಷ್ಠ ಹೆಣ್ಣು ಮಕ್ಕಳ ಬಗ್ಗೆ; ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಎಂದು ತಾವು ಮಾಡಿ, ಕೇವಲ ಆ ದಿವಸ ಅವರಿಗೆ ಜೈಕಾರ ಹಾಕಿ ಸೋಶಿಯಲ್ ಮೀಡಿಯಾದಲ್ಲಿ ಟ್ವೀಟ್ ಮಾಡಿ, ವಿಶ್ ಮಾಡಿದರೆ ಆಗುವುದಿಲ್ಲ. ಈ ಸರ್ಕಾರಕ್ಕೆ ನಿಜವಾಗಿಯೂ ಸಹ ಇಚ್ಛಾಶಕ್ತಿ ಮತ್ತು ಭದ್ರತೆ ಇದ್ದರೆ, ಪ್ರಧಾನ ಮಂತ್ರಿಯವರ "ಭೇಟಿ ಬಚಾವೋ, ಭೇಟಿ ಪಡಾವೋ" ಎಂದು ಘೋಷವಾಕ್ಯದಂತೆ ಮಾಡಬೇಕು. ಆದರೆ, ಈ ಬಜೆಟ್ ನಲ್ಲಿ ಒಂದು ರೂಪಾಯಿ ದುಡ್ಡು ಇಟ್ಟಿಲ್ಲ. "ಸಬ್ ಕಾ ಸಾಥ್, ಸಬ್-ಕಾ ವಿಕಾಸ್" ಎಂದು ಕೇವಲ ಸ್ಲೋಗನ್‌ನಲ್ಲಿ ಇದ್ದರೆ ಆಗುವುದಿಲ್ಲ. ಮಾನ್ಯ ಭಾರತೀಯ ಜನತಾ ಪಾರ್ಟಿಯವರು . . . **(ಗೊಂದಲ)** ಆಗಲೇ ಮಾನ್ಯ ಯು.ಬಿ.ವೆಂಕಟೇಶ್‌ರವರು ಮಾತನಾಡಬೇಕಾದರೆ ಇವತ್ತಿನ ಚುನಾವಣೆ ಫಲಿತಾಂಶ ನೋಡಿದ್ದೀರಾ ಎಂದು ಹೇಳುತ್ತಿದ್ದರು. ಫಲಿತಾಂಶ ಬರಲಿ, ಸಂತೋಷ. ಪ್ರಜಾಪ್ರಭುತ್ವದಲ್ಲಿ ಜನ ಏನು ತೀರ್ಮಾನ ಕೊಡುತ್ತಾರೋ ಅದೇ ಸರಿ. ಮಾನ್ಯ ವಿರೋಧ ಪಕ್ಷದವರು ಇರಲಿ, ಮಾನ್ಯ ಆಡಳಿತ ಪಕ್ಷದವರು ಇರಲಿ, ಮಾನ್ಯ ಆಡಳಿತ ಪಕ್ಷದವರಿಗೆ ಕೊಟ್ಟಾಗ ಖುಷಿಪಡಬಹುದು, ಮಾನ್ಯ ವಿರೋಧ ಪಕ್ಷದವರು ಬೇಜಾರು ಮಾಡಿಕೊಳ್ಳಬಹುದು. ಆದರೆ, ಜನ ತೀರ್ಮಾನ ಮಾಡಿದಾಗ ಅದಕ್ಕೆ ತಲೆಬಾಗಲೇಬೇಕಾಗುತ್ತದೆ. ಇದಕ್ಕೆ ನಮ್ಮ ಬೆನ್ನನ್ನು ನಾವೇ ತಟ್ಟಿಕೊಳ್ಳಬೇಕಾದಂತಹ ಅವಶ್ಯಕತೆ ಇಲ್ಲ. ಆದರೆ, ಇಷ್ಟು ದೊಡ್ಡ ಗಾತ್ರದ ಬಜೆಟ್ ಅನ್ನು ರಾಜ್ಯ ಸರ್ಕಾರ ಮಂಡನೆ ಮಾಡಿದ ಮೇಲೆ ಹೆಣ್ಣು ಮಕ್ಕಳಿಗೆ ಒಂದಷ್ಟು ಪಾಲು ಇರಬೇಕಾಗಿತ್ತಲ್ಲವೇ, ಅದರಲ್ಲಿ ಒಂದು ರೂಪಾಯಿಯನ್ನು ಸಹಾ ಮೀಸಲಿಟ್ಟಿಲ್ಲ. ಇವರು ಯಾವ ರೀತಿ ಹೆಣ್ಣು ಮಕ್ಕಳಿಗೆ ಉತ್ತೇಜನವನ್ನು ಕೊಡುತ್ತಾರೆ? ನಾನು ಒಟ್ಟಾರೆಗಾಗಿ ಇಷ್ಟೇ ಹೇಳುವಂತಹದ್ದು, ಯಾವುದೇ ಸರ್ಕಾರ ಬಜೆಟ್ ಮಂಡನೆ ಮಾಡಲಿ. ಪ್ರತಿ ವರ್ಷ ಸಾಲದ ಮೊತ್ತ ಹೆಚ್ಚಾಗುತ್ತಾ ಹೋಗುತ್ತಿದೆ. ದೇಶದಲ್ಲಿ ಕೋವಿಡ್-19 ನಿಂದ ಮೃತಪಟ್ಟವರಿಗೆ ಪರಿಹಾರಕ್ಕಾಗಿ ಕೇಂದ್ರ ಹಣಕಾಸು ಮಂತ್ರಿಗಳು 2 ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ಆದರೆ, ನಮ್ಮ ರಾಜ್ಯ ಸರ್ಕಾರದ ಪಾಲು ಎಷ್ಟು ಬಂದಿದೆ ಎಂದು ಎಲ್ಲೂ ತಿಳಿಸಿಲ್ಲ. ಕೇವಲ ಮಾಧ್ಯಮದಲ್ಲಿ ಮಾತ್ರ 'ಬಿಗ್ ರಿಲೀಫ್' ಎಂದು ಬ್ರೇಕಿಂಗ್ ನ್ಯೂಸ್ ನೋಡಿದ್ದೇವೆ. ಆದರೆ, ನಮ್ಮ ರಾಜ್ಯ ಸರ್ಕಾರದ ಪಾಲು ಎಷ್ಟು ಬಂದಿದೆಯೆಂದು ಇದುವರೆಗೂ ಈ ಬಜೆಟ್‌ನಲ್ಲೂ ಎಲ್ಲೂ ತೋರಿಸಲಿಲ್ಲ. ಆದರೆ, ಇದುವರೆಗೂ ಸಹ ಮಾನ್ಯ ಮುಖ್ಯಮಂತ್ರಿಗಳಿರಬಹುದು, ಆವತ್ತಿನ ದಿವಸ

ಕೋವಿಡ್19 ನಿಂದ ಮೃತಪಟ್ಟವರಿಗೆ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ 2 ಲಕ್ಷ ಕೋಟಿ ರೂಪಾಯಿಗಳ ನೆರವನ್ನು ಘೋಷಣೆ ಮಾಡಿತ್ತಲ್ಲವೇ, ಇದರಲ್ಲಿ ನಮ್ಮ ರಾಜ್ಯದ ಪಾಲು ಎಷ್ಟು, ಅದು ಯಾವ್ಯಾವುದಕ್ಕೆ ಹೋಗಿದೆ ಎಂದು ಇದುವರೆಗೂ ಯಾರು ಹೇಳಲಿಲ್ಲ. ಹಾಗಾಗಿ, ಇದು ಸಹ ಕಣ್ಣೊರೆಸುವಂತಹ ತಂತ್ರ. ಕೇವಲ ಪ್ರಚಾರ ಗಿಟ್ಟಿಸಿಕೊಳ್ಳುವಂತಹ ತಂತ್ರ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗಾಗಿ, ಈ ಬಜೆಟ್ ಇನ್ನು ಮುಂದಕ್ಕಾದರೂ ದಯಮಾಡಿ, ರಾಜ್ಯ ಸರ್ಕಾರ ಪ್ರತಿ ವರ್ಷ ಸಾಲ ಮಾಡುವುದಕ್ಕೋಸ್ಕರ ಬಜೆಟ್ ಗಾತ್ರ ದೊಡ್ಡದು ಮಾಡಬೇಡಿ. ಆ ಬಜೆಟ್ ಅನ್ನು ಎಷ್ಟು implementation ಮಾಡುವುದಕ್ಕೆ ಸಾಧ್ಯವೋ, ಅಷ್ಟು ಮಾತ್ರ ಬಜೆಟ್ ಅನ್ನು ಮಂಡನೆ ಮಾಡಬೇಕು. ಈಗಾಗಲೇ ಪ್ರತಿವರ್ಷ 30 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಶ್ರೀಸಾಮಾನ್ಯ ರಾಜ್ಯದ ಪ್ರತಿಯೊಬ್ಬ ತೆರಿಗೆ ಕಟ್ಟುವಂತಹ ಬಡವರ ದುಡ್ಡು ಅಂತಹ ದುಂದು ವೆಚ್ಚಕ್ಕೆ ಇನ್ನು ಮೇಲಾದರೂ ತಾವು ಪೂರ್ಣ ವಿರಾಮ ಹಾಕಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳಿ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಿಸಿ, ನನ್ನ ಮಾತನ್ನು ಮುಗಿಸುತ್ತಿದ್ದೇನೆ.

(ಮುಂದು)

(249) ಎಸ್‌ಪಿಆರ್/ಜಿಆರ್/4:40/10/03/2022

(ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಡಾ॥ತೇಜಸ್ವಿನಿಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)**:- ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಾಯಶಃ ಕಳೆದೆರೆಡು ವರ್ಷಗಳ ಅತ್ಯಂತ ಕಠಿಣವಾದ ಇಡೀ ಜಗತ್ತೇ ಕೋವಿಡ್-19 ರಂತಹ ಸಾಂಕ್ರಾಮಿಕ ಕಾಯಿಲೆಯಿಂದ ಸ್ತಬ್ಧವಾಗಿದ್ದಾಗ, ಇವತ್ತಿನ ಸ್ಥಿತಿಗೆ ನಾವು ಮರಳಿ ಬರುತ್ತೇವೆ ಎನ್ನುವ ಆಶಾಭಾವನೆಗಳೂ ಇಲ್ಲದ ಸಂದರ್ಭದಲ್ಲಿ ಪ್ರಸಕ್ತ ಸಾಲಿನ ಆಯವ್ಯಯವನ್ನು ಮಂಡಿಸಲಾಗಿದೆ. ಮಾರ್ಚ್ - 2020 ನನಗೆ ಇನ್ನೂ ಸಹ ಜ್ಞಾಪಕವಿದೆ. ಕೋವಿಡ್-19 ರ ನಂತರ ಪ್ರತಿಬಾರಿಯೂ ಅಧಿವೇಶನ ನಡೆಯಬೇಕಾದರೆ ಯೋಚಿಸಬೇಕಾಗುತ್ತಿತ್ತು. ಇತ್ತೀಚೆಗಷ್ಟೇ ಸದನದಲ್ಲಿದ್ದ ಸದಸ್ಯರ ನಡುವಿನ ತೆರೆಗಳನ್ನು ತೆರವುಗೊಳಿಸಲಾಗಿದೆ. ಕೋವಿಡ್-19 ರಂತಹ ಸನ್ನಿವೇಶದಲ್ಲಿಯೂ ಸಹ ಜನರ ಜೀವನವು ಪುನಃ ಮುಖ್ಯವಾಹಿನಿಗೆ ಬರುತ್ತದೆ; ಸರ್ಕಾರವು

ಪುನಃ ಒಳ್ಳೆಯ ಆಯವ್ಯಯವನ್ನು ಮಂಡಿಸಿದೆ ಅಂದರೆ ತೆರಿಗೆಗಳನ್ನು ಸಂಗ್ರಹಿಸಿವುದು, ಜನತೆಯಲ್ಲಿ ಮತ್ತೆ ಭರವಸೆಗಳನ್ನು ಮೂಡಿಸಿ ರಾಜ್ಯವನ್ನು ನಿರ್ಮಿಸುವ ನಿಟ್ಟಿನಲ್ಲಿ ಭಾಗವಹಿಸುವಂತೆ ಮಾಡಿದೆ. ಕಳೆದೆರೆಡು ವರ್ಷಗಳಲ್ಲಿ, ಒಳ್ಳೆಯ ಆಡಳಿತವನ್ನು ನೀಡುವ ಒಳ್ಳೆಯ ದಿನಗಳು ಬರುತ್ತವೆ ಎಂಬ ಕಲ್ಪನೆಯೂ ಸಹ ನಮಗೆ ಇರಲಿಲ್ಲ. ಅಂತಹ ಸನ್ನಿವೇಶದಲ್ಲಿ ರಾಜ್ಯದ ಆರೋಗ್ಯ ಇಲಾಖೆಯಲ್ಲಿ ಲಸಿಕೆ ಕೊಡುವುದರಲ್ಲಿ, ಲಸಿಕೆ ಉತ್ಪಾದನೆಯಲ್ಲಿ, ಕೇಂದ್ರದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ, ಶೇಕಡಾ 97 ರಷ್ಟು ಆಧಾರ್ ಕಾರ್ಡ್‌ಗಳ ಮೂಲಕ ಸರ್ಕಾರದ ಯೋಜನೆಗಳನ್ನು ನೇರವಾಗಿ ಫಲಾನುಭವಿಗಳಿಗೆ ತಲುಪಿಸುವಲ್ಲಿ ಅಥವಾ ಇನ್ಯಾವುದೇ ಯೋಜನೆಗಳಲ್ಲಿರಬಹುದು. ಎಲ್ಲದರಲ್ಲಿಯೂ ಸಹ ಪ್ರಶಂಸೆ ಪಡುವಷ್ಟರ ಮಟ್ಟಿಗೆ ಕರ್ನಾಟಕ ರಾಜ್ಯವು ಉತ್ತಮವಾದ ಆಡಳಿತವನ್ನು ನೀಡಿದೆ ಎಂದು ಹೇಳಿಕೊಳ್ಳುವಾಗ ನಮ್ಮ ರಾಜ್ಯದ ಈಗಿನ ಮತ್ತು ಹಿಂದಿನ ಮುಖ್ಯಮಂತ್ರಿಗಳಿಗೆ ಹಾಗೂ ಎಲ್ಲರಿಗೂ ಸಹ ಧನ್ಯವಾದಗಳನ್ನು ಅರ್ಪಿಸಲು ನಾನು ಈ ಸಂದರ್ಭವನ್ನು ಬಳಸಿಕೊಳ್ಳುತ್ತೇನೆ.

ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಕೆ.ಹರಿಪ್ರಸಾದ್‌ರವರು ನಿನ್ನೆಯ ದಿನ ಮಾತನಾಡುವಾಗ ತುಂಬಾ ಆತಂಕ, ವ್ಯಂಗ ಮತ್ತು ಟೀಕೆಗಳನ್ನು ವ್ಯಕ್ತಪಡಿಸಿದರು. ಭಾರತೀಯ ಜನತಾ ಪಕ್ಷವು ಡಬಲ್ ಇಂಜಿನ್ ಸರ್ಕಾರ ಎಂಬುದಾಗಿಯೂ ಸಹ ಟೀಕಿಸಿದರು. ಆ ಸಂದರ್ಭದಲ್ಲಿ ಶ್ರೀ ಎನ್.ರವಿಕುಮಾರ್ ರವರು ಮಧ್ಯದಲ್ಲಿ ಮಾತನಾಡಿ, ಕೇವಲ ಕೈಬಿಟ್ಟ ಯೋಜನೆಗಳ ಬಗ್ಗೆ ಮಾತ್ರವೇ ವಿರೋಧ ಪಕ್ಷದ ನಾಯಕರು ಉಲ್ಲೇಖಿಸುತ್ತಿದ್ದಾರೆ, ಹೊಸದಾಗಿ ಸೇರಿಸಿದ ಯೋಜನೆಗಳ ಬಗ್ಗೆ ಏನೂ ತಿಳಿಸುತ್ತಿಲ್ಲ ಎಂಬುದಾಗಿ ಬಹಳ ನವಿರಾದ ಟೀಕೆಯನ್ನೂ ಸಹ ಮಾಡಿದರು. ವಿರೋಧ ಪಕ್ಷದವರು ನಮ್ಮ ಬಗ್ಗೆ ಬಹಳಷ್ಟು ಕಾಳಜಿಯನ್ನು ಮಾಡಿದರು. ನಮ್ಮ ಪಕ್ಷವು ಒಂದು ಅಥವಾ ಎರಡು ಇಂಜಿನ್‌ನ್ನು ಹೊಂದಿದೆ ಎನ್ನುವ ವಿಚಾರವನ್ನು ಗಮನಿಸುತ್ತಲೇ ನಮ್ಮ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಿರೋಧ ಪಕ್ಷದ ನಾಯಕರು ಮಾಡಿದರು. ಈ ಸಂದರ್ಭದಲ್ಲಿ ಅವರ ಕಾಳಜಿಯನ್ನು ಅವರೇ ಮರೆತು ಹೋದರು. ಅವರಿಗಿಂತಲೂ ಹೆಚ್ಚಾಗಿ ನಮ್ಮ ಕಾಳಜಿಯನ್ನು ಮಾಡಿದ್ದರ ಪ್ರತಿಫಲದಿಂದಾಗಿ ನಾವು ಇವತ್ತಿನ ದಿವಸ ಎಚ್ಚೆತ್ತುಕೊಂಡಿದ್ದೇವೆ. ಕಳೆದ ಏಳು ವರ್ಷಗಳ ಹಿಂದೆ ಪ್ರಾರಂಭಿಸಿದ ಉತ್ತಮ ಆಡಳಿತದ ಬೇರುಗಳು ಇವತ್ತಿನ ದಿವಸ ಫಲವನ್ನು ನೀಡುತ್ತಿವೆ. ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ತುಂಬಾ ಮಾತನಾಡುವುದಿಲ್ಲ. ಆದರೆ ಮಾತನಾಡುವ ಸಂದರ್ಭದಲ್ಲಿ ಮಾತ್ರವೇ ಮಾತನಾಡುತ್ತಾರೆ. ಇದು ಕೆಲಸ ಮಾಡುವ ಸರ್ಕಾರವಾಗಿದೆ. ವಿದೇಶಿ ನೀತಿಗಳಿರಬಹುದು, ಇಡೀ ಜಗತ್ತಿನಲ್ಲಿಯೇ ನಮ್ಮ ಭಾರತ ದೇಶವು ತನ್ನ

ಧ್ವನಿಗೆ ಹೆಚ್ಚು ಮಹತ್ವವನ್ನು ಪಡೆದುಕೊಂಡಿದ್ದ ಸಂದರ್ಭವಾಗಿದೆ. ನಮ್ಮ ಪಕ್ಷದ ಸರ್ಕಾರವು ಘೋಷಿಸಿರುವ ಪಂಚ ಸೂತ್ರಗಳ ಬಗ್ಗೆ ವಿರೋಧ ಪಕ್ಷದ ನಾಯಕರು ಟೀಕಿಸಿದರು. ಸ್ವತಂತ್ರ ಭಾರತದ ಪ್ರಥಮ ಪ್ರಧಾನ ಮಂತ್ರಿಗಳಾದ ದಿವಂಗತ ಪಂಡಿತ್ ಜವಾಹರ್‌ಲಾಲ್ ನೆಹರುರವರು ಅಂದಿನ ಕಾಲದ ಸದುದ್ದೇಶವನ್ನಿಟ್ಟುಕೊಂಡು ದೇಶದ ಆರ್ಥಿಕತೆಯನ್ನು ನಿರ್ಮಿಸಲು ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದರು. ಯೋಜನೆಯ ಅನುಷ್ಠಾನದಲ್ಲಿ ಲೋಪದೋಷಗಳಾಗಬಹುದು, ರಾಜಕಾರಣದಲ್ಲಿ ಟೀಕೆ ಮಾಡುವುದು ಸಹಜವೇ ಆದರೂ ಸಹ ಸರಿಯಾದ ಯೋಜನೆ ಯಾವುದು ಎಂದು ಇತಿಹಾಸವು ದಾಖಲಿಸುತ್ತದೆ. ಪ್ರಸ್ತುತ ಆಯವ್ಯಯದಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಪಂಚಸೂತ್ರಗಳ ಬಗ್ಗೆ ಮಂಡಿಸಿದರು. ಪಕ್ಷದ ಹಿರಿಯರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರಿಂದ ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಶ್ರೀ ಬಸವರಾಜ ಬೊಮ್ಮಾಯಿರವರು ಅಧಿಕಾರವನ್ನು ಪಡೆದರು, ಆ ಸಂದರ್ಭದಲ್ಲಿ ಶ್ರೀ ಬೊಮ್ಮಾಯಿರವರಿಗೆ ಎಷ್ಟು ಆತ್ಮವಿಶ್ವಾಸವಿರುವುದಕ್ಕೆ ಸಾಧ್ಯ? ಇವತ್ತಿನ ದಿವಸ 2 ಲಕ್ಷದ 61 ಸಾವಿರ ಕೋಟಿ ರೂಪಾಯಿಗಳ ವೆಚ್ಚದ ಆಯವ್ಯಯವನ್ನು ಮಂಡಿಸಿದಾಗ, ಇಷ್ಟೊಂದು ಹಣವನ್ನು ಎಲ್ಲಿಂದ ತರುತ್ತೀರಿ, ಬಹಳ ಅಸ್ಪಷ್ಟವಾಗಿ, ಪರಿಶೀಲಿಸುವುದಾಗಿ ಇತ್ಯಾದಿಯಾಗಿ ಆಯವ್ಯಯದಲ್ಲಿ ಹೇಳಲಾಗಿದೆ ಎನ್ನುವ ಮಾತುಗಳನ್ನು ವಿರೋಧ ಪಕ್ಷದ ಕಡೆಯ ಅನೇಕ ಸನ್ಮಿತ್ರರು ಮಾತನಾಡುವ ಸಂದರ್ಭದಲ್ಲಿ ಉಪಯೋಗಿಸಿದರು. ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯವನ್ನು ಮಂಡಿಸುವ ಸಂದರ್ಭದಲ್ಲಿ 'ನಮ್ಮ ರಾಜ್ಯದ ಅರ್ಥ ವ್ಯವಸ್ಥೆಯನ್ನು ಯಾವುದೇ ಸ್ವಪ್ರತಿಷ್ಠೆ ಇಲ್ಲದಂತೆ ತುಂಬ ನಿರ್ಮಲ ಮತ್ತು ಬಿಚ್ಚು ಮನಸ್ಸಿನಿಂದ, ತುಂಬಾ ಪ್ರಾಮಾಣಿಕತೆಯಿಂದ ಹಾಗೂ ರಾಜ್ಯದ ಜನರಿಗೆ ಸುಳ್ಳು ಹೇಳಿ, ಶಹಭಾಸ್ ಗಿರಿಯನ್ನು ಪಡೆಯುವ ಸಂದರ್ಭವು ಇದು ಅಲ್ಲ' ಎಂದು ಪ್ರಥಮ ಬಾರಿಗೆ ಹೇಳಿದರು. ನಮ್ಮ ರಾಜ್ಯದ ಮುಂದಿರುವ ಕಷ್ಟ-ನಷ್ಟಗಳು, ವಸ್ತು ನಿಷ್ಠತೆ ಇವುಗಳ ನಡುವೆಯೂ ಸಹ ರಾಜ್ಯವನ್ನು ಭರವಸೆಯಿಂದ ಅಭಿವೃದ್ಧಿಯೆಡೆಗೆ ಹಾಗೂ ಹಾಲಿ ಇರುವ ಆರ್ಥಿಕ ಕೊರತೆಯನ್ನೂ ಸಹ ಗಮನಿಸಿ ಉತ್ತಮವಾದ ಮಾರ್ಗದಲ್ಲಿ ನಮ್ಮ ರಾಜ್ಯವನ್ನು ನಿರ್ಮಿಸುತ್ತೇವೆ, ಯಾವುದೇ ಜನಪರವಾದ ಯೋಜನೆಗಳನ್ನು ಕೈಬಿಡುವುದಿಲ್ಲ; ಮೂರು ಹೊತ್ತು ಹೊಟ್ಟೆ ತುಂಬ ಅನ್ನ ಹಾಕುವುದಕ್ಕೆ ಆಗದೇ ಇರಬಹುದು, ಆದರೆ, ಯಾರನ್ನೂ ಸಹ ಹಸಿವಿನಿಂದ ಸಾಯುವುದಕ್ಕೆ ಬಿಡುವುದಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು. ನರೇಗಾ, ಕೆರೆಗಳನ್ನು ತುಂಬಿಸುವ, ನೀರಾವರಿ, ಅಭಿವೃದ್ಧಿ ಕಾರ್ಯಗಳು, ದುರ್ಬಲ ಮಕ್ಕಳಿಗೆ ವಸತಿ ಗೃಹಗಳನ್ನು ನಿರ್ಮಿಸುವ, ದಲಿತ ವರ್ಗದ ಜನಾಂಗಕ್ಕೆ ಶಕ್ತಿಯನ್ನು ತುಂಬುವ, ರಾಜ್ಯದ ಮಹಿಳೆಯರಿಗೆ 1.5 ಲಕ್ಷ ರೂಪಾಯಿಗಳಷ್ಟು ಸಾಲವನ್ನು ನೀಡುವ ಹಾಗೂ ವಿಧವಾ ಸ್ತ್ರೀಯರಿಗೆ ಹೆಚ್ಚಿನ ಪಿಂಚಣಿಯನ್ನು ನೀಡುವ ಇಂತಹ ಇನ್ನಿತರೆ ಯಾವುದೇ

ಯೋಜನೆಗಳಲ್ಲಿ ಸರ್ಕಾರದ ಲೋಪವನ್ನು ಕಾಣುವುದಕ್ಕೆ ವಿರೋಧ ಪಕ್ಷದವರಿಗೆ ಸಾಧ್ಯವಿಲ್ಲ. ಇದನ್ನು ನೋಡಿ ನನಗೆ ನಿಜವಾಗಿಯೂ ಸಹ ದಿಗ್ಭ್ರಮೆಯಾಗಿದೆ. ಕೋವಿಡ್-19 ರಂತಹ ಸಾಂಕ್ರಾಮಿಕ ಕಾಯಿಲೆಯಿಂದ ಹೊರಬಂದು ನಾವಿನ್ನೂ ಸಹ ಮಾನಸಿಕವಾಗಿ ಸಿದ್ಧರಾಗಿಲ್ಲ. ಕೋವಿಡ್‌ನ ಸಂದರ್ಭದಲ್ಲಿ ಒಂದು ವರ್ಷದಲ್ಲಿ ನಮ್ಮ ಸಂಬಳದಲ್ಲಿಯೂ ಸಹ ಶೇಕಡಾ ೩೦ ರಷ್ಟನ್ನು ಕಡಿತಗೊಳಿಸುವ ಸ್ಥಿತಿ ಎದುರಾಯಿತು. ಆದರೆ ನಮ್ಮ ರಾಜ್ಯದ ಆಡಳಿತ ಚುಕ್ಕಾಣಿಯನ್ನು ಅನುಷ್ಠಾನಗೊಳಿಸುವ ಕಾರ್ಯಾಂಗದಲ್ಲಿ ಬಹುಮುಖ್ಯ ಪಾತ್ರ ವಹಿಸುವ ಸರ್ಕಾರಿ ನೌಕರರಿಗೆ ಯಾವುದೇ ರೀತಿಯ ವೇತನವನ್ನು ಕಡಿತಗೊಳಿಸದೇ, ಸರ್ಕಾರವನ್ನು ಮುನ್ನಡೆಸುವುದು ಇದೆಯಲ್ಲ; ಇದಕ್ಕಾದರೂ ಸರಿ ವಿರೋಧ ಪಕ್ಷದವರು ಮೆಚ್ಚುಗೆ ಮಾತನ್ನು ಹೇಳಬೇಕಲ್ಲವೇ? ಸರ್ಕಾರವನ್ನು ಹೊಗಳುವುದು ಬೇಡ. ಆದರೆ, ರಾಜಕಾರಣ, ದಂಗಲ್ ಮತ್ತು ಕುಸ್ತಿಗಳಲ್ಲಿ ಯಾರ ಮುಲಾಜೂ ಸಹ ನಮಗೆ ಬೇಡ. ಫೀಲ್ಡ್‌ನಲ್ಲಿ ಮಾಡುವುದನ್ನು ನಾವು ಮಾಡೇ ಮಾಡುತ್ತೇವೆ. *"ಪಾನಿ ಕಾ ಪಾನಿ – ಧೂದ್ ಕಾ ಧೂದ್"* ಎನ್ನುವ ಹಿಂದಿ ನಾಣ್ಣುಡಿಯಂತೆ ಇವತ್ತಿನ ದಿವಸ ಪರಿಸ್ಥಿತಿಯಾಗಿದೆ. ದೇಶದ ಉತ್ತರ ಪ್ರದೇಶ ರಾಜ್ಯದಲ್ಲಿ ಏನಾಯಿತು ಅಥವಾ ಪಂಜಾಬ್ ರಾಜ್ಯದಲ್ಲಿ ಆಡಳಿತದಲ್ಲಿದ್ದ ಕಾಂಗ್ರೆಸ್ ಪಕ್ಷದ ಸರ್ಕಾರವು ತನ್ನ ಅಧಿಕಾರವನ್ನು ಏಕೆ ಕಳೆದುಕೊಂಡಿತು, ಈಶಾನ್ಯ ರಾಜ್ಯಗಳ ಪೈಕಿ ಮಣಿಪುರ ರಾಜ್ಯದಲ್ಲಿ ಏನಾಯಿತು ಎಂದು ವಿರೋಧ ಪಕ್ಷವು ತಿಳಿದುಕೊಳ್ಳಬೇಕು. ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿ ಹಾಗೂ ಗೃಹ ಸಚಿವರಾದ ಶ್ರೀ ಅಮಿತ್ ಷಾ ರವರುಗಳು ದೇಶದ ಸುರಕ್ಷತೆಯ ದೃಷ್ಟಿಯಿಂದ ತೆಗೆದುಕೊಂಡ ದಿಟ್ಟ ನಿರ್ಧಾರಗಳನ್ನು ವಿರೋಧ ಪಕ್ಷದವರು ಅನೇಕ ಬಾರಿ ಟೀಕಿಸಿದರು. ಸಿ.ಎ.ಎ., ಹಾಗೂ ಜಾರಿಗೊಳಿಸಿರುವ ಇನ್ನಿತರೆ ಕಾಯ್ದೆಗಳು ದೇಶಕ್ಕೆ ವಿರುದ್ಧವಾಗಿವೆ ಎಂದು ಹೇಳಿ, ಅವರು ಸೋತಿದ್ದಾರೆ. ಈ ದೇಶವನ್ನು ಅರ್ಥ ಮಾಡಿಕೊಳ್ಳುವಲ್ಲಿ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಪಕ್ಷವು ಸಂಪೂರ್ಣವಾಗಿ ವಿಫಲವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅವರು ಯಾರನ್ನೂ ಸಹ ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಅವರ ವೋಟ್ ಬ್ಯಾಂಕ್‌ನ್ನೂ ಸಹ ಅವರು ಉಳಿಸಿಕೊಳ್ಳಲಿಲ್ಲ. ಒಳ್ಳೆಯ ಕೆಲಸಗಳನ್ನು ಮಾಡುವ ಸರ್ಕಾರವನ್ನು ಅರ್ಥ ಮಾಡಿಕೊಳ್ಳುವಲ್ಲಿ ಕಾಂಗ್ರೆಸ್ ಪಕ್ಷವು ಸೋತಿರುವ ಫಲವಾಗಿ ಇವತ್ತಿನ ದಿವಸ ಆಮ್ ಆದ್ಮಿ ಪಕ್ಷದಂತಹ ಪಕ್ಷವು ದೆಹಲಿಯ ಜೊತೆಗೆ ಮತ್ತೊಂದು ರಾಜ್ಯದಲ್ಲಿ ತನ್ನ ಅಧಿಕಾರವನ್ನು ಹಿಡಿದುಕೊಂಡಿದೆ.

ರೈತರ ಬಗ್ಗೆ ಅತ್ಯಂತ ಹೆಚ್ಚಿನ ಪ್ರಶಂಸೆಗೊಳ್ಳುವ ಅನೇಕ ಕಾರ್ಯಕ್ರಮಗಳನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನೀಡಿದ್ದಾರೆ. ರಾಜ್ಯದ ಅರ್ಥ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, 2019-20 ರ ಅಂತ್ಯದಲ್ಲಿ ಕೋವಿಡ್ ಸಂಕಷ್ಟವು ಪ್ರಾರಂಭವಾಯಿತು, 2020-21 ಬಹಳ ಕಷ್ಟದ ವರ್ಷವಾಗಿತ್ತು. 2021-22 ರಲ್ಲಿ ರಾಜಸ್ವ ಸಂಗ್ರಹದ ಅಂಕಿ ಅಂಶಗಳನ್ನು ಗಮನಿಸಿ, ಆರ್ಥಿಕ ಪುನಃಶ್ಚೇಚನಗೊಳ್ಳುತ್ತಿರುವುದು ಕಂಡು ಸಾಂಕ್ರಾಮಿಕ ರೋಗಗಳನ್ನು ಎದುರಿಸುವ ಸಲುವಾಗಿ ಪ್ರೋತ್ಸಾಹ ನೀಡಿದ ಸರ್ಕಾರ ಇಂದಿನ ಆರ್ಥಿಕತೆಯನ್ನು ತರಬೇಕಾದರೆ, ಇವುಗಳ ನಡುವೆಯೂ ಸಹ ಯಾರು ಕಷ್ಟ ಪಡುತ್ತಿದ್ದಾರೆ, ಅವರಿಗೆ ಸರ್ಕಾರವು ಪ್ರೋತ್ಸಾಹ ನೀಡಿತು. ಇದರ ಫಲವಾಗಿ ತೆರಿಗೆ ಸಂಗ್ರಹಣೆ ಮತ್ತು ಜಿ.ಎಸ್.ಟಿ.ಯ ರಾಜ್ಯದ ಪಾಲು ಪಡೆಯುವುದು ಇವುಗಳು ಈ ಮಟ್ಟದಲ್ಲಿರಲು ಇವತ್ತಿನ ದಿವಸ ಸಾಧ್ಯವಾಗಿದೆ.

ಕೃಷಿ ವಲಯದಲ್ಲಿ ಶೇಕಡಾ 2.2 ರಷ್ಟು, ಕೈಗಾರಿಕೆ ವಲಯದಲ್ಲಿ ಶೇಕಡಾ 7.4 ರಷ್ಟು, ಸೇವಾ ವಲಯದಲ್ಲಿ ಶೇಕಡಾ 9.2 ರಷ್ಟು ಬೆಳವಣಿಗೆ ಕಂಡು ಬಂದಿದೆ. ಇದಕ್ಕೆ ಸರ್ಕಾರದ ದೂರದೃಷ್ಟಿ ಮತ್ತು ಉತ್ತಮ ಆಡಳಿತವೇ ಕಾರಣವಾಗಿದೆ. 2021-22 ನೇ ಸಾಲಿನಲ್ಲಿ ಸಮಗ್ರ ಜಿ.ಡಿ.ಪಿ., ಯು ಶೇಕಡಾ 9.5 ರಷ್ಟು ಬೆಳವಣಿಗೆಯನ್ನು ಹೊಂದುತ್ತದೆ ಎಂದು ಸರ್ಕಾರವು ನಿರೀಕ್ಷಿಸಿದೆ. ಇದಕ್ಕಿಂತ ಆಶಾದಾಯಕವು ಇನ್ನೇನು ಬೇಕೆಂದು ನಾನು ಕೇಳಬಯಸುತ್ತೇನೆ. ಈ ಸರ್ಕಾರವು ಬಹಳ ಚೆನ್ನಾಗಿ ಜನಪರ ಕೆಲಸಗಳನ್ನು ಮಾಡುತ್ತಿದೆ ಹಾಗೂ ಬೆಳವಣಿಗೆಯ ನಿಟ್ಟಿನಲ್ಲಿ ಸಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಮುಚ್ಚುವರೆ ಮಾಡದೇ, ಜನರ ಮುಂದೆ ತುಂಬಾ ಚೆನ್ನಾಗಿ ತೆರೆದಿಟ್ಟಿದ್ದಾರೆ. ವಿರೋಧ ಪಕ್ಷದ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್ ಹಾಗೂ ಮತ್ತಿತರೆ ಅನೇಕ ಮಿತ್ರರು ಮಾತನಾಡುವ ಸಂದರ್ಭದಲ್ಲಿ ಸರ್ಕಾರವು ಇಷ್ಟೊಂದು ಯೋಜನೆಗಳನ್ನು ಹೇಗೆ ಅನುಷ್ಠಾನಗೊಳಿಸುತ್ತದೆ ಹಾಗೂ ಸರ್ಕಾರವು ಇದಕ್ಕೆಲ್ಲಾ ಹಣವನ್ನು ಎಲ್ಲಿಂದ ತರುತ್ತದೆ ಎಂಬುದಾಗಿ ಕೇಳುತ್ತಿದ್ದರು. ಪ್ರಸ್ತುತ ಮಂಡಿಸಿರುವ ಆಯವ್ಯಯವನ್ನು "ಕನಸಿನ ಆಯವ್ಯಯ" ಎಂಬುದಾಗಿ ಅವರುಗಳು ಹೇಳಿದರು. ನಾವೂ ಸಹ ಇಷ್ಟೊಂದು ಕನಸುಗಳನ್ನು ಎಲ್ಲಿಂದ ತರುತ್ತಾರೆ ಎಂದು ಭಾವಿಸಿದೆವು. ಕನಸು ಕಂಡರೆ ಮಾತ್ರವೇ ಅದನ್ನು ನನಸುಗೊಳಿಸಲು ಸಾಧ್ಯ. ಸ್ವಂತ ತೆರಿಗೆ, ತೇರಿಯೇತರ ಸ್ವೀಕೃತಿ, ಕೇಂದ್ರದ ತೆರಿಗೆಯಲ್ಲಿ ರಾಜ್ಯದ ಪಾಲು, ಕೇಂದ್ರ ಸರ್ಕಾರದ ಸಹಾಯಧನ ಎಂಬುದಾಗಿ ನಮ್ಮ ಸರ್ಕಾರವು ತಿಳಿಸುತ್ತದೆ. ಇಂತಹ ಆದಾಯದ ಮೂಲಗಳೆಲ್ಲವನ್ನೂ ಸೇರಿಸಿ ನಾವು ಯಾವ ರೀತಿಯಾಗಿ ಹಣವನ್ನು ಹೊಂದಿಸುತ್ತೇವೆ ಅದೇ ರೀತಿಯಾಗಿ ಆಯವ್ಯಯದಲ್ಲಿ

ಅಂದಾಜಿಸಲಾದ 24,273 ಕೋಟಿ ರೂಪಾಯಿಗಳಿಂದ 27,145 ಕೋಟಿ ರೂಪಾಯಿಗಳಿಗೆ ಕೇಂದ್ರ ಸರ್ಕಾರದಿಂದ ರಾಜ್ಯದ ತೆರಿಗೆಗಳ ಪಾಲನ್ನು ಹೆಚ್ಚಿಸಲಾಗಿದೆ. ಅಂದರೆ 3 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಮೊತ್ತವನ್ನು ಕೇಂದ್ರ ಸರ್ಕಾರವು ರಾಜ್ಯಕ್ಕೆ ನೀಡಿದೆ. ಈ ಅಂಶವನ್ನು ನಾವು ಮನಸ್ಸಿನಲ್ಲಿಟ್ಟುಕೊಂಡಿದ್ದೇವೆ. 2022-23 ನೇ ಸಾಲಿನ ಕೇಂದ್ರದ ಆಯವ್ಯಯದಲ್ಲಿ ಕರ್ನಾಟಕ ರಾಜ್ಯದ ತೆರಿಗೆಯ ಹಂಚಿಕೆಯ ಮೊತ್ತವನ್ನಾಗಿ 29,783 ಕೋಟಿ ರೂಪಾಯಿಗಳನ್ನು ನೀಡುವುದಾಗಿ ನಾವು ಅಂದಾಜು ಮಾಡಿಕೊಂಡಿದ್ದೇವೆ. ಇವತ್ತಿನ ದಿವಸ ಜಿ.ಎಸ್.ಟಿ., ಪರಿಹಾರ ಧನ, ಜಿ.ಎಸ್.ಟಿ., ಸಂಗ್ರಹಣೆ ಕ್ಷೇತ್ರದ ಹಾದಿಯಲ್ಲಿರುವುದನ್ನು ಇವತ್ತಿನ ದಿವಸ ನೀವುಗಳೆಲ್ಲರೂ ಸಹ ನೋಡುತ್ತಿದ್ದೀರಿ. ಇವುಗಳ ಅಂಕಿ-ಅಂಶಗಳು ತಮ್ಮ ಮುಂದಿವೆ. ಇವುಗಳನ್ನೇ ಪುನರುಚ್ಚರಿಸುತ್ತಾ, ನಾನು ತಮ್ಮ ಸಮಯವನ್ನು ವ್ಯರ್ಥಗೊಳಿಸುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಅಂದರೆ ನಮ್ಮ ಮನೆಯಲ್ಲಿ ಎಷ್ಟು ಹಣವಿದೆಯೋ ಅದಕ್ಕನುಗುಣವಾಗಿ ನಾವು ನೀಡಿರುವ ವಾಗ್ದಾನ ಹಾಗೂ ಆಯವ್ಯಯದಲ್ಲಿ ಘೋಷಿಸಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಮುಂದಿನ ದಿನಗಳಲ್ಲಿ ನಮ್ಮ ಪಕ್ಷವೂ ಸಹ ಚುನಾವಣೆಯನ್ನು ಎದುರಿಸಬೇಕಾಗಿದೆ. ಮತ್ತೊಂದು ಬಾರಿ ನಾವು ಅಧಿಕಾರವನ್ನು ಪಡೆದುಕೊಳ್ಳಬೇಕು, ಏಕೆಂದರೆ, ಅರ್ಧಂಬರ್ಧ ಕನಸುಗಳನ್ನು ಕೊಟ್ಟು ಹೋಗುವುದಕ್ಕೆ ನಮಗೂ ಸಹ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ನಾವು ಉತ್ತಮವಾದ ರೀತಿಯಲ್ಲಿ ಕೆಲಸಗಳನ್ನು ನಿರ್ವಹಿಸಬೇಕು.

(ಮುಂದು)

(250)/10-3-2022/4-50/ಎಲ್ಎಂ/ಎಂಡಿ

**ಡಾ: ತೇಜಸ್ವಿನಿ ಗೌಡ**(ಮುಂದು):-

ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಆರ್. ಅಶೋಕರವರು, ಶ್ರೀ ಎಸ್.ಟಿ.ಸೋಮಶೇಖರ್‌ರವರು, ಶ್ರೀ ವಿ.ಸೋಮಣ್ಣನವರು, ಶ್ರೀ ಕೆ.ಗೋಪಾಲಯ್ಯನವರು ಚೆನ್ನಾಗಿ ಕೆಲಸವನ್ನು ಮಾಡಿದ್ದಾರೆ. ಕಾರ್ಮಿಕ ಇಲಾಖೆಯ ಸಚಿವರಾದ ಶ್ರೀ ಶಿವರಾಂ ಹೆಬ್ಬಾರ್‌ರವರು ಕಾರ್ಮಿಕ ಇಲಾಖೆಯಲ್ಲಿ ಇಷ್ಟೊಂದು ಕೆಲಸವನ್ನು ಮಾಡಬಹುದಾ ಎನ್ನುವ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಕೋವಿಡ-19ರ ಸಮಯದಲ್ಲಿ ಕಾರ್ಮಿಕರು ಗೂಳೆ ಹೋಗುವಂತಹ ಸಂದರ್ಭದಲ್ಲಿ ಒಬ್ಬ ಕಾರ್ಮಿಕರು ಹಸಿವಿನಿಂದ ಬಳಲಬಾರದು ಎಂದು ಆಹಾರದ ಪೊಟ್ಟಣವನ್ನು ಕೊಟ್ಟಿದ್ದಾರೆ, ಎಲ್ಲಾ ರೀತಿಯ ಸೇವಾ ಭದ್ರತೆಯನ್ನು ಕೊಡುವಲ್ಲಿ

ಉತ್ತಮವಾದ ಕೆಲಸವನ್ನು ಮಾಡಿ ಪ್ರಶಸ್ತಿಗೆ ಪಾತ್ರರಾಗಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಸಂಪುಟದಲ್ಲಿಯ ಪ್ರತಿಯೊಬ್ಬ ಮಂತ್ರಿಗಳು ತುಂಬಾ ಜವಾಬ್ದಾರಿಯಿಂದ, ಹೊಣೆಗಾರಿಕೆಯಿಂದ ಕೆಲಸ ಮಾಡಿದ್ದರಿಂದ ಇಂತಹ ಉತ್ತಮವಾದ ಬಜೆಟ್‌ನ್ನು ಕೊಡಲು ಸಹಾಯವಾಗಿದೆ ಎನ್ನುವುದನ್ನು ಹೇಳಬಯಸುತ್ತೇನೆ.

ನನಗೆ ತುಂಬಾ ಖುಷಿ ಕೊಟ್ಟಿರುವ ವಿಚಾರ ಎಂದರೆ, ನೀರಾವರಿ ಯೋಜನೆ. ನಾನು ಕನಸು ಮನಸ್ಸಿನಲ್ಲಿಯೂ ಬರಿ ನೀರಾವರಿ ಬಗ್ಗೆಯೇ ಯೋಚನೆ ಮಾಡುತ್ತಿದೆ. ನೀರಾವರಿ ಯೋಜನೆ ಎಲ್ಲರಿಗೂ ಬೇಕಾಗಿರುವಂತಹದ್ದು. ಅರ್ಧಕ್ಕೆ ನಿಂತಿರುವ ಯೋಜನೆಗಳನ್ನು ಪೂರ್ಣಗೊಳಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಹೃದಯಕ್ಕೆ ಅತ್ಯಂತ ಪ್ರಿಯವಾದ ವಿಚಾರ ಎಂದರೆ ನೀರಾವರಿ ಯೋಜನೆಗಳು. ಅವರ ತಂದೆಯವರ ಆಡಳಿತವನ್ನು ನೋಡುವಂತಹ ಸುಯೋಗ ನನಗೆ ಸಿಕ್ಕಿತ್ತು. ನೀರಾವರಿ ಸಚಿವರಾಗಿ, ಗೃಹ ಸಚಿವರಾಗಿ ಇವತ್ತು ಮುಖ್ಯಮಂತ್ರಿಗಳಾಗಿ ಶ್ರೀ ಬಸವರಾಜ ಬೊಮ್ಮಾಯಿಯವರು ಕಾರ್ಯನಿರ್ವಹಿಸುತ್ತಿದ್ದಾರೆ. ಇವತು ನೀರಾವರಿಗಾಗಿ ತಮ್ಮ ಶಕ್ತಿ ಮೀರಿ ಅನುದಾನವನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಆರ್ಥಿಕ ಇಲಾಖೆಯವರಿಗೂ ಧನ್ಯವಾದಗಳನ್ನು ಹೇಳುತ್ತೇನೆ. ಬಜೆಟ್ ತಯಾರಿಸುವುದು ಅಷ್ಟು ಸುಲಭದ ಕೆಲಸವಲ್ಲ. ಇಲ್ಲಿ ಕುಳಿತುಕೊಂಡು ಮಾತನಾಡುವುದು ಸುಲಭ, ಆದರೆ ಎಲ್ಲರನ್ನೂ ಮೆಚ್ಚಿಸಬೇಕು, ಜನರನ್ನು ಮೆಚ್ಚಿಸಬೇಕು, ಅಂತಿಮವಾಗಿ ತಿಜೋರಿಯಿಂದ ಹಣವನ್ನು ಕೊಡಬೇಕಾಗುತ್ತದೆ. ಹಣ ಕೊಡಬೇಕಾದರೆ ಅಷ್ಟು ಹಣ ಸಂಗ್ರಹವಾಗಬೇಕು. ಇದರ risk ನ್ನು ತೆಗೆದುಕೊಂಡು, challenge ತೆಗೆದುಕೊಂಡು ಆರ್ಥಿಕ ಇಲಾಖೆ ಸಂಪೂರ್ಣವಾದ ಸಹಕಾರವನ್ನು ಕೊಟ್ಟಿದೆ. ಉನ್ನತ ಅಧಿಕಾರಿಗಳು ರಾಜ್ಯದ ಪರಿಸ್ಥಿತಿಯನ್ನು ತಿಳಿಸಿ ಗಟ್ಟಿ ನಿರ್ಧಾರವನ್ನು ತೆಗೆದುಕೊಳ್ಳಲು ಸಹಕಾರ ಮಾಡಿದ್ದಾರೆ. ಆರ್ಥಿಕ ಇಲಾಖೆಯವರು ಅಭಿನಂದನೆಗೆ ಪಾತ್ರರಾಗುತ್ತಾರೆ.

ಕೇಂದ್ರ ಸರ್ಕಾರದ ಪಿ.ಎಂ. ಕಿಸಾನ್ ಯೋಜನೆಯಡಿಯಲ್ಲಿನ 50 ಲಕ್ಷಕ್ಕೂ ಹೆಚ್ಚಿನ ರೈತರಿಗೆ 2021-22ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಹೆಚ್ಚುವರಿಯಾಗಿ 1,978 ಕೋಟಿ ರೂ.ಗಳ ಅನುದಾನವನ್ನು ನೇರವಾಗಿ ರೈತರ ಖಾತೆಗೆ ಜಮಾ ಮಾಡಿದ್ದಾರೆ. ದಯಮಾಡಿ ಅರ್ಥ ಮಾಡಿಕೊಳ್ಳಿ, ಉತ್ತರ ಪ್ರದೇಶದಲ್ಲಿ ಇವತ್ತು ಬರಿ ಭಾವನಾತ್ಮಕ ವಿಚಾರಗಳಿಗೆ ಮತ ಬರಲಿಲ್ಲ, ರೈತರನ್ನು ದಾರಿ

ತಪ್ಪಿಸಿದರು ಸಹ, ಯಾವ ರೈತ ಕೇಂದ್ರದ ಫಲವನ್ನು ಪಡೆದಿದ್ದಾರೆ ಅವರು, ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳು ಮತ್ತು ಎಲ್ಲಾ ಬಿಜೆಪಿ ಸರ್ಕಾರ ಇರುವಂತಹ ರಾಜ್ಯಗಳ ಮುಖ್ಯಮಂತ್ರಿಗಳ ಕೆಲಸವನ್ನು ನೋಡಿ ಜನರು ನಮಗೆ ರಾಜಕೀಯವಾಗಿ ಶಕ್ತಿಯನ್ನು ತುಂಬಿ ಬೆನ್ನು ತಟ್ಟಿದ್ದಾರೆ. ಈ ಕಾರಣದಿಂದ ಇಷ್ಟು ಉತ್ತಮವಾದ ಚುನಾವಣಾ ಫಲಿತಾಂಶವನ್ನು ಪಡೆಯಲು ಸಾಧ್ಯವಾಗಿದೆ ಎಂದು ಹೇಳಬಹುದಾಗಿದೆ.

ರಾಜ್ಯದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಕೈಗೆಟುಕುವಂತೆ ಮಾಡಿದ್ದಾರೆ. ರೈತರ ಆದಾಯವನ್ನು ಹೆಚ್ಚಿಸುವ ಧ್ಯೇಯದೊಂದಿಗೆ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ "Directorate of Secondary Agriculture" ವನ್ನು ಸ್ಥಾಪಿಸಲಾಗಿದೆ. ರೈತ ಉತ್ಪಾದಕರ ಸಂಸ್ಥೆಗಳನ್ನು ಬಳಸಿ ಕೃಷಿಯ ಪ್ರಾಥಮಿಕ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ, ಈ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸಲು ಇದು ಸಹಕಾರಿಯಾಗಲಿದೆ. ಉತ್ಪನ್ನಗಳನ್ನು ಮಾರಾಟ ಮತ್ತು ರಫ್ತು ಮಾಡಲು 50 ಕೋಟಿ ರೂ.ಗಳಲ್ಲಿ ಯೋಜನೆಯನ್ನು ರೂಪಿಸಲು ನಮ್ಮ ಸರ್ಕಾರ ಕ್ರಮವನ್ನು ವಹಿಸಿದೆ.

ನಿನ್ನೆ ಅನೇಕ ಸ್ನೇಹಿತರು ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಬಗ್ಗೆ ಮಾತನಾಡಿದ್ದಾರೆ. ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳು ಪೋಲಾಗುವುದನ್ನು ತಪ್ಪಿಸುವ ವಿಚಾರದಲ್ಲಿ ಒಳ್ಳೆಯ ಪ್ರದರ್ಶನವನ್ನು ಕರ್ನಾಟಕ ರಾಜ್ಯ ಮಾಡಿದೆ. ಮೌಲ್ಯವರ್ಧನೆಯನ್ನು ಉತ್ತೇಜಿಸು ಮತ್ತು ಸರಬರಾಜು ಮಾಡಲು ಹಂತ-ಹಂತವಾಗಿ ಮಿನಿ ಆಹಾರ ಪಾರ್ಕ್‌ಗಳನ್ನು ಖಾಸಗಿ-ಸಾರ್ವಜನಿಕ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುತ್ತಿದೆ.

1,000 ಎಕರೆ ಪ್ರದೇಶದಲಿ ನೈಸರ್ಗಿಕ ಕೃಷಿ ಪದ್ಧತಿಯಲ್ಲಿ, ಮಣ್ಣಿನ ಆರೋಗ್ಯ ಚೆನ್ನಾಗಿರಬೇಕು, ಭೂಮಿ ತಾಯಿಯ ಆರೋಗ್ಯ ಚೆನ್ನಾಗಿರಬೇಕೆಂದು ಸಾರಜನಕ ಸ್ಥಿರೀಕರಣ, ಜೈವಿಕ ವಿಶ್ಲೇಷಣೆ – ಮಣ್ಣಿನ ಆರೋಗ್ಯವನ್ನು ರಕ್ಷಣೆ ಮಾಡಲು ರಾಜ್ಯದಲ್ಲಿ ಒಟ್ಟಾರೆ 2 ಲಕ್ಷ ಹೆಕ್ಟೇರ್ ಪ್ರದೇಶವನ್ನು ಸಾವಯವ ಕೃಷಿಯಡಿ ತರಲಾಗಿದೆ. ಇವತ್ತು ಸಿರಿ ಧಾನ್ಯಗಳಿಗೆ ಎಷ್ಟು ಬೆಲೆ ಇದೆ ಎಂದು ಎಲ್ಲರಿಗೂ ಗೊತ್ತಿದೆ. ಸಕ್ಕರೆ ಖಾಯಿಲೆಯನ್ನು ಇನ್ನು ಅನೇಕ ಕಾಯಿಲೆಗಳನ್ನು ನಿವಾರಣೆ ಮಾಡುವಲ್ಲಿ

ಸಿರಿಧಾನ್ಯಗಳು ಪ್ರಾಮುಖ್ಯತೆಯನ್ನು ಪಡೆಯುತ್ತಿವೆ. ಕೇವಲ ecology ಬಗ್ಗೆ ಮಾತನಾಡತಕ್ಕಂಥಾದ್ದಲ್ಲ. ಮಣ್ಣಿಗೆ ಹಾಕುವಂತಹ ರಾಸಾಯನಿಕವನ್ನು ಕ್ರಮೇಣ ಕಡಿಮೆ ಮಾಡಬೇಕು, ಸಾವಯುವ ಕೃಷಿಯನ್ನು ತರಬೇಕು ಎನ್ನುವ ನಿಟ್ಟಿನಲ್ಲಿ ಸಾವಯವ ಉತ್ಪನ್ನಗಳ ಉತ್ಪಾದನೆಯಲ್ಲಿ ನಮ್ಮ ರಾಜ್ಯವು ಮೂರನೇ ಸ್ಥಾನದಲ್ಲಿದೆ. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ಒಳ್ಳೇಯ ಕೆಲಸಗಳನ್ನು ಮಾಡುತ್ತಿದೆ.

ನಮ್ಮ ರಾಜ್ಯದಲ್ಲಿ 57 ತಾಲ್ಲೂಕುಗಳು ಮಳೆಯನ್ನೆ ಅವಲಂಬಿಸಿವೆ. ಇಂತಹ ತಾಲ್ಲೂಕುಗಳಲ್ಲಿ 1600 ಅಡಿ ಬೋರವೆಲ್ ಕೋರೆದರೆ fluoride ನೀರು ಬರುತ್ತದೆ. ಕೆ.ಸಿ.ನಾಲೆಯಿಂದ ಸಂಸ್ಕರಿಸಿದಂತಹ ಚರಂಡಿ ನೀರಿನಿಂದ ಕೆರೆಯನ್ನು ತುಂಬಿಸಿಕೊಂಡು ಚಿಕ್ಕಬಳ್ಳಾಪೂರ, ಕೋಲಾರ, ಬೆಂಗಳೂರು ಗ್ರಾಮಾಂತರ ಭಾಗಗಳಲ್ಲಿ ಸಿಂಚಾಯಿಯನ್ನು ಮಾಡಲಾಗುತ್ತಿದೆ. ರಾಜ್ಯದ 57 ತಾಲ್ಲೂಕುಗಳ ವ್ಯಾಪ್ತಿಯ 2.75 ಲಕ್ಷ ಹೆಕ್ಟೇರ್ ಮಳೆಯಾಶ್ರಿತ ಪ್ರದೇಶದಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ 642 ಕೋಟಿ ರೂ.ವೆಚ್ಚದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ-ಜಲಾನಯನ ಅಭಿವೃದ್ಧಿ ಘಟಕ-2.0ನ್ನು ಜಾರಿಗೊಳಿಸಲು ಕ್ರಮವಹಿಸಲಾಗುತ್ತದೆ.

ಮೈಸೂರು-ಬೆಂಗಳೂರು ಮಾತ್ರ ಕರ್ನಾಟಕ ರಾಜ್ಯವಲ್ಲ. ಆದ್ದರಿಂದ ಸಮಾನವಾದ ವಿಕಾಸವಾಗಬೇಕು ಎಂದು ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನಲ್ಲಿ ಒಂದು ಹೊಸ ಕೃಷಿ ಕಾಲೇಜನ್ನು ಸ್ಥಾಪಿಸಲು ಯೋಜಿಸಲಾಗಿದೆ. ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬೆಳೆಯುವ ವಿಶಿಷ್ಟವಾದ ಭೌಗೋಳಿಕ ಸೂಚ್ಯಂಕ ಹೊಂದಿ ತೊಗರಿಬೇಳೆಯನ್ನು "Bhima Pulse" brand ನಡಿ ಮಾರಾಟ ಮಾಡಲು ಉದ್ದೇಶಿಸಲಾಗಿದೆ. ಹಿರೇಕೆರೂರಿನಲಿ ಗೋವಿನ ಜೋಳ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಿದೆ. ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ "ಡಾ: ಎಸ್.ವಿ.ಪಾಟೀಲ್ ಕೃಷಿ ಸಂಶೋದನೆ, ತರಬೇತಿ ಹಾಗೂ ರೈತರ ಶ್ರೇಯೋಭಿವೃದ್ಧಿ ಪೀಠ" ವನ್ನು ಸ್ಥಾಪಿಸಲಾಗುತ್ತದೆ. ಇವೆಲ್ಲವು ರೈತ ಬೆನ್ನಲುಬನ್ನು ಗಟ್ಟಿಮಾಡುವಂತಹ ಕಾರ್ಯಕ್ರಮಗಳಾಗಿವೆ. ನೇರವಾಗಿ ಹಣ ಕೊಡುವುದಲ್ಲ, ಮೀನು ಹಿಡಿಯುವುದನ್ನು ಕಲಿಸುವಂಥ, ಜೀವನಕ್ಕೆ ದೀರ್ಘಕಾಲಿಕವಾಗಿ ಉಪಯೋಗವನ್ನು ಕೊಡುವಂತಹ ಅವರ ಬದುಕನ್ನು ಗಟ್ಟಿಮಾಡಲು ಇಂತಹ ಕಠಿಣ ಪರಿಸ್ಥಿತಿಯಲ್ಲಿಯು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ.

ಕೃಷಿಯಲ್ಲಿ ರೈತ ಮಹಿಳೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಹಾಗೂ ಇತರ ಮಹಿಳೆಯನ್ನು ಕೃಷಿಯತ್ತ ಆಕರ್ಷಿಸಲು ಪ್ರತ್ಯೇಕವಾಗಿ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿಯನ್ನು ನೀಡಲಾಗುತ್ತದೆ. ರೇಷ್ಮೆ ಕೃಷಿಯಲ್ಲಿ ಮಹಿಳೆಯ ಪಾತ್ರ ಎಷ್ಟು ಎನ್ನವುದು ಎಲ್ಲರಿಗೂ ಗೊತ್ತಿದೆ. ಮಂಡ್ಯ ಭಾಗದಲ್ಲಿ ಇತರ ಭಾಗಗಳಲ್ಲಿ ಹೆಣ್ಣುಮಕ್ಕಳು ಕುಟುಂಬದ ನಿರ್ವಹಣೆ ಜೊತೆಯಲ್ಲಿ ಅತ್ಯುನತ್ತ ಕೃಷಿ ಶ್ರಮದಾನವನ್ನು ಮಾಡುತ್ತಿದ್ದಾರೆ, leadership ಕೊಡುತ್ತಿದ್ದಾರೆ. ಆ ಮಹಿಳಾ ಲೋಕಕ್ಕೆ ಇನ್ನಷ್ಟು ಶಕ್ತಿ ತುಂಬುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಅದಕ್ಕಾಗಿ ಸಮಸ್ತ ಮಹಿಳೆಯರ ಪರವಾಗಿ ಸರ್ಕಾರಕ್ಕೆ ಧನ್ಯವಾದಗಳನ್ನು ಹೇಳಲು ಇಷ್ಟಪಡುತ್ತೇನೆ.

ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳ ವಿಸ್ತೀರ್ಣವು 26.32 ಲಕ್ಷ ಹೆಕ್ಟೇರ್‌ಗಳಾಗಿದ್ದು, ದೇಶದಲ್ಲಿಯೇ ಮೊದಲನೇ ಸ್ಥಾನವನ್ನು ಹೊಂದಿದೆ. 2021-22ನೇ ಸಾಲಿನಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ 1.38 ಲಕ್ಷ ಫಲಾನಭವಿಗಳಗೆ 240 ಕೋಟಿ ರೂ.ಗಳ ಸಹಾಯಧವನ್ನು ನೀಡುತ್ತಿರುವುದು ತುಂಬಾ ಮೆಚ್ಚುವಂತಹ ವಿಚಾರವಾಗಿದೆ. ತೋಟಗಾರಿಕೆ ಸಾಗುವಳ ಕ್ಷೇತ್ರವನ್ನು 34,700 ಹೆಕ್ಟೇರ್ ಪ್ರದೇಶಕೆ ವಿಸ್ತರಿಸಿರುವುದು ರೈತರಿಗೆ ಇನ್ನಷ್ಟು ಚೈತನ್ಯವನ್ನು ತುಂಬುವಂತಹ ಕೆಲಸವಾಗಿದೆ. ಇವು populist programs or political programs ಅಲ್ಲ invisible ಆಗಿದೆ. ಇವು ಕಣ್ಣಿಗೆ ಕಾಣುವುದಿಲ್ಲ. ಇವು Ballot Box ನಲ್ಲಿ ಕಣ್ಣಿಗೆ ಕಾಣುತ್ತದೆ.

ಮಹಿಳೆಯರಿಗೆ ಆಸ್ತಿ ಹಕ್ಕಿನಿಂದ ಎಲ್ಲ ಹಕ್ಕುಗಳನ್ನು ನಮ್ಮ ಸರ್ಕಾರ ನೀಡುತ್ತಿದೆ. ನಮ್ಮ ಸರ್ಕಾರ ಮಹಿಳೆಯರಿಗೆ ಎಷ್ಟು ಗೌರವವನ್ನು ಕೊಡುತ್ತದೆ, ಎಷ್ಟು ಆದ್ಯತೆಯನ್ನು ಕೊಡುತ್ತದೆ ಎನ್ನುವುದನ್ನು ಗಮನಿಸುತ್ತಿದ್ದೇವೆ.

ನೀರಾವರಿ ವಿಚಾರವನ್ನು ಹೇಳಬೇಕಾದರೆ, ಕೃಷ್ಣೆಯ ವಿಚಾರ ಬಂದಾಗ, ನಮ್ಮ ಹಿರಿಯ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್‌ರವರು ಇವತ್ತು ನಮ್ಮ ಸದನದಲ್ಲಿ ಇಲ್ಲ. ಅವರು ಯಾವತ್ತು ನೀರಾವರಿ ವಿಚಾರ ಬಂದಾಗ ಕೃಷ್ಣೆಯ ವಿಚಾರವನ್ನು ಮಾತನಾಡುತ್ತಿದ್ದರು. ಕೃಷ್ಣಾನದಿ ನೀರಿನ ವಿಚಾರ ಬಂದಾಗ ಎರಡು ಕಡೆಯ ಸದಸ್ಯರು ಪಕ್ಷಾತೀತವಾಗಿ ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಇಂತಹ ಕಠಿಣ

ಪರಿಸ್ಥಿತಿಯಲ್ಲಿಯು ಕೂಡ ಉತ್ತರ ಕರ್ನಾಟಕದ ಮಹತ್ವಾಕಾಂಕ್ಷೆಯ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ರ ಅನುಷ್ಠಾನಕ್ಕಾಗಿ ಪ್ರಸ್ತುಕ ಸಾಲಿನಲ್ಲಿ 5000 ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿದ್ದಾರೆ. ಭೂಸ್ವಾಧೀನ, ಪುರ್ನವಸತಿ, ಪುರ್ನನಿರ್ಮಾಣದ ಕಾರ್ಯಗಳಿಗೆ ಹಣವನ್ನು ಹಂಚಿಕೆ ಮಾಡಿ ಅಭಿನಂದನೆಗೆ ನಮ್ಮ ಸರ್ಕಾರ ಪಾತ್ರವಾಗಿದೆ ಎಂದು ಆಡಳಿತ ಪಕ್ಷದ ಸದಸ್ಯಳಾಗಿ ನಾನು ಧನ್ಯವಾದಗಳನ್ನು ಹೆಮ್ಮೆಯಿಂದ ಹೇಳುತ್ತೇನೆ.

ಮಹಾದಾಯಿ ವಿಚಾರದಲ್ಲಿ ನ್ಯಾಯಾಧೀಕರಣದ ತೀರ್ಪಿನಂತೆ ಹಂಚಿಕೆಯಾದ ನೀರಿನ ಬಳಕೆಗೆ ರಾಜ್ಯದ ಕಳಸಾ ಬಂಡೂರಿ ನಾಲಾ ತಿರುವು ಯೋಜನೆಗೆ ಕೇಂದ್ರ ಸರ್ಕಾರದ ಸಕ್ಷಮ ಪ್ರಾಧಿಕಾರದ ಅಗತ್ಯ ತೀರುವಳಿಗಳನ್ನು ಪಡೆಯಲು ಕ್ರಮವಹಿಸುವುದು ಮಾತ್ರವಲ್ಲ ಸದರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಸಕ್ತ ಸಾಲಿನಲ್ಲಿ ಸಾವಿರ ಕೋಟಿ ರೂಪಾಯಿಗಳ ಅನುದಾನವನ್ನು ಒದಗಿಸಿದ್ದಾರೆ. ಹಾಗಾಗಿ ಮತ್ತೊಮ್ಮೆ ಧನ್ಯವಾದವನ್ನು ಹೇಳಲು ಇಷ್ಟಪಡುತ್ತೇನೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟೀಯ ಯೋಜನೆಯಾಗಿ ಪರಿಗಣಿಸಲು ಕೇಂದ್ರ ಸಚಿವ ಸಂಪುಟಕೆ, ಕೇಂದ್ರ ಜಲಶಕ್ತಿ ಮಂತ್ರಾಲಯದ "High Power Steering Committee" ಗೆ ಶಿಫಾರಸ್ ಮಾಡಿದ್ದು ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಮಾಡಿಸುವಲ್ಲಿ ಕರ್ನಾಟಕ ಸರ್ಕಾರ ದಿಟ್ಟವಾದ ಒತ್ತಾಯವನ್ನು ಮಾಡಿ ಸಫಲವಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ನಿಜವಾಗಿಯು ಅಭಿನಂದನೆಗಳನ್ನು ಹೇಳಬೇಕಾಗುತ್ತದೆ.

(ಮುಂದು)

(251)10-03-2022(05-00)bsd-md

**ಡಾ: ತೇಜಸ್ವಿನಿಗೌಡ (ಮುಂದು)**

ಕೇಂದ್ರದ ಯೋಜನೆಯೊಟ್ಟಿಗೆ ಪ್ರಸಕ್ತ ಸಾಲಿನಲ್ಲಿ ಚಿತ್ರದುರ್ಗದಂತಹ ಬೆಂಗಾಡಿನ ಭಾಗಗಳನ್ನು ನಮ್ಮ ಸರ್ಕಾರವು ಮರೆಯಲಿಲ್ಲ. 60 ಕಿ.ಮೀ ಕಾಮಗಾರಿಗಳನ್ನು ಪೂರ್ಣಗೊಳಿಸಲು, ಹೊಳಲ್‌ಕೆರೆ feeder canal ಇರಬಹುದು, 28 ಕೆರೆಗಳಿಗೆ ನೀರು ತುಂಬಿಸುವ ಅಥವಾ ತರೀಕೆರೆ ಏತನೀರಾವರಿ

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯೋಜನೆಯ ಕಾಮಗಾರಿಗಳಡಿ 20,150 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸುವುದು ಇರಬಹುದು, 79 ಕೆರೆಗಳಿಗೆ ನೀರು ತುಂಬಿಸಲು ಕ್ರಮ ವಹಿಸಿರುವುದು ಇರಬಹುದು, ಇವೆಲ್ಲವೂ ಸೇರಿ ಒಟ್ಟಾರೆಯಾಗಿ ರೂ. 3 ಸಾವಿರ ಕೋಟಿಗಳ ಅನುದಾನವನ್ನು ಒದಗಿಸಿ, budget ಕೊಟ್ಟಿದ್ದಾಯೇ ವಿನಃ ಕೇವಲ ಬಾಯಿ ಮಾತಿನಲ್ಲಿ budget ಕೊಟ್ಟಿಲ್ಲ ಎಂಬುದನ್ನು ಪ್ರತಿ ಪಕ್ಷದ ಟೀಕೆಗಳಿಗೆ ಉತ್ತರ ಹೇಳಬಯಸುತ್ತೇನೆ.

ಇನ್ನು ಎತ್ತಿನ ಹೊಳೆ ಯೋಜನೆ ಬಗ್ಗೆ ಹೇಳುವುದಾದರೆ, ರಾಜ್ಯದ ಜನರ ಒಂದೊಂದು ರೂಪಾಯಿ ತೆರಿಗೆ ಹಣವನ್ನು ಕಾಲಮಿತಿಯಲ್ಲಿ ಯೋಜನೆಗಳನ್ನು ಅನುಷ್ಠಾನ ಮಾಡದಿದ್ದರೆ ರಾಜ್ಯದ ಬೊಕ್ಕಸಕ್ಕೆ ಹೊರೆಯಾಗುತ್ತದೆ ಎಂಬುದನ್ನು ಎರಡೂ ಕಡೆ ಪಕ್ಷ ಬೇಧ ಮರೆತು ಚರ್ಚೆ ಮಾಡಿದ್ದೇವೆ. ಇವತ್ತು ಎತ್ತಿನ ಹೊಳೆ ಸಮಗ್ರ ಯೋಜನೆಯ ಪ್ರಥಮ ಹಂತದ ಕಾಮಗಾರಿಗಳನ್ನು ಪ್ರಸಕ್ತ ಸಾಲಿನಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸುವುದು ಮಾತ್ರವಲ್ಲ, ಯೋಜನೆಯ ಎರಡನೇ ಹಂತದ 260 ಕಿ.ಮೀ ಅಂದರೆ gravitation canal ನ T.G.Halli–Ramanagara feeder canal, Madhugiri feeder canal and Gowribidanur feeder canal ಕಾಮಗಾರಿಗಳನ್ನು ಪೂರ್ಣಗೊಳಿಸಿ, ಮುಂದಿನ ವರ್ಷದ ಮುಂಗಾರು ಹಂಗಾಮಿನಲ್ಲಿ ನೀರು ಪೂರೈಸಲು ಕ್ರಮ ಜರುಗಿಸಲು ಯೋಜನೆಯ ಉಳಿಕೆ ಕಾಮಗಾರಿಗಳನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲು ರೂ.3 ಸಾವಿರ ಕೋಟಿಗಳ ಅನುದಾನವನ್ನು ನಮ್ಮ ಸರ್ಕಾರ ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಒದಗಿಸಿದ್ದಾರೆ. ಹಾಗಾಗಿ ಕೇವಲ ಮಾತನಾಡುವ ಸರ್ಕಾರವಾಗಿರದೇ ಕೃತಿಯಿಂದ ಕೆಲಸ ಮಾಡುವ ಸರ್ಕಾರವಾಗಿದ್ದು, ಸರ್ಕಾರದ ವಿರುದ್ಧ ಯಾವುದೇ ಟೀಕೆಗಳಿಗೆ ಅವಕಾಶವಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ಮೇಕೆದಾಟು ವಿಚಾರವಾಗಿ ಹೇಳುವುದಾದರೆ, ಅದರ ಬಗ್ಗೆ ಚರ್ಚೆಯಾಗಿ, ಮೇಕೆದಾಟು 1 ಮತ್ತು ಮೇಕೆದಾಟು 2 ಹಂತಗಳು ಆಯಿತು. ಯಾವುದೇ ನೀರಾವರಿ ಯೋಜನೆಗಳ ಬಗ್ಗೆ ಯಾವುದೇ political party ಗಳು ಹೋರಾಟ ಮಾಡುವುದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಅಧಿಕಾರದಲ್ಲಿದ್ದ ಸಂದರ್ಭ ಹಾಗೂ ನೀರಾವರಿ ಸಚಿವರಾಗಿದ್ದಾಗ ಮಾಡದೇ ನಾವು ಅಧಿಕಾರಕ್ಕೆ ಬಂದ ಮೇಲೆ…..

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಮೇಕೆದಾಟು ವಿಚಾರವಾಗಿ ಅನೇಕರು ಸದನದ ಒಳಗೆ ಹಾಗೂ ಹೊರಗೆ ಪ್ರಸ್ತಾಪ ಮಾಡಿದ್ದಾರೆ. 6ನೇ ತಾರೀಖಿಗೆ ಭಾರತ ಸರ್ಕಾರದ ಜಲಶಕ್ತಿ ಮಂತ್ರಿಗಳಾದ ಶ್ರೀ ಗಜೇಂದ್ ಸಿಂಗ್ ಶೇಖಾವತ್ ಇಲ್ಲಿಗೆ ಬಂದಿದ್ದರು. ಅವರ ಜೊತೆ ನಾನು ಯುಕೆಪಿಯ ನಾರಾಯಣಪುರ್, ಭೀಮರಾಯನ ಗುಡಿಗೆ Upper Krishna Project tour ಮಾಡಿದ್ದೆನು. ಇಲ್ಲಿ ನನಗೆ ಗಂಟೆಗಟ್ಟಳೆ time ಕೊಟ್ಟಿದ್ದು, ಅವರು ಉಳಿದುಕೊಂಡ place ನಲ್ಲಿ ಹೋಗಿ ಮಾತನಾಡಿದ್ದೆನು. ನಮ್ಮ ಕೃಷ್ಣ ಬಗ್ಗೆ ಆಗಿರಬಹುದು, ಮಹದಾಯಿ ಬಗ್ಗೆ ಆಗಿರಬಹುದು ಅಥವಾ ಮೇಕೆದಾಟು ಯೋಜನೆ ಬಗ್ಗೆ ಆಗಿರಬಹುದು, ನವಿಲ Balancing Reservoir ಬಗ್ಗೆ ಸಹ ಮಾತನಾಡಿದ್ದೇನೆ. ನಾನು ಸೂಕ್ಷ್ಮವಾಗಿ ಸದನಕ್ಕೆ ಹೇಳಬಯಸುತ್ತೇನೆ. ಅನೇಕರು ಹೊರಗಡೆ ಪ್ರಸ್ತಾಪ ಮಾಡಿದ್ದೇನೆ. ಇದರ ಬಗ್ಗೆ press ನವರು ಕೇಳಿರುವುದರಿಂದ ಅವರು ಹೇಳಿದ್ದಾರೆ ಎಂದು ಬಂದಿತ್ತು. ಅದೇನೆಂದರೆ ತಮಿಳು ನಾಡು ಮತ್ತು ಕರ್ನಾಟಕದವರು ಪರಸ್ಪರ ಮಾತುಕತೆ ಮೂಲಕ ಇತ್ಯರ್ಥ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ಬಂದಿತ್ತು. ನಾನು ಹೇಳುವುದೇನೆಂದರೆ, ಈಗಾಗಲೇ ಅಂತರರಾಜ್ಯ ವ್ಯಾಜ್ಯಗಳಿರುವ ನೀರಾವರಿ ಸಮಸ್ಯೆಗಳಿಗೆ Tribunals award ಮಾಡಿರತಕ್ಕಂಥ ನೀರಿನ quantity ಬಗ್ಗೆ ಪುನಃ ಮಾತನಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಈಗ ಕೃಷ್ಣ ಹಂಚಿಕೆ ಆಗಿರಬಹುದು, ಮಹದಾಯಿ ನೀರಿನ ಹಂಚಿಕೆ ಆಗಿರಬಹುದು, ಕಾವೇರಿ ನದಿ ನೀರಿನ ಹಂಚಿಕೆ ಅಥವಾ ಮೇಕೆದಾಟು ನೀರಿನ ಹಂಚಿಕೆ ಆಗಿರಬಹುದು, ಹಂಚಿಕೆಯಾದ ನೀರಿನ ಬಗ್ಗೆ ಪುನರ್ ಚರ್ಚೆಯ ಅಗತ್ಯತೆ ಇಲ್ಲ. ಅದನ್ನು ನಮ್ಮ ಸರ್ಕಾರ ಮಾಡಲು ಸಿದ್ಧವಿಲ್ಲ. ಇಷ್ಟು ವಿಚಾರವನ್ನು ಸದನದ ಮೂಲಕ ಜನತೆಗೆ ಹೇಳಬಯಸುತ್ತೇನೆ.

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ಒಂದು ಉತ್ತಮ ಸಮಾಜದ ಮೂಲ ಘಟಕವು ಕುಟುಂಬವಾಗಿದ್ದು, ಕುಟುಂಬದ ಮೂಲ ವ್ಯಕ್ತಿ ತಾಯಿ ಮತ್ತು ಮಕ್ಕಳಾಗಿದ್ದಾರೆ. ಮಾನ್ಯ ಹಾಲಪ್ಪ ಆಚಾರ ರವರು ಮಹಿಳಾ, ಮಕ್ಕಳ, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಮಂತ್ರಿಗಳಾಗಿ ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ಯಾವ ವಲಯವನ್ನು ನಮ್ಮ ಸರ್ಕಾರವು ನಿರ್ಲಕ್ಷ್ಯ ಮಾಡಿಲ್ಲ. ಇಂತಹ budget ಕೊಡುವ ಸ್ಥಿತಿ ಬಗ್ಗೆ ಆಗಲೀ, ಒಂದು ರೀತಿ

ಎದೆಗುಂದುವಂತಹ ಸನ್ನಿವೇಶ ಇದ್ದಾಗಲೂ ಮಾನ್ಯ ಬೊಮ್ಮಾಯಿ ರವರ ಮುತ್ಸದ್ಧಿತನ ಹಾಗೂ ಅವರ ವಿದ್ಯಾರ್ಹತೆ ಇರಬಹುದು, ಕೇಂದ್ರದಲ್ಲಿ ಅವರ ಪ್ರಯತ್ನ ಅಥವಾ ಅವರ ಸಂಯಮದ ವ್ಯಕ್ತಿತ್ವದ ಕಾರಣಗಳು ಇರಬಹುದು, ಒಂದು political party ಯ ಶಿಸ್ತಿನ ಸಿಪಾಯಿ ಆಗಿದ್ದಾಗ್ಯೂ ಕೇಂದ್ರದಿಂದ ಬರಬೇಕಾದ ಹಣವನ್ನು ತರುವಾಗ ನಮ್ಮ ಮಂತ್ರಿಗಳು....... ಮಾನ್ಯ ಸಭಾಪತಿಯವರೇ, ಇದರಲ್ಲಿ ಎರಡು ಭಾಗಗಳಲ್ಲಿ action movie ಮತ್ತು art movie ಎಂದು ಇವೆ. ನನಗೆ result oriented Government ಇಷ್ಟ. ಅಧಿಕಾರ ಇದ್ದಾಗ ಮಾತನಾಡಿ action ಆಗದೇ ಇರುವುದಕ್ಕಿಂತ ಮಾತನಾಡದೇ ಆಗಬೇಕು. ಆಡದೇ ಮಾಡುವವನು ರೂಢಿಯೊಳಗೆ ಉತ್ತಮ ಎನ್ನುವಂತೆ ಶಕ್ತಿಯಿಂದ ಆಗದೇ ಇರುವುದನ್ನು ಯುಕ್ತಿಯಿಂದ ಮಾಡಬೇಕಾದಾಗ ಶಕ್ತಿಯ ಅವಶ್ಯಕತೆ ಇಲ್ಲ. ಏಕೆಂದರೆ ಇದು ಸೇವೆ ಮತ್ತು ಬದ್ಧತೆಯ ವಿಚಾರವಾಗಿದೆ. ಕರ್ನಾಟಕಕ್ಕೆ ಬರಬೇಕಾದ ಒಂದು ಪೈಸೆಯನ್ನು ಬಿಡುವ ಪ್ರಶ್ನೆ ಇಲ್ಲ. ನಮ್ಮ 25 ಸಂಸದರು ಏನು ಮಾಡುತ್ತಿದ್ದಾರೆ ಮಾಡುತ್ತಿದ್ದಾರೆ ಎಂದು ಕೂಗಾಡಿ ಎದುರುಗಡೆ ಬಂದು pose ಕೊಡುವುದರಿಂದ ಹಣ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಷ್ಟು ಬಾರಿ ದೆಹಲಿಗೆ ಹೋಗಿದ್ದಾರೆ ಮತ್ತು ಎಷ್ಟು ಬಾರಿ ಸಂಸದರ ಸಭೆ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೇಂದ್ರದ ಪ್ರತೀತಿ ಎನ್ನುವುದು ಜನತೆಯ ಮುಂದೆ ಇದೆ. ಪತ್ರಿಕಾ ಮಿತ್ರರು ಪ್ರತಿ ಸಂದರ್ಭದಲ್ಲಿ ಪ್ರಕಟಣೆ ಮಾಡಿದ್ದಾರೆ. ಅವರು ಕೆಲಸ ಮಾಡುವ ವ್ಯಕ್ತಿ. ಮಾನ್ಯ ಮೋದಿ ರವರು 25 ಜನ ಸಂಸದರನ್ನು ಕೊಟ್ಟಿರುವ ಕರ್ನಾಟಕವನ್ನು ಮರೆಯುವ ಪ್ರಶ್ನೆಯು ಉದ್ಭವಿಸುತ್ತದೆಯೇ? ನಾವು politicians ಆಗಿದ್ದೇವೆ. ನಾವು 2029 ನೇ ಇಸವಿವರೆಗೆ ಇನ್ನೊಂದು ಅವಧಿಗೆ ಅಧಿಕಾರವನ್ನು ಹಿಡಿಯಬೇಕು ಎಂದು ಹಗಲು ರಾತ್ರಿ ಕಷ್ಟಪಟ್ಟು, ಕೋಟ್ಯಾಂತರ ಕಾರ್ಯಕರ್ತರೊಡನೆ ಇದ್ದೇವೆ. ನಾವೆಲ್ಲರೂ ಪುಣ್ಯವಂತರು, ಇಲ್ಲಿಯವರೆಗೆ ಬಂದಿದ್ದೇವೆ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಎಷ್ಟು ಜನರುವುದಕ್ಕೆ ಸಾಧ್ಯ? ಒಂದು ward member ಆಗುವುದಕ್ಕೆ ಎಷ್ಟು ಜನರಿಗೆ ಸಾಧ್ಯ? ಅದು ಯಾವುದೇ political party ಆಗಿರಬಹುದು. ನಮ್ಮ party ಯಲ್ಲಿ ನಾವು ಸನ್ಯಾಸಿಗಳಲ್ಲ! ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದು ಕನಸಿನ ಕರ್ನಾಟಕವನ್ನು ಕಟ್ಟಬೇಕು. ಹಿಂದೆ ಮಾನ್ಯ ಸದಾನಂದ ಗೌಡರು ಇರಬಹುದು, ಶ್ರೀ ಜಗದೀಶ್ ಶೆಟ್ಟರ್ ರವರು ಇರಬಹುದು, ಮಾನ್ಯ ಯಡಿಯೂರಪ್ಪನವರು ಇರಬಹುದು ಅಥವಾ ಪ್ರಸ್ತುತ

ಬೊಮ್ಮಾಯಿ ರವರು ಇರಬಹುದು, ಮಾನ್ಯ ಈಶ್ವರಪ್ಪನವರು ಇರಬಹುದು, ಮಾನ್ಯ ಅಶೋಕ್ ರವರು ಇರಬಹುದು, ಶ್ರೀ ಅಶ್ವಥ್ ನಾರಾಯಣ್, ಮಾನ್ಯ ಸವದಿಯವರು ಸೇರಿದಂತೆ ಬಹಳ ಜನರಿಗೆ ಅವಕಾಶವನ್ನು ಕೊಟ್ಟಿದೆ. ಅನೇಕ ಸಚಿವರು ಅವರ ಇಲಾಖೆಗಳಲ್ಲಿ ಉತ್ತಮವಾದ ಕೆಲಸವನ್ನು ಮಾಡುತ್ತಿದ್ದಾರೆ. ಅದು ಕೋವಿಡ್ ಇರಬಹುದು ಅಥವಾ ಮತ್ತೊಂದು ಇರಬಹುದು. ಒಂದು ದಿವಸ ತೆರಿಗೆ ಸಂಗ್ರಹಣೆಯಲ್ಲಿ ಮಾನ್ಯ ಗೋಪಾಲಯ್ಯನವರು task ಅನ್ನು fix ಮಾಡಿರುವ ಬಗ್ಗೆ ಹೇಳುತ್ತಿದ್ದರು. ಮಾನ್ಯ ಮುಖ್ಯಮಂತ್ರಿಗಳು ಸ್ನೇಹಿಜೀವಿಯಾಗಿದ್ದರೂ ಇಲಾಖೆಗಳ ವಿಚಾರ ಬಂದಾಗ ಬಿಗಿ ಆಡಳಿತವನ್ನು ಮಾಡುವ ವ್ಯಕ್ತಿಯಾಗಿದ್ದಾರೆ. ಯೋಜನಾ ಇಲಾಖೆಯ ಮಾನ್ಯ ಶಾಲಿನಿ ರಜನೀಶ್ ರವರು ಕೆಲವು meeting ಗಳಲ್ಲಿ ಹಣವನ್ನು ಉಪಯೋಗ ಮಾಡಬೇಕು, ಅದು ಭೂಮಿ ಕೊಡುವ ಕಾರ್ಯಕ್ರಮ ಇರಬಹುದು ಅಥವಾ ಮತ್ತೊಂದು ಇರಬಹುದು, ಇಲ್ಲದಿದ್ದರೆ ತಕ್ಷಣ ಯಾವ ಯಾವ ಇಲಾಖೆಗಳಲ್ಲಿ ಏನೇನು ಸಮಸ್ಯೆಗಳು ಇವೆ ಎಂದು DC ಗಳನ್ನು ಕರೆದು ಉತ್ತಮವಾದ ಅಧಿಕಾರ ಚಲಾಯಿಸುತ್ತಾರೆ. ಕೇವಲ 6 ತಿಂಗಳು ಆಗಿರುವುದರಿಂದ ಸಮಯ ಕೊಡಬೇಕಲ್ಲವೇ ಮತ್ತ್ ವಿಶ್ವಾಸ ಇಡಬೇಕಲ್ಲವೇ? ಮೀನಿಗೆ ಈಜುವುದನ್ನು ಹೇಳಕೊಡಬೇಕಾಗಿಲ್ಲ! ಮಾನ್ಯ ಬೊಮ್ಮಾಯಿ ರವರು ಮಾನ್ಯ ದೇವೇಗೌಡರು ಇರಬಹುದು, ಶ್ರೀ ಜೆ.ಹೆಚ್. ಪಟೇಲ್ ರವರು ಇರಬಹುದು ಅಥವಾ ಮಾನ್ಯ ಯಡಿಯೂರಪ್ಪನವರು ಇರಬಹುದು ಅಥವಾ ಶ್ರೀ ಎಸ್.ಎಂ. ಕೃಷ್ಣಾ ರವರು ಅಥವ ರಾಮಕೃಷ್ಣ ಹೆಗ್ಗಡೆ ರವರು ಇರಬಹುದು, ಇಂತಹ ಅನೇಕ ಮುತ್ಸದ್ಧಿಗಳ ಆಡಳಿತವನ್ನು ನೋಡಿ ಬೆಳೆದವರು.

**ಶ್ರೀ ಸಿ.ಎಸ್ ಮಂಜೇಗೌಡ:-** ಮಾನ್ಯ ದೇವೇಗೌಡರ ಹೆಸರನ್ನು ಹೇಳಿ.

**ಡಾ: ತೇಜಸ್ವಿನಿಗೌಡ:-** ನಾನು ಅವರ ಹೆಸರನ್ನೇ first ಹೇಳಿದ್ದೇನೆ, ಮಾನ್ಯ ಸದಸ್ಯರು ಕೇಳಿಸಿಕೊಳ್ಳಲಿಲ್ಲ ಎಂದನಿಸುತ್ತದೆ. ಅವರ ಹೆಸರನ್ನೇ first ಹೇಳಿದ್ದೇನೆ. ಮಾನ್ಯ ಸದಸ್ಯರು ಆ ರೀತಿ ತಪ್ಪು ಮಾಡಬಾರದು. ಅವರು ದೇಶದ ನಾಯಕರು. ತಪ್ಪಾಗಿ ತಿಳಿಯಬಾರದು.

**ಶ್ರೀ ಆರ್.ಬಿ. ತಿಮ್ಮಾಪೂರ:-** ಅವರು next ಮಾತನಾಡುವ mood ನಲ್ಲಿ ಇದ್ದರು.

**ಡಾ: ತೇಜಸ್ವಿನಿಗೌಡ:–** ಹಾಗಾಗಿ ಅಂತಹ ಸಣ್ಣತನವನ್ನು ನಾನು ಮಾಡುವುದಿಲ್ಲ, ಅವರು ದೇಶದ ಪ್ರಧಾನಿಯಾಗಿದ್ದವರಾಗಿದ್ದಾರೆ. ಅವರು ಮಾಡುತ್ತಾರೆ. ಅವರು ಮಾನ್ಯ ಮೋದಿ ರವರ ಬಗ್ಗೆ ಮಾಡುತ್ತಾರೆ. ಅವರು ಉಲ್ಲೇಖ ಮಾಡಿದ್ದರಿಂದ ಹೇಳುತ್ತಿದ್ದೇನೆ.

(ಗೊಂದಲ)

**ಶ್ರೀ ಸಿ.ಎಸ್. ಮಂಜೇಗೌಡ:–** ನಾವು ಯಾವಾಗಲೂ ನ್ಯಾಯದ ಪರವಾಗಿ ಇರುತ್ತೇವೆ, ನುಡಿದಂತೆ ನಡೆಯುವವರ ಬಗ್ಗೆ ಖುಷಿ ಪಡುತ್ತೇವೆ.

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ತಾವು ತಮ್ಮ ಪೀಠದಿಂದ ಕೊಟ್ಟ ಸೂಚನೆಯನ್ನು ನಾನು ಗೌರವಿಸಬೇಕು, ಬೇರೆಯವರು ಮಾತನಾಡುವವರಿದ್ದಾರೆ. ಉಕ್ರೇನ್‌ನಲ್ಲಿ ನಮ್ಮ ಮಕ್ಕಳು ವಿದ್ಯಾಭ್ಯಾಸಕ್ಕೆ ಹೋಗಿ ತೊಂದರೆ ಸಿಕ್ಕಿ ಹಾಕಿಕೊಂಡರು.

(ಮುಂದು)

(252) 10.03.2022 5.10 hv.ak

**ಡಾ॥ ತೇಜಸ್ವಿನಿಗೌಡ(ಮುಂದುವರಿದದ್ದು):–**

ಸನ್ಮಾನ್ಯ ಸಭಾಪತಿಯವರೇ, "ಏನೂ ಆಗುವುದಿಲ್ಲ, ಯಾವಾಗಲೂ ಇಲ್ಲಿ ಯುದ್ಧ ನಡೆಯುತ್ತಿರುತ್ತದೆ" ಎಂದು ಮಧ್ಯವರ್ತಿಗಳು ನಮ್ಮ ಮಕ್ಕಳನ್ನು ದಾರಿ ತಪ್ಪಿಸಿದರು. ನಮ್ಮ ಭಾರತ ಸರ್ಕಾರ 3–4 ತಿಂಗಳುಗಳ ಮೊದಲೇ ಒಂದು ಸೂಚನೆಯನ್ನು ನೀಡಿತ್ತು. "ಉಕ್ರೇನ್ ಮತ್ತು ರಷ್ಯಾ ನಡುವೆ ಅಶಾಂತಿಯುತ ವಾತಾವರಣ ಏರ್ಪಡುವ ಸಂಭವವಿದೆ ನಮ್ಮ ವಿದ್ಯಾರ್ಥಿಗಳೆಲ್ಲ ವಾಪಸ್ಸು ಬನ್ನಿ" ಎನ್ನುವ ಕರೆಯನ್ನು ನೀಡಿತ್ತು. ಭಾರತ ದೇಶವನ್ನು ಬಿಟ್ಟು ಜಗತ್ತಿನ ಬೇರೆ ಯಾವುದಾದರೊಂದು ದೇಶ ಯುದ್ಧ ಭೂಮಿಗೆ ತೆರಳಿ, ಸರ್ಕಾರದ ವೆಚ್ಚದಲ್ಲಿ ತನ್ನ ನಾಗರಿಕರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆದುಕೊಂಡು ಬಂದು ಅವರುಗಳ ಮನೆಗೆ ತಲುಪಿಸಿದ್ದರೆ ನಾನು ಅವರಿಗೊಂದು ಸೆಲ್ಯೂಟ್

ನೀಡುತ್ತಿದ್ದೆ. ಮಾನ್ಯ ನರೇಂದ್ರ ಮೋದಿಯವರ ನೇತೃತ್ವದ ನಮ್ಮ ಭಾರತದ ಸರ್ಕಾರ ಮತ್ತು ಮಾನ್ಯ ಬಸವರಾಜ ಬೊಮ್ಮಾಯಿಯವರ ಸರ್ಕಾರ ಆ ಕೆಲಸವನ್ನು ಮಾಡಿದೆ.

**ಶ್ರೀ ಯು.ಬಿ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗ, ಕುವೈತ್‌ನಿಂದ ಒಂದು ಲಕ್ಷದ ಎಪ್ಪತ್ತು ಸಾವಿರ ಜನರನ್ನು ತಾಯ್ನಾಡಿಗೆ ಕರೆದುಕೊಂಡು ಬಂದಿದ್ದೆವು. ಒಂದು ದಿನಕ್ಕೂ ನಾವು ಈ ವಿಚಾರವನ್ನು ಪ್ರೆಸ್ ಮುಂದೆ ಹೇಳಿರಲಿಲ್ಲ.

**ಡಾ॥ತೇಜಸ್ವಿನಿ ಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ನಾನು ಯೀಲ್ಡ್ ಆಗಿಲ್ಲ. "ಇದು ಮಾತನಾಡದೇ ಕೆಲಸ ಮಾಡುವ ಸರ್ಕಾರ" ಎಂದು ನಮ್ಮ ವೈದ್ಯಕೀಯ ಶಿಕ್ಷಣ ಸಚಿವರು ಹೇಳಿದ್ದಾರೆ. ನಮ್ಮ ನಾಡಿನ ವಿದ್ಯಾರ್ಥಿ ನವೀನ್ ಉಕ್ರೇನ್‌ನಲ್ಲಿ ಮೃತಪಟ್ಟಾಗ ಆತನ ದೇಹವನ್ನು ಅಲ್ಲಿಂದ ತರಬೇಕೆಂದು ರಾಜತಾಂತ್ರಿಕ ಶಕ್ತಿಯನ್ನು ಬಳಸಲಾಗಿತ್ತು. ಅಲಿಪ್ತ ರಾಷ್ಟ್ರನೀತಿಯ ಮೂಲಕ ಪ್ರಯತ್ನಿಸಲಾಯಿತು. ಆಲಿಪ್ತ ನೀತಿ ಎಂದಾಗ, ಪಂಡಿತ್ ಜವಹರಲಾಲ್ ನೆಹರು, ಶ್ರೀಮತಿ ಇಂದಿರಾಗಾಂಧಿ ಮತ್ತು ಮಾನ್ಯ ರಾಜೀವ್‌ಗಾಂಧಿಯವರ ಕೊಡುಗೆಯನ್ನು ಮರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ದೇಶದ ಪರಂಪರೆಯನ್ನು ಅಗೌರವಿಸುವುದಕ್ಕೆ ನಾನು ಹೋಗುವುದಿಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ಮೊದಲು 'Look West Policy' ಎನ್ನುವುದು ಇತ್ತು. ಈಗ ನಾವು ಅದನ್ನು 'Look East Policy' ಯನ್ನಾಗಿ ಮಾರ್ಪಾಡು ಮಾಡಿಕೊಂಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಆಫ್ಘಾನಿಸ್ಥಾನದಲ್ಲಿ ಭಾರತ ತನ್ನ ಅಮೂಲ್ಯವಾಗಿರುವ ಹಣವನ್ನು ವಿನಿಯೋಗ ಮಾಡಿತ್ತು. ಅಲ್ಲಿನ ಜನರು ಭಾರತೀಯರನ್ನು ಹೃದಯದಲ್ಲಿಟ್ಟುಕೊಂಡು ಪ್ರೀತಿಸುತ್ತಾರೆ. ಅದು ನಮ್ಮ ಮಹಾಭಾರತದಲ್ಲಿ ಬರುವಂತಹ ಗಾಂಧಾರ ದೇಶ. ಅದು ನಮ್ಮ ಸಾಮ್ರಾಟ್ ಅಶೋಕನು ಆಳಿದಂತಹ ದೇಶವಾಗಿದೆ. ಅದನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಅದು ನಮ್ಮ ಭೂಮಿಯ

ಒಂದು ಭಾಗವಾಗಿದೆ. ಅಂತಹ ದೇಶದಲ್ಲಿ ತಾಲಿಬಾನ್‌ನಂತಹ ಭಯೋತ್ಪಾದಕರು ಅಧಿಕಾರವನ್ನು ನಡೆಸುತ್ತಿದ್ದರೂ ಸಹ ರಷ್ಯಾದಂತಹ ಬಲಾಢ್ಯ ದೇಶದೊಂದಿಗೆ ರಾಜತಾಂತ್ರಿಕ ಸಂಬಂಧವನ್ನು ಒಂದು ಪರಿಣಾಮಕಾರಿ ಅಸ್ತ್ರವನ್ನಾಗಿ ಬಳಸಿ ತಾಲಿಬಾನ್ ನಿಗ್ರಹ ಮಾಡಿ, ಭಾರತದ ಸಂಪತ್ತಿಗೆ ಯಾವುದೇ ರೀತಿಯ ಧಕ್ಕೆ ಬರದಂತೆ ನೋಡಿಕೊಂಡಿತ್ತು. ಜಗತ್ತಿನ ಎಲ್ಲ ವಿಚಾರಗಳಲ್ಲಿ ಭಾರತ ದೇಶ ತನ್ನ ಧ್ವನಿ ಸೇರಿಸುತ್ತಿದೆ. ಮುಂದೊಂದು ದಿನ ಭಾರತ ದೇಶ "ಜಗತ್ ವಂದೇ ಭಾರತ" ಎನ್ನುವ ರೀತಿಯಲ್ಲಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಯುದ್ಧ ಭೂಮಿ ಇರಲಿ, ಶಾಂತಿ ಭೂಮಿ ಇರಲಿ; ಯಾವುದೇ ವಿಚಾರವಾಗಿರಲಿ, ಉತ್ತಮ ರೀತಿಯಲ್ಲಿ ಕೆಲಸ ಮಾಡಿದೆ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದ ಬಗ್ಗೆ "ಜಯ ಭಾರತ ಜನನಿಯ ತನುಜಾತೆ; ಜಯಹೇ ಕರ್ನಾಟಕ ಮಾತೇ" ಎಂದು ರಾಷ್ಟ್ರ ಕವಿ ಕು.ವೆಂ.ಪು.ರವರು ಹೇಳಿದ್ದಾರೆ. ಆ ನಿಟ್ಟಿನಲ್ಲಿ ಸಮಗ್ರ ಭಾರತದ ನಿರ್ಮಾಣಕ್ಕೆ ಕರ್ನಾಟಕ ರಾಜ್ಯದ ಯೋಗದಾನ ಬಹಳಷ್ಟಿದೆ. ಅದೇ ರೀತಿಯಲ್ಲಿ ಭಾರತ ಸರ್ಕಾರ ಸಹ ಕರ್ನಾಟಕ ರಾಜ್ಯದ ಸಮಗ್ರ ಅಭಿವೃದ್ಧಿಯಲ್ಲಿ ಯಾವುದೇ ರೀತಿಯ ತಾರತಮ್ಯವನ್ನು ಮಾಡದೇ, ಹೆಚ್ಚಿನ ಅಂತಃಕರಣದಿಂದ ನಮ್ಮ ರಾಜ್ಯ ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳನ್ನು ಕಾಣುತ್ತಿದೆ. ಸಂಕಷ್ಟ ಕಾಲದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ಅತ್ಯುತ್ತಮವಾಗಿರುವ ಆಯವ್ಯಯವನ್ನು ಮಂಡಿಸಿದ್ದಾರೆ. ಈ ಆಯವ್ಯಯವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡದೇ ಕೃತಿಯಲ್ಲಿ ತೋರಿಸುತ್ತಾರೆ. ಮತ್ತೊಮ್ಮೆ ಭಾರತೀಯ ಜನತಾ ಪಕ್ಷ 2023ರಲ್ಲಿ ಆತ್ಮವಿಶ್ವಾಸದಿಂದ ಮರುಕಳಿಸಿ ಬರುವುದಕ್ಕೆ ಈ ಆಯವ್ಯಯ ಸಹಕಾರಿಯಾಗಿದೆಯೆಂದು ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಸಿ.ಎನ್.ಮಂಜೇಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಆಯವ್ಯಯದ ಮೇಲೆ ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಾ, ನನ್ನ ಮಾತುಗಳನ್ನು ಪ್ರಾರಂಭಿಸುತ್ತಿದ್ದೇನೆ. ಮಾನ್ಯ ಸದಸ್ಯರಾದ ಡಾ॥ತೇಜಸ್ವಿನಿಗೌಡರು ಏನೇನು ಹೇಳಿದ್ದಾರೆ,

ಅವರ ಆಶಯಗಳು ಏನಿವೆ ಅವೆಲ್ಲವೂ ಈಡೇರಲಿಯೆಂದು ತಾಯಿ ಚಾಮುಂಡೇಶ್ವರಿಯಲ್ಲಿ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ.

ಸನ್ಮಾನ್ಯ ಸಭಾಪತಿಯವರೇ, ನಮ್ಮೆಲ್ಲರಿಗೂ ಅನ್ನ ನೀಡುವಂತಹ ಅನ್ನದಾತನಿಗೆ ಈ ಸರ್ಕಾರ ಯಂತ್ರೋಪಕರಣಗಳ ನಿರ್ವಹಣೆಗಾಗಿ ಒಂದು ವರ್ಷಕ್ಕೆ ಕೇವಲ 100 ರೂಪಾಯಿಗಳನ್ನು ನೀಡಿದೆ. ಇದು ಸಾಕಾಗುವುದಿಲ್ಲ, ಇದರ ಬದಲಿಗೆ 5000 ರೂಪಾಯಿಗಳನ್ನಾದರೂ ರೈತರ ಅಕೌಂಟ್‌ಗೆ ಹಾಕಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಒಂದು ವರ್ಷಕ್ಕೆ ಮೂರು ಎಕರೆ ಜಮೀನು ಇರುವಂತಹ ರೈತರಿಗೆ ಒಂದು ಎಕರೆಗೆ 250 ರೂಪಾಯಿಗಳಂತೆ ಡೀಸೆಲ್ ವೆಚ್ಚವೆಂದು ಕೊಡಲಾಗುತ್ತದೆಂದು ಘೋಷಣೆ ಮಾಡಿದ್ದಾರೆ. ಇದು ಯಾವುದಕ್ಕೂ ಸಾಕಾಗುವುದಿಲ್ಲ. ಕನಿಷ್ಠ 5000 ರೂಪಾಯಿಗಳನ್ನಾದರೂ ಅವರಿಗೆ ಕೊಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಟ್ರಾಕ್ಟರ್ ಅನ್ನು ಸ್ಟಾರ್ಟ್ ಮಾಡಿ ಆಫ್ ಮಾಡಿದರೆ ಅರ್ಧ ಲೀಟರ್ ಡೀಸೆಲ್ ಖರ್ಚಾಗುತ್ತದೆ. ಸರ್ಕಾರ ಘೋಷಣೆ ಮಾಡಿರುವ ಪ್ರಮಾಣದಿಂದ ರೈತರಿಗೆ ನ್ಯಾಯ ಒದಗಿಸಿದಂತಾಗಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಸನ್ಮಾನ್ಯ ಸಭಾಪತಿಯವರೇ, ತೋಟಗಾರಿಕಾ ಇಲಾಖೆಯ ಬಗ್ಗೆ ಮಾತನಾಡಬೇಕಾದರೆ, ......

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಉಲ್ಲೇಖ ಮಾಡುತ್ತಿರುವಂತೆ ಡೀಸೆಲ್‌ಗಾಗಿ ಒಂದು ಎಕರೆಗೆ 250 ರೂಪಾಯಿಗಳಂತೆ 500 ಕೋಟಿ ರೂಪಾಯಿಗಳನ್ನು ಸರ್ಕಾರ ಮೀಸಲಿಟ್ಟಿದೆ.

**ಶ್ರೀ ಸಿ.ಎನ್.ಮಂಜೇಗೌಡ:-** ಸನ್ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗಿಲ್ಲ. ಇದು ಈ ಸರ್ಕಾರ ಈ ರಾಜ್ಯದ ಅನ್ನದಾತರಿಗೆ ನೀಡುತ್ತಿರುವ ಉಡುಗೊರೆಯಾಗಿದೆ. ಶ್ರೀಮತಿ ತೇಜಸ್ವಿನಿಗೌಡ ಅವರು ಮಾತನಾಡುತ್ತಿದ್ದ ಸಂದರ್ಭದಲ್ಲಿ "ಜೈ ಭಾರತ್" ಎಂದು ಹೇಳುತ್ತಿದ್ದರು. "ಜೈ ಜವಾನ್; ಜೈ ಕಿಸಾನ್" ಎಂದು ಹೇಳುತ್ತಾರೆ. ಇವರು ಕಿಸಾನ್‌ಗೆ ಏನು ಕೊಟ್ಟಿದ್ದಾರೆ, ಜವಾನ್‌ಗೆ ಏನು ಕೊಟ್ಟಿದ್ದಾರೆನ್ನುವುದು ನನ್ನ ಪ್ರಶ್ನೆಯಾಗಿದೆ. ಈ ಸರ್ಕಾರ ಯಾರಾದರೊಬ್ಬ ಸೈನಿಕನಿಗೆ Stamp Duty ಯಲ್ಲಿ ರಿಯಾಯಿತಿ ಕೊಟ್ಟಿದೆಯೇ?

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಸನ್ಮಾನ್ಯ ಸಭಾಪತಿಯವರೇ, ಸೈನಿಕರು ಗೌರವಯುತವಾಗಿ ಜೀವನ ನಡೆಸುವಂತಹ ವಾತಾವರಣ ನಿರ್ಮಾಣ ಮಾಡಿಕೊಟ್ಟಿರುವುದು ನಮ್ಮ ಸರ್ಕಾರ.

**ಶ್ರೀ ಸಿ.ಎನ್.ಮಂಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಯಾವುದೇ ಒಂದು ದೇಶ, ಜವಾನ್ ಮತ್ತು ಕಿಸಾನ್‌ನ ಆಧಾರದ ಮೇಲೆ ನಿಂತಿದೆ. ಸೈನಿಕನಿಗೆ Stamp Duty ಯಲ್ಲಿ ರಿಯಾಯಿತಿ ಕೊಡಬೇಕೆನ್ನುವುದು ಕಾನೂನಿನಲ್ಲಿ ಇದೆ. ಈ ಸರ್ಕಾರ ಇಲ್ಲಿಯವರೆಗೆ ಯಾವ ಸೈನಿಕನಿಗೆ ರಿಯಾಯಿತಿ ಕೊಟ್ಟಿದೆ ಎನ್ನುವುದನ್ನು ಅವರು ತೋರಿಸಲಿ. ಯಾರಿಗೂ ರಿಯಾಯಿತಿ ಕೊಟ್ಟಿಲ್ಲ. ಸೈನಿಕರಿಗೆ ಸರ್ಕಾರಿ ಜಮೀನು ಕೊಡಬೇಕೆಂದು ಇದೆ. ಎಷ್ಟು ಜನ ಸೈನಿಕರಿಗೆ ಇವರು ಸರ್ಕಾರಿ ಜಮೀನು ಕೊಟ್ಟಿದ್ದಾರೆ ಎನ್ನುವುದನ್ನು ತೋರಿಸಲಿ.

**ಶ್ರೀ ಶಶೀಲ್ ಜಿ.ನಮೋಶಿ:–** ಸನ್ಮಾನ್ಯ ಸಭಾಪತಿಯವರೇ, ಸೈನಿಕರಿಗೆ ನಮ್ಮ ಸರ್ಕಾರ ಸರ್ಕಾರಿ ಜಮೀನನ್ನು ಹಂಚಿಕೆ ಮಾಡಿದೆ.

**ಶ್ರೀ ಸಿ.ಎನ್.ಮಂಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಕೊಟ್ಟಿದ್ದಾರೆ. ಆದರೆ, ಎಷ್ಟು ಜನರಿಗೆ ಕೊಟ್ಟಿದೆ? ಯಾವುದಾದರೊಂದು ದೇವಸ್ಥಾನಕ್ಕೆ, ಸಂಘ–ಸಂಸ್ಥೆಗಳಿಗೆ ಸರ್ಕಾರ ನೂರಾರು ಎಕರೆ ಜಮೀನನ್ನು ಕೊಡುತ್ತದೆ. ಆದರೆ, ದೇಶ ಕಾಯುವ ಮತ್ತು ಗಡಿಯಲ್ಲಿ ಕೆಲಸ ಮಾಡುವ ಸೈನಿಕರಿಗೆ 10 ಎಕರೆ ಜಮೀನನ್ನು ಕೊಡುವುದಕ್ಕೆ ಈ ಸರ್ಕಾರದಿಂದ ಸಾಧ್ಯವಾಗುವುದಿಲ್ಲ. ಗೃಹ ಮಂಡಲಿಗಳಲ್ಲಿ ಅಥವಾ ನಗರ ಪ್ರಾಧಿಕಾರದಿಂದ ಹಂಚಿಕೆ ಮಾಡಲಾಗುವ ನಿವೇಶನಗಳು ಮತ್ತು ಮನೆಗಳಲ್ಲಿ ಶೇಕಡಾ 5ರಷ್ಟನ್ನು ಮೀಸಲಿಡಬೇಕು, ಆ ಕಾರ್ಯವನ್ನು ಈ ಸರ್ಕಾರ ಮಾಡಿದೆಯೇ? ಗಡಿಯಲ್ಲಿ ಗಲಾಟೆಯಾಗಿ ಸೈನಿಕ ಸತ್ತರೇ, ಆತನ ಹೆಂಡತಿ ಮಕ್ಕಳಿಗೆ ಅದನ್ನು ನೀಡಬೇಕಾಗುತ್ತದೆ. ಈ ಸರ್ಕಾರ ಸೈನಿಕರ ಹೆಸರಿನಲ್ಲಿ ದೇಶವನ್ನಾಳುತ್ತಿದೆ. ಈ ಸರ್ಕಾರ ಸೈನಿಕರ ಬಲಿ ಪಡೆಯುತ್ತಿದೆ. ಆ ಸೈನಿಕರಿಗೆ ಇವರು ಏನು ಕೊಡುತ್ತಿದ್ದಾರೆ?

**ಡಾ|| ತೇಜಸ್ವಿನಿ ಗೌಡ:–** ಸನ್ಮಾನ್ಯ ಸಭಾಪತಿಯವರೇ, ಅಗತ್ಯ ಸೇವೆಗಳಡಿಯಲ್ಲಿ ಡಾಕ್ಟರ್‌ಗಳು, ಪೋಲೀಸ್‌ನವರು ಮತ್ತು ಶಿಕ್ಷಕರು ಸಹ ಬರುತ್ತಾರೆ. ಕೋವಿಡ್–19 ಸಂದರ್ಭದಲ್ಲಿ ಎಷ್ಟು ಜನ ಡಾಕ್ಟರ್‌ಗಳು ಸತ್ತಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಪುರಂದರ ದಾಸರ ಒಂದು ಕೀರ್ತನೆಯನ್ನು ನಾನು ಇಲ್ಲಿ ನೆನಪು ಮಾಡಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ:

**ನಿಂದಕರಿರಬೇಕಿರಬೇಕು**
**ಹಂದಿ ಇದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ;**

**ಅಂದಂದು ಮಾಡಿದ ಪಾಪವೆಂಬ ಮಲ**
**ತಿಂದು ಹೋಗುವರಯ್ಯ ನಿಂದಕರು**
**ವಂಧಿಸಿಸುತ್ತಿರುವ ಜನರೆಲ್ಲರೂ ನಮ್ಮ**
**ಪೊಂದಿಹ ಪುಣ್ಯವ ನೊಯ್ಯುವರಯ್ಯ;**

ನಾವು ಕನಕದಾಸರ ಮತ್ತು ಪುರಂದರದಾಸರ ಕೀರ್ತನೆಗಳನ್ನು ಹಾಡುತ್ತೇವೆ. ವಿರೋಧ ಪಕ್ಷದಲ್ಲಿರುವವರು ನಿಂದನೆಯನ್ನು ಮಾಡಿದರೆ, ಸರ್ಕಾರದಲ್ಲಿರುವವರು ಬುದ್ಧಿವಂತರಾಗುತ್ತಾರೆ. ಅವರಿಗೆ ಒಳ್ಳೆಯದಾಗುತ್ತದೆ. ಆದ್ದರಿಂದ ಆಡಳಿತ ಪಕ್ಷದವರು ಸ್ವಲ್ಪ ಸಮಾಧಾನದಿಂದ ಕುಳಿತುಕೊಂಡು ಅವರ ಮಾತುಗಳನ್ನು ಕೇಳಬೇಕು.

(ಮುಂದುವರಿದಿದೆ)

(253) 10.3.2022 5.20 ಪಿಕೆ:ಎಕೆ

**ಶ್ರೀ ಸಿ.ಎನ್.ಮಂಜೇಗೌಡ(ಮುಂದು)**

ಮಾನ್ಯ ಸಭಾಪತಿಗಳೆ, ಯಾವುದೇ ಕಾರ್ಯಕ್ರಮಗಳಾಗಲಿ, ಇಷ್ಟು ದಿವಸಗಳಲ್ಲಿ ಕಾಂಗ್ರೆಸ್‌ನವರು ಸರ್ಕಾರದ ವಿರೋಧವಾಗಿಯೂ ಮತ್ತು ಬಿಜೆಪಿಯವರು ಸರ್ಕಾರದ ಪರವಾಗಿ ಮಾತನಾಡುವುದನ್ನು ನೋಡಿದ್ದೇವೆ. ನಾನು ಸರ್ಕಾರದ ಪರ ಅಥವಾ ವಿರೋಧವಾಗಿ ಮಾತನಾಡುತ್ತಿಲ್ಲ. ನಾನು "ಸತ್ಯಮೇವ ಜಯತೇ" ಯ ಪರವಾಗಿ ಮಾತನಾಡ ಬಯಸುತ್ತೇನೆ. ಸತ್ಯ, ನ್ಯಾಯದ ಬಗ್ಗೆ ಮಾತನಾಡುತ್ತೇನೆ. ನಾನು ಬಜೆಟ್ ಮೇಲೆ ಮಾತನಾಡುತ್ತಿದ್ದೇನೆ, ಬಜೆಟ್ ಬಿಟ್ಟು ಹೊರಗೆ ಹೋಗುತ್ತಿಲ್ಲ. ಮೊನ್ನೆ ದಿವಸ ಬಿಟ್ ಕಾಯಿನ್ ಬಗ್ಗೆ, ಗಾಂಜಾ-ಅಫೀಮ್ ಬಗ್ಗೆ ಚರ್ಚೆ ಮಾಡಿದೆವು. ಅದನ್ನು ಯಾರು ನಿಯಂತ್ರಣ ಮಾಡಬೇಕು. ಪೊಲೀಸರು. ಈಗಿಲ್ಲಿ ಗೃಹ ಮಂತ್ರಿಗಳು ಕುಳಿತುಕೊಂಡಿದ್ದಾರೆ. ನಾವು ಏನೇ ಮಾತನಾಡಿದರೂ, ಆಂದ್ರ ಪ್ರದೇಶ, ತಮಿಳುನಾಡು, ಕೇರಳ ರಾಜ್ಯಗಳ ಉದಾಹರಣೆ ಕೊಟ್ಟು, ಅವರು ಮಾಡಿರುವ ಕಾರ್ಯಕ್ರಮಗಳನ್ನು ಕಾಪಿ ಮಾಡಿಯೇ ಕೊಡುವಂತಾಗಿದೆ. ಬೇರೆಯವರು ಮಾಡಿದ ಮೇಲೆ ಇವರು ಮಾಡುತ್ತಾರೆ. ಬೇರೆಯವರು ಧರಣಿ ಮಾಡಿದ ಮೇಲೆ ಕೆಲಸ ಮಾಡುತ್ತಾರೆ. ಅಂಗನವಾಡಿ ಶಿಕ್ಷಕರಿಗೆ ಸೌಲಭ್ಯಗಳನ್ನು ಕೊಡುವ ಸಂಬಂಧ ಕೇರಳದ ಉದಾಹರಣೆ ಕೊಡಲಾಗುತ್ತದೆ. ತಮಿಳುನಾಡಿನಲ್ಲಿ ಕರೆಂಟ್‌ಗೆ ಸಬ್ಸಿಡಿ ಕೊಡುತ್ತಿದ್ದಾರೆ; ನಮಗೂ ಕೂಡಿ ಎನ್ನುತ್ತಾರೆ. ಕೇರಳ, ಆಂಧ್ರಪ್ರದೇಶ, ತಮಿಳುನಾಡು ಮಧ್ಯಪ್ರದೇಶ ರಾಜ್ಯಗಳಲ್ಲಿ ಪೊಲೀಸ್ ಹೆಡ್ ಕಾನ್‌ಸ್ಟೇಬಲ್‌ಗಳಿಗೆ ಪಿ-ಕ್ಯಾಪ್ ಕೊಟ್ಟಿದ್ದಾರೆ. ನೀವೇಕೆ ಪಿ-ಕ್ಯಾಪ್ ಕೊಟ್ಟಿಲ್ಲ? ನೀವು ಪೊಲೀಸಿನವರ ದಕ್ಷತೆಯನ್ನು ಹೆಚ್ಚಿಸಿ. ಎಲ್ಲಾದರೂ ಒಂದು ಅನಾಹುತವಾದರೆ ಮೊದಲು ಪೊಲೀಸ್‌ನವರು ಹೋಗುತ್ತಾರೆ. ಪಿ-ಕ್ಯಾಪ್ ಬೆಲೆ ರೂ.400 ಇರಬಹುದು. ಇವತ್ತು ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳ ಹಗರಣಗಳು ನಡೆಯುತ್ತವೆ. ಅದನ್ನು ಸರ್ಕಾರ ಮುಚ್ಚಿ ಹಾಕುತ್ತಿದೆ. ಅದರಲ್ಲಿ ಒಂದಿಷ್ಟು ಭಾಗವನ್ನು ಕೊಟ್ಟರೆ ಕರ್ನಾಟಕದ ಪೊಲೀಸರ ದಕ್ಷತೆ ಹೆಚ್ಚುತ್ತದೆ. ಆ ಕೆಲಸವನ್ನು ಸರ್ಕಾರ ಮಾಡಬೇಕು. ಈ ಬಜೆಟ್‌ನಲ್ಲಿ ಅದಕ್ಕೇನಾದರೂ ಒಂದು ಕಾರ್ಯಕ್ರಮವನ್ನು ಘೋಷಣೆ ಮಾಡಲಾಗಿದೆಯೇ?

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):-** ಸರ್ಕಾರಕ್ಕೆ ಕ್ಯಾಪ್ ಕೊಡಿಸುವ ಸಾಮರ್ಥ್ಯ ಇಲ್ಲವೆಂದಲ್ಲ.

**ಶ್ರೀ ಸಿ.ಎನ್.ಮಂಜೇಗೌಡ:-** ನಾನು ಸಾಮರ್ಥ್ಯದ ಬಗ್ಗೆ ಹೇಳುತ್ತಿಲ್ಲ. ಘೋಷಣೆ ಮಾಡಿದ್ದೀರಾ ಎಂದು ಕೇಳುತ್ತಿದ್ದೇನೆ.

**ಶ್ರೀ ಅರಗ ಜ್ಞಾನೇಂದ್ರ:-** ಮಾನ್ಯ ಸಭಾಪತಿಗಳೆ, ಅದನ್ನು ಬಜೆಟ್‌ನಲ್ಲಿ ಘೋಷಣೆ ಮಾಡಬೇಕು ಎಂದೇನಿಲ್ಲ. ಡಿಪಾರ್ಟ್‌ಮೆಂಟ್ ಹಣದಲ್ಲೇ ಕೊಡಿಸಬಹುದು. ಆ ಕ್ಯಾಪ್ ಕೊಡಿಸಬೇಕು ಎಂಬುದನ್ನು ಈಗ ತಾವು ನನ್ನ ಗಮನಕ್ಕೆ ತಂದಿದ್ದೀರಿ. ಆದರೆ, ಪೊಲೀಸರಲ್ಲೇ ಈ ಕುರಿತು ಚರ್ಚೆ ನಡೆಯುತ್ತಿದೆ. ಈಗಿರುವ ಕ್ಯಾಪ್‌ನಿಂದ ಅವರ ಮುಖಕ್ಕೆ ಮತ್ತು ಕುತ್ತಿಗೆ ಭಾಗಕ್ಕೆ ನೆರಳು ಕೊಡುತ್ತಿದೆ. ಅವರು ಬಿಸಿಲು-ಮಳೆಯಲ್ಲಿ ನಿಲ್ಲಬೇಕಾಗುತ್ತದೆ. ಹಾಗಾಗಿ ಈಗಿರುವ ಕ್ಯಾಪ್ ಸರಿಯೋ ಅಥವಾ ನೀವು ಪ್ರಸ್ತಾಪಿಸುತ್ತಿರುವ ಕ್ಯಾಪ್ ಸರಿಯೋ ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆ. ರೂ 400 ಕೊಟ್ಟು ಕ್ಯಾಪ್ ಕೊಡಿಸುವುದಕ್ಕೆ ಆಗುವುದಿಲ್ಲ ಎನ್ನುವಂಥದ್ದಲ್ಲ. ನೀವು ಈ ವಿಷಯವನ್ನು ನಮ್ಮ ಗಮನಕ್ಕೆ ತಂದಿದ್ದೀರಿ; ನಾನು ಈ ಕುರಿತು ಚರ್ಚೆ ಮಾಡುತ್ತೇನೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಗಳೆ, ಬಜೆಟ್‌ನಲ್ಲಿ ಬೆಂಗಳೂರಿನ ಅಭಿವೃದ್ಧಿಗೆಂದು ರೂ. 10000 ಕೋಟಿಗಳನ್ನು ಘೋಷಣೆ ಮಾಡಿದ್ದೀರಿ. ಮೈಸೂರಿಗೆ ಏನು ಮಾಡಿದ್ದೀರಿ? ಮೈಸೂರು ಈ ರಾಷ್ಟ್ರದ, ಪ್ರಪಂಚದ ಪ್ರವಾಸಿ ತಾಣ ಎಂದು ಹೆಸರು ವಾಸಿಯಾಗಿದೆ; ಸಾಂಸ್ಕೃತಿಕ ನಗರ ಎಂದು ಕರೆಸಿಕೊಳ್ಳುತ್ತದೆ. ಆದರೆ ಅಲ್ಲಿನ ಏರ್‌ಪೋರ್ಟನ್ನು ನೀವು ಅಭಿವೃದ್ಧಿಪಡಿಸಿಲ್ಲ. ಅಲ್ಲಿ ದಸರಾ ನಡೆಯುತ್ತದೆ. ಅದು ವಿಶ್ವವಿಖ್ಯಾತವಾಗಿದ್ದು, ಅದಕ್ಕೆಂದು ನೀವು ಒಂದು ಪ್ರಾಧಿಕಾರ ರಚನೆ ಮಾಡಿಲ್ಲ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, ಸದರಿ ಪ್ರಾಧಿಕಾರವನ್ನು ಘೋಷಣೆ ಮಾಡುತ್ತೇವೆ, ರೂ.100 ಕೋಟಿ ಇಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಆದರೆ ನಂತರ ಬಂದವರು ಇದನ್ನು ಅಭಿವೃದ್ಧಿ ಮಾಡಲಿಲ್ಲ. ಇದು ಬಜೆಟ್ಟೇ? **( ಈ ಹಂತದಲ್ಲಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠಾಸೀನರಾದರು) ಮಾನ್ಯ ಸಭಾಪತಿಗಳೆ,** ಬೆಂಗಳೂರಿಗೆ ರೂ. 10000 ಕೋಟಿ ಕೊಟ್ಟಿದ್ದಾರೆ. ಮೈಸೂರಿಗೆ ನೀವೇಕೆ ದುಡ್ಡು

ಕೊಟ್ಟಿಲ್ಲ? ಸದನಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು ಕುಳಿತುಕೊಂಡಿದ್ದಾರೆ. ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ತುಂಬಾ ಹತ್ತಿರದಲ್ಲಿದ್ದಾರೆ. ಒಳ್ಳೆಯ ಖಾತೆಯ ಸಚಿವರಿದ್ದಾರೆ. ಅವರು ಈ ಕೆಲಸವನ್ನು ಮಾಡಿಸಬಹುದಾಗಿತ್ತು. ಏಕೆ ಮಾಡಿಸುತ್ತಿಲ್ಲ ಎನ್ನುವುದು ನನಗೆ ಗೊತ್ತಾಗುತ್ತಿಲ್ಲ. ದಸರಾ ಪ್ರಾಧಿಕಾರ ರಚನೆ ಆಗಬೇಕಿದೆ.

ಮಾನ್ಯ ಸಭಾಪತಿಗಳೆ, ಬಜೆಟ್‌ನಲ್ಲಿ, ಬೆಂಗಳೂರಿಗೆ 50 ವಿದ್ಯುತ್‌ಚಾಲಿತ ಬಸ್ಸುಗಳನ್ನು ಬಿಡಲು ಹಣ ಇಟ್ಟಿದ್ದೀರಿ. ಆದರೆ ಮೈಸೂರಿನಲ್ಲಿ 5 ಬಸ್ಸುಗಳನ್ನಾದರೂ ಬಿಡಬೇಕು ಅಲ್ಲವೇ? ಕರ್ನಾಟಕ ರಾಜ್ಯದಲ್ಲಿ ಮೈಸೂರೂ ಕೂಡ ಒಂದು ಕೇಂದ್ರ ಸ್ಥಾನವಾಗಿದೆ. ಅದು ಪ್ರವಾಸಿ ತಾಣ. ಆ ಜಾಗಕ್ಕೆ 5 ಬಸ್ಸುಗಳನ್ನು ಬಿಡಬೇಕು ಎನ್ನುವುದು ನಮ್ಮ ಮನವಿಯಾಗಿದೆ.

ಮಾನ್ಯ ಸಭಾಪತಿಗಳೆ, ನಮ್ಮ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ-ಮಾನ ಸಿಕ್ಕಿ 13 ವರ್ಷಗಳಾಗಿವೆ. 13 ವರ್ಷ ಕಳೆದರೂ ಏನೂ ಪ್ರಯೋಜನವಾಗಿಲ್ಲ. ಕಾರಣ ಶಾಸ್ತ್ರೀಯ ಕೇಂದ್ರಕ್ಕೆ ಸ್ವಾಯತ್ತತೆ ಇಲ್ಲ.

**ಸಭಾಪತಿಯವರು:-** ಸಭಾನಾಯಕರು ಇಲ್ಲದ ಕಾರಣ, ಸದನದಲ್ಲಿರುವ ಯಾರಾದರೂ ಒಬ್ಬ ಸಚಿವರು ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನೋಟ್ ಮಾಡಿಕೊಳ್ಳಿ. ಸಂಬಂಧಪಟ್ಟವರಿಗೆ ಹೇಳಲು ಅನುಕೂಲವಾಗುತ್ತದೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಗಳೆ, ಮೈಸೂರಿನಲ್ಲಿ ಸ್ಥಳವನ್ನು ಗುರುತಿಸಿದ್ದೀರಿ. ಮೈಸೂರಿನಲ್ಲೇ ಈ ಕೇಂದ್ರವನ್ನು ತೆರೆಯಬೇಕು. ಸ್ವಾಯತ್ತತೆಯನ್ನು ದೊರಕಿಸಿ ಕೊಡಲು ಈ ಸರ್ಕಾರ ದೃಢ ನಿರ್ಧಾರವನ್ನು ತೆಗೆದುಕೊಳ್ಳಬೇಕು.

ಮಾನ್ಯ ಸಭಾಪತಿಗಳೆ, ಸ್ಥಳೀಯ ಸಂಸ್ಥೆಗಳೇನಿವೆಯೋ ಅಲ್ಲಿ ಮುಂಚೆ 11(ಬಿ) ಖಾತೆಗಳಿತ್ತು. 11(ಬಿ) ಖಾತೆ ಇದ್ದಂತಹ ಜಾಗದಲ್ಲಿ ಇವತ್ತು ಪಟ್ಟಣ ಪಂಚಾಯಿತಿಗಳಾಗಿ, ಪುರಸಭೆಗಳಾಗಿ ಮಾಡಿದರು. ನಾನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಿಗೆ ತಮ್ಮ ಮೂಲಕ ಕೆಲವು ವಿಷಯಗಳನ್ನು ತಿಳಿಸಬಯಸುತ್ತೇನೆ. ಜನರು ಕಷ್ಟದಲ್ಲಿದ್ದಾರೆ. ನಾವು ಎಸಿ ಯಲ್ಲಿ ಕುಳಿತುಕೊಂಡು ಭಾಷಣ

ಮಾಡುತ್ತಿದ್ದೇವೆ, ಮಾತನಾಡುತ್ತಿದ್ದೇವೆ. ಅವರು ಹೊರಗಡೆಯಿಂದ ನೋಡುತ್ತಿದ್ದಾರೆ. 11(ಬಿ)ಖಾತಾಗಳು ಪಟ್ಟಣ ಪಂಚಾಯಿತಿ ಬಂದ ಮೇಲೆ ಹೊರಟು ಹೋಯಿತು. ಫಾರ್ಮ್ ನಂಬರ್ –೩ ಕೊಡಬೇಕು. ಈಗ ಯಾವ ಪಂಚಾಯಿತಿಗಳಲ್ಲೂ ಫಾರ್ಮ್ ನಂಬರ್ –೩ ಕೊಡುತ್ತಿಲ್ಲ. ಫಾರ್ಮ್ ನಂಬರ್ –೩ ಕೊಡದೇ ಇರುವ ಕಾರಣದಿಂದ ಅವರ ಮಕ್ಕಳ ಮದುವೆಗೆ ತಮ್ಮ ಆಸ್ತಿಯನ್ನು ಮಾರುವುದಕ್ಕೂ ಆಗುತ್ತಿಲ್ಲ, ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಳ್ಳುವುದಕ್ಕೂ ಆಗುತ್ತಿಲ್ಲ ಅಥವಾ ಯಾವುದಾದರೂ ಸ್ಟೇಷನ್‌ಗೋ ಅಥವಾ ಕೋರ್ಟ್‌ನಿಂದ ಬೇಲ್ ಕೊಡಿಸುವುದಕ್ಕೂ ಆಗುತ್ತಿಲ್ಲ. ಅದು ನಿಸ್ಸಹಾಯಕವಾಗಿ ಕುಳಿತಿದೆ. ಜನರು ಬಹಳ ಕಷ್ಟದಲ್ಲಿದ್ದಾರೆ. ಅದರ ಮುಖಾಂತರ ಸರ್ಕಾರಕ್ಕೆ ಸ್ಟ್ಯಾಂಪ್ ಡ್ಯೂಟಿ ಬರುತ್ತಿಲ್ಲ. ಮಾನ್ಯ ರಮೇಶ್‌ರವರು ಮಾತನಾಡಿ ಹೇಳಿದ ಹಾಗೆ, ಅಕ್ರಮ–ಸಕ್ರಮ ಮಾಡಿದ ಪಕ್ಷದಲ್ಲಿ ನೀವು ಯಾವುದೇ ರೀತಿಯ ಸಾಲ ಪಡೆಯುವ ಅವಶ್ಯಕತೆ ಬರುವುದೇ ಇಲ್ಲ. ನಮ್ಮಲ್ಲೇ ದುಡ್ಡಿದೆ. ಆದರೆ, ಅಧಿಕಾರಿಗಳ ಧೋರಣೆಯೋ ಅಥವಾ ಮೂರನೇ ಮಹಡಿಯಿಂದ ಬರುವ ಆದೇಶಗಳ ಕಾಪಿಯೋ ಅಥವಾ ಮೂರನೇ ಮಹಡಿಯಲ್ಲಿ ತೆಗೆದುಕೊಳ್ಳುವ ತೀರ್ಮಾನಗಳೋ ಗೊತ್ತಿಲ್ಲ. ಕರ್ನಾಟಕ ರಾಜ್ಯದ ಜನತೆಗೆ ಈ ಬಜೆಟ್‌ನಲ್ಲಿ ಯಾವುದೇ ರೀತಿಯಾದ ಅನುಕೂಲಗಳು ಕಂಡುಬರುತ್ತಿಲ್ಲ. ನಾನು ಈ ಸಮಯದಲ್ಲಿ ಮತ್ತೊಂದು ವಿಷಯ ಹೇಳುತ್ತೇನೆ. ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳನ್ನು ಸ್ವಾಯತ್ತತೆ ಅಡಿಯಲ್ಲಿ ತಂದು, ಆ ದೇವಾಲಯಗಳ ಆಡಳಿತ ಮಂಡಳಿಗೆ ಅಧಿಕಾರ ಪ್ರತ್ಯೋಜಿಸಲು ಬಜೆಟ್‌ನಲ್ಲಿ ಹೇಳಲಾಗಿದೆ. ಇದರಿಂದ ದೇವಾಲಯದ ಆಸ್ತಿ–ಪಾಸ್ತಿ, ಹಣಕಾಸು ವಹಿವಾಟು ದುರುಪಯೋಗವಾಗುತ್ತದೆ. ದೇವಾಸ್ಥಾನದಲ್ಲಿ ರಾಜಕೀಯ ಪ್ರವೇಶ ಮತ್ತು ಆಡಳಿತ ಮಂಡಳಿಯ ತಿಕ್ಕಾಟಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ.

(ಮುಂದು . . )

(254) 10-3-2022 5.30 ಡಿಎಸ್-ಆರ್‌ಎನ್

**ಶ್ರೀ ಸಿ.ಎನ್.ಮಂಜೇಗೌಡ(ಮುಂದು):-**

ಅದರ ಬದಲು ಶ್ರೀ ಮಲೈ ಮಹದೇಶ್ವರ ದೇವಸ್ಥಾನಕ್ಕೆ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಿದಂತೆ ಒಂದು ಜಿಲ್ಲೆಯಲ್ಲಿ ಬರುವ ಎಲ್ಲಾ ದೇವಸ್ಥಾನಗಳನ್ನು ಸಮೂಹ ದೇವಾಲಯ ದೇವಸ್ಥಾನಗಳೆಂದು ಪರಿಗಣಿಸಿ ಜಿಲ್ಲೆಯ ಮುಜರಾಯಿ ದೇವಸ್ಥಾನಗಳ ಅಭಿವೃದ್ಧಿ ಪ್ರಾಧಿಕಾರ ಎಂದು ರಚನೆ ಮಾಡಿದರೆ ಅನುಕೂಲವಾಗುತ್ತದೆ. ಇದರಿಂದ ದೇವಸ್ಥಾನಗಳಲ್ಲಿ ರಾಜಕೀಯ ಬರುವುದಿಲ್ಲ. ಹಾಗೆಯೇ ಇದರಿಂದ ಆಸ್ತಿಪಾಸ್ತಿಗಳು ಉಳಿಯುತ್ತದೆ. ಹೊರಗಿನವರ ಹಸ್ತಕ್ಷೇಪ ಇರುವುದಿಲ್ಲ. ಇದು ಸಾಧ್ಯವಾಗದಿದ್ದಲ್ಲಿ ಕೇರಳ, ತಮಿಳುನಾಡು, ಆಂದ್ರ ಪ್ರದೇಶಗಳ ರೀತಿಯಲ್ಲಿ ಬೋರ್ಡ್‌ನ್ನು ರಚನೆ ಮಾಡಿ ಯಾವುದೇ ಕಾರಣಕ್ಕೂ ಮುಜರಾಯಿ ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡಬಾರದು ಎಂಬುದು ನನ್ನ ಅಭಿಪ್ರಾಯವಾಗಿದೆ.

ಇತ್ತೀಚೆಗೆ ಕಂದಾಯ ಇಲಾಖೆಯಲ್ಲಿ ಬರತಕ್ಕಂಥ ಏನು ಕಂದಾಯಗಳಿವೆ, ತೆರಿಗೆಗಳಿವೆ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ಮಾತನಾಡುವಾಗ ಕಂದಾಯ ಸಚಿವರಿಗೆ ಬೀಳು ಭೂಮಿ ಎನ್ನುವಂಥದ್ದನ್ನು ಹೇಳಿದರು. ಅದನ್ನು ತೆಗೆಯುತ್ತೇವೆ ಎನ್ನುವಂಥದ್ದನ್ನು ಹೇಳಿದ್ದಾರೆ. ಅದು ಈ ಸರ್ಕಾರಕ್ಕೆ ಬಹಳ ಹೆಸರು ತಂದು ಕೊಡುವಂತಹ ಕಾರ್ಯಕ್ರಮವಾಗಿದೆ. ಅದು ಆಗಬೇಕು. ಇವತ್ತೇನು ಮಾಜಿ ಸೈನಿಕರಿಗೆ, ನಾನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ, ಇವತ್ತು 'ಜೈ ಜವಾನ್ ಜೈ ಕಿಸಾನ್' ಎಂದು ನಾವೇನು ಹೇಳುತ್ತೇವೆ ಅದಕ್ಕೆ ಅರ್ಥ ಬರಬೇಕು. ಹಾಗೇಯೇ ಇವತ್ತು ಎಲ್ಲಾ ಇಲಾಖೆಯಲ್ಲೂ ಕೋವಿಡ್-19 ಎಂದು ಬರೆದಿರುತ್ತಾರೆ. ಎಲ್ಲಾ ಕಡೆ ಹೋದರು ಕೂಡ, ಯಾವುದೇ ಪುಸ್ತಕವನ್ನು ತೆಗೆದರು ಕೂಡ, ಯಾವುದೇ ಊರಿನ ಕಾಪೌಂಡ್‌ನಲ್ಲೂ ಕೂಡ ಕೋವಿಡ್-19 ಎಂದು ಹೇಗೆ ಇರುತ್ತದೆಯೋ ಹಾಗೆ ಈ ಆಯವ್ಯಯದ ಭಾಷಣದಲ್ಲೂ ಕೂಡ, ಮಾನ್ಯ ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲೂ ಕೂಡ ಕೋವಿಡ್-19 ಬಗ್ಗೆ ಬಹಳ ಒತ್ತು ಕೊಟ್ಟು ಮಾತನಾಡಿದ್ದಾರೆ. ಈ ಒತ್ತು ಕೊಟ್ಟು ಮಾತನಾಡುವ ರೀತಿಯಲ್ಲಿ ಮಾನ್ಯ ಯು.ಬಿ.ವೆಂಕಟೇಶ್‌ರವರು ಹೇಳಿದ ಹಾಗೆ ಇದರ ಬಗ್ಗೆ ಯಾವುದೇ ರೀತಿಯ ಶ್ವೇತಪತ್ರವನ್ನು ಹೊರಡಿಸಿಲ್ಲ. ಎಷ್ಟು ಸಾವಿರ ಕೋಟಿ ರೂಪಾಯಿ

ಖರ್ಚಾಯಿತು, ಎಲ್ಲೆಲ್ಲಿ ಖರ್ಚಾಯಿತು, ಯಾರ್ಯಾರಿಗೆ ಕೊಟ್ಟರು, ಯಾವುದಕ್ಕೆ ಆಯಿತು ಎನ್ನುವಂತಹ ಅಂಕಿ-ಅಂಶಗಳು ಇದುವರೆವಿಗೂ ಎಲ್ಲೂ ಇಲ್ಲ. ಇವತ್ತು 10,000 ಹಾಸಿಗೆಗಳು, 20,000 ಹಾಸಿಗೆಗಳು ಎಂದು ಮಾಡಿದ್ದಾರೆ, ಆ ಹಾಸಿಗೆಗಳು ಎಲ್ಲಿ ಹೋದವು, ತಂದಂತಹ ಮೆಟೀರಿಯಲ್ಸ್‌ಗಳು ಎಲ್ಲಿ ಹೋದವು ಎಂಬುದು ಯಾರಿಗೂ ಗೊತ್ತಿಲ್ಲ. ಈ ಕೋವಿಡ್-19 ಅವಧಿಯಲ್ಲಿ ಮೈಸೂರು ಮತ್ತು ಚಾಮರಾಜನಗರದಲ್ಲಿ ಇಬ್ಬರು ಜಿಲ್ಲಾಧಿಕಾರಿಗಳಿಂದ ಏನು ಘಟನೆ ನಡೆಯಿತು ಆ ಜಿಲ್ಲಾಧಿಕಾರಿಗಳ ಮೇಲೆ ಇದುವರೆವಿಗೂ ಸರ್ಕಾರ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಅವರು ಕರ್ತವ್ಯ ಮಾಡಿಕೊಂಡೇ ಹೋಗುತ್ತಿದ್ದಾರೆ. ಇದುವರೆವಿಗೂ ಬಹಳಷ್ಟು ಡಿಹೆಚ್‌ಓ ಗಳ ಮೇಲೆ ಕೇಸ್ ಇದೆ. ಕೋವಿಡ್-19 ನಲ್ಲಿ ಮಾಡಿದಂತಹ ಅಚಾತುರ್ಯಗಳಿಗೆ ಜಿಲ್ಲಾಧಿಕಾರಿಗಳಿಗೆ ಸರ್ಕಾರ ಹೊಣೆ ಮಾಡಿತ್ತು ಅವರ ಮೇಲೆ ಇದುವರೆವಿಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಅವರು ಕರ್ತವ್ಯ ಮಾಡಿಕೊಂಡು ಹೋಗುತ್ತಿದ್ದಾರೆ. ಸರ್ಕಾರ ತಪ್ಪು ಮಾಡಿದಂತಹ ಅಧಿಕಾರಿಗಳನ್ನು reinstate ಮಾಡಿ, ಮಾನ್ಯ ಸದಸ್ಯ ಮಿತ್ರರು ಹೇಳಿದ ಹಾಗೆ ಅವರಿಗೆ ಇನ್ನು ಒಳ್ಳೆಯ ಕಡೆ ಪೋಸ್ಟಿಂಗ್ ಮಾಡಿದರೆ ರಾಜ್ಯ ಹೇಗೆ ಉದ್ಧಾರವಾಗುತ್ತದೆ? ನಾವು 50 ಸಾವಿರ ಕೋಟಿ ರೂಪಾಯಿಗಳ ಸಾಲ ತಂದು 40 ಲಕ್ಷ ಕೋಟಿ ರೂಪಾಯಿಗಳಷ್ಟು ಬಡ್ಡಿ ಕಟ್ಟುತಿರಬೇಕಾದರೆ ಈ ಹಣವನ್ನು ಕ್ರೋಢಿಕರಿಸುವಂಥದ್ದು ಹೇಗೆ?

**ಸಭಾಪತಿಯವರು:-** ಮಾನ್ಯ ಮಂಜೇಗೌಡರವರೇ, ಇನ್ನು ಮೂರು ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಬೇಕು.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಯವರೇ, ಇನ್ನು ಒಂದು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಸರ್ಕಾರಕ್ಕೆ ಕೇಳುವುದೇನೆಂದರೆ, ನಾವೇನು ಇವತ್ತು ತಮ್ಮ ಗಮನಕ್ಕೆ ತಂದಿದ್ದೇವೆ ದಯವಿಟ್ಟು ಅವೆಲ್ಲಾ ಅನುಷ್ಠಾನವಾದರೆ ನಮ್ಮ ಜೀವನ ಸಾರ್ಥಕವೆಂದು ಹೇಳಿ ತಮಗೆ ಕೈ ಮುಗಿದು ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

**ಶ್ರೀ ಅಲ್ಲಂವೀರಭದ್ರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ನಾನು ಆಯವ್ಯಯದ

ಬಗ್ಗೆ ಮಾತನಾಡುವುದಕ್ಕಿಂತ ಮುಂಚೆ ನಮ್ಮ ಸಹೋದರಿ ಡಾ॥ತೇಜಸ್ವಿನಿಗೌಡರವರು ಕೇಂದ್ರ ಸರ್ಕಾರ ಉಕ್ರೇನ್‌ನಲ್ಲಿರುವಂತಹ ನಮ್ಮ ವಿದ್ಯಾರ್ಥಿಗಳಿಗೆ ವಿಮಾನವನ್ನು ಕಳುಹಿಸಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅವರು ಉಕ್ರೇನ್‌ಗೆ ಹೋಗಿಲ್ಲ. ನಮ್ಮ ಕೇಂದ್ರ ಸರ್ಕಾರದಿಂದ ಉಕ್ರೇನ್ ದೇಶಕ್ಕೆ ಹೋಗುವ ಪರಿಸ್ಥಿತಿಯೇ ಇರಲಿಲ್ಲ. ಪಕ್ಕದಲ್ಲಿರುವಂತಹ Polland ಗೆ ನಮ್ಮ ವಿದ್ಯಾರ್ಥಿಗಳೇ at their own risk ನಿಂದ Polland ಗೆ ಹೋಗಿ ಕೇಂದ್ರ ಸರ್ಕಾರ ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದಿದ್ದಾರೆ. ನಾನು ಅವರಿಗೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. I just want to make it right. ಉಕ್ರೇನ್‌ಗೆ ನಮ್ಮ ಕೇಂದ್ರ ಸರ್ಕಾರ ವಿಮಾನ ಕಳುಹಿಸಿಲ್ಲ.

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಭಾರತ ಸರ್ಕಾರ ಏಕಕಾಲದಲ್ಲಿ ಉಕ್ರೇನ್ ಅಧ್ಯಕ್ಷರು ಕೂಡ ನಮ್ಮ ಪ್ರಧಾನಿಗಳನ್ನು ಯುದ್ಧ ನಿಲ್ಲಿಸುವುದಕ್ಕೆ ಮಧ್ಯಸ್ಥಿಕೆ ವಹಿಸಬೇಕೆಂದು ಕೇಳುವಷ್ಟರ ಮಟ್ಟಿಗೆ ನಮ್ಮ ರಾಜತಾಂತ್ರಿಕ ಸಂಬಂಧಗಳು ಇಲ್ಲಿಯೂ ಇರುವುದರಿಂದ.....

**ಶ್ರೀ ಅಲ್ಲಂವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, I am not disputing that. ನೀವು ಉಕ್ರೇನ್‌ಗೆ ವಿಮಾನ ಕಳುಹಿಸಿದ್ದರು ಎಂದು ಹೇಳಿದ್ದಕ್ಕೆ I just want to make it right.

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿವಯರೇ, ಈಗ ಉಕ್ರೇನ್‌ಗೆ ಯಾವುದೇ ನಾಗರಿಕ ಯುದ್ಧ ವಿಮಾನಗಳು ಹೋಗುತ್ತಿಲ್ಲ. ಗಡಿಭಾಗದಿಂದಲೇ ಬರುತ್ತಿರುವಂಥದ್ದು. It is understood.

**(ಗೊಂದಲ)**

**ಶ್ರೀ ಅಲ್ಲಂವೀರಭದ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಸರ್ಕಾರವನ್ನು...

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, ಉಕ್ರೇನಿನ ನಾಯಕತ್ವದ ಜೊತೆ ಮತ್ತು ರಷ್ಯಾದ ನಾಯಕತ್ವದ ಜೊತೆ ನೇರವಾಗಿ ಮಾತುಕತೆ ಮಾಡಿದರ ಫಲವಾಗಿ ಭಾರತ ದೇಶದ ನಾಗರಿಕರು ಮಾತ್ರವಲ್ಲ, ನೆರೆಯ ನಮ್ಮ ವೈರಿ ರಾಷ್ಟ್ರ ಪಾಕಿಸ್ತಾನವು ಸೇರಿದಂತಹ ಅನೇಕ ನಾಗರಿಕರನ್ನು ಭಾರತ ಸರ್ಕಾರದ ವಿಮಾನಗಳು ಸುರಕ್ಷಿತವಾಗಿ ಕರೆದುಕೊಂಡು ಬಂದಿದ್ದಾರೆ. ನಮ್ಮ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ರಕ್ಷಣೆ ಪಡೆದುಕೊಂಡು ಬಂದಿದ್ದಾರೆ.

**ಸಭಾಪತಿಯವರು:–** ಮಾನ್ಯ ಅಲ್ಲಂವೀರಭದ್ರಪ್ಪನವರೇ, ತಾವು ಯೀಲ್ಡ್ ಆದರೆ ತಮ್ಮ ಸಮಯ ಮುಗಿಯುತ್ತದೆ. ಯೀಲ್ಡ್ ಆಗಬೇಡಿ.

**ಶ್ರೀ ಅಲ್ಲಂವೀರಭದ್ರಪ್ಪ:–** ಮಾನ್ಯ ಸಭಾಪತಿಯವರೇ, ತಮಗೆ ಮತ್ತೊಮ್ಮೆ ಧನ್ಯವಾದಗಳನ್ನು ಹೇಳಬಯಸುತ್ತೇನೆ. ಈ ಸರ್ಕಾರ ಬಳ್ಳಾರಿ ಜಿಲ್ಲೆಯಲ್ಲಿ ಹೊಸ ಕೃಷಿ ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇವತ್ತು ಕರ್ನಾಟಕದಲ್ಲಿ ಬಹಳಷ್ಟು ಕೃಷಿ ಕಾಲೇಜುಗಳಿವೆ. ಈ ಕೃಷಿ ಕಾಲೇಜುಗಳಿಂದ ರೈತರಿಗೆ ಯಾವ ರೀತಿ ಲಾಭ ಇದೆ ಎನ್ನುವುದನ್ನು ಸರ್ಕಾರ ಹೇಳಬೇಕು. ಇವತ್ತು ನಮ್ಮ ಬಳ್ಳಾರಿ ಜಿಲ್ಲೆಯನ್ನು ಉದಾಹರಣೆಯಾಗಿ ತೆಗೆದುಕೊಂಡರೆ ನಾವು ಹತ್ತಿ, ಮೆಣಸಿನಕಾಯಿ ಮತ್ತು ಇತರ ಬೆಳೆಗಳನ್ನು ಬೆಳೆಯುತ್ತೇವೆ. ಪ್ರತಿ ವರ್ಷ ಯಾವುದೇ ಬೆಳೆ ಇರಬಹುದು, ಸುಮಾರು ಶೇಕಡ 30 ರಿಂದ ಶೇಕಡ 40 ರಷ್ಟು ಕ್ರಿಮಿಗಳಿಂದ ಮತ್ತು ರೋಗಗಳಿಂದ ಬೆಳೆ ನಷ್ಟವಾಗುತ್ತಿದೆ. ಇವತ್ತು ಯಾವ ವಿಶ್ವವಿದ್ಯಾಲಯ ಮುಂದೆ ಬಂದು ಈ ರೋಗಗಳು ಈ ರೀತಿ ಬರುತ್ತವೆ, ಇದಕ್ಕೇನಾದರೂ ಪರಿಹಾರ ಕೊಡಬೇಕೆಂದು ಹೇಳುತ್ತಿಲ್ಲ. Technically we are not sound. ಅದಕ್ಕೆ ಇವತ್ತೇನು ಬಳ್ಳಾರಿಯಲ್ಲಿ ಪ್ರಾರಂಭ ಮಾಡುತ್ತಿದ್ದಾರೆ, Technologically ವ್ಯವಸ್ಥಿತವಾದಂತಹ ಕಾಲೇಜು ಆಗಬೇಕೆನ್ನುವಂಥದ್ದು ನಮ್ಮ ಉದ್ದೇಶವಾಗಿದೆ. ಇವತ್ತು ನಾವು ಸರ್ಕಾರವನ್ನು ನಡೆಸುತ್ತೇವೆ, ತಾವು ಕೂಡ ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತೀರಿ, ತಮಗೂ ತೋಟಗಾರಿಕೆ ಬೆಳೆ ಬಗ್ಗೆ ಸಾಕಷ್ಟು ಮಾಹಿತಿ ಇದೆ. ನಾನು ತೋಟಗಾರಿಕೆ ಮಂತ್ರಿಯಾಗಿದ್ದಾಗ ತಮ್ಮ ತೋಟಕ್ಕೆ ಭೇಟಿ ಕೊಟ್ಟಿದ್ದೆ. ಇವತ್ತು ನಾವು perishable items ಬೆಳೆಯುತ್ತೇವೆ. ಟೊಮೇಟೋ, ಕರಬೇವು, ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುತ್ತೇವೆ. ನಮ್ಮ ಬಳ್ಳಾರಿಯಲ್ಲಿ ಬಿಸಿಲು, ಉತ್ತರ ಕರ್ನಾಟಕದಲ್ಲೂ ಬಿಸಿಲು ಜಾಸ್ತಿ ಇದೆ. ಆ ಬಿಸಿಲಿಗೆ ಕರಬೇವು, perishable items 2-3 ದಿನಗಳೊಳಗೆ ಒಣಗಿ ಬಿಡುತ್ತದೆ. ರೈತರು ಬೆಳೆಯುವುದೇ ಕಷ್ಟವಾಗಿದೆ. ನಗರಕ್ಕೆ ತಂದು ಮಾರಾಟ ಮಾಡಬೇಕೆಂದರೆ nature will not co-operate with them. More than fifty percent goes waste. ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಇವತ್ತು ಈಗಾಗಲೇ ಪೂನಾದಲ್ಲಿ ರೈತರಿಗೆ ಬೇಕಾದಂತಹ 500kg, 200kg 1000kg cold

Storages already manufacture ಮಾಡುತ್ತಿದ್ದಾರೆ. ಬೇರೆ ಎಲ್ಲಾ ಕೊಡುವುದರ ಬದಲು ರೈತರಿಗೆ Cold Storage for perishable items, ಸೋಲಾರ್ ಕೋಲ್ಡ್ ಸ್ಟೋರೇಜ್‌ನ್ನು ಈಗಾಗಲೇ ನಮ್ಮ ಭಾರತ ದೇಶದಲ್ಲಿ ತಯಾರಿಸಿರುವುದರಿಂದ ಸರ್ಕಾರ ಅವರ ಜೊತೆಯಲ್ಲಿ ಮಾತನಾಡಿ ರೈತರಿಗೆ ಕೊಟ್ಟರೆ ತಾವು ಬೆಳೆದಂತಹ ಬೆಳೆಗಳಿಗೆ ಶೇಕಡ ನೂರರಷ್ಟು ಲಾಭದಾಯಕವಾಗಿ ಮಾರಾಟ ಮಾಡಲು ಅನುಕೂಲವಾಗುತ್ತದೆಂದು ನಾನು ಹೇಳಬಯಸುತ್ತಿದ್ದೇನೆ. ಇವತ್ತು ಬಳ್ಳಾರಿಯಲ್ಲಿ ಸರ್ಕಾರ ಹಣ ಇಲ್ಲದಿದ್ದರೂ ಕೂಡ ನಮಗೆ DMF (District Mineral Foundation) ಅಡಿಯಲ್ಲಿ ಹಣ ಸಿಗುತ್ತದೆ. ಇವತ್ತು ಏಕೆ ರಿಸರ್ಚ್ ಮಾಡಬೇಕೆಂದರೆ ಎಲ್ಲಾ ವಿಶ್ವವಿದ್ಯಾಲಯಗಳನ್ನು ನೋಡಿದರೆ ಅವರ ಸಿಬ್ಬಂದಿಗಳಿಗೆ ಸಂಬಳ ಕೊಡುವುದಕ್ಕೆ ಹಣ ಇರುವುದಿಲ್ಲ. ಇನ್ನು question of research ಬರುವುದೇ ಇಲ್ಲ.

(ಮುಂದು)

255/10-3-2022/5-40/bkp-rn

**ಶೀ ಅಲ್ಲಂ ವೀರಭದ್ರಪ್ಪ(ಮುಂದು)**

ಅದಕ್ಕೆ ಬಳ್ಳಾರಿಯಲ್ಲಿ ನಮಗೆ ಡಿ.ಎಂ.ಎಫ್ ಫಂಡ್ಸ್ ಇರುವುದರಿಂದ, ಸಂಶೋಧನೆ ಮಾಡುವುದಕ್ಕೆ you should establish in such a way. They should contact all other universities of the Country as well as internationally. For example; Israel ದೇಶ ಇದೆ. ಅವರನ್ನು ಕರೆಸಿ, ಇಲ್ಲಿ ಇರತಕ್ಕಂತಹ ಒಂದೊಂದು ಜಿಲ್ಲೆಯ ಸಾಂಕ್ರಾಮಿಕ ರೋಗಗಳಿಗೆ ನಾವು ಹೇಗೆ ಪರಿಹಾರ ಕೊಡಬೇಕೆಂದು ನಿನ್ನೆ ಹೇಳುತ್ತಿದ್ದರು. ಮಲೆನಾಡಿನಲ್ಲಿ ಅಡಿಕೆ ಗಿಡಕ್ಕೆ ಎಲ್ಲಾ ರೋಗಗಳು ಬಂದು ರೈತರು ಲಾಸ್ ಆಗಿದ್ದಾರೆ. ಬಹಳ ಲಾಸ್ ಆಗಿ ಊರುಗಳನ್ನೇ ಬಿಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು. ಆಗ where is the end for this? ಅದಕ್ಕೆ ಒಂದು ದೊಡ್ಡ ಸಂಶೋಧನಾ ಸಂಸ್ಥೆಯಾಗಿ ಇದನ್ನು ಕನ್ವರ್ಟ್ ಮಾಡಬೇಕೆಂದು ಕೃಷಿ ಮಂತ್ರಿಗಳನ್ನು ಕೇಳುತ್ತೇನೆ. ಈಗತಾನೆ ನಮ್ಮ

ಆರ್ಟಿಕಲ್ಚರ್ ಮತ್ತು ನೀರಾವರಿ ಮಂತ್ರಿಗಳು ಇದ್ದರು. ಈ ಬಗ್ಗೆ ನಾವು ಎಲ್ಲಾ ರೀತಿಯಲ್ಲಿ ಮಾತನಾಡಿದ್ದೇವೆಂದು ಹೇಳಿದರು. ತುಂಗಾಭದ್ರಾ ನದಿ ವಿಷಯಕ್ಕೆ ಬಂದಾಗ ಇವತ್ತು ಅಲ್ಲಿ ಬಹಳಷ್ಟು ಹೂಳು ತುಂಬಿದೆ. To the extent of 31-32 tmc ನೀರನ್ನು ಸಹ ಅಲ್ಲಿ ಕ್ರೋಢೀಕರಿಸಲಕ್ಕೆ ಆಗುತ್ತಿಲ್ಲ. ಅದು ತುಂಬಿ ಆಂಧ್ರ ಪ್ರದೇಶಕ್ಕೆ ಹೋಗುತ್ತದೆ. ಇವತ್ತು ಈ ವಿಚಾರದಲ್ಲಿ ಸರ್ಕಾರ ಒಂದು ಐಡಿಯಾ ಮಾಡಿ ನಾವೆಲ್ಲರೂ ಕುಳಿತುಕೊಂಡು ಮಾತನಾಡಿ, ಕೊಪ್ಪಳ ಜಿಲ್ಲೆಯಲ್ಲಿ ಇರುವಂತಹ ಒಂದು ಸ್ಥಳದಲ್ಲಿ balancing reservoir ಮಾಡಬೇಕೆಂಥು ಯೋಚನೆ ಮಾಡಿದ್ದೇವೆ. ಇವತ್ತು ಇದಕ್ಕೋಸ್ಕರ ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಮಾಡಿದ ಘೋಷಣೆ ಬರೀ ಘೋಷಣೆಯಾಗಿಯೇ ಉಳಿದಿದೆ. ಇದಕ್ಕೆ ಟೆಕ್ನಿಕಲ್ ಪಾಯಿಂಟ್ ಏನೆಂದರೆ, ಇದು ಬೋರ್ಡ್ ಇದ್ದು ಈ ಬೋರ್ಡ್‌ನಲ್ಲಿ ಆಂಧ್ರ ಸರ್ಕಾರ, ತೆಲಂಗಾಣ ಸರ್ಕಾರ ಮತ್ತು ಕರ್ನಾಟಕ ಸರ್ಕಾರ ಈ ಮೂರು ಸರ್ಕಾರಗಳು ಕಲೆತುಕೊಂಡು ವಿಚಾರ ವಿನಿಮಯ ಮಾಡಿದರೆ ಈ ಕೆಲಸ ಆಗುತ್ತದೆ. ಇದರ ಬಗ್ಗೆ ಡಿಪಿಆರ್ (Detailed Project Report) ತಯಾರು ಮಾಡಿಲ್ಲ. ಇದರ ಬಗ್ಗೆ ಬೋರ್ಡ್ ಮೀಟಿಂಗ್‌ನಲ್ಲಿ ಚರ್ಚೆ ಮಾಡಿಲ್ಲ. ಏನೂ ಆಗಿಲ್ಲ. ಇದಕ್ಕೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆಯಿತು, ಹಣ ಕೊಡುತ್ತೇವೆಂದು ಮುಂದೆ ಬಂದಿದ್ದೀರಿ, ಸ್ವಾಗತ. ಆದರೆ, ಮೂರು ರಾಜ್ಯಗಳ ಅನುಮತಿಯನ್ನು, ಪರವಾನಿಗೆಯನ್ನು ತೆಗೆದುಕೊಂಡು, ನಾವು ಈ ಕೆಲಸವನ್ನು ಮಾಡಿದರೆ, ಇದಕ್ಕೊಂದು ಮೋಕ್ಷ ಸಿಕ್ಕುತ್ತದೆ. ಸುಮ್ಮನೆ ಬಳ್ಳಾರಿ ಜಿಲ್ಲೆಗೆ ರೈತರು ಬರುತ್ತಿರುತ್ತಾರೆ. ಅವರಿಗೆ ಏನಾದರೂ ತುಪ್ಪ ಸವರಬೇಕೆಂದು ಹೇಳಿ ಸಾವಿರ ಕೋಟಿ ರೂಪಾಯಿಗಳನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣ ಸರ್ಕಾರಗಳ ಅನುಮತಿ ಇಲ್ಲದೇ ಯಾವುದಕ್ಕೆ ಖರ್ಚು ಮಾಡುತ್ತೀರಿ? ಮಾನ್ಯ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ರವರು ಹೇಳಬೇಕು. ಎಲ್ಲಿ ಖರ್ಚು ಮಾಡುತ್ತೀರಿ,ಯಾರಿಗೆ ಖರ್ಚು ಮಾಡುತ್ತೀರಿ? Please tell us. We are doing this. We are doing. ಸುಮ್ಮನೆ ಇದಕ್ಕೆ ಘೋಷಣೆ ಮಾಡಿದ್ದಾರೆ.

ಇವತ್ತು ರೈಲ್ವೇ line extension ತುಮಕೂರು-ರಾಯದುರ್ಗ ಮಾಡಬೇಕೆಂದು ಹೇಳಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಬೆಂಗಳೂರು -ಗುಂತಕಲ್‌ಗೆ ಹೋಗಬೇಕಾದರೆ, 420 ಕಿ.ಮೀ. ಆಗುತ್ತದೆ. ಬಳ್ಳಾರಿ ರೀಚ್ ಆಗಬೇಕಾದರೆ, 480 ಕಿ.ಮೀ ಆಗುತ್ತದೆ. ನಾವು ತುಮಕೂರಿನ ಮೇಲೆ ರಾಯದುರ್ಗಕ್ಕೆ ಹೋದರೆ, ಬಳ್ಳಾರಿಗೆ ಕೇವಲ 250 ಕಿ.ಮೀ. ಆಗುತ್ತದೆ. ಬಳ್ಳಾರಿಯಿಂದ ಗುಂತಕಲ್‌ಗೆ ಸುಮಾರು ಉತ್ತರ ಕರ್ನಾಟಕದ 14 ಜಿಲ್ಲೆಗಳಿಗೆ ರೈಲ್ವೇ ಲೈನ್ ಮತ್ತು ರೈಲ್ವೆ ಕನೆಕ್ಷನ್ ಕೊಡಲಿಕ್ಕೆ ಅನುಕೂಲವಾಗುತ್ತದೆ. ಮಾಡುತ್ತೇವೆಂದು ಸರ್ಕಾರದವರುಹೇಳಿದರು. ಇದಕ್ಕೆ ಎಷ್ಟು ಎಕರೆ ಜಮೀನು ಭೂಸ್ವಾಧೀನವಾಗುತ್ತದೆ, ಎಷ್ಟು ಹಣ ಖರ್ಚಾಗುತ್ತದೆ ಎಂದು ಹೇಳಿ ನಮೂದು ಮಾಡಿಲ್ಲ. ಭೂಸ್ವಾಧೀನಕ್ಕೆ ಯಾವ ಬಜೆಟ್‌ನಲ್ಲಿ, ಯಾವ ಬಾಬತ್ತಿನಲ್ಲಿ ಅನುದಾನವನ್ನು ಕೊಡುತ್ತೇವೆಂದು ಹೇಳಿಲ್ಲ. ಇದು ಬಜೆಟ್. Without giving any type of clarifications, only quite information, ಈ ರೀತಿಯಲ್ಲಿ ಬಜೆಟ್ ಮಾಡಿದ್ದು, ಇದನ್ನು ನಾವು ಹೇಗೆ ಸ್ವಾಗತ ಮಾಡಬೇಕಾಗುತ್ತದೆ ಎಂದು ದಯವಿಟ್ಟು ಹೇಳಬೇಕು.

ಇವತ್ತು ಉತ್ತರ ಕರ್ನಾಟಕದ ಅಂದರೆ ಕಲ್ಯಾಣ ಕರ್ನಾಟಕಕ್ಕೆ 3 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಮೊದಲು 1000, 1500 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದರು. ಇದು 2013-14 ರಿಂದ ಪ್ರಾರಂಭವಾದದ್ದು. ಇಲ್ಲಿಯತನಕ ಇನ್ನು ಕೊಡಬೇಕಾದ 1500 ಕೋಟಿ ರೂಪಾಯಿಗಳು ಬಾಕಿ ಇದೆ. ಕೇವಲ 500 ಕೋಟಿ ರೂಪಾಯಿಗಳ ಬಜೆಟ್ ಅಲೋಕೇಷನ್ ಇದ್ದಾಗ ನಮಗೆ 1500 ಕೋಟಿ ಇದೆ. Modus operandi ಇವತ್ತು ಏನಾಗಿದೆ ಎಂದರೆ, beautiful. ಅಲೋಕೇಷನ್ ಮಾಡುವುದು ಅಷ್ಟೆ. ಬಿಡುಗಡೆ ಮಾಡುವುದಲ್ಲ. ಫೆಬ್ರವರಿಯಲ್ಲಿ ಬಿಡುಗಡೆ ಮಾಡಿದರೆ, ಅದಕ್ಕೆ ಸ್ಕೀಮ್‌ಗಳನ್ನು ಮಾಡುವುದು ಯಾವಾಗ, ಟೆಂಡರ್ ಯಾವಾಗ ಕರೆಯಬೇಕು, ಅನುಮೋದನೆ ಯಾವಾಗ ಕೊಡಬೇಕು. ಇವುಗಳು ಆಗದಂತಹ ಕೆಲಸಗಳು. ಕಳೆದ ವರ್ಷದ ಫೆಬ್ರವರಿಯಲ್ಲಿ 1500 ಕೋಟಿ ರೂಪಾಯಿಗಳಲ್ಲಿ 700 ಕೋಟಿ

ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದನ್ನು ಯಾವಾಗ ಉಪಯೋಗಿಸಬೇಕು, ಅದನ್ನು ಉಪಯೋಗಿಸಲಿಕ್ಕೆ ಸಾಧ್ಯವೇ? ಅದರೂ ಸಹ ಅದು ಮುಂದಿನ ವರ್ಷಕ್ಕೆ ಬರುತ್ತದೆ. ಈ ರೀತಿಯಲ್ಲಿ ಅಲೋಕೇಷನ್ ಮಾಡುವುದಕ್ಕಿಂತ ಒಂದು ಪದ್ಧತಿ ಮಾಡಬೇಕು, ಒಂದು ಬೋರ್ಡ್ ಮಾಡಬೇಕು. ಮಾರ್ಚ್, ಏಪ್ರಿಲ್ ಮೇ ತಿಂಗಳ ಒಳಗಡೆ ಏನು ಶಾಸಕರುಗಳಿಗೆ ಕೆಲಸ ಆಗಬೇಕಾಗಿತ್ತು, ಆ ಜಿಲ್ಲೆಯಿಂದ ಏನು ಮಾಹಿತಿ ಬೇಕೋ ಅದನ್ನು ತರಿಸಿ, ಸೆಪ್ಟೆಂಬರ್‌ನಲ್ಲಿ ಟೆಂಡರ್ ಕರೆದರೆ ಮಾತ್ರ ಇದನ್ನು ಏನಾದರೂ ಉಪಯೋಗಿಸಲಿಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನೂ ಆಗುವುದಿಲ್ಲ. ಸುಮ್ಮನೆ ೩೦೦೦- 4೦೦೦ ಕೋಟಿ ರೂಪಾಯಿಗಳನ್ನು ಕೊಟ್ಟೆ ಎಂದರೆ ಸರಿ ಹೋಗುವುದಿಲ್ಲ. ಅದನ್ನು ಉಪಯೋಗಿಸಬೇಕು. ಉಪಯೋಗಿಸಿದರೆ ಮಾತ್ರ ಆ ಏರಿಯಾ ಅಭಿವೃದ್ಧಿಯಾಗುತ್ತದೆ. ಕಲ್ಯಾಣ ಕರ್ನಾಟಕದಲ್ಲಿ ೩೦೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಉದ್ಯೋಗದ ವಿಷಯ ಬಂದಾಗ ಇವತ್ತು ಸುಮಾರು 15 ಸಾವಿರಗಳಿಂದ 2೦ ಸಾವಿರ ಟೀಚರ್ಸ್ ಹುದ್ದೆಗಳು ಖಾಲಿ ಇವೆ. ಇವತ್ತು ಏನಾಗಿದೆ ಎಂದರೆ M.Ed. ಆಗಲಿ, B.Ed., ಆಗಲಿ, ಸುಮಾರು 1೦-15 ವರ್ಷಗಳ ಕೆಳಗಡೆ ಓದಿದ್ದರು. ಆ ಸಮಯದಲ್ಲಿ ಏನು ಇತ್ತು ಎಂದರೆ ಫಸ್ಟ್ ಕ್ಲಾಸ್ ಎಂದು ಇತ್ತು. ಫಸ್ಟ್ ಕ್ಲಾಸ್ ಎಂದರೆ ಒಬ್ಬರಿಗೆ ಒಂದು ವಿಷಯದಲ್ಲಿ 58,ಇನ್ನೊಂದರಲ್ಲಿ 6೦, ಮತ್ತೊಂದರಲ್ಲಿ 7೦ ಅಂಕಗಳು ಬಂದರೆ ಒಟ್ಟಾರೆ ಪರಿಗಣಿಸಿ ಫಸ್ಟ್‌ಕ್ಲಾಸ್ ಎಂದು ಆವರೇಜ್ ಅಗಿ ಪರಿಗಣಿಸುತ್ತಿದ್ದರು. ಈ ಸಲ ಸರ್ಕಾರ ಒಂದು rider ಹಾಕಿ, ಎಲ್ಲಾ ವಿಷಯಗಳಲ್ಲಿ ನೀವು ಫಸ್ಟ್ ಕ್ಲಾಸ್ ಇದ್ದರೆ ಮಾತ್ರ ನೀವು ಸಂದರ್ಶನಕ್ಕೆ ಅರ್ಹರು. ಇದಕ್ಕೆ ಸಂಬಂಧಪಟ್ಟಂತೆ ಒಂದು ಉದಾಹರಣೆಯನ್ನು ಕೊಡುತ್ತೇನೆ. 5೦೦ ಜನ ಅರ್ಜಿ ಹಾಕಿದರೆ ಒಬ್ಬರೇ ಒಬ್ಬರು ಅನುಮೋದನೆಯಾಗುತ್ತಾರೆ. ಹೀಗಾಗಿ, ಆ ಭಾಗಕ್ಕೆ ಟೀಚರ್‌ಗಳು ಸಿಗುವುದೇ ಕಷ್ಟ. ಆದ್ದರಿಂದ, ಆ ಒಂದು rider ತೆಗೆದು ಮೊದಲು 6೦% ಅವರೇಜ್ ಏನಿತ್ತು. ಅದನ್ನು ಮಾಡಿದರೆ, ಆ ಭಾಗದ M.Ed and B.Ed., ಮಾಡಿದಂತಹ ಆ ಪದವೀಧರರಿಗೆ ಟೀಚರ್ಸ್ ಮಾಡಲಿಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿ ಸರ್ಕಾರ ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಇದರ ಜೊತೆಗೆ ಇವತ್ತು

---

ಕರ್ನಾಟಕ ರಾಜ್ಯದಲ್ಲಿ ಬೇರೆ ಬೇರೆ ಇಲಾಖೆಯಲ್ಲಿ ಸಂದರ್ಶನವನ್ನು ಕರೆಯುತ್ತಾರೆ. ಸಂದರ್ಶನವನ್ನು ಕರೆದಾಗ ಇಲ್ಲಿ ಆಗಿರತಕ್ಕಂತಹ ನಂಬರ್- 1 ನಂಬರ್- 2 rank ನ ಕಲ್ಯಾಣ ಕರ್ನಾಟಕ ಭಾಗದವನಿಗೆ ನಾವು ಕಲ್ಯಾಣ ಕರ್ನಾಟಕದ ಷೇರು ಕೊಟ್ಟಿದ್ದೇವೆಂದು ಹೇಳುತ್ತಾರೆ. ಅದಕ್ಕೆ ಸರ್ಕಾರ ಏನು ಮಾಡಬೇಕೆಂದರೆ, ನೀವು ಯಾವುದೇ ಇಲಾಖೆಯಿಂದ ಕರೆದಾಗ ಇಲ್ಲಿ ಜನರಲ್ ಆಗಿ ಕರೆಯಿರಿ. ಆದಾದ ಮೇಲೆ ಆ ಭಾಗದಲ್ಲಿ ಎಲ್ಲಾ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಅಲ್ಲಿ ಬೇರೆ ಸಂದರ್ಶನವನ್ನು ಕರೆಯಿರಿ. ಇಲ್ಲದಿದ್ದರೆ ನಮಗೆ ಅನ್ಯಾಯವಾಗುತ್ತದೆ. ಇಲ್ಲಿ ಕೊಟ್ಟುಬಿಟ್ಟರೆ ನಮಗೆ ಅಲ್ಲಿ ಅನ್ಯಾಯವಾಗುತ್ತದೆ. General Merit is best for everybody. You should never consider a person, a student was got the second rank, he should not claim from the Kalyana Karnataka . ಇದು ಬಹಳ ಗಂಭೀರವಾದ ಪರಿಸ್ಥಿತಿ. ಇದ್ದನ್ನು ಸರ್ಕಾರ ಸರಿ ಮಾಡಬೇಕು.

ಇದರ ಜೊತೆಗೆ ಇವತ್ತು ಯು.ಕೆ.ಪಿ. ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಯು.ಬಿ. ವೆಂಕಟೇಶ್ ರವರು ಹೇಳಿದರು. ಮಾನ್ಯ ಶ್ರೀ ಬಿ.ಎಸ್.. ಯಡಿಯೂರಪ್ಪನವರು ಹಿರಿಯರಿದ್ದಾರೆ, ಅವರ ಬಗ್ಗೆ ತಪ್ಪು ಮಾತನಾಡಬಾರದು. ಅವರು ಮುಖ್ಯಮಂತ್ರಿಗಳಾಗಿದ್ದಾಗ ಬಜೆಟ್ ಕೊಟ್ಟಾಗ ಯು.ಕೆ.ಪಿ.ಗೆ ಬಜೆಟ್‌ನಲ್ಲಿ ಒಂದು ರೂಪಾಯಿ ಕೂಡ ಘೋಷಣೆ ಮಾಡಿರಲಿಲ್ಲ. ಅಮೇಲೆ ಗಲಾಟೆಯಾದ ಮೇಲೆ 10 ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದರು. ಅಂದರೆ ಈ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಆ ಭಾಗದ ಪ್ರಾಜೆಕ್ಟ್‌ಗಳ ಬಗ್ಗೆ ಗಂಭೀರತೆ, seriousness, love and affection ಇದೆ ಎನ್ನುವುದು ಈ ಬಜೆಟ್ ನಲ್ಲಿ ಗೊತ್ತಾಗುತ್ತದೆ. ಇದು ಒಬ್ಬ ಮುಖ್ಯಮಂತ್ರಿಯಾದವರು ಪರಪಟ್ ಮಾಡಲಿಲ್ಲ, ಏತಕ್ಕೆ ಮಾಡಲಿಲ್ಲ, it is not a small mistake. ಬಜೆಟ್‌ನಲ್ಲಿ ಯು.ಕೆಪಿ.ಗೆ ಹಣವನ್ನೇ ಒದಗಿಸಿಲ್ಲವೆಂದರೆ ಆ ಸರ್ಕಾರ ಆ ಭಾಗದ ಜನರ ಮೇಲೆ ಎಷ್ಟರ ಮಟ್ಟಿಗೆ ಪರಿಗಣನೆಗೆ ತೆಗೆದುಕೊಂಡಿದೆ ಎಂದು ಇದು ಹೇಳುತ್ತದೆ. ಇದಕ್ಕೆ ನೀವು ಏನು

ಖರ್ಚು ಮಾಡಿದ್ದೀರಿ ಎಂದರೆ, ನಮ್ಮ ಮಾನ್ಯ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ 5 ವರ್ಷದಲ್ಲಿ fifty-two thousand crore spend on the irrigation. It is on record. ಇದರಲ್ಲಿ ತಪ್ಪು ಏನಿಲ್ಲ, it is on record, we have spent it let them have not confusion. ಇವತ್ತು 6 ಸಾವಿರ ಕೋಟಿ ರೂಪಾಯಿಗಳನ್ನು ಯುಕೆಪಿ.ಗೆ ಇಟ್ಟಿದ್ದೀರಿ. ಇದು ಸಂತೋಷದ ವಿಚಾರ. ಇವತ್ತು 6 ಸಾವಿರ ಕೋಟಿ ರೂಪಾಯಿಗಳಲ್ಲಿ ನೀವು ಏನು ಮಾಡುತ್ತೀರಿ. ಭೂಸ್ವಾಧೀನ ಮಾಡುತ್ತೀರಾ Rehabilitation ಮಾಡುತ್ತೀರಾ ಪ್ರಾಜೆಕ್ಟ್‌ಗೆ elevation ಮಾಡುತ್ತೀರಾ,ಅಥವಾ ಹಿಂದಿನ ಬಿಲ್‌ಗಳಿಗೆ ಕೊಡುತ್ತೀರೋ ಎನ್ನುವುದು ಕ್ಲಾರಿಟಿ ಇಲ್ಲ. ಇವತ್ತು ನೀವು 6 ಸಾವಿರ ಕೋಟಿ ರೂಪಾಯಿಗಳನ್ನು allocation ಮಾಡಿದರೆ ನನಗೆ ತಿಳಿದಮಟ್ಟಿಗೆ 4-5 ಸಾವಿರ ಕೋಟಿ ರೂಪಾಯಿಗಳು ಹಳೆ ಬಿಲ್ಲುಗಳಿಗೆ ಖರ್ಚಾಗುತ್ತದೆ. ಈ ರೀತಿಯಾದರೆ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಎಲ್ಲಿದೆ, rehabilitation ಮಾಡುವುದಕ್ಕೆ ಹಣ ಎಲ್ಲಿದೆ, ಭೂಸ್ವಾಧೀನ ಮಾಡುವುದಕ್ಕೆ ಎಲ್ಲಿದೆ, ಸ್ವಾಧೀನ ಹೇಗೆ ,ಮಾಡುತ್ತೀರಿ, ಹಣವನ್ನು ಅವರಿಗೆ ಹೇಗೆ ಕೊಡುತ್ತೀರಿ ? ಯುಕೆಪಿಗೆ ಸುಮಾರು 60 ರಿಂದ 70 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವತ್ತು 6 ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟರೆ , ಅದು ಯಾವುದಕ್ಕೆ ಬರುತ್ತದೆ? ನಾವು ಆ ಭಾಗದಲ್ಲಿ ಡ್ಯಾಮ್‌ಗಳನ್ನು ಕಟ್ಟಬೇಕು, ಬಡ ರೈತರು ನೀರಾವರಿ ಸೌಲಭ್ಯವನ್ನು ಉಪಯೋಗಿಸುವಂತಾಗಬೇಕು. ಸರ್ಕಾರ ಇದರ ಬಗ್ಗೆ ಏನಾದರೂ ಮಾಡಿ, ಕೇಂದ್ರ ಸರ್ಕಾರದ ಹತ್ತಿರವಾದರೂ ಹೋಗಿ ಕೇಂದ್ರದಿಂದ ಹೆಚ್ಚುವರಿ ಹಣವನ್ನು ತರಬೇಕು.

**ಮುಂದು.**

**(256) 10.03.2022 05.50 ಎಸ್‌ವಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅಲ್ಲಂ ವೀರಭದ್ರಪ್ಪ (ಮುಂದು):-**

ಹಾಗೆ ಮಾಡಿದರೆ ಮಾತ್ರ ಇದು ಸಾಧ್ಯವಾಗುತ್ತದೆ.

ನಾನು ಆಗಲೇ ಅಂಜನಾದ್ರಿಯ ವಿಷಯದಲ್ಲಿ ಮಾತನಾಡುತ್ತಾ, ಇದು ಒಂದು ಪವಿತ್ರವಾದ ಸ್ಥಾನ ಎಂದು ಹೇಳಿದೆನು. ಅಂಜನಾದ್ರಿಯ ವಿಷಯ ಬಹಳಷ್ಟು ಜನರಿಗೆ ಗೊತ್ತಿರಲಿಲ್ಲ. ಈಗ ರಾಮದೇವರ ನಂತರ ಅಂಜನಾದ್ರಿಗೆ ಮಹತ್ವ ಬಂದಿದೆ. ಉತ್ತರ ಪ್ರದೇಶದ ಬಹಳಷ್ಟು ಜನರಿಗೆ ಈ ಸ್ಥಳಕ್ಕೆ ಭೇಟಿ ಕೊಡಬೇಕೆಂಬ ಇಚ್ಛೆ ಇದೆ. ಮಾನ್ಯ ಸಭಾಪತಿಯವರೇ, ನಾನು ಕೇದಾರನಾಥ ಧಾಮವನ್ನು ನೋಡಿದ್ದೇನೆ. ಅಷ್ಟು ದೂರ ಯಾರು ಹೋಗುತ್ತಾರೆ ಎನ್ನುವುದು ನನ್ನ ಮನಸ್ಸಿನಲ್ಲಿತ್ತು. ಕೇದಾರ ಸ್ವಾಮಿಗಳು ಬಂದಾಗ ಅಲ್ಲಿ ಹೆಲಿಕಾಪ್ಟರ್ ಸೇವೆ ಇದೆ, ನೀವು ಬರಬಹುದು ಎಂದು ಹೇಳಿದರು. ಹೆಲಿಕಾಪ್ಟರ್ ಸೇವೆಗಳು ಇರುತ್ತವೆ ಎನ್ನುವ ಆಸೆಯಿಂದ ನಾನು ಕೇದಾರಕ್ಕೆ ಹೋದೆನು. ನನ್ನ ದುರಾದೃಷ್ಟವೋ ಅಥವಾ ಅದೃಷ್ಟವೆಂದೇ ಭಾವಿಸಬೇಕು. ಎರಡು ದಿನ ಮೋಡಗಳು ಬಂದು ಹೆಲಿಕಾಪ್ಟರ್ ಸೇವೆಗಳು ಇರಲಿಲ್ಲ. ರಸ್ತೆ ಮಾರ್ಗವಾಗಿ ಕರೆದುಕೊಂಡು ಹೋದರು. ಅದರಿಂದ ನನಗೆ ಆ ರಮಣೀಯ ದೃಶ್ಯವನ್ನು ನೋಡುವಂತಹ ಅವಕಾಶ ಸಿಕ್ಕಿತು. ಅಂತೆಯೇ ಉತ್ತರ ಪ್ರದೇಶದ ಭಾಗದಿಂದ ಬರುವವರಿದ್ದರೆ ಅಂಜನಾದ್ರಿಯಲ್ಲಿ ರೋಪ್‌ವೇ ಇತ್ತೆಂದರೆ they would love to come and see it. ಅಲ್ಲಿ ಬಂದು ಬೆಟ್ಟವನ್ನು ಏರಬೇಕು ಎಂದರೆ ಯಾರೂ ಬರುವುದಿಲ್ಲ. If you want to increase the tourism, if you want to give importance to that place ropeway is the must. ಇಂದಿನ latest technology ಯಲ್ಲಿ... Archaeology will come in the way. ಗುಡ್ಡ ಸೀಳುವ ಪ್ರಶ್ನೆಯೇ ಇಲ್ಲ. It is not of archaeological importance. ಅಂಜನಾದ್ರಿಯ ಮೇಲೆ ಒಂದು ಗುಡಿ ಇದೆ. ಗುಡಿಗೆ

ರೋಪ್‌ವೇ ಹಾಕಿ ಎಲ್ಲಾ ತರಹದ ಅನುಕೂಲಗಳನ್ನು ಕಲ್ಪಿಸಬೇಕು. ಅದನ್ನು ದಯವಿಟ್ಟು ಸರ್ಕಾರ ಮಾಡಬೇಕು.

ನನಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, 2022–23ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ನೀಡಿರುವ ತಮಗೆ ವಂದಿಸುತ್ತಾ, ಮಾನ್ಯ ಮುಖ್ಯಮಂತ್ರಿಯವರು ನವಕರ್ನಾಟಕ ನಿರ್ಮಾಣದ ಕನಸಿನೊಂದಿಗೆ ಮಂಡಿಸಿರುವ ಆಯವ್ಯಯವನ್ನು ಸ್ವಾಗತಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಸರ್ವವ್ಯಾಪಿ ಅಂದರೆ ಎಲ್ಲಾ ವರ್ಗಗಳಿಗೂ ಅನುದಾನವನ್ನು ನೀಡುವ ಮೂಲಕ ಅತ್ಯುತ್ತಮ ಆಯವ್ಯಯವನ್ನು ಮಂಡಿಸಿದ್ದಾರೆ. 2019ರಿಂದ ಕರ್ನಾಟಕವು ಕೋವಿಡ್–19 ಸಾಂಕ್ರಾಮಿಕ ರೋಗದಿಂದ ತತ್ತರಿಸಿ ಹೋಗಿದ್ದರೂ, ಆರ್ಥಿಕತೆಯ ಪುನಶ್ಚೇತನಗೊಳಿಸುವಂತೆ ಮಾಡಿರುವ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ.

ತಮಗೆ ತಿಳಿದಿರುವಂತೆ ಈ ಬಾರಿಯ ಆಯವ್ಯಯವು ಅತ್ಯಂತ ಜನಪ್ರಿಯವಾದುದೆಂದು ನಮಗೆ ಪತ್ರಿಕೆಗಳ ಸಂಪಾದಕೀಯ ಲೇಖನಗಳಿಂದ ತಿಳಿದು ಬಂದಿರುವ ವಿಷಯ. ಇದು ಅತ್ಯಂತ ಸತ್ಯದಿಂದಲೂ ಕೂಡಿದೆ. ಸಾಧಾರಣವಾಗಿ ಎಲ್ಲಾ ವರ್ಗಗಳಿಗೆ ಅನುದಾನವನ್ನು ನೀಡಲಾಗಿದೆ. ರೈತರಿಗೆ ಅನುಕೂಲವಾಗುವಂತಹ ಘೋಷಣೆಗಳಿವೆ. ಅಲ್ಲದೆ ಕೃಷಿ ಸಂಶೋಧನೆಗೆ ಆದ್ಯತೆಯನ್ನು ನೀಡಲಾಗಿರುವುದು ರೈತ ಪೀಳಿಗೆಗೆ ಅನುಕೂಲವಾಗಲಿದೆ. ಮಹಿಳೆಯರನ್ನು ಕೃಷಿ ಕ್ಷೇತ್ರಕ್ಕೆ ಸೆಳೆಯುವ ಪ್ರಯತ್ನವನ್ನು ಪ್ರತ್ಯೇಕವಾಗಿ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿಯನ್ನು ನೀಡುವ ಘೋಷಣೆ ಅತ್ಯಂತ ಸ್ವಾಗತಾರ್ಹ. ಕೃಷಿ ಕ್ಷೇತ್ರವಲ್ಲದೆ ಹೈನುಗಾರಿಕೆಗೆ ಸಹ ಆದ್ಯತೆಯನ್ನು ನೀಡಲಾಗಿದೆ. ಮೀನುಗಾರಿಕೆ ಕ್ಷೇತ್ರಕ್ಕೆ ಸಹ ಆದ್ಯತೆಯನ್ನು ನೀಡಲಾಗಿದೆ.

ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ವಿರೋಧ ಪಕ್ಷದವರು ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಪಾದಯಾತ್ರೆಯಂತಹ ನಾಟಕವನ್ನು ನಡೆಸುವಂತಹ ಈ ಸಮಯದಲ್ಲಿ ನಮ್ಮ ಮುಖ್ಯಮಂತ್ರಿಯವರು ಸದರಿ ಯೋಜನೆ ಜಾರಿಗೆ ರೂ.1೦೦೦ ಕೋಟಿಗಳನ್ನು ಘೋಷಿಸಿರುವುದು ಅತ್ಯಂತ ಸಮಯೋಚಿತ. ಈ ಸಂದರ್ಭದಲ್ಲಿ ಸದರಿ ಯೋಜನೆಯನ್ನು ಅತ್ಯಂತ ಶೀಘ್ರವಾಗಿ ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಕ್ರಿಯಾಯೋಜನೆಯನ್ನು ರೂಪಿಸಬೇಕೆಂದು ನಾನು ಈ ಮೂಲಕ ಒತ್ತಾಯಿಸುತ್ತೇನೆ.

ಅದೇ ರೀತಿ ಕೃಷ್ಣಾ ಮೇಲ್ದಂಡೆ 3ನೇ ಹಂತಕ್ಕೆ 5೦೦೦ ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಆದರೆ ಇಂತಹ ಯೋಜನೆಗಳನ್ನು ಆದಷ್ಟು ನಿಗದಿತ ಸಮಯದೊಳಗೆ ಪೂರ್ಣಗೊಳಿಸುವಂತಾಗಬೇಕು. ಪ್ರತಿ ವರ್ಷದ ಆಯವ್ಯಯದಲ್ಲಿಯೂ ಕೃಷ್ಣಾ ಮೇಲ್ದಂಡೆ ಯೋಜನೆಗಳ ಬಗ್ಗೆ ಪ್ರಸ್ತಾಪವಾಗುತ್ತಲೇ ಇರುತ್ತದೆ. ಆದರೆ ಇಂತಹ ಯೋಜನೆಗಳನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವಂತಹ ಕೆಲಸವಾಗಬೇಕು.

ಅದೇ ರೀತಿ ರಾಜ್ಯದ ಕೆರೆಗಳ ಅಭಿವೃದ್ಧಿಗೆ ಸಹ ಆದ್ಯತೆಯನ್ನು ನೀಡಲಾಗಿದೆ.

ರಾಜ್ಯದಲ್ಲಿ ಹರಿಯುವ ಎಲ್ಲಾ ನದಿಗಳು ನಶಿಸಿ ಹೋಗದಂತೆ, ನದಿಗಳಿಗೆ ತಡೆಗೋಡೆಯನ್ನು ನಿರ್ಮಾಣ ಮಾಡುವಂತಹ ಕಾರ್ಯವಾಗಬೇಕು ಹಾಗೂ ನದಿಗಳಿಂದ ಹೂಳೆತ್ತುವ ನೂತನ ಕಾರ್ಯಕ್ರಮ ಜಾರಿಯಾಗಬೇಕು.

ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಕಾರ್ಯದೊತ್ತಡವಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿರುವುದು ಅತ್ಯಂತ ಸಂತೋಷಕರ. ಆದರೆ, ಅದೇ ಸಮಯದಲ್ಲಿ ವೈದ್ಯರು ಮತ್ತು ಇತರೆ ಸಿಬ್ಬಂದಿಗಳ ಕೊರತೆಯಾಗದಂತೆ ನೋಡಿಕೊಳ್ಳುವುದು ಸರಕಾರದ ಆದ್ಯ ಕರ್ತವ್ಯವಾಗಿರಬೇಕೆಂಬುದು ನನ್ನ ಒತ್ತಾಯವಾಗಿದೆ. ಇದೇ ಧ್ಯೇಯೋದ್ದೇಶವನ್ನು ಇಟ್ಟುಕೊಂಡು ರಾಜ್ಯದ ಸರ್ವ ಜನತೆಗೆ ಉಚಿತ ಆರೋಗ್ಯ ದೊರಕುವಂತಾಗಲು ರಾಜ್ಯದ ಮೂಲೆ ಮೂಲೆಗಳಲ್ಲಿರುವ

ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ, ರಾಜ್ಯದ ಜನತೆ ಖಾಸಗಿ ಆಸ್ಪತ್ರೆಗಳಿಂದ ದೂರವುಳಿದು ಆರೋಗ್ಯ ದೃಷ್ಟಿಯಿಂದ ಆರ್ಥಿಕ ಸಂಕಷ್ಟದಿಂದ ದೂರವಾಗಬೇಕು.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ತಿಳಿಸಿದಂತೆ ಸರ್ಕಾರಿ ಶಾಲೆಗಳ ಮೂಲ ಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದಂತೆ ರೂ.೫೦೦ ಕೋಟಿಗಳನ್ನು ಒದಗಿಸಿರುವುದು ಸ್ವಾಗತಾರ್ಹ. ಶಿಕ್ಷಣ ಕ್ಷೇತ್ರದಲ್ಲಿಯೂ ಎಲ್ಲಾ ಸರ್ಕಾರಿ ಶಾಲೆಗಳ ಮೂಲ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವ ಮೂಲಕ ಯಾವುದೇ ಖಾಸಗಿ ವಿದ್ಯಾಕೇಂದ್ರಗಳಿಗಿಂತ ಕಡಿಮೆ ಇಲ್ಲದಂತೆ ನೋಡಿಕೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕು. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಶಾಲೆಗಳು ಸಹ ಯಾವುದೇ ಶಿಕ್ಷಕರು ಹಾಗೂ ಇನ್ನಿತರ ಸೌಲಭ್ಯಗಳ ಕೊರತೆಗಳು ಇಲ್ಲದಂತಾಗಬೇಕು. ಸರ್ವರಿಗೂ ಶಿಕ್ಷಣವೆಂಬುದು ಸರ್ಕಾರದ ಅಭಿಯಾನವಾಗಬೇಕು. ರಾಷ್ಟ್ರೀಯ ಶಿಕ್ಷಣ ನೀತಿ ಅಕ್ಷರಶಃ ತುರ್ತಾಗಿ ಜಾರಿಯಾಗಬೇಕು. ಅಂಗನವಾಡಿಗಳ ಅಭಿವೃದ್ಧಿ ಅತ್ಯಂತ ಸ್ವಾಗತಾರ್ಹ. ಅಂಗನವಾಡಿ ಕೇಂದ್ರಗಳನ್ನು ಪುನಶ್ಚೇತನಗೊಳಿಸಬೇಕು.

ಕೆ.ಪಿ.ಎಸ್.ಸಿ., ಯು.ಪಿ.ಎಸ್.ಸಿ., ಎಸ್.ಎಸ್.ಸಿ. ಬ್ಯಾಂಕಿಂಗ್, ರೈಲ್ವೆ, ಸಿ.ಡಿ.ಎಸ್., ನೀಟ್, ಜೆ.ಇ.ಇ. ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ "ಮುಖ್ಯಮಂತ್ರಿ ವಿದ್ಯಾರ್ಥಿ ಮಾರ್ಗದರ್ಶಿನಿ" ಯೋಜನೆಯನ್ನು ಆರಂಭಿಸಿರುವುದು ಸ್ವಾಗತಾರ್ಹ. ಇದರಿಂದ ಹೆಚ್ಚು ಹೆಚ್ಚು ಯುವ ಜನರು ಸದರಿ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ದೇಶದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವಂತಾಗಬೇಕು.

ಅಕ್ಷರ ದಾಸೋಹ ಯೋಜನೆಯಡಿ ಬಿಸಿಯೂಟ ಕಾರ್ಯಕರ್ತರ ಸೇವೆಯನ್ನು ಗುರುತಿಸಿ, ಬಿಸಿಯೂಟ ತಯಾರಕರಿಗೆ ಹಾಗೂ ಸಹಾಯಕರಿಗೆ ನೀಡುವ ಗೌರವಧನವನ್ನು ರೂ.೧೦೦೦ಗಳಿಗೆ ಹೆಚ್ಚಿಸಿರುವುದು ಸ್ವಾಗತಾರ್ಹ.

ರಾಜ್ಯದಲ್ಲಿನ ಅಪೌಷ್ಟಿಕತೆ ಸಂಬಂಧಿಸಿದಂತೆ ಪೌಷ್ಟಿಕತೆಯನ್ನು ಹೆಚ್ಚಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಅತ್ಯಂತ ಪ್ರಶಂಸನೀಯ. ಇದರಿಂದ ನಮ್ಮ ರಾಜ್ಯದ

ಮಕ್ಕಳು ಆರೋಗ್ಯವಂತರಾಗಿಬೇಕು. ಈ ದಿಸೆಯಲ್ಲಿ ಒಟ್ಟಾರೆಯಾಗಿ ರೂ.40,944 ಕೋಟಿ ಅನುದಾನ ಒದಗಿಸಿರುವುದು ಸ್ವಾಗತಾರ್ಹ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಕಷ್ಟು ಅನುದಾನವನ್ನು ನೀಡಿರುವುದು ಸರ್ವ ಜನಾಂಗದ ಅಭಿವೃದ್ಧಿಗೆ ಸಾಕ್ಷಿಯಾಗಿದೆ. ಕ್ರಿಶ್ಚಿಯನ್, ಹಿಂದುಳಿದವರು, ಅಲ್ಪಸಂಖ್ಯಾತರು, ಜೈನರು ಎಲ್ಲರಿಗೂ ಸಮಪಾಲು ನೀಡಲಾಗಿದೆ.

ಆಯವ್ಯಯದಲ್ಲಿ ರೂ.3500 ಕೋಟಿ ವೆಚ್ಚದಲ್ಲಿ 2275 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಯ ಅಭಿವೃದ್ಧಿ ಹಾಗೂ ಒಂಬತ್ತು ನೂತನ ರೈಲು ಮಾರ್ಗಗಳ ಉಪಕ್ರಮದಿಂದ ಮೂಲಭೂತ ಸೌಕರ್ಯವೂ ಸುಗಮವಾಗಿರುವುದಲ್ಲದೆ ಉದ್ಯೋಗ ಸೃಷ್ಟಿಗೂ ಪೂರಕವಾಗಿವೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಸುಮಾರು 6 ಲಕ್ಷಕ್ಕೂ ಹೆಚ್ಚು ಬಿ ಖಾತೆ ಆಸ್ತಿಗಳನ್ನು ಎ ಖಾತೆಗೆ ಪರಿವರ್ತಿಸಲು ಅನುಮೋದನೆ ನೀಡಿರುವುದು ಬೆಂಗಳೂರು ನಾಗರಿಕರಿಗೆ ನೀಡಿರುವ ಕೊಡುಗೆಯಾಗಿದೆ. ನನ್ನ ಮನೆ ಇರುವುದು ಬಿ ಖಾತೆಯಲ್ಲಿ. ಇದನ್ನು ಈ ಕೂಡಲೇ ಜಾರಿಗೆ ತರುವಂತಹದ್ದು ಸರ್ಕಾರದ ಕರ್ತವ್ಯವಾಗಿರಬೇಕು.

ಸರ್ವರಿಗೂ ಸೂರು ನೀಡುವುದು ಪ್ರತಿ ಸಲವೂ ಸರಕಾರದ ಘೋಷಣೆಯ ವಾಕ್ಯವಾಗಿದೆ. ಅದು ಹಾಗೆ ಆಗಬಾರದು. ಕೂಡಲೇ ಜಾರಿಗೆ ಬಂದು ಈ ಸರ್ಕಾರದ ಅವಧಿಯಲ್ಲಿ ಆ ಕಲ್ಪನೆ ಪರಿಪೂರ್ಣವಾಗಬೇಕು. ಸಾವಿರಾರು ಜನರಿಗೆ ಮನೆಗಳಿಲ್ಲ. ಮೊನ್ನೆ ರಾಮನಗರ ಜಿಲ್ಲೆಗೆ ಹೋಗಿದ್ದಾಗ ನೋಡಿದ್ದೇನೆ. ಆ ಕ್ಷೇತ್ರದವರು ಮುಖ್ಯಮಂತ್ರಿಗಳೂ ಆಗಿದ್ದರು. ಒಂದು ಸಾವಿರ ಜನ ಬೀದಿಯಲ್ಲಿದ್ದಾರೆ. ದಯವಿಟ್ಟು ಸರ್ಕಾರ ಅವರಿಗೆ ಮನೆ ಕಟ್ಟಿಕೊಡುವ ಕೆಲಸ ಮಾಡಿಕೊಡಬೇಕು ಎಂದು ಮನವಿ ಮಾಡುತ್ತೇನೆ.

(...ಮುಂದು)

**(257) 10-03-2022 (6.00) ಕೆಜಿ-ವಿಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅ.ದೇವೇಗೌಡ (ಮುಂದು):-**

ಮಾನ್ಯ ಮುಖ್ಯಮಂತ್ರಿಯವರು ಸರ್ವರ ಹಿತವನ್ನು ಬಯಸಿ ನಮ್ಮ ರಾಜ್ಯದ ಮೂಲೆ ಮೂಲೆಯಲ್ಲಿರುವ ತಿಗಳ, ಮಾಳ, ಮಾಳ ಮಾಲಗಾರ, ಕುಂಬಾರ, ಯಾದವ, ದೇವಾಡಿಗ, ಸಿಂಪಿ, ಕ್ಷತ್ರಿಯ, ಮೇದಾರ, ಕುಂಚಿ, ಕುರ್ಮ, ಪಿಂಜಾರ/ನದಾಫ್, ಕುರುಬ, ಬಲಿಜ, ಈಡಿಗ, ಮಡಿವಾಳ, ಹಡಪದ ಮೊದಲಾದ ಹಿಂದುಳಿದ ಸಮುದಾಯಗಳಲ್ಲದೇ, ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣ ಸಮುದಾಯಗಳ ಕಡೆಗೂ ಆಯವ್ಯಯದಲ್ಲಿ ಗಮನಹರಿಸಿರುವುದು ಎಲ್ಲರೂ ಗಮನಿಸಬೇಕಾದ ಅಂಶವಾಗಿದೆ. ಅಲ್ಲದೇ, ಇತರೆ ಧರ್ಮಗಳ ಕಡೆಯೂ ಗಮನಹರಿಸಿ ಮೊಟ್ಟ ಮೊದಲ ಬಾರಿಗೆ ಎಲ್ಲರ ಪ್ರೀತಿಗೆ ಪಾತ್ರವಾಗಿರುವುದು ಗಮನಿಸಬೇಕಾದ ಅಂಶವಾಗಿದೆ.

ಮಾನ್ಯ ಸಭಾಪತಿಯವರೇ, ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಸೇವೆಯ ಸಂಬಂಧದಲ್ಲಿ ವಿವಿಧ ಸಾರ್ವಜನಿಕ ಭದ್ರತಾ ಪಿಂಚಣಿ ಯೋಜನೆಗಳಡಿ 59.45 ಲಕ್ಷ ಫಲಾನುಭವಿಗಳಿಗೆ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸಲಾಗಿದೆ. ಅದೇರೀತಿ ದಾಳಿಗೊಳಗಾದ ಮಹಿಳೆಯರಿಗೆ ಮಾಸಿಕ ಪಿಂಚಣಿ ಹೆಚ್ಚಿಸಿರುವುದು ಅತ್ಯಂತ ಸ್ವಾಗತಾರ್ಹ. ನಾನು ಕರ್ನಾಟಕ ವಿಧಾನ ಪರಿಷತ್ತಿಗೆ ಆಯ್ಕೆಯಾದಾಗಿನಿಂದ ಈ ವಿಚಾರದ ಬಗ್ಗೆ ಒತ್ತಾಯ ಮಾಡಿಕೊಂಡು ಬಂದಿದ್ದೆನು. ಬೆಂಗಳೂರಿನ ನಾಲ್ಕು ದಿಕ್ಕುಗಳಲ್ಲಿಯೂ Super Speciality Hospital ಗಳನ್ನು ತೆರೆದಿರುವುದು ಮತ್ತು ಲಾಲ್‌ಬಾಗ್‌ನಂತೆ ಮಾನ್ಯ ಅಟಲ್ ಬಿಹಾರಿ ವಾಜಪೇಯಿ ರವರ ಹೆಸರಿನಲ್ಲಿ ಉದ್ಯಾನವನ್ನು ಪ್ರಾರಂಭಿಸಿರುವುದಕ್ಕೆ ನಿಜವಾಗಿಯೂ ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಸರ್ವರಿಗೂ ಒಪ್ಪುವಂತಹ ಆಯವ್ಯಯವನ್ನು ಮಂಡಿಸಿರುತ್ತಾರೆಂಬುದು ಅತ್ಯಂತ ಪ್ರಶಂಸನೀಯ. ಆದರೆ, ಆಯವ್ಯಯದಲ್ಲಿರುವ ಕಾರ್ಯಕ್ರಮಗಳು 2022ರ ಡಿಸೆಂಬರ್ 31 ರೊಳಗೆ ಜಾರಿಯಾಗಬೇಕೆಂಬುದೇ ನನ್ನ ಹಂಬಲ. ಇದಕ್ಕೆ ಅಧಿಕಾರಶಾಹಿ ಸ್ಪಂದಿಸುವಂತಾಗಬೇಕು. ಈ ದಿಸೆಯಲ್ಲಿ ಮಾನ್ಯ ಮುಖ್ಯಮಂತ್ರಿಯರು ತಮ್ಮ

ಅಧಿಕಾರಿ/ಸಿಬ್ಬಂದಿಗಳ ವಿಶ್ವಾಸವನ್ನು ಗಳಿಸಬೇಕು. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರು ಆಯವ್ಯಯದ ಮೇಲಿನ ಚರ್ಚೆಗೆ ಉತ್ತರ ನೀಡುವ ಸಮಯದಲ್ಲಿ ಕೇಂದ್ರ ಸರ್ಕಾರಿ ನೌಕರರಿಗೆ ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ಇರುವ ವೇತನ ತಾರತಮ್ಯವನ್ನು ಹೋಗಲಾಡಿಸಬೇಕು. ಏಕೆಂದರೆ, ನಾನು ಸರ್ಕಾರಿ ನೌಕರನಾಗಿದ್ದೆ. ಸರ್ಕಾರಿ ನೌಕರರ ಜೀವನ ಬಹಳ ಕಷ್ಟ ಇದೆ. ಅವರಿಗೆ ಹಳೆಯ ಪಿಂಚಣಿ ಯೋಜನೆಯನ್ನು ತೆಗೆದಿದ್ದಾರೆ. New Pension ಯೋಜನೆಯಿಂದ ಅವರು ನಿವೃತ್ತರಾದ ಮೇಲೆ ಜೀವನ ಮಾಡುವುದು ಬಹಳ ಕಷ್ಟವಾಗುತ್ತದೆ. ಆ ವಯಸ್ಸಿನಲ್ಲಿ ಅವರ ಬಳಿ ಹಣ ಇರುವುದಿಲ್ಲ. ಅವರ ಆರೋಗ್ಯ ಕೆಟ್ಟರೆ, ಅದರ ಚಿಕಿತ್ಸೆಗೆ ಹಣ ಇರುವುದಿಲ್ಲ. ಇಂದಿಗೂ ಎಷ್ಟೊ ಜನ ಸರ್ಕಾರಿ ನೌಕರರಿಗೆ ಸ್ವಂತ ಮನೆ ಇರುವುದಿಲ್ಲ. ಕೇಂದ್ರ ಸರ್ಕಾರಿ ನೌಕರರಿಗೆ ವಸತಿ ಗೃಹಗಳು ಇರುತ್ತವೆ. ಅವರಿಗೆ medical facilities ಇರುತ್ತದೆ. ಅವರಿಗೆ pension ಹೆಚ್ಚಿಗೆ ಇರುತ್ತದೆ. ಆದ್ದರಿಂದ, ರಾಜ್ಯ ಸರ್ಕಾರಿ ನೌಕರರಿಗೆ ಅಗತ್ಯ ಕ್ರಮ ಕೈಗೊಳ್ಳುವಂತಹ ಘೋಷಣೆಯನ್ನು ಮಾಡಬೇಕೆಂದು ಹಾಗೂ ನನ್ನ ಹಲವು ದಿನಗಳ ಬೇಡಿಕೆಯನ್ನು ಪೂರೈಸಬೇಕೆಂದು ರಾಜ್ಯ ಸರಕಾರಿ ನೌಕರರ ಪರವಾಗಿ ಕೋರುತ್ತೇನೆ. ಇನ್ನು ಮುಂದೆ ರಾಜ್ಯದ ವತಿಯಂದ ಯಾವುದೇ ವೇತನ ಆಯೋಗದ ರಚನೆ ಬೇಕಾಗಿಲ್ಲ. ಕೇಂದ್ರ ಸರ್ಕಾರದವರ ವೇತನ ಆಯೋಗದ ಶಿಫಾರಸ್ಸನ್ನೇ ರಾಜ್ಯ ಸರ್ಕಾರವು ತನ್ನಿಂದ ತಾನೇ ಜಾರಿಯಾಗುವಂತಹ ಕ್ರಮವನ್ನು ಕೈಗೊಳ್ಳಬೇಕೆಂದು ಸಹ ಕೋರುತ್ತೇನೆ. ಈ ಸೌಲಭ್ಯವನ್ನು ನೀಡಿ ಆಡಳಿತವು ಚುರುಕುಗೊಳ್ಳುವಂತಾಗಬೇಕು. ಆಡಳಿತವು ಬಿಗಿಯಾಗಿ ಸರ್ಕಾರಿ ನೌಕರರು ತಮ್ಮ ತಮ್ಮ ಕರ್ತವ್ಯಗಳನ್ನು ಶಿಸ್ತುಬದ್ಧವಾಗಿ ನೆರವೇರಿಸುವಂತಹ ಬಿಗಿಕ್ರಮಗಳನ್ನು ತೆಗೆದುಕೊಳ್ಳಬೇಕು. ಏಕೆಂದರೆ, ಆಡಳಿತದಲ್ಲಿನ ಭ್ರಷ್ಟಾಚಾರವನ್ನು ಆಮೂಲಾಗ್ರವಾಗಿ ಕಿತ್ತುಹಾಕುವಂತಾಗಬೇಕು. ಸರ್ಕಾರಿ ಸಿಬ್ಬಂದಿಗಳ ನೇಮಕದಲ್ಲಿಯೂ merit ಗೆ ಆದ್ಯತೆ ನೀಡುವಂತಾಗಬೇಕು. ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಒಟ್ಟಾರೆಯಾಗಿ, ಸ್ವಚ್ಛ ಮತ್ತು ಚುರುಕಿನ ಆಡಳಿತವಾಗಬೇಕೆಂಬುದು ನನ್ನ ಹಂಬಲವಾಗಿದೆ.

ಮಾನ್ಯ ಸಭಾಪತಿಯವರೇ, ನಿರುದ್ಯೋಗಿ ಪದವೀಧರರಿಗೆ ಅವರು ಉದ್ಯೋಗವನ್ನು ಪಡೆಯುವವರೆಗೆ, ಅವರಿಗೆ ಐದು ಸಾವಿರ ರೂಪಾಯಿಗಳ ನಿರುದ್ಯೋಗ ಭತ್ಯೆಯನ್ನು ಘೋಷಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮಾನ್ಯ ಸದಸ್ಯರೊಬ್ಬರು ಬೆಂಗಳೂರು ನಗರಲ್ಲಿ public ಶಾಲೆಗಳನ್ನು ಮುಂದುವರಿಸಿಲ್ಲವೆಂದು ಹೇಳಿದ್ದಾರೆ. ಈಗಾಗಲೇ ಬೆಂಗಳೂರು ನಗರದಲ್ಲಿ 20 public ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಈಗ ಎಲ್ಲಾ ತಾಲ್ಲೂಕುಗಳಲ್ಲಿಯೂ public ಶಾಲೆಗಳು ಇವೆ. ಈಗ ಪುನಃ ಬೆಂಗಳೂರು ನಗರದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಸರ್ಕಾರಿ ಕನ್ನಡ ಶಾಲೆಯ ಮೂಲಭೂತ ಸೌಲಭ್ಯಗಳ ಬಗ್ಗೆ ಹೇಳಿದ್ದಾರೆ. ಮಾನ್ಯ ಸದಸ್ಯರೊಬ್ಬರು ಹೂ ಬೆಳೆಗಾರರಿಗೆ ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಇವರಿಗೆ ಈಗಾಗಲೇ ಪರಿಹಾರವನ್ನು ಕೊಟ್ಟಿದ್ದಾರೆ. ಇದು ತಮಗೂ ಗೊತ್ತಿದೆ. ಈ ಬಜೆಟ್‌ನಲ್ಲಿ ಸರ್ವತೋಮುಖ ಅಭಿವೃದ್ಧಿಗಾಗಿ ಎಲ್ಲಾ ಕ್ಷೇತ್ರಗಳಿಗೂ ಆದ್ಯತೆಯನ್ನು ನೀಡಿದ್ದಾರೆ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಧನ್ಯವಾದಗಳನ್ನು ಹೇಳುತ್ತೇನೆ.

ಮಾನ್ಯ ಸಭಾಪತಿಯವರೇ, ಇದು ಸರ್ವೋದಯ ಬಜೆಟ್ ಆಗಿದೆ. "ಸರ್ವೇ ಜನಾಃ ಸುಖಿನೋಭವಂತು" ಎಂಬಂತೆ ಯಾವುದಕ್ಕೂ ಹೊಸ ತೆರಿಗೆಯನ್ನು ಹಾಕಿಲ್ಲ. ಯಶಸ್ವಿನಿ ಯೋಜನೆಯನ್ನು ಪುನಃ ಜಾರಿಗೆ ತಂದಿರುವುದಕ್ಕೆ ಮಾನ್ಯ ಮುಖ್ಯಮಂತ್ರಿಯವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಪುಣ್ಯ ಕೋಟಿಗಳೊಂದಿಗೆ ಕಾಶಿಯಾತ್ರೆಗೆ ಹೋಗಿ ಬರುವವರಿಗೆ ಐದು ಸಾವಿರ ರೂಪಾಯಿಗಳನ್ನು ನೀಡಿದ್ದಾರೆ. ಏಕೆಂದರೆ, ಕೆಲವರು ಹಣಕಾಸಿನ ತೊಂದರೆಯಿಂದ ಹೋಗುವುದಕ್ಕೆ ಆಗುವುದಿಲ್ಲ. ಇದಕ್ಕೆ ಸರ್ಕಾರಕ್ಕೆ ಅಭಿನಂದನೆಗಳು. ಬೆಂಗಳೂರು ಅಭಿವೃದ್ಧಿಗೆ 8,409 ಕೋಟಿ ರೂಪಾಯಿಗಳನ್ನು ನೀಡಿದ್ದಾರೆ. ಈ ಆಯವ್ಯಯದಲ್ಲಿ ಎಲ್ಲದಕ್ಕೂ ಸಾಮಾಜಿಕ ನ್ಯಾಯವನ್ನು ನೀಡಿದ್ದಾರೆ. ಸಾರ್ವಜನಿಕರ ಜೇಬಿಗೆ ಯಾವುದೇ ರೀತಿಯಲ್ಲೂ ಸಹ ಕತ್ತರಿ ಹಾಕಿಲ್ಲ. ಬೆಂಗಳೂರಿಗೆ bumper gift ಅನ್ನು ಕೊಟ್ಟಿದ್ದಾರೆ. ಹಾಗಾಗಿ, ಮಾನ್ಯ ಮುಖ್ಯಮಂತ್ರಿಯವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. 33 ಕಿಲೋಮೀಟರ್ ಉದ್ದದ Metro ಮಾರ್ಗವನ್ನು ವಿಸ್ತರಿಸಿದ್ದಾರೆ. ಹಾಗೆಯೇ, ಗೊರಗುಂಟೆ ಪಾಳ್ಯದ grade separator ವಿಸ್ತರಿಸಿದ್ದಾರೆ. ಕಾವೇರಿ 5ನೇ ಹಂತವನ್ನು

ತಂದಿರುವುದು ನಿಜವಾಗಲೂ ಸಂತೋಷ ತಂದಿದೆ. ವಿರೋಧ ಪಕ್ಷದವರು ಸಲಹೆ ಮತ್ತು ಮಾರ್ಗದರ್ಶನವನ್ನು ಕೊಡಬೇಕು. ಕೇವಲ ಟೀಕೆ ಮಾಡಿದರೆ ಏನು ಪ್ರಯೋಜನ ಆಗುವುದಿಲ್ಲ. ಸಾಮಾಜಿಕ ಸಮಾನತೆ, ರಾಷ್ಟ್ರ ಕವಿ ಕುವೆಂಪುರವರು ಹೇಳಿದಂತೆ, ವಿಶ್ವಮಾನವ ಸಂದೇಶವನ್ನು ಸಾರುವಂತಹ "ಸರ್ವಜನಾಂಗದ ಶಾಂತಿಯ ತೋಟ" ಎನ್ನುವ ರೀತಿಯಲ್ಲಿ ಈ ಆಯ್ಯವಯವನ್ನು ಮಾಡಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಐದು ವಲಯಗಳನ್ನಾಗಿ ಮಾಡಿದ್ದಾರೆ. ವಲಯ-1 ರಲ್ಲಿ ಕೃಷಿ ಮತ್ತು ಪೂರಕ ಚಟುವಟಿಕೆಗಳು. ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವ ದೃಷ್ಟಿಯಿಂದ ಇದೇ ಮೊದಲ ಬಾರಿಗೆ ಪ್ರತಿ ಎಕರೆಗೆ ಡೀಸೆಲ್‌ಗೆ 250 ರೂಪಾಯಿಗಳ ಸಹಾಯಧನವನ್ನು ನೀಡಿದ್ದಾರೆ. ರೈತ ಶಕ್ತಿ ಎಂಬ ಹೊಸ ಯೋಜನೆಗೆ 500 ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ವಲಯ-2 ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿ, ವಲಯ-3 ಆರ್ಥಿಕ ಅಭಿವೃದ್ಧಿಗೆ ಉತ್ತೇಜನ. ಸರ್ವರಿಗೂ ಸಮಬಾಳು ಮತ್ತು ಸರ್ವರಿಗೂ ಸಮಪಾಲು ಎನ್ನುವ ದೃಷ್ಟಿಯಿಂದ ಆರ್ಥಿಕ ಸಮಾನತೆಯನ್ನು ನೀಡಿದ್ದಾರೆ.

ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಬೆಂಗಳೂರು ಅಭಿವೃದ್ಧಿಯ ಬಗ್ಗೆ ಮತ್ತು ಸಂಸ್ಕೃತಿ ಪರಂಪರೆಯ ಬಗ್ಗೆ, ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಮತ್ತು ಆಡಳಿತ ಸುಧಾರಣೆಯ ಬಗ್ಗೆ ಒತ್ತು ನೀಡಿದ್ದಾರೆ. ಒಟ್ಟಾರೆಯಾಗಿ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರುವ ಈ ಒಂದು ಅವರ ಚೊಚ್ಚಲ ಆಯವ್ಯಯದಲ್ಲಿ ಸರ್ವರ ಮೆಚ್ಚುಗೆಗೆ ಪಾತ್ರರಾಗಿ ಎಲ್ಲಾ ಯೋಜನೆಗಳಿಗೆ ಆದ್ಯತೆ ನೀಡಿರುವುದರಿಂದ ಒಂದು ಸಮತೋಲನ ಆಯವ್ಯಯವೆಂದು ಭಾವಿಸಿ, ಅದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ಒಂದು ಚರ್ಚೆಯಲ್ಲಿ ನನಗೆ ಮಾತನಾಡಲು ಅವಕಾಶ ನೀಡಿದ ಸನ್ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಈ ಸಾಲಿನಲ್ಲಿ 119 ಪುಟಗಳಲ್ಲಿ 430 ವಿಷಯಗಳನ್ನು ಒಳಗೊಂಡ ಬಜೆಟ್‌ನ್ನು ಮಂಡಿಸಿದ್ದಾರೆ. ಈ ಬಜೆಟ್‌ನಲ್ಲಿ ನಮ್ಮ ನಾಡಿನ ಹೆಸರಾಂತ ರಾಷ್ಟ್ರಕವಿ ಕುವೆಂಪು, ಶ್ರೀ ಎಂ.ಗೋಪಾಲಕೃಷ್ಣ ಅಡಿಗ, ಶ್ರೀ ಸೊನ್ನಲಿಗೆಯ ಸಿದ್ಧರಾಮ, ಶ್ರೀ ಬಸವಣ್ಣ, ಶ್ರೀ ಚನ್ನವೀರ ಕಣವಿ

ಮತ್ತು ಶ್ರೀ ಅಕ್ಕಮಹಾದೇವಿಯವರ ಸ್ಮರಣೆ ಮಾಡಿಕೊಂಡಿದ್ದಾರೆ. ಹಾಗೆಯೇ ಅವರ ನುಡಿಗಳ ಬಗ್ಗೆ ಸಹ ಮಾತನಾಡಿದ್ದಾರೆ. ಅವುಗಳನ್ನು ಕವ್ಯಾತ್ಮಕವಾಗಿ ಹೇಳಿದ್ದಾರೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಈ ರಾಜ್ಯದಲ್ಲಿ ಅವರ ಪಕ್ಷದಲ್ಲಿ ಬೆಳೆದುನಿಂತಿರುವಂತಹ ಒಂದು ರಾಜಕೀಯ ಶಕ್ತಿ. ಅದೇರೀತಿ ನಮ್ಮ ಪಕ್ಷದಲ್ಲಿಯೂ ಇದ್ದಾರೆ. ಜೆಡಿ(ಎಸ್) ನಲ್ಲಿಯೂ ಇದ್ದಾರೆ. ಹಾಗಾಗಿ, ಶ್ರೀ ಬಿ.ಎಸ್.ಯಡಿಯೂರಪ್ಪನವರು ಬಹಳ ಪ್ರಮುಖವಾದಂತಹ ಶಕ್ತಿ. ಅಂತಹ ಶಕ್ತಿಯನ್ನು ಬದಲಾಯಿಸಿ, ಆ ಪಕ್ಷದ ಪ್ರತಿರೂಪವಾಗಿ ಶ್ರೀ ಬಸವರಾಜ ಬೊಮ್ಮಾಯಿರವರು ರಾಜ್ಯದ ಮುಖ್ಯಮಂತ್ರಿಗಳಾಗಿ ಅಧಿಕಾರಕ್ಕೆ ಬಂದಾಗ ನಮಗೆ ಒಂದು ನಿರೀಕ್ಷೆ ಇತ್ತು. ನಾನು ಅನ್ಯ ಪಕ್ಷದವನು ಆದರೂ ಸಹ ಏನು ಒಂದು ರೀತಿಯಲ್ಲಿ ಹೊಸತನವನ್ನು ಬಯಸಿದ್ದೆವು. ಅದೇರೀತಿ ಮಾಧ್ಯಮದವರು ಸಹ ಶ್ರೀ ಬಸವರಾಜ ಬೊಮ್ಮಾಯಿರವರನ್ನು Common Man: CM ಎಂದು ಹೇಳಿದ್ದರು. ಮೊದಲ ದಿವಸದಿಂದಲೇ, "ಹಾರ ತುರಾಯಿ ಬೇಡ" ಎಂದು ಹೇಳಿದ್ದರು. ಆಗ ನಮಗೆ ಬಹಳ ನಿರೀಕ್ಷೆ ಮೂಡಿತ್ತು. Social Media ದಲ್ಲೂ ಸಹ "ಬಿಜೆಪಿಯ ಬದಲಾವಣೆಯ ಮುಖ ಶ್ರೀ ಬಸವರಾಜ ಬೊಮ್ಮಾಯಿರವರು" ಎಂದು ಹೇಳುತ್ತಿದ್ದರು. ಅದೇರೀತಿ ನಾವು ಬಜೆಟ್‌ನಲ್ಲಿಯೂ ಸಹ ಅಂತಹ ಬದಲಾವಣೆಗಳನ್ನು ಬಯಸಿದ್ದೆವು. ಬಜೆಟ್‌ನಲ್ಲಿ ಆಡಳಿತಕ್ಕೆ ಚುರುಕನ್ನು ಮುಟ್ಟಿಸುತ್ತಾರೆ ಎಂಬ ನಿರೀಕ್ಷೆ ಸಹಜವಾಗಿ ಇತ್ತು. ಮಾನ್ಯ ಮುಖ್ಯಮಂತ್ರಿಯವರ ತಂದೆಯವರು ಸಹ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅವರು ರಾಜಕೀಯವಾಗಿ ಬಹಳ ಅನುಭವ ಇದ್ದಂತಹವರು. ಹಾಗಾಗಿ, ಹೊಸದಾಗಿ ಬದಲಾವಣೆಯನ್ನು ಕಾಣಬಹುದೇನೋ, ಒಂದು ಹೊಸ ರೀತಿಯಾದ ಕ್ರಾಂತಿಕಾರಿಯಾದ ಬಜೆಟ್‌ನ್ನು ಕೊಡಬಲ್ಲರು, ಅವರು ಸಮರ್ಥರಿದ್ದಾರೆ ಎನ್ನುವಂತಹ ನಿರೀಕ್ಷೆ ಇತ್ತು.

(ಮುಂದು.,)

**(258) 10-03-2022 (6.10) ಎಂ.ವಿ-ಬಿಎನ್‌ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು...):-**

ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ಕೋವಿಡ್-19 ಯಾರೂ ಸಹ ಬಯಸಿ ಬಂದಿರುವುದು ಅಲ್ಲ. ಕೋವಿಡ್-19 ಅನಿರೀಕ್ಷಿತವಾಗಿ ಇಡೀ ಜಗತ್ತಿಗೆ ಬಂತು. ಅದು ಅಂತರರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯ ಇವುಗಳೆಲ್ಲದರ ಮೇಲೂ ಕೂಡ ಅದರದೇ ಆದಂತಹ ಪರಿಣಾಮವನ್ನು ಬೀರಿರುವಂಥದ್ದು ಸ್ಪಷ್ಟವಾಗಿ ಇದೆ. ಈಗ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ನಾವು ಯಾವುದಾದರೂ ವಿಚಾರಗಳನ್ನು ವಿಶ್ಲೇಷಣೆ ಮಾಡುವಂತಹ ಸಂದರ್ಭದಲ್ಲಿ, 'before covid-19 and after covid-19' ಎಂದು ಹೇಳಬಹುದು. ಇದರಿಂದ ಎಲ್ಲಾ ರಂಗಗಳಲ್ಲೂ ಕೂಡ ಬಹಳಷ್ಟು ಬದಲಾವಣೆಗಳನ್ನು ನೋಡಬಹುದು. ಕೋವಿಡ್-19 ಬಂದ ನಂತರ, ನಾವು ನಿಜವಾಗಿ ಆರ್ಥಿಕತೆಯನ್ನು ಬಹಳ ಆಳವಾಗಿ ಅಧ್ಯಯನ ಮಾಡಿದರೆ, ಎಲ್ಲೋ ಒಂದು ಕಡೆ ಆರ್ಥಿಕ ವ್ಯವಸ್ಥೆಯೇ ಕುಸಿದು ಹೋಗಿರುವುದನ್ನು ನೋಡುತ್ತೇವೆ. ಮೂರು ವರ್ಷಗಳ ಕಾಲ ಕೋವಿಡ್-19ನ ರಾಕ್ಷಸನ ಆರ್ಭಟದಲ್ಲಿ ನಲುಗಿರುವಂತಹ ದೊಡ್ಡ ವರ್ಗವೇ ಈ ಸಮಾಜದಲ್ಲಿ ನಿರ್ಮಾಣವಾಗಿರುವುದನ್ನು ನಾವು ನೋಡಬಹುದು. ಅದರಲ್ಲೂ ವಿಶೇಷವಾಗಿ ಪ್ರವಾಸೋದ್ಯಮ, ಶೈಕ್ಷಣಿಕವಾಗಿ ಮತ್ತು hospitality industry ಯಾವುದೆಲ್ಲಾ ಇತ್ತೋ ಅದೆಲ್ಲಾ. ಈಗ ಹೋಟೆಲ್ ಉದ್ಯಮದಲ್ಲಿ ಹೋಟೆಲ್ ನಡೆಸುತ್ತಿದ್ದಂತಹವರು, residential hotel ಗಳನ್ನು ನಡೆಸುತ್ತಿದ್ದಂತಹವರು. ಅದರಲ್ಲೂ ಪ್ರವಾಸೋದ್ಯಮವನ್ನು ನಂಬಿ ಆ ಕ್ಷೇತ್ರದಲ್ಲಿ ಜೀವನ ಮಾಡುವುದಕ್ಕೆ ತಮ್ಮ ಬದುಕನ್ನು ಕಟ್ಟಿಕೊಂಡಿದ್ದಂತಹವರ ಮೇಲೆ ಆದಂತಹ ಪರಿಣಾಮ; ಅದರ ಜೊತೆಗೆ ನಿವೃತ್ತಿ ಮತ್ತು ಊರುಗಳಲ್ಲಿ ಇದ್ದಂತಹ ಜಮೀನು ಮತ್ತು ನಿವೇಶನಗಳನ್ನು ಮಾರಿ, ಭದ್ರತೆಗೆ ಎಂದು ಬಾಡಿಗೆ ರೂಪದಲ್ಲಿ ಆದಾಯ ಇದ್ದರೆ ತಮ್ಮ ಜೀವನ ಮಾಡಿಕೊಂಡು ಹೋಗಬಹುದೆಂದು, ಅದು ವೃದ್ಧಾಪ್ಯ ಜೀವನಕ್ಕೆ ಒಂದು ಆಸರೆಯಾಗುತ್ತದೆಂದು, ಮನೆಗಳನ್ನು ಕಟ್ಟಿಕೊಂಡು ಬಾಡಿಗೆಗೆ ಕೊಟ್ಟಿದ್ದರು. ಆಮೇಲೆ ಪಿ.ಜಿ.ಗಳ ಬಗ್ಗೆ ಹೇಳುವುದಾದರೆ, ಪಿ.ಜಿ.ಗಳನ್ನು ಬಹುತೇಕ ಮಧ್ಯಮ ವರ್ಗದ ಜನರು ಬಹಳ ಕಷ್ಟಪಟ್ಟು ಪ್ರಾರಂಭ

ಮಾಡಿದ್ದರು. ಆ ಪಿ.ಜಿ.ಗಳನ್ನು ಸಾಹುಕಾರರು, industrialists ಮತ್ತು ದುಡ್ಡು ಇರುವವರು ಪಿ.ಜಿ.ಗಳನ್ನು ನಡೆಸುವುದಕ್ಕೆ ಹೋಗುವುದಿಲ್ಲ. ಮಧ್ಯಮ ವರ್ಗದ ಜನರು ಬಹಳ ಶ್ರಮಪಟ್ಟು ತಾವು ಕೂಡಿಟ್ಟ ಹಣದಲ್ಲಿ ಪಿ.ಜಿ.ಗಳನ್ನು ನಡೆಸುತ್ತಿದ್ದವರ ಪರಿಸ್ಥಿತಿ ಏನಾಗಿದೆ ಎಂದು ನೋಡಬೇಕಾಗಿದೆ. ಏಕೆಂದರೆ, ಇವತ್ತು work from home. ಈಗ ಕೋವಿಡ್-19 ಬರುವುದಕ್ಕಿಂತ ಮುಂಚೆ, work from home ಎನ್ನುವ concept ಅನ್ನು ಕೇಳಿರಲಿಲ್ಲ. ಅದು ಆ ರೀತಿ ಇತ್ತೋ ಏನೋ, ಆದರೆ ಬಹಳ ಕಡಿಮೆ ಇತ್ತು. ಕೋವಿಡ್-19 ನಂತರ work from home ಎಂಬ concept ಅಗಾಧವಾಗಿ ಬೆಳೆದಿದೆ. ನೌಕರರು ಇನ್ನು ಸಹ ಕಛೇರಿಗಳಿಗೆ ಹೋಗಿಲ್ಲ. ಆ ಸಂದರ್ಭಗಳಲ್ಲಿ ಪಿ.ಜಿ.ಗಳಲ್ಲಿ ಇದ್ದಂತಹವರು ಮತ್ತು ಕೆಲಸ ಮಾಡುತ್ತಿದ್ದಂತಹವರು ಆ ಪಿ.ಜಿ.ಗಳನ್ನು ತೊರೆದು ಹೋದಂಥದ್ದು, ಹಾಗೆಯೇ ಬಾಡಿಗೆ ಮನೆಗಳನ್ನು ತೊರೆದು ಹೋದಂಥದ್ದು ಇದೆ. ಅದರ ಜೊತೆಗೆ ದೊಡ್ಡ ದೊಡ್ಡ ಕಾಲ್ ಸೆಂಟರ್ ಕಂಪನಿಗಳ ಹತ್ತಿರ ಮೂರು ಮಹಡಿ, ನಾಲ್ಕು ಮಹಡಿ ಮತ್ತು ಐದು ಮಹಡಿಗಳನ್ನು ತೆಗೆದುಕೊಂಡು ಕೆಲಸ ನಿರ್ವಹಿಸುತ್ತಿದ್ದರು. ಅಲ್ಲಿ ಯಾರು ಕೆಲಸಗಳನ್ನು ಮಾಡುತ್ತಿದ್ದರು ಅವರು ಸಹ ಅದನ್ನು ಬಿಟ್ಟುಬಿಟ್ಟರು. ಇವತ್ತು work from home ಎಂಬ ಅವಕಾಶವನ್ನು ಬಳಸಿಕೊಂಡಿದ್ದರಿಂದ ಬಾಡಿಗೆಯನ್ನು ನಂಬಿ ಜೀವನ ಮಾಡುತ್ತಿದ್ದವರು ಬ್ಯಾಂಕು ಮತ್ತು ಇನ್ನಿತರೆ ಸಂಸ್ಥೆಗಳಲ್ಲಿ ಸಾಲಗಳನ್ನು ತಂದು ಜೀವನ ಮಾಡುತ್ತಿದ್ದರು. ಇವತ್ತು ಅಂತಹವರ ಪರಿಸ್ಥಿತಿ ಏನಾಗಿದೆ? ಈಗ ಐ.ಟಿ.-ಬಿ.ಟಿ., ಇವುಗಳಿಗೆ ಅಷ್ಟೆ ಸೀಮಿತವಾಗಿ ಹೇಳುವುದಾದರೂ ಸಹ ಇವುಗಳನ್ನು ನಂಬಿಕೊಂಡು ಟ್ಯಾಕ್ಸಿ ಡ್ರೈವರ್‌ಗಳು ಹಳ್ಳಿಗಾಡಿನಿಂದ ಬಂದು ಓಲಾ, ಉಬರ್ ಮತ್ತು ಟ್ರಾವೆಲ್ ಏಜೆನ್ಸಿಗಳಲ್ಲಿ ಟ್ಯಾಕ್ಸಿ, ಟೆಂಪೊ ಟ್ರಾವೆಲರ್‌ಗಳನ್ನು ಹಾಕಿಕೊಂಡು ಡ್ರೈವರ್‌ಗಳಾಗಿ ಒಂದೆರಡು ಗಾಡಿಗಳ ಮಾಲೀಕರಾಗಿ, ಹಗಲು-ರಾತ್ರಿ ಕೆಲಸ ಮಾಡುತ್ತಿದ್ದರು. ಅಂತಹವರ ಪರಿಸ್ಥಿತಿ ಏನಾಗಿದೆ ಎಂದು ಸಹ ನೋಡಬೇಕು. ಅದು ಬಜೆಟ್‌ನಲ್ಲಿ reflect ಆಗುತ್ತದೆ ಎಂದುಕೊಂಡಿದ್ದೆವು. ಮಾನ್ಯ ರಾಜ್ಯಪಾಲರು ಭಾಷಣ ಮಾಡುವಂತಹ ಸಂದರ್ಭದಲ್ಲಿ ಬಹಳಷ್ಟು ಪ್ರಮುಖವಾಗಿ ಮಾನ್ಯ ರಾಜ್ಯಪಾಲರ ಬಾಯಿಯಲ್ಲಿ ಏನನ್ನು ಹೇಳಿಸಿದರು ಎಂದರೆ, ಕೋವಿಡ್-19 ಅನ್ನು ಸಮರ್ಥವಾಗಿ ನಿರ್ವಹಣೆ ಮಾಡಿದ್ದೇವೆ. ಕೋವಿಡ್-19 ಪರಿಸ್ಥಿತಿಯನ್ನು ನಾವು ಬಹಳಷ್ಟು ಸಮರ್ಥವಾಗಿ ಎದುರಿಸಿದ್ದೇವೆ ಮತ್ತು ನಾವು ಇಷ್ಟೆಲ್ಲಾ ಮಾಡಿದ್ದೇವೆಂದು, ಸಾಕಷ್ಟು ವಿಚಾರಗಳನ್ನು ಭಾಷಣದಲ್ಲಿ ತಿಳಿಸಿದರು.

ಸಾಮಾನ್ಯವಾಗಿ ರಾಜ್ಯಪಾಲರ ಭಾಷಣ ಬಜೆಟ್‌ನಲ್ಲಿ indicate ಆಗುತ್ತದೆ. ಈಗ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನೆಲ್ಲಾ ಹೇಳುತ್ತಾರೆಂದರೆ, ಮಾಡಿರುವಂಥದ್ದು, ನಡೆದಿರುವಂಥದ್ದು ಮತ್ತು ಮುಂದೆ ಮಾಡಬೇಕು ಎನ್ನುವಂಥದ್ದರ ಮುನ್ಸೂಚನೆಯೇ ರಾಜ್ಯಪಾಲರ ಭಾಷಣ. ಅದನ್ನು ಸರ್ಕಾರ ಅವರ ಕೈಗೆ ಕೊಟ್ಟು ಮಾತನಾಡಿಸುವಂತಹ ಸಂಪ್ರದಾಯ ಇರುವಂಥದ್ಧು. ನಾವು ಬಜೆಟ್‌ನ ನಿರೀಕ್ಷೆಯಲ್ಲಿ  ಇದ್ದೆವು. ಈ ವಿಚಾರಕ್ಕೆ ಬಂದಂತಹ ಸಂದರ್ಭದಲ್ಲಿ ಶಿವಮೊಗ್ಗದ ಮಾನ್ಯ ಆಯನೂರು ಮಂಜುನಾಥ್‌ರವರು ಇಲ್ಲೇ ಇದ್ದಾರೆ. ನನಗೆ ಶ್ರೀ ಪ್ರಕಾಶ್ ಎನ್ನುವವರು  ಗೊತ್ತಿಲ್ಲ. ನಾನು ಪತ್ರಿಕೆಗಳಲ್ಲಿ ಅವರ ಹೆಸರನ್ನು ಓದಿದ್ದೇನೆ. ಅವರು ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಟ್ರಾವೆಲ್ಸ್ ಏಜೆನ್ಸಿಯನ್ನು ನಡೆಸುತ್ತಿದ್ದಂತಹವರು ಆತ್ಮಹತ್ಯೆ ಮಾಡಿಕೊಂಡುಬಿಟ್ಟರು. ಅವರು ತಮ್ಮ ಜೀವನದಲ್ಲಿ ಬಹಳ ಕಷ್ಟಪಟ್ಟು ಮೇಲೆ ಬಂದಿದ್ದಂತಹವರು. ಅವರು ಇಡೀ ಜಿಲ್ಲೆಯಲ್ಲಿಯೇ ಹತ್ತಾರು ವಾಹನಗಳಿಂದ ಪ್ರಖ್ಯಾತವಾಗಿರುವಂತಹ ಟ್ರಾವೆಲ್ಸ್ ಕಂಪನಿಯನ್ನು ಸ್ಥಾಪನೆ ಮಾಡಿದ್ದರು. ಈ ಕೋವಿಡ್-19ನ ಎಫೆಕ್ಟ್‌ನಿಂದ ಮದುವೆ ಮುಂಜಿಗಳಿಗೆ ವಾಹನಗಳಿಗೆ ಬಾಡಿಗೆ ಸಿಗಲಿಲ್ಲ. ವಾಹನಗಳಿಗೆ ಬಾಡಿಗೆ ಸಿಗದೇ ಅವರು ಫೈನಾನ್ಸ್ ಕಟ್ಟುವುದಕ್ಕೆ ಆಗಲಿಲ್ಲ. ಸಮಾಜದಲ್ಲಿ ಬಹಳ ಗಟ್ಟಿಯಾಗಿ ನೆಲೆಯೂರಿದಂತಹವರು, ನೂರಾರು-ಸಾವಿರಾರು ಜನರಿಗೆ ಕೆಲಸವನ್ನು ನೀಡಿದಂತಹವರು, ಆರ್ಥಿಕ ಸಂಕಷ್ಟದಿಂದ ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಇದು ಕೇವಲ ಒಂದು ಉದಾಹರಣೆ ಅಷ್ಟೆ. ಈ ರೀತಿಯಾಗಿ ಎಲ್ಲವನ್ನು ಕಳೆದುಕೊಂಡವರು ಬೀದಿಗೆ ಬಂದಿರುವಂತಹವರು ಅಸಂಖ್ಯಾತ ಜನರಿದ್ದಾರೆ. ಇಂತಹವರಿಗೆ ಬಜೆಟ್‌ನಲ್ಲಿ ಏನಾದರೂ ಇರಬಹುದು ಮತ್ತು ಏನಾದರೂ ಮಾಡಬಹುದು ಎಂಬ ನಿರೀಕ್ಷೆ ಇತ್ತು. ಅದರೆ ಅದರ ಬಗ್ಗೆ ಬಜೆಟ್‌ನಲ್ಲಿ ಎಳ್ಳಷ್ಟು ಪ್ರಸ್ತಾಪವೇ ಇಲ್ಲ. ಅದರಲ್ಲಿ ಹುಡುಕಿದರೆ, ಕೋವಿಡ್-19ನಿಂದ ಸುಮಾರು 97 ಸಾವಿರ ಜನ ರೈತರಿಗೆ 46 ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ನೀಡಿದ್ದೇವೆಂದು ಬಜೆಟ್‌ನ 14ನೇ ಪುಟದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಇದು ಒಂದು ದುರ್ದೈವ. Floriculture ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಈಗ ಒಂದು ಮದುವೆಯಾದರೆ ಅದು ಬಹಳಷ್ಟು ಜನರ ಕುಟುಂಬಗಳಿಗೆ ಜೀವನ ಕೊಡುತ್ತದೆ. ಈಗ floriculture ಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಆ ಹೂವು ಬೆಳೆದಿರುವವರಿಂದ ಹಿಡಿದು, ಆ ಹೂವುಗಳನ್ನು ಮದುವೆ ಮನೆಗೆ ತಂದು decorate  ಮಾಡುವವರಿಂದ ಹಿಡಿದು, serial set ಹಾಕುವವರಿಂದ

ಹಿಡಿದು, ಒಬ್ಬ ಅಡುಗೆ ಭಟ್ಟನಿಂದ ಹಿಡಿದು, ಅಡುಗೆಗೆ ಬೇಕಾದ ತರಕಾರಿ ಬೆಳೆದವರಿಂದ ಹಿಡಿದು, ಚಿನ್ನಾಭರಣಗಳನ್ನು ತಯಾರು ಮಾಡುವವನಿಂದ ಹಿಡಿದು, ಬಟ್ಟೆ ನೇಕಾರನಿಂದ ಹಿಡಿದು, ಬಟ್ಟೆಯನ್ನು ಮಾರುವಂತಹ ಮಳಿಗೆಯವನಿಂದ ಹಿಡಿದು ಅದು ಆಗುತ್ತದೆ. ಮದುವೆ ಸುಮ್ಮನೆ ಆಗುವುದಿಲ್ಲ. ಈಗ ಮದುವೆ ಎನ್ನುವುದು ಸಹ ಒಂದು ಇಂಡಸ್ಟ್ರಿಯಾಗಿದೆ. ಅದು ನೂರಾರು ಜನರ ಬಾಯಿಗಳಿಗೆ ತುತ್ತು ಅನ್ನ ಮತ್ತು ದುಡಿಯುವ ಕೈಗಳಿಗೆ ಉದ್ಯೋಗವನ್ನು ಕಲ್ಪಿಸಿಕೊಡುವಂಥದ್ದಾಗಿದೆ. ಈಗ ಹಬ್ಬ ಮತ್ತು ಮದುವೆಗಳು ನಿಂತು ಹೋಗಿವೆ. ಈಗ ಅದರ ಪರಿಣಾಮವನ್ನು ಸಹ ನೋಡುತ್ತಿದ್ದೇವೆ. ಈಗ ಹೋಟೆಲ್ ಉದ್ಯಮದ ಬಗ್ಗೆ ಹೇಳುವುದಾದರೆ, ಹೋಟೆಲ್ ಉದ್ಯಮದಲ್ಲಿ ಬೆಂಗಳೂರಿನಲ್ಲಿ ಇರುವಂತಹ ನನ್ನ ಸ್ನೇಹಿತರುಗಳೇ, ಕಷ್ಟಪಟ್ಟು ಹತ್ತು ಹಲವಾರು ಹೋಟೆಲ್‌ಗಳನ್ನು ಸ್ಥಾಪನೆ ಮಾಡಿದಂತಹವರ ಅಸಂಖ್ಯಾತ ಹೋಟೆಲ್‌ಗಳು ಮಾರಾಟಕ್ಕಿವೆ. ಅವರನ್ನು ನಂಬಿದಂತಹ ಕೆಲಸಗಾರರು ಕೆಲಸ ಬಿಟ್ಟು, ಅವರನ್ನು ತೊರೆದು ಹೋದರು. ಅಂತಹವರುಗಳಿಗೆ ಈ ಸಾಲಿನ ಆಯವ್ಯಯದಲ್ಲಿ ಏನಾದರೂ ಇದೆ ಎಂದುಕೊಂಡರೆ, ಏನೂ ಸಹ ಇಲ್ಲ. ಅವತ್ತು ಈ floriculture ಗೆ ಏನಾಯಿತು ಎಂದರೆ, ಈ floriculture ನಲ್ಲಿ ಹೂವುಗಳನ್ನು ರಫ್ತು ಮಾಡುತ್ತಿದ್ದರು. ನಮ್ಮಲ್ಲೂ ಕೂಡ ಗ್ರೀನ್ ಹೌಸ್‌ಗಳನ್ನು ಮಾಡಿ ಹೂವುಗಳನ್ನು ರಫ್ತು ಮಾಡುತ್ತಿದ್ದರು. ಅಂತಹವರು ಬ್ಯಾಂಕ್‌ಗಳಿಂದ 25 ಲಕ್ಷ, 50 ಲಕ್ಷ ಮತ್ತು ಒಂದು ಕೋಟಿ ರೂಪಾಯಿಗಳವರೆಗೆ ಸಾಲ ತೆಗೆದುಕೊಂಡು, floriculture ಮಾಡುತ್ತಿದ್ದರು. ಕೋವಿಡ್-19ನ ಮೊದಲ ಅಲೆಯಲ್ಲಿ ಆ ಹೂವುಗಳನ್ನು ಯಾರೂ ಸಹ ಕೇಳದಂತೆ ಆಯಿತು. ಅದನ್ನು maintain ಮಾಡುವಂತಿಲ್ಲ ಮತ್ತು ಬಿಡುವಂತೆಯೂ ಇಲ್ಲ. ಇದರಿಂದ ಅವರು suicide ಮಾಡಿಕೊಳ್ಳುವಂತಹ ಪರಿಸ್ಥಿತಿ ಬಂತು. ಆದರೆ, ಅಂತಹವರಿಗೆ ಯಾವುದೇ ರೀತಿಯ ಪರಿಹಾರವಿಲ್ಲ. ಈಗ ಹೂವು ಬೆಳೆದವರು ಹೋದರು, ತರಕಾರಿ ಬೆಳೆದವರು ಹೋದರು. ಮತ್ತೆ ಅವರು ಹಿಂದಿನ ವ್ಯವಸ್ಥೆಗೆ ಬರುವುದಕ್ಕೆ ಆಗಿಲ್ಲ. ಅವರ ಬಗ್ಗೆ ಒಂದೇ ಒಂದು ಮಾತಿಲ್ಲ. ಈಗ ಸರ್ಕಾರ ಎಂದರೆ ಏನು? ಈಗ ಅವರ್ಯಾರೂ ಸಹ ಸರ್ಕಾರದ ಉದ್ಯೋಗಕ್ಕೋ, ಸರ್ಕಾರದಿಂದ ಬರುವಂತಹ ಸಹಾಯಾಧನಕ್ಕೋ ಕೈ ಚಾಚುವಂತಹವರಲ್ಲ. ಸ್ವಾವಲಂಬನೆಗಾಗಿ, ಸ್ವಾವಲಂಬಿತರಾಗಿ ವಿದ್ಯಾವಂತರು ಮತ್ತು ಗ್ರಾಮೀಣ ಭಾಗದ ಯುವಕರು ತಮ್ಮ ಜೀವನವನ್ನು ಕಟ್ಟಿಕೊಳ್ಳುವುದಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದಂತಹವರ ಜೀವನವೇ ಕುಸಿದು

ಹೋಯಿತು. ಅದರ ಬಗ್ಗೆ ಸರ್ಕಾರ ನೋಡಬೇಕಲ್ಲವೇ? ಸರ್ಕಾರ ಅವರ ಆಶ್ರಯಕ್ಕೆ ಧಾವಿಸಬೇಕಾಗಿತ್ತಲ್ಲವೇ? ಸರ್ಕಾರಕ್ಕೆ ತಾಯಿಯ ಹೃದಯ ಇರಬೇಕಾಗಿತ್ತು. ಅದು ಇಲ್ಲ. ಈಗ ಅವರ ಸರ್ಕಾರ ಅಷ್ಟು ಉದ್ದ, ಇಷ್ಟು ಉದ್ದ ಮತ್ತು ಅಷ್ಟು ದಪ್ಪ ಎನ್ನುತ್ತಾರೆ. ಸರ್ಕಾರ ಆ ವರ್ಗದ ಜನರಿಗೆ ಏನು ಮಾಡಿದ್ದಾರೆ. ಹೇಳಿಕೊಳ್ಳುವಂತೆಯಾದರೂ ಮಾಡಬೇಕಲ್ಲವೇ? ಆ ನಿರೀಕ್ಷೆಯನ್ನು ಸಂಪೂರ್ಣ ಹುಸಿ ಮಾಡುವಂತಹ ಬಜೆಟ್ ಆಗಿದೆ. ಇದರಲ್ಲಿ ನಿರೀಕ್ಷೆ ಮಾಡುವಂಥದ್ದು ಏನೂ ಇಲ್ಲ. ಈಗ ನಾನು ಅತಿಥಿ ಉಪನ್ಯಾಸಕರ ಬಗ್ಗೆ ಹೇಳುತ್ತಿರುವುದು ಬಹು ದೊಡ್ಡ ಪಟ್ಟಿ ಇದೆ. ಅದಕ್ಕೆ ನಾನು ಮೊದಲು ಹೇಳಿದ್ದು 'before covid-19 and after covid-19' ಎಂದು. ಅದರ ಬಗ್ಗೆ ಈ ಬಜೆಟ್‌ನಲ್ಲಿ ಬಹಳ ಸ್ಪಷ್ಟವಾಗಿ ಇರಬೇಕಾಗಿತ್ತು ಮತ್ತು ಬಜೆಟ್‌ನಲ್ಲಿ ಏನು ಪ್ರತಿಫಲನ ಆಗಬೇಕಾಗಿತ್ತೆಂದರೆ, ಕೋವಿಡ್-19ನ ಎಫೆಕ್ಟ್‌ನಿಂದ ಆಗಿರುವಂತಹ ಆರ್ಥಿಕ ವ್ಯವಸ್ಥೆಯ ಮೇಲೆ ಬೀರುವಂತಹ ಪರಿಣಾಮಗಳನ್ನು ಸರಿಪಡಿಸುವ ರೀತಿಯಲ್ಲಿ ಈ ಬಜೆಟ್ ಆಶಾದಾಯಕವಾಗಬೇಕಾಗಿತ್ತು ಮತ್ತು ನೆರವು ಸಹ ಬರಬೇಕಾಗಿತ್ತು. ಅಂದರೆ, ನೆರವಿನ ಮಹಾಪೂರವೇ ಹರಿದು ಬರಬೇಕಾಗಿತ್ತು. ಈಗ 119 ಪುಟಗಳ ೩೦೦ಕ್ಕೂ ಹೆಚ್ಚು ವಿಷಯಗಳ ಬಗ್ಗೆ ಅಲ್ಲ, ಈಗ ಒಂದು ವ್ಯವಸ್ಥೆಯನ್ನು ಕಟ್ಟುವ ರೀತಿಯಲ್ಲಿ ಬಜೆಟ್ ಮೂಡಿ ಬರಬೇಕಾಗಿತ್ತು. ನಾವು ಅದನ್ನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಸಾಹೇಬರಿಂದ ನಿರೀಕ್ಷೆ ಮಾಡಿದ್ದೆವು. ಒಬ್ಬ ವಿದ್ಯಾವಂತ ಮತ್ತು ರಾಜಕೀಯ ಹಿನ್ನೆಲೆಯಿಂದ ಬಂದಿರುವಂತಹ ಮುಖ್ಯಮಂತ್ರಿಗಳಿಂದ ಅವರು ಆರ್ಥಿಕ ತಜ್ಞರು ಆಗಿಲ್ಲದಿದ್ದರೂ ಸಹ, ರಾಜಕೀಯ ಅನುಭವಿಗಳಾಗಿರುವಂತಹ ಸಂದರ್ಭದಲ್ಲಿ ಅವರಿಂದ ಇದನ್ನು ನಿರೀಕ್ಷೆ ಮಾಡಿದ್ದೆವು. ಆದರೆ, ನಾವು ಮಾಡಿದಂತಹ ನಿರೀಕ್ಷೆ ಹುಸಿಯಾಗಿದೆ. ಕನಿಷ್ಠಪಕ್ಷ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಇದನ್ನು ಸರಿಪಡಿಸುವಂತಹ ರೀತಿಯಲ್ಲಿ ಏನಾದರೂ ಮಾಡುತ್ತಾರೆ ಎಂಬ ನಿರೀಕ್ಷೆ ಮತ್ತು ಭರವಸೆಯನ್ನು ಇಟ್ಟುಕೊಳ್ಳೋಣ.

ಇನ್ನು ನೇರವಾಗಿ ವಿಚಾರಕ್ಕೆ ಬರುವುದಾದರೆ, ರಾಜ್ಯದ ನೀರಾವರಿ ಯೋಜನೆಗಳು ಅತ್ಯಂತ ವಿವಾದಾತ್ಮಕವಾದ ಯೋಜನೆಗಳಾಗಿವೆ. ಅದು ನಮ್ಮ ದುರಾದೃಷ್ಟ. ಈಗ ರಾಜಸ್ತಾನ ರಾಜ್ಯದ ನಂತರ

---

ನಮ್ಮ ದೇಶದಲ್ಲಿ ಅತೀ ಹೆಚ್ಚು ಒಣ ಭೂಮಿಯನ್ನು ವ್ಯವಸಾಯ ಮಾಡುತ್ತಿರುವಂತಹ ಯಾವುದಾದರೂ ರಾಜ್ಯವಿದ್ದರೆ, ಅದು ಕರ್ನಾಟಕ ರಾಜ್ಯ ಮಾತ್ರ.

**(ಮುಂದು...)**

(259) 10.03.2022 06.20 LL-BNS

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್. ರವಿ(ಮುಂದು...)**

ರಾಜಾಸ್ಥಾನ ಮರುಭೂಮಿ ಭೌಗೋಳಿಕವಾಗಿ ಮಳೆ ಕಡಿಮೆ ಇರುವಂಥದ್ದು ಮತ್ತು ನದಿಗಳು ಸಹ ಕಡಿಮೆ ಇರುವಂಥ ಪ್ರದೇಶ. ಆದರೆ, ಅದೃಷ್ಟವಶಾತ್ ನಮ್ಮ ರಾಜ್ಯ ಇಲ್ಲಿಯ ನೈಸರ್ಗಿಕ ವ್ಯವಸ್ಥೆಯಾದ ತುಂಗೆ, ಕೃಷ್ಣಾ, ಕಾವೇರಿ ಹಾಗೂ ಇನ್ನಿತರ ನದಿಗಳ ಸಾಲು ಸಾಲು ವ್ಯವಸ್ಥೆ ಇರುವಂಥದ್ದು ಆಗಿದೆ. ಅಲ್ಲದೇ, ವೈವಿಧ್ಯಮಯವಾದಂತಹ ಒಂದು ಭೌಗೋಳಿಕವಾದಂತಹ ವ್ಯವಸ್ಥೆಯನ್ನು ಒಳಗೊಂಡಿರುವಂತಹವರು ಮತ್ತು ರಾಷ್ಟ್ರದಲ್ಲಿಯೇ ಎರಡನೇ ಅತಿ ಹೆಚ್ಚು ಒಣ ಭೂಮಿ ಪ್ರದೇಶವನ್ನು ಒಳಗೊಂಡಿರುವಂತಹವರಿಗೆ ನೀರಾವರಿ ಸೌಲಭ್ಯವನ್ನು ಕೊಡುವುದಕ್ಕೆ ಸಾಧ್ಯವಾಗದೇ ಇರುವಂತಹವರು ನಾವು. ನಾನು ನೆರೆಯ ರಾಜ್ಯದ ದಿವಂಗತ ರಾಜಶೇಖರ್ ರೆಡ್ಡಿಯವರನ್ನು ಅಭಿಮಾನದಿಂದ ಸ್ಮರಿಸಿಕೊಳ್ಳುತ್ತೇನೆ. ಈ ಹಿಂದೆ ಯುನೈಟೆಡ್ ಆಂಧ್ರಪ್ರದೇಶ ಇದ್ದಾಗ ಅಂದರೆ, ತೆಲಂಗಾಣ ಮತ್ತು ಆಂಧ್ರಪ್ರದೇಶ ಆಗುವ ಮುನ್ನ ನೀರಾವರಿ ವಿಷಯದಲ್ಲಿ ಶ್ರೀ ರಾಜಶೇಖರ್ ರೆಡ್ಡಿಯವರ ಬದ್ಧತೆ ಇಡೀ ಆ ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ನಾನು ಮಾಡಿಯೇ ತೀರಿಸುತ್ತೇನೆಂದು ಹೇಳಿ ಅವರು ಹಣವನ್ನು ಮೀಸಲಿಟ್ಟು, ಅವರು ಇಡೀ ಆಂಧ್ರಪ್ರದೇಶದಾದ್ಯಂತ ನೀರಾವರಿ ಯೋಜನೆಗಳನ್ನು ಮುಗಿಸಿದಂತಹ ಅವರ ಬದ್ಧತೆ ಇದೆಯೆಲ್ಲಾ ಅಂದರೆ, 'ಜಲಯಜ್ಞ' ಅದು ನಮ್ಮ ರಾಜ್ಯದಲ್ಲಿ ಆಗಬೇಕಾಗಿತ್ತು.

ನಾನು ಇತ್ತೀಚೆಗೆ ಬಾಗೇಪಲ್ಲಿ ಕಡೆ ಹೋದಾಗ ನಮ್ಮ ರಾಜ್ಯದ ಕೋಲಾರ ಜಿಲ್ಲೆ ಮತ್ತು ತುಮಕೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಕುಸಿದು ಹೋಗಿದ್ದಂತಹ ಅಂತರ್ಜಲ ಮಟ್ಟ

ಹೆಚ್ಚಾಗಿರುತ್ತದೆ. ಅಲ್ಲಿ ನೂರು ಅಡಿ, ಇನ್ನೂರು ಅಡಿಗಳಿಗೆ ಅಂತರ್ಜಲ ಮಟ್ಟ ಹೆಚ್ಚಾಗಿರುತ್ತದೆ. ಏಕೆಂದರೆ, ನೆರೆಯ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಕೆರೆಗಳನ್ನು ತುಂಬಿಸಿದ್ದಾರೆ. ಅದರ ಪರಿಣಾಮ ನಮ್ಮ ರಾಜ್ಯಕ್ಕೆ ಬಂದಿರುತ್ತದೆ. ಆ ರಾಜ್ಯದವರು ಎಲ್ಲೆಲ್ಲಿಂದಲೋ ನೀರು ತಂದು ಕೆರೆಗಳನ್ನು ತುಂಬಿಸಿರುತ್ತಾರೆ. ಅದೇ ರೀತಿ, ನೆರೆಯ ರಾಜ್ಯವಾದ ತಮಿಳುನಾಡು ರಾಜ್ಯ ಅಂದರೆ, ನಮ್ಮ ಕನಕಪುರ ತಾಲ್ಲೂಕು ಬಿಟ್ಟರೆ, ಹೊಗೆನಕಲ್ ಫಾಲ್ಸ್, ನಂತರ ಸೇಲಂ, ಕೃಷ್ಣಗಿರಿ, ಧರಂಪುರಿ, ತಳಿಯಲ್ಲಿ ಮನೆಮನೆಗೂ ಕಾವೇರಿ ನೀರು ಸಂಪರ್ಕ ಇರುತ್ತದೆ. ಅಲ್ಲಿ ಕೇಳುವವರು ಯಾರು ಕೂಡ ಇರುವುದಿಲ್ಲ. ಅಲ್ಲಿ ಯಾವ ಪರಿಸರ ಇಲಾಖೆಯಿಂದ ಅನುಮತಿಯನ್ನು ಸಹ ಪಡೆದಿರುವುದಿಲ್ಲ. ತಮಿಳುನಾಡು ರಾಜ್ಯದ ಕೃಷ್ಣಗಿರಿ ಜಿಲ್ಲೆ ಮತ್ತು ಧರಂಪುರಿ ಜಿಲ್ಲೆಯಾದ್ಯಂತ ಪಟ್ಟಣ ಪ್ರದೇಶಗಳಲ್ಲದೇ, ಹೊಗೆನಕಲ್ ಫಾಲ್ಸ್‌ನ ಕಾವೇರಿ ನದಿಯಿಂದ ನೇರವಾಗಿ ಪ್ರತಿ ಮನೆ ಮನೆಗೆ ನಳಗಳ ಮುಖಾಂತರ ಕಾವೇರಿ ನೀರು ಸಂಪರ್ಕ ಮಾಡಲಾಗಿರುತ್ತದೆ. ನಮ್ಮ ದುರ್ದೈವ ಮಹಾದಾಯಿ ವಿವಾದಾತ್ಮಕ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ ವಿವಾದಾತ್ಮಕ ಯೋಜನೆ, ಮೇಕೆದಾಟು ಯೋಜನೆ ಕೂಡ ವಿವಾದಾತ್ಮಕ ಯೋಜನೆ. ಇನ್ನು ಎತ್ತಿನಹೊಳೆ ಯೋಜನೆ ಇರಲಿಲ್ಲ. ಆದರೆ, ಈಗ ಬೆಂಗಳೂರು ಗ್ರಾಮಾಂತರ ಮತ್ತು ತುಮಕೂರು ಜಿಲ್ಲೆಗೆ ತೆಗೆದುಕೊಂಡು ಅದನ್ನು ಕೂಡ ರಾಜಕೀಯ ಸಂಕಲ್ಪ ಮತ್ತು ಬದ್ಧತೆ ಇಲ್ಲದೇ ಇರುವಂತಹ ಹಿನ್ನೆಲೆಯಲ್ಲಿ ಒಂದು ವಿವಾದಾತ್ಮಕ ಯೋಜನೆಯಾಗಿ ಮಾಡಿಟ್ಟಿರುವಂಥದ್ದಾಗಿದೆ.

**ಶ್ರೀ ಸಲೀಂ ಅಹಮದ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿವಾದಾತ್ಮಕ ಯೋಜನೆ ಎಂದರೆ ಏನು ಎಂದು ಅರ್ಥವಾಗಲಿಲ್ಲ.

**ಶ್ರೀ ಎಸ್. ರವಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಎಲ್ಲಾ ನೀರಾವರಿ ಯೋಜನೆಗಳು ಸಹ ವಿವಾದಾತ್ಮಕ ಯೋಜನೆಗಳು. ಆ ಬಗ್ಗೆ ನಾನು ಅದನ್ನೇ ಮಾತನಾಡುವುದಕ್ಕೆ ಹೋಗುತ್ತಿದ್ದೇನೆ. ಇನ್ನು ಮೇಕೆದಾಟು ಯೋಜನೆಗಾಗಿ ನಾವು ಪಾದಯಾತ್ರೆ ಮಾಡಿರುತ್ತೇವೆ. ಆ ಬಗ್ಗೆ ನಮ್ಮನ್ನು ಎಲ್ಲರೂ ಆಡಿಕೊಂಡರು. ಮೇಕೆದಾಟು ಯೋಜನೆಗಾಗಿ ಪಾದಯಾತ್ರೆ ರಾಜಕೀಯವಾದ ನಡಿಗೆ, ರಾಜಕೀಯದ ಪುನಶ್ಚೇತನಕ್ಕಾಗಿ ಇವರು ಮಾಡುತ್ತಿದ್ದಾರೆ, ಕಾಂಗ್ರೆಸ್ಸಿಗರು ಪಕ್ಷ ಬಲವರ್ಧನೆ

ಮಾಡುವುದಕ್ಕೆ, ಪಕ್ಷದ ಕಾರ್ಯಕರ್ತರನ್ನು ಪುನಶ್ಚೇತನ ಮಾಡುವುದಕ್ಕೆ ಮಾಡುತ್ತಿದ್ದಾರೆಂದು ಹೇಳಿದರು. ಅವರು ಏನಾದರೂ ಅಂದುಕೊಳ್ಳಲಿ, ಸಾವಿರ ಅಂದುಕೊಳ್ಳಲಿ. ರಾಜಕೀಯವಾಗಿ ಟೀಕೆ ಮಾಡಿದರೆ ಅದಕ್ಕೆ ನಾವು ಜಗ್ಗುವಂತಹವರು ಅಲ್ಲ. ಅದು ನಮ್ಮ ವಿಚಾರ, ನಾವು ಹೋರಾಟ ಮಾಡಲೇಬೇಕಾಗಿದೆ, ನಾವು ಮಾಡಿಯೇ ತೀರುತ್ತೇವೆ ಹಾಗೂ ಆ ಹೋರಾಟವನ್ನು ಮಾಡಿರುತ್ತೇವೆ. ಅದರ ಪರಿಣಾಮಗಳನ್ನು ಇವೊತ್ತಿನ ದಿವಸ ನಾವು ನೋಡುತ್ತಿದ್ದೇವೆ.

ನಮ್ಮ ರಾಜ್ಯಕ್ಕೂ ಮತ್ತು ತಮಿಳುನಾಡು ರಾಜ್ಯಕ್ಕೆ ಈ ಹಿಂದೆ ಹಲವಾರು ವರ್ಷಗಳ ವಿವಾದ ಇತ್ತು. ಆದರೆ, ಈಗ ಮಾನ್ಯ ಸುಪ್ರೀಂ ಕೋರ್ಟ್‌ನಿಂದ ಐತೀರ್ಪು ಬಂದಾಯಿತಲ್ಲ? ಇನ್ನು ಯಾವ ವಿವಾದ ಇದೆ? ಇಡೀ ರಾಜ್ಯದಲ್ಲಿ ಅತ್ಯಂತ ಹೆಚ್ಚು ವಿವಾದಾತ್ಮಕವಾಗಿ ಇದ್ದುದ್ದು, ಅದು ಕಾವೇರಿ ನೀರಿನ ಬಗ್ಗೆ. ಆ ಬಗ್ಗೆ ಮಾನ್ಯ ಸುಪ್ರೀಂ ಕೋರ್ಟ್ ತನ್ನ ತೀರ್ಪನ್ನು ನೀಡಿರುತ್ತದೆ. ಅದರಲ್ಲಿ, ಕರ್ನಾಟಕ ರಾಜ್ಯಕ್ಕೆ, ತಮಿಳುನಾಡು ರಾಜ್ಯಕ್ಕೆ, ಪಾಂಡಿಚೇರಿ ರಾಜ್ಯಕ್ಕೆ ಮತ್ತು, ಕೇರಳ ರಾಜ್ಯಕ್ಕೆ ಇಂತಿಷ್ಟು ಟಿ.ಎಂ.ಸಿ. ನೀರು ಎಂದು ಹಂಚಿಕೆ ಮಾಡಲಾಗಿರುತ್ತದೆ. ಕರ್ನಾಟಕ ರಾಜ್ಯದಿಂದ ತಮಿಳುನಾಡು ರಾಜ್ಯಕ್ಕೆ ಯಾವ ಯಾವ ತಿಂಗಳನಲ್ಲಿ ಎಷ್ಟು ಟಿ.ಎಂ.ಸಿ. ನೀರು ಬಿಡಬೇಕೆಂದು ಮಾನ್ಯ ಸುಪ್ರೀಂ ಕೋರ್ಟ್‌ನಿಂದ ಆದೇಶ ಬಂದು, ಬಿಳಿಗೊಂಡ್ಲುವಿನಲ್ಲಿ measurement point ಕೂಡ ಇಡಲಾಗಿರುತ್ತದೆ. ಇನ್ನು ಎಲ್ಲಿ ವಿವಾದ ಇರುತ್ತದೆ? ಯಾವ ಕೋರ್ಟ್‌ನಲ್ಲಿ ತಡೆಯಾಜ್ಞೆ ಇರುತ್ತದೆ? ಕೋರ್ಟ್‌ನಲ್ಲಿ ಅಪ್ಲಿಕೇಷನ್ ಇರಬಹುದು. ಅಂದರೆ, ತಮಿಳುನಾಡು ರಾಜ್ಯದವರು ನಮ್ಮ ರಾಜ್ಯದ ನೀರಾವರಿ ಯೋಜನೆಗಳಿಗೆ ತಡೆ ತರುವುದಕ್ಕೆ, ಅಡ್ಡಗಾಲು ಹಾಕುವುದಕ್ಕೆ ಅಥವಾ ವಿವಾದ ಮಾಡುವುದಕ್ಕೆ ಅರ್ಜಿ ಹಾಕಿಕೊಂಡಿರಬಹುದು. ಆದರೆ, ಕೋರ್ಟ್‌ನ ಆದೇಶ ಏನಿದೆ ಅಥವಾ ಮೇಕೆದಾಟು ಯೋಜನೆಯನ್ನು ಮಾಡಬಾರದೆಂದು ತಡೆಯಾಜ್ಞೆ ನೀಡಿರುತ್ತದೆಯೇ? ಈಗ ಸದರಿ ಯೋಜನೆಗೆ ಕೇವಲ ಪರಿಸರ ಇಲಾಖೆಯಿಂದ ಅನುಮತಿ ಪತ್ರ ಪಡೆಯಬೇಕು. ಆ ಅನುಮತಿಯನ್ನು ಯಾರು ತರಬೇಕೆಂದರೆ ನಮ್ಮ ರಾಜ್ಯ ಸರ್ಕಾರ ತರಬೇಕು. ಯಾರಿಗೆ ಆ ಬದ್ಧತೆ ಇರಬೇಕೆಂದರೆ, ಡಬಲ್ ಇಂಜಿನ್ ಸರ್ಕಾರಕ್ಕೆ ಇರಬೇಕು. ಈಗ ಡಬಲ್ ಇಂಜಿನ್ ಸರ್ಕಾರ ಇರುವಾಗ ತರುವುದಕ್ಕೆ ಸಾಧ್ಯವಾಗದೇ ಇರುವಂತಹ ಅನುಮತಿ ಇನ್ನು ಯಾವತ್ತು ತರುವುದಕ್ಕೆ ಸಾಧ್ಯವಿದೆ?

ಇವೊತ್ತಿನ ದಿವಸ ಈ ರಾಜ್ಯಕ್ಕೆ ಮೇಕೆದಾಟು ಯೋಜನೆಗೆ ಅನುಮತಿ ದೊರಕಿಸಿಕೊಡುವುದಕ್ಕೆ ಸಾಧ್ಯವಾಗದೇ ಇದ್ದರೆ, ಇನ್ನು ಯಾವತ್ತು ದೊರಕಿಸಿಕೊಡುವುದಕ್ಕೆ ಸಾಧ್ಯವಿದೆ? ಇವೊತ್ತಿನ ದಿವಸ ನಮ್ಮ ರಾಜ್ಯ ಬಿ.ಜೆ.ಪಿ.ಯನ್ನು ಮತ್ತು ಶ್ರೀ ನರೇಂದ್ರ ಮೋದಿಯವರನ್ನು ನಂಬಿ 25 ಜನ ಎಂ.ಪಿ.ಗಳನ್ನು ಕೊಟ್ಟಿರುವುದಿಲ್ಲವೇ? ಶ್ರೀ ನರೇಂದ್ರ ಮೋದಿಯವರನ್ನು ಬೆಂಬಲಿಸಿರುವುದಿಲ್ಲವೇ? ನಾವು ರಾಜಕೀಯವಾಗಿ ಅವರನ್ನು ಟೀಕೆ ಮಾಡಬಹುದು. ಆದರೆ, ರಾಜ್ಯದ ಜನ ಅವರನ್ನು ಬೆಂಬಲಿಸಿರುವುದಿಲ್ಲವೇ? ನನಗೆ ಅವರು ಇಷ್ಟ ಇದೆಯೇ, ಇಲ್ಲವೋ, ನನಗೆ ರಾಜಕೀಯ ಶ್ರೀ ನರೇಂದ್ರ ಮೋದಿಯವರ ವಿರುದ್ಧವೋ ಅಥವಾ ಬಿ.ಜೆ.ಪಿ. ಪಕ್ಷದ ವಿರುದ್ಧವೋ ಆದರೆ, ರಾಜ್ಯದ ಜನ 25 ಜನ ಎಂ.ಪಿ.ಗಳನ್ನು ಕೊಟ್ಟು ಶ್ರೀ ನರೇಂದ್ರ ಮೋದಿಯವರ ಕೈಯನ್ನು ಬಲಪಡಿಸಿದ್ದಾರಲ್ಲವೇ? ಅದರಿಂದ, ಅವರು ರಾಜ್ಯಕ್ಕೆ ಕೊಡತಕ್ಕಂತಕ ಕೊಡುಗೆ ಏನು ಅಥವಾ ಕಾಣಿಕೆ ಏನು? ತಮಿಳುನಾಡು ರಾಜ್ಯದಿಂದ ಏನು ಅವರು ಪ್ರಧಾನ ಮಂತ್ರಿ ಆಗಿರುವುದಿಲ್ಲ. ಅವರು ಪ್ರಧಾನಮಂತ್ರಿಯಾಗಿರುವುದು ನಮ್ಮ ರಾಜ್ಯದಿಂದ. ಇತ್ತೀಚೆಗೆ ಮೇಕೆದಾಟು ಪಾದಯಾತ್ರೆ ಪೂರ್ಣಗೊಂಡ ನಂತರ, ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳ ಜೊತೆ ಮಾತುಕತೆ ಆಡಿದಾಗ, ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳು, "ಮೇಕೆದಾಟು ಯೋಜನೆಗೆ ಸಂಬಂಧಪಟ್ಟಂತೆ, ತಮಿಳುನಾಡು ರಾಜ್ಯದವರು ಮತ್ತು ಕರ್ನಾಟಕ ರಾಜ್ಯದವರು ಕುಳಿತುಕೊಂಡು ಪರಸ್ಪರ ಮಾತನಾಡಿಕೊಂಡು ಪರಿಹಾರ ಮಾಡಿಕೊಳ್ಳಬೇಕು" ಎಂದು ಹೇಳಿದಾಗ, ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ದುರ್ಬಲವಾಗಿ ಕಾಣುತ್ತಾರಲ್ಲಾ, ಆ ಸ್ವರೂಪವನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ.

**ಶ್ರೀ ಗೋವಿಂದ ಎಂ. ಕಾರಜೋಳ(ಬೃಹತ್ ಹಾಗೂ ಮಧ್ಯಮ ನೀರಾವರಿ ಸಚಿವರು):-** ಮಾನ್ಯ ರವಿಯವರೇ ತಾವು ಒಂದು ನಿಮಿಷ yield ಆಗುತ್ತೀರಾ?

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ನನ್ನ ಮಾತನ್ನು ಪೂರ್ಣಗೊಳಿಸುತ್ತೇನೆ. ಆಮೇಲೆ ತಾವು ಮಾತನಾಡಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ರವಿಯವರೇ, ಆಮೇಲೆ ಆಗುವುದಿಲ್ಲ. ಏಕೆಂದರೆ, ತಾವು ಏನೇನೋ ಹೇಳುತ್ತಿದ್ದೀರಿ. ಅದಕ್ಕೆ ನಾನು ಮಾತನಾಡುತ್ತೇನೆ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ನಾನು ಏನೇನೂ ಹೇಳುತ್ತಿರುವುದಿಲ್ಲ. ಇರುವುದನ್ನೇ ಹೇಳುತ್ತಿದ್ದೇನೆ. ಇರುವ ವಾಸ್ತವಾಂಶ ಹೇಳುತ್ತಿದ್ದೇನೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ವಾಸ್ತವಾಂಶ ನಾನು ಹೇಳುತ್ತೇನೆ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, 25 ಜನ ಎಂ.ಪಿ.ಯವರು ಗೆದ್ದಿರುವುದು ಸುಳ್ಳಾ? ಶ್ರೀ ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿಯಾಗಿರುವುದಕ್ಕೆ ರಾಜ್ಯದ ಜನ ಬೆಂಬಲ ಕೊಟ್ಟಿರುವುದು ಸುಳ್ಳಾ? ಯಾವುದು ಸುಳ್ಳು? ಮೇಕೆದಾಟು ಯೋಜನೆಗೆ ಯಾವುದಾದರೂ ಕೋರ್ಟ್‌ನಲ್ಲಿ ತಡೆಯಾಜ್ಞೆ ಇಲ್ಲದೇ ಇರುವಂಥದ್ದು ಸುಳ್ಳಾ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ಮಾನ್ಯ ಸಚಿವರಿಗೆ ಮಾಹಿತಿ ನೀಡುವುದಕ್ಕೆ ಅವಕಾಶ ನೀಡಿ.

**ಸಭಾಪತಿಯವರು:–** ಮಾನ್ಯ ರವಿಯವರೇ, ಒಂದು ನಿಮಿಷ ಕುಳಿತುಕೊಳ್ಳಿ. ಸಭಾನಾಯಕರೇ ತಾವು ಕೂಡ ಕುಳಿತುಕೊಳ್ಳಿ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ನಾನು ನೀಡುವ ಮಾಹಿತಿಯಿಂದ ಅವರಿಗೆ ಅನುಕೂಲವಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಎಲ್ಲಾ ಪೇಪರ್ಸ್ ಅನ್ನು ಬೇಕಾದರೆ ಕಳುಹಿಸಿಕೊಡುತ್ತೇನೆ.

**ಎಸ್. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಚೆನ್ನಾಗಿ, ನಾಜೂಕಾಗಿ ಮಾತನಾಡುತ್ತೀರೆಂದು ನನಗೆ ಗೊತ್ತು.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ರವಿಯವರು ಸಹ ಚೆನ್ನಾಗಿ ಮಾತನಾಡುತ್ತಾರೆ. ಅವರನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ನಾನು ಮಾತನಾಡುತ್ತೇನೆ. ಅದು ಆಗಬಹುದೇ?

**ಶ್ರೀ ಎಸ್. ರವಿ:-** ಮಾನ್ಯ ಸಚಿವರೇ, ತಾವು ಮಾತನಾಡಿ. ಈ ವಿಚಾರದ ಬಗ್ಗೆ ತಾವೇ ಮಾತನಾಡಬೇಕು. ಏಕೆಂದರೆ, ಅದರಲ್ಲಿ ಪರಿಹಾರ ಕೊಡುವವರು ಸಹ ತಾವೇ ಆಗಿರುತ್ತೀರಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ದಿನ ಮಧ್ಯಾಹ್ನ ನಾನು ಒಂದು ಹೇಳಿಕೆಯನ್ನು ಮಾಡಿರುತ್ತೇನೆ. ಆಗ ತಾವು ಈ ಸದನದಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಇದರಲ್ಲಿ ಏನಾಗಿದೆಯೆಂದರೆ, ಡಿ.ಪಿ.ಆರ್. ತಯಾರು ಮಾಡಲಿಕ್ಕೆ 2013ರ ನವೆಂಬರ್‌ನಲ್ಲಿ 4ಜಿ ವಿನಾಯಿತಿ ಕೇಳುತ್ತಾರೆ. 6 ತಿಂಗಳು ಸಮಯ ಆದ ನಂತರ, 2014ರ ಏಪ್ರಿಲ್‌ನಲ್ಲಿ 4ಜಿ ವಿನಾಯಿತಿ ಕೇಳಿದಂತಹ ಅರ್ಜಿ ಏನಿತ್ತು, ಆ ಪ್ರಸ್ತಾವನೆ ತಿರಸ್ಕಾರ ಆಗಿರುತ್ತದೆ. ಅದಾದ ನಂತರ, 2014ರ ಅಕ್ಟೋಬರ್‌ನಲ್ಲಿ ಜಾಗತಿಕ ಟೆಂಡರ್ ಕರೆಯುತ್ತಾರೆ. ಆ ಟೆಂಡರ್‌ನಲ್ಲಿ EI Technologies ಎಂಬ ಕಂಪನಿ ಭಾಗವಹಿಸುತ್ತದೆ. ಸುಮಾರು 13 ತಿಂಗಳ ನಂತರ ಅಂದರೆ, 2015 ನವೆಂಬರ್‌ನಲ್ಲಿ ಈ ಟೆಂಡರ್ ಮೊತ್ತ ಹೆಚ್ಚಾಗಿದೆ ಅಂದರೆ, ಬಿಡ್ ಅಮೌಂಟ್ ಹೆಚ್ಚಾಗಿದೆ ಎಂದು ಹೇಳಿ ಆ ಟೆಂಡರ್ ಅನ್ನು ತಿರಸ್ಕಾರ ಮಾಡುತ್ತಾರೆ. ಅದಾದ ನಂತರ, 2015ರ ಡಿಸೆಂಬರ್‌ನಲ್ಲಿ 4ಜಿ ವಿನಾಯಿತಿ ಕೇಳಿ ಮತ್ತೊಮ್ಮೆ ಪ್ರಸ್ತಾವನೆ ಕಳುಹಿಸುತ್ತಾರೆ. ಮೊದಲು ಕಳುಹಿಸಿದ್ದು ತಿರಸ್ಕಾರ ಆಗಿರುತ್ತದೆ. ನಂತರ, ಟೆಂಡರ್ ಕರೆದು, ಅದರಲ್ಲಿ ಹೆಚ್ಚು ಅಮೌಂಟ್ ಆಗಿದೆಯೆಂದು ತಿರಸ್ಕಾರ ಆಗಿರುತ್ತದೆ. 4ಜಿ ವಿನಾಯಿತಿ ಕೇಳಿ ಡಿಸೆಂಬರ್‌ನಲ್ಲಿ ಮತ್ತೊಂದು ಪ್ರಸ್ತಾವನೆ ಕಳುಹಿಸುತ್ತಾರೆ. ಅದು ಸಹ ಒಂದು ತಿಂಗಳ ನಂತರ ತಿರಸ್ಕಾರ ಆಗುತ್ತದೆ. 2016 ಫೆಬ್ರವರಿ ತಿಂಗಳಿನಲ್ಲಿ 4ಜಿ ವಿನಾಯಿತಿ ನೀಡಿದ ಸರ್ಕಾರ ಡಿ.ಪಿ.ಆರ್. ತಯಾರು ಮಾಡಲಿಕ್ಕೆ EI Technologies company ಯೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತಾರೆ. ಅಂದರೆ, ಮೊದಲು ಯಾವ ಕಂಪನಿಯ ಬಿಡ್ ಅಮೌಂಟ್ ಹೆಚ್ಚಾಗಿದೆಯೆಂದು ತಿರಸ್ಕಾರ ಮಾಡಲಾಗಿರುತ್ತದೆ, ಅದೇ ಕಂಪನಿಯ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಇದು ಸಹ ಮೂರು ತಿಂಗಳ ನಂತರ. 2016ರ ಜೂನ್ ತಿಂಗಳಿನಲ್ಲಿ 5,212 ಕೋಟಿ ರೂಪಾಯಿ ಡಿ.ಪಿ.ಆರ್. ಅನ್ನು consultancy agency ಯವರು ಕರ್ನಾಟಕ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. 2017ರ ಮಾರ್ಚ್ ತಿಂಗಳಿನಲ್ಲಿ ಸರ್ಕಾರದಿಂದ ಅದು ತಾತ್ವಿಕ ಅನುಮೋದನೆ ಪಡೆಯುತ್ತದೆ. ಅಂದರೆ, ಸುಮಾರು 10 ತಿಂಗಳ ನಂತರ ಒಪ್ಪಿಗೆ ಪಡೆದಿರುತ್ತದೆ. 2017ರ ಜೂನ್ ತಿಂಗಳಿನಲ್ಲಿ ಕೇಂದ್ರ ಜಲ ಆಯೋಗಕ್ಕೆ ಡಿ.ಪಿ.ಆರ್.

ಶೀರ್ಷಿಕೆಯಡಿ ದಾಖಲೆಗಳನ್ನು 2 ತಿಂಗಳ ನಂತರ ಸಲ್ಲಿಸುತ್ತಾರೆ. 2018ರ ಮಾರ್ಚ್ ತಿಂಗಳನಲ್ಲಿ ಕೇಂದ್ರ ಜಲ ಆಯೋಗದ ಸೂಚನೆಯಂತೆ ಡಿ.ಪಿ.ಆರ್. ಬದಲಿಗೆ ಪೂರ್ವಸಿದ್ಧತಾ ವರದಿ, PFR (pre-feasibility report) ಎಂದು ಹೇಳಿ ಅದು ಡಿ.ಪಿ.ಆರ್. ಅಲ್ಲವೆಂದು ಅದನ್ನು ನಾಮಕರಣ ಮಾಡುತ್ತಾರೆ. ಏಕೆಂದರೆ, ಯಾವುದೇ ಒಂದು ಪ್ರಾಜೆಕ್ಟ್ ಅನ್ನು ಸರ್ಕಾರ ಕೈಗೆತ್ತಿಕೊಳ್ಳಬೇಕಾದರೆ PFR ಮೊದಲು ಒಪ್ಪಿಗೆ ಆಗಬೇಕಾಗುತ್ತದೆ. ಅದಾದ ನಂತರ, ಡಿ.ಪಿ.ಆರ್. ಸಲ್ಲಿಸಬೇಕಾಗುತ್ತದೆ. ಅಂದರೆ, ಈ ಪ್ರಾಜೆಕ್ಟ್ ತೆಗೆದುಕೊಳ್ಳುವುದಕ್ಕೆ ಯೋಗ್ಯ ಎಂದು ಹೇಳಿದ ನಂತರ ಅದನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಅದಕ್ಕೆ ಸುಮಾರು 10 ತಿಂಗಳ ಸಮಯ ಹಿಡಿಯುತ್ತದೆ. ಅಷ್ಟೊತ್ತಿಗೆ ಕಾಂಗ್ರೆಸ್ ಸರ್ಕಾರದ ಅವಧಿ ಮುಗಿಯುತ್ತದೆ.

(ಮುಂದು...)

(260) 10.03.2022 6.30 ವೈಎಲ್-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಗೋವಿಂದ ಎಂ.ಕಾರಜೋಳ (ಮುಂದು)**:-

ದಿನಾಂಕ: 19ನೇ ಜನವರಿ 2018ರಂದು detailed project report (DPR) ಅನ್ನು ಆಯೋಗಕ್ಕೆ ಸಲ್ಲಿಸುತ್ತಾರೆ. ಆ ವರದಿ ಸಲ್ಲಿಸಿದ 10 ತಿಂಗಳುಗಳ ನಂತರ ಮೇಕೆದಾಟು ಯೋಜನೆಯು Cauvery Water Management Authority (CWMA) ಮೊರೆ ಹೋಗುತ್ತದೆ. ಈಗ CWMA ಯಲ್ಲಿ ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿದೆ. ಮೊನ್ನೆ ದಿವಸ ಮಾನ್ಯ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಗಳಾದ ಮೇಲೆ ಮೂರು ಬಾರಿ CWMA ಯ ಮೊರೆ ಹೋಗಿ ಬಂದಿದ್ದೇವೆ. ಮೊನ್ನೆ ಸಹ ಇಲ್ಲಿಗೆ ಬಂದಾಗ ನಾನು ಸಹ ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿಯೇ ಎರಡು ದಿವಸ ಉಳಿದುಕೊಂಡು, ನಮ್ಮ ಐದಾರು ಯೋಜನೆಗಳ ಸಮಸ್ಯೆ ಏನಿದೆ, ಅದೆಲ್ಲದರ ಬಗ್ಗೆ ಚರ್ಚೆ ಮಾಡಿ, ಆದಷ್ಟು ಬೇಗನೆ ಸ್ಪಷ್ಟೀಕರಿಸಿ ಕೊಡಬೇಕೆಂದು ಹೇಳಿದ್ದೇನೆ. ಇದರ ಮಧ್ಯೆಯಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲಿ ತಮಿಳುನಾಡು ಸರ್ಕಾರದವರು ದಾವೆಯನ್ನು ಹೂಡಿದ್ದು, ಪ್ರಕರಣ ಬಾಕಿ ಇದೆ.

ಇದು ಈಗಿನ ವಸ್ತು ಸ್ಥಿತಿ ಆಗಿದೆ. ಅದಕ್ಕಾಗಿ ರಾಜಕೀಯಕರಣ ಮಾಡುವುದಕ್ಕಾಗಲಿ, ರಾಜಕೀಯ ಬೆಳೆಸುವುದಕ್ಕಾಗಲಿ ಹೋಗುವುದಿಲ್ಲ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ರಾಜಕೀಯವೇ ಬೇಡ.

**ಶ್ರೀ ಗೋವಿಂದ ಎಂ.ಕಾರಜೋಳ (ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಮಾತನಾಡಿ ಮುಗಿಸುತ್ತೇನೆ. ಈಗಾಗಲೇ ಮಾನ್ಯ ಸದಸ್ಯರು yield ಆಗಿದ್ದು, ಇನ್ನು ಒಂದು ನಿಮಿಷ ಹಾಗೆಯೇ yield ಆಗಲಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಆಯಿತು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ಯೋಜನೆಗಾಗಿ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕಾಯ್ದಿರಿಸಿ ಹಂಚಿಕೆ ಮಾಡಲಾಗಿದೆ. ನಮ್ಮ ಉದ್ದೇಶವೇನೆಂದರೆ, ಇದೊಂದು ಕುಡಿಯುವ ನೀರಿನ ಯೋಜನೆಯಾಗಿರುವುದರಿಂದ ಮತ್ತು tribunal ನಲ್ಲಿ ನೀರಿನ ಹಂಚಿಕೆಯಾಗಿರುವುದರಿಂದ ಸರ್ವೋಚ್ಚ ನ್ಯಾಯಾಲಯದಲ್ಲಿ ಸಹ ಕುಡಿಯುವ ನೀರಿನ ಹಂಚಿಕೆಯಲ್ಲಿ ಯಾವುದೇ ರೀತಿಯ ಆಕ್ಷೇಪಣೆ ಇರಬಾರದೆಂದು ಇದೆ. ಇದರ ಮಧ್ಯೆಯಲ್ಲಿ forest and environmental clearance ರವರಿಗೂ ಸಹ ಧನ್ಯವಾದಗಳು. ಅದರ terms of reference ಪ್ರಸ್ತಾವನೆಯು ಇದೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುವ ಸಂದರ್ಭದಲ್ಲಿ ನಾನು ನಿರೀಕ್ಷೆ ಜಾಸ್ತಿ ಇಟ್ಟುಕೊಂಡು yield ಆಗಿದ್ದೆ. ಅವರ ಮಾತಿನಲ್ಲಿ ಬದ್ಧತೆ ಇರುತ್ತದೆ, ಕಠಿಣವಾಗಿ ಮಾತನಾಡಬಲ್ಲರು, ಏನೋ ಒಂದು ಸ್ಪಷ್ಟ ಸಂದೇಶ ನೀಡಬಹುದೆಂದು ಭಾವಿಸಿದ್ದೇನು. ಆದರೆ, ಮಾನ್ಯ ಸಚಿವರು ಕೊಂಕಣ ಸುತ್ತಿ ಮೈಲಾರಕ್ಕೆ ಬಂದರು ಎನ್ನುವ ಹಾಗೆ, ಈ ಯೋಜನೆಯು ಪ್ರಾರಂಭದಿಂದ ಹೇಗೆ ನಡೆಯಿತು, ಏನೇನು ಆಯಿತು ಎಂಬುದೆಲ್ಲವನ್ನೂ ಹೇಳಿ, ಕೊನೆಗೆ DPR ಆಗಿದೆ ಎಂದು ಹೇಳಿದರು.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಏನೇನು ಆಗಿದೆ ಎಂಬುದನ್ನು ಸೂಕ್ಷ್ಮವಾಗಿ ಹೇಳಿದ್ದೇನು.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುವ ಸಂದರ್ಭದಲ್ಲಿ ನಾನು ಮಧ್ಯೆ ಎದ್ದು ನಿಂತು ಮಾತನಾಡಲಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕಥೆಯನ್ನು ಹೇಳಲಿಲ್ಲ, ಸ್ಪಷ್ಟೀಕರಣವನ್ನು ನೀಡಿದ್ದಾರೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರದ 4 ವರ್ಷಗಳ ಅಧಿಕಾರವಧಿಯಲ್ಲಿ ಏನೇನೂ ಮಾಡಲಿಲ್ಲ ಎಂದು ಸೂಕ್ಷ್ಮವಾಗಿ ಹೇಳಿದ್ದೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ರವಿರವರು ಸಹ ಚೆನ್ನಾಗಿಯೇ ಮಾತನಾಡುತ್ತಿದ್ದರು.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಬಿಡುವಂತೆ ಮಾನ್ಯ ಸಚಿವರಿಗೆ ಹೇಳಿ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, consultancy agency ಗೆ ಫಿಕ್ಸ್ ಮಾಡಲು ನಾಲ್ಕು ಕೋಟಿ ರೂಪಾಯಿ banner ಹಾಕಲು 4 ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರದವರು ಸಮಯವನ್ನು ತೆಗೆದುಕೊಂಡಿದ್ದಾರೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಹಾಗಾದರೆ, ಮಾನ್ಯ ಗೋವಿಂದ ಎಂ.ಕಾರಜೋಳರವರಿಗೆ capacity ಇಲ್ಲವೆಂದು ಡಾ॥ ವೈ.ಎ.ನಾರಾಯಣಸ್ವಾಮಿಯವರು

ಹೇಳುತ್ತಿದ್ದಾರೆಯೇ? ಪಾಪ ಮಾನ್ಯ ವೈ.ಎ.ನಾರಾಯಣಸ್ವಾಮಿಯವರನ್ನು ಸಚಿವರಾಗಿಯು ಮಾಡಲಿಲ್ಲ. ಜೊತೆಗೆ ಉಪ ಸಭಾಪತಿಯಾಗಬೇಕೆಂಬ ಆಸೆಯನ್ನಿಟ್ಟುಕೊಂಡಿದ್ದರು, ಅದು ಆಗಲಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಪಾಪ ಮಾನ್ಯ ಎಸ್.ರವಿರವರು ಚೆನ್ನಾಗಿ ಮಾತನಾಡುತ್ತಿದ್ದರು.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣಸ್ವಾಮಿಯವರು ಕಡೆಗೆ ಸರ್ಕಾರದ ಮುಖ್ಯ ಸಚೇತಕರು ಸಹ ಆಗಲಿಲ್ಲ. ಅವರಿಗೆ ಸುಮ್ಮನೆ ಕುಳಿತುಕೊಳ್ಳಲು ಹೇಳಿ. ನಾನು ಮಾತನಾಡುವಾಗ ಅಡ್ಡ ಬಂದು ಮಾತನಾಡುವುದು ಬೇಡ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ರವಿರವರು ಚೆನ್ನಾಗಿ ಮಾತನಾಡುತ್ತಿದ್ದಾರೆ, ಸಚಿವರು ಕತೆ ಹೇಳುತ್ತಿಲ್ಲ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ಕೊಂಕಣ ಸುತ್ತಿ ಮೈಲಾರಕ್ಕೆ ಬಂದರು. ಅವರಿಗೆ ಬಹಳ ಅನುಭವ ಇದೆ.

**ಸಭಾಪತಿಯವರು:–** ಮಾನ್ಯ ಎಸ್.ರವಿರವರೆ, ತಾವು ಹೇಳಿದ ಗಾದೆ ಮಾತು ನಮ್ಮ ಉತ್ತರ ಕರ್ನಾಟಕದ ಕಡೆಯದು.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಹೌದು. ಮಾನ್ಯ ಸಚಿವರು ಕೊಂಕಣ ಸುತ್ತಿ ಮೈಲಾರಕ್ಕೆ ಬಂದ ಹಾಗೆ ಬಹಳ ಸರಾಗವಾಗಿ ಎಣ್ಣೆ ಹಾಕಿಕೊಂಡು ಜಾರಿಕೊಂಡರು. ಈಗಾಗಲೇ DPR ಆಗಿದೆ ಎಂದು ಏನು ಮಾನ್ಯ ಸಚಿವರು ಹೇಳಿದರು. ಅದನ್ನು ಸಹ ನಮ್ಮ ಸರ್ಕಾರ ಮಾಡಿದ್ದು ಎಂದು ಹೇಳುವುದಿಲ್ಲ. ಅದರ ಬದ್ಧತೆಯನ್ನು ಸಹ ಪ್ರದರ್ಶನ ಮಾಡುವುದಿಲ್ಲ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಅವರ ಸರ್ಕಾರ ಮಾಡಿದ್ದು ಅಲ್ಲ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ಬಹುಮತದಲ್ಲಿ ಆಗಿರುವುದು.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಹೌದು. ಎಲ್ಲವನ್ನೂ ಅವರೇ ಮಾಡಿರುವುದು. ಎಲ್ಲವನ್ನೂ ಅವರ ಸರ್ಕಾರವೇ ಮಾಡಬೇಕು, ಮಾಡಲಿ. ನಾವು ಏನೂ ಮಾಡಲಿಲ್ಲ. ಒಂದು ಸಾವಿರ ಕೋಟಿ ರೂಪಾಯಿ ಹಂಚಿಕೆ ಮಾಡಿರುವುದು ಸಹ ಅವರ ಸರ್ಕಾರವೇ ಮಾಡಲಿ. CWC (Central Water Commission) ಮಟ್ಟಕ್ಕೆ ಬಂದು ನಿಂತಿದೆ. ಅದನ್ನು ಯಾರು ಮಾಡಿದರು ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ನಮಗೆ ಬೇಕಾಗಿರುವುದೇನೆಂದರೆ, ಯಾವುದೇ ನ್ಯಾಯಾಲಯದಲ್ಲಿ,... ಮಾನ್ಯ ಸಚಿವರು ಹೇಳಿದ ಹಾಗೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇಲ್ಲ. ಹಾಗೆಯೇ ಕೋಳಿ ಕೇಳಿ ಮಸಾಲೆ ಅರೆಯುವುದಕ್ಕೆ ಆಗುವುದಿಲ್ಲ. ನಮ್ಮನ್ನು ಕೇಳಿ ತಮಿಳುನಾಡು ರಾಜ್ಯದವರು ಸೇಲಂ, ಧರ್ಮಪುರಿ, ಕೃಷ್ಣಪುರಿ ಜಿಲ್ಲೆಗಳಿಗೆ ಕಾವೇರಿ ನೀರನ್ನು ಹಳ್ಳಿ ಹಳ್ಳಿಗೂ ನಳಿಯ ಮೂಲಕ ನೀರನ್ನು ನೀಡಲಿಲ್ಲ, ನಮ್ಮ ಕರ್ನಾಟಕದವರನ್ನು ಕೇಳಿ ಕಾರ್ಯಕ್ರಮವನ್ನು ರೂಪಿಸಲಿಲ್ಲ. ಈಗಾಗಲೇ ಹೇಳಿದ ಹಾಗೆ ಕೋಳಿ ಕೇಳಿ ಮಸಾಲೆ ಅರೆಯಬೇಕಾಗಿಲ್ಲ. ಸರ್ವೋಚ್ಚ ನ್ಯಾಯಾಲಯದ ಆದೇಶ ಏನೆಂದು, ನನ್ನಗಿಂತ ಹಿರಿಯರು, ಸಚಿವರಾಗಿರುವವರಿಗೆ ಹೇಳುವುದೇನೆಂದರೆ, ಕುಡಿಯುವ ನೀರಿನ ಯೋಜನೆಗೆ ಯಾವುದೇ ಅನುಮತಿ ಬೇಕಾಗಿಲ್ಲ. ನೆಲ, ಜಲ, ಹಣ ನಮ್ಮದು. ಅದನ್ನು ಮಾಡುವ ಬದ್ಧತೆ ಬೇಕು. 25 ಜನ ಎಂ.ಪಿ. ಗಳಿದ್ದು, ಡಬಲ್ ಇಂಜಿನ್ ಸರ್ಕಾರ ಅಧಿಕಾರದಲ್ಲಿರುವುದರಿಂದ ಈ ಅವಧಿ ಬಿಟ್ಟರೆ ಮತ್ತೆ ಯಾವತ್ತು ಆಗುವುದಿಲ್ಲ. ಈಗಾಗಲೇ ಚುನಾವಣೆ ನಡೆದಿದ್ದು, ಉತ್ತರ ಪ್ರದೇಶವನ್ನು ಗೆದ್ದ ಜೋಶ್ನಲ್ಲಿ ಇದ್ದಾರೆ. ಚುನಾವಣೆಯಲ್ಲಿ ಗೆದ್ದು ದೇಶದಲ್ಲಿಯೇ ಪ್ರಬಲರಾಗಿದ್ದಾರೆ, ಅದೇ ರೀತಿ ರಾಜ್ಯವನ್ನು ಗೆಲ್ಲಬೇಕಲ್ಲವೇ? ಪರಿಸರ ಇಲಾಖೆಯಿಂದ ಅನುಮತಿ ತಂದವರು ನಾವು, ಮೇಕೆದಾಟು ಯೋಜನೆಯನ್ನು ಮಾಡಿದವರು ನಾವು ಎಂದು ಚುನಾವಣೆ ಪ್ರಣಾಳಿಕೆಯಲ್ಲಿ ಜಾಹೀರಾತು ನೀಡಿ, ಮತ ಹಾಕಿಸಿಕೊಳ್ಳಿ, ಬೇಡ ಎಂದು ಹೇಳುವುದಿಲ್ಲ. ಅದರ ಬಗ್ಗೆ ನಾವು ಕೇಳುತ್ತಿದ್ದೇವೆ ವಿನಃ ಮಾನ್ಯ ಸಚಿವರು ಕಥೆ ಹೇಳಿದರೆ, ಅವರ ಕಥೆ ಕೇಳಿಕೊಂಡು ನಾವು ಏನು ಮಾಡುವುದು? ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ನೀರಾವರಿ ಸಚಿವರಿಂದ ಪರಿಹಾರ ಮಾಡಿಸಿಕೊಳ್ಳಿ ಎಂದು ಹೇಳಿ ಹೊರಟು ಹೋದರೆ, ಅವರ ಹಿಂದೆಯೇ ಮಾನ್ಯ ನೀರಾವರಿ ಸಚಿವರು ಸುಮ್ಮನೆ ಹೇಳಿಕೊಂಡು ಹೋದರೆ, ರಾಜ್ಯದ ಒಬ್ಬ ಪ್ರತಿನಿಧಿಯಾಗಿ ನಮ್ಮ ಕಥೆ ಏನು? ಏನು ಮಾಡಬೇಕು ಎಂಬುದನ್ನು ಹೇಳಲಿ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಹೊರಟು ಹೋಗುವ ಪ್ರಶ್ನೆ ಬರುವುದಿಲ್ಲ. ನಾನು ಸದನನಲ್ಲಿ statement ನೀಡಿದ್ದೇನೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯವಿಟ್ಟು ಅದರ ಬಗ್ಗೆ ಹೇಳಲಿ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಸುಮ್ಮನೆ ಹೋಗುವ ಪ್ರಶ್ನೆ ಬರುವುದಿಲ್ಲ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ರವಿರವರಿಗೆ ಜಗಳವಾಡಬೇಕೇ ಅಥವಾ ಯೋಜನೆ ಆಗಬೇಕೇ?

**ಸಭಾಪತಿಯವರು:–** ಡಾ॥ ವೈ.ಎ.ನಾರಾಯಣಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನನ್ನ ಧ್ವನಿ ಇರುವುದೇ ಹಾಗೆ. ನನ್ನ ಧ್ವನಿಯಲ್ಲಿ ಬದಲಾವಣೆ ಮಾಡಿಕೊಳ್ಳುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಇದೇ ಸದನದಲ್ಲಿ ಅಂತರರಾಜ್ಯ ವ್ಯಾಜ್ಯ ಇರುವಂಥ ನದಿಗಳ ನ್ಯಾಯಾಧೀಕರಣದಲ್ಲಿ ಹಂಚಿಕೆಯಾಗಿರುವ ನೀರಿನ ಬಗ್ಗೆ ಹಿಂದೆ ಹೋಗುವುದಾಗಲಿ ಅಥವಾ ಚರ್ಚೆ ಮಾಡುವುದಾಗಲಿ ಪ್ರಶ್ನೆಯೇ ಬರುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ನಮ್ಮ ನೀರು, ನಮ್ಮ ನೆಲ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ನೀರನ್ನು ನಾವು ಉಪಯೋಗ ಮಾಡಿಕೊಂಡೇ ಮಾಡಿಕೊಳ್ಳುತ್ತೇವೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಮಾಡಲೇಬೇಕು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದು ನಮ್ಮ ಸರ್ಕಾರದ ಬದ್ಧತೆ ಎಂದು ಹೇಳಿದ್ದೇನೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಆಯಿತು ಮಾಡಲಿ. ಒಂದು ಸಾವಿರ ಕೋಟಿ ರೂಪಾಯಿ ಏನಿದೆ, ಅದರಲ್ಲಿ ಒಂದು ರೂಪಾಯಿನಾದರೂ ಖರ್ಚು ಮಾಡಬೇಕೆಂದರೆ, ಪರಿಸರ ಇಲಾಖೆ ಅನುಮತಿ ಬಂದರೆ ಮಾತ್ರ ಖರ್ಚು ಮಾಡಲು ಸಾಧ್ಯ. ಇಲ್ಲದಿದ್ದರೆ, ಈ ಮೂರು ಸಾವಿರ ಕೋಟಿ ರೂಪಾಯಿ ಏನಿದೆ, ಅದು ಕನ್ನಡಿಯೊಳಗಿನ ಗಂಟು. ಕನ್ನಡಿಯೊಳಗೆ ಮಾತ್ರ ನೋಡಿಕೊಳ್ಳಬೇಕು ಅಷ್ಟೇ. ಅನುಮತಿ ಬಂದರೆ ಮಾತ್ರ ಆ ಗಂಟು ಬಿಚ್ಚುವುದು. ಇಲ್ಲದಿದ್ದರೆ ಕನ್ನಡಿ ಮುಂದೆ ತೋರಿಸಿಕೊಂಡು, ಹೋಗುತ್ತಿರಬೇಕು. ಅದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದರಲ್ಲಿ ಬದ್ಧತೆ ಪ್ರದರ್ಶನವಾಗಲಿ ಆಗ ನಾನು ಮಾನ್ಯ ಸಚಿವರ ಮಾತನ್ನು ಒಪ್ಪಿಕೊಳ್ಳುತ್ತೇನೆ. ಅವರಿಗೆ ಅಭಿನಂದನೆ ಮಾಡುತ್ತೇನೆ, ಸ್ವಾಗತಿಸುತ್ತೇನೆ. ನಾವು ಏನು ಬೆಂಗಳೂರಿನ ನಿವಾಸಿ ಆಗಿಲ್ಲ. ನಾನು ರಾಮನಗರ ಜಿಲ್ಲೆಗೆ ಸೇರಿದವನು. ಬೆಂಗಳೂರು ಗ್ರಾಮಾಂತರ, ರಾಮನಗರದ ಬಗ್ಗೆ ಹೇಳುವುದಾದರೆ, ಬೆಂಗಳೂರಿಗೆ 10 ಟಿ.ಎಂ.ಸಿ. ನೀರು ಏನು ಬರುತ್ತದೆ, ಆ ನೀರನ್ನು ಬೆಂಗಳೂರಿನ ನಿವಾಸಿಗಳು ಕುಡಿದು ಬಚ್ಚಲು ಮನೆಯಿಂದ ಹೊರಗೆ ಏನು ಬಿಡುತ್ತಾರೆ, ಆ ನೀರನ್ನು ಶುದ್ಧೀಕರಿಸಿ ನಮ್ಮ ಕೆರೆಗಳನ್ನು ತುಂಬಿಸಿಕೊಂಡು ಜೀವನ ಮಾಡಿಕೊಳ್ಳುತ್ತೇವೆ. 10 ಟಿ.ಎಂ.ಸಿ. ನೀರು ಎಂದರೆ, ಸುಮಾರು 4-5 ಟಿ.ಎಂ.ಸಿ. ನೀರನ್ನು ಕುಡಿದು, ಉಳಿದ ಸುಮಾರು 5 ಟಿ.ಎಂ.ಸಿ. ನೀರು ಕೊಳಚೆ ನೀರಾಗಿ ಮಾರ್ಪಾಡು ಆಗಿ ಬರುತ್ತದೆ, ಆ ನೀರನ್ನು ಕೆರೆಗೆ ತುಂಬಿಸಿಕೊಳ್ಳುತ್ತೇವೆ. ಆ ನೀರನ್ನು ನಮ್ಮ ಕೆರೆಗೆ ತುಂಬಿಸಿಕೊಳ್ಳುವುದರಿಂದ ಅಂತರ್ಜಲ ಹೆಚ್ಚುತ್ತದೆ, ಹೇಗೋ ಜೀವನ ಮಾಡಿಕೊಂಡು ಹೋಗುತ್ತೇವೆ. ನಮ್ಮ ಪರಿಸ್ಥಿತಿ ಆ ರೀತಿ ಇದೆ. ಅದಕ್ಕಾಗಿ ಅದನ್ನಾದರೂ ಸರಿಪಡಿಸಿ ಎಂದು ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಎತ್ತಿನಹೊಳೆ ಯೋಜನೆಯನ್ನು ಸಹ ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಭಾಗಗಳಿಗೆ ಮಾಡಿರುವುದು.

ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರಿಗೆ ನೀರು ಸರಬರಾಜು ಮಾಡುತ್ತಿಲ್ಲ. ಬೆಂಗಳೂರಿಗೆ ನೀರು ಸರಬರಾಜು ಆಗುತ್ತಿದ್ದ ಅರ್ಕಾವತಿ ಜಲಾಶಯ, ತಿಪ್ಪಗೊಂಡನಹಳ್ಳಿ ಜಲಾಶಯವೇನಿದೆ, ಅಲ್ಲಿಂದ ನೀರು ಬರುತ್ತಿಲ್ಲ. ನೀರು ಬರುವಂತಹ catchment area ದಲ್ಲಿ ಹತ್ತು-ಹಲವಾರು ಕೈಗಾರಿಕೆಗಳು, ವಸತಿ ಪ್ರದೇಶಗಳೆಲ್ಲವೂ ನಗರೀಕರಣವಾಗಿದ್ದು, ಅದರಿಂದ ಬರುವಂಥ ಕೊಳಚೆ ನೀರು ಕುಡಿಯಲು ಯೋಗ್ಯವಲ್ಲ ಎಂದು ಅರ್ಕಾವತಿ ಜಲಾಶಯ, ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಯಾವುದೇ ನೀರನ್ನು ಬೆಂಗಳೂರಿಗೆ ಸರಬರಾಜು ಮಾಡುತ್ತಿಲ್ಲ. ಕಳೆದ 3-4 ವರ್ಷಗಳಿಂದ ಬೆಂಗಳೂರಿಗೆ ನೀರು ಇಲ್ಲದಂತಾಗಿದೆ. ಸುಮಾರು 3 ಟಿ.ಎಂ.ಸಿ. ನೀರು ಆ ಜಲಾಶಯದಲ್ಲಿಯೇ ಖೋತ ಆಗಿದೆ. ಎತ್ತಿನಹೊಳೆ ಯೋಜನೆಯಿಂದಲೇ 2 ಟಿ.ಎಂ.ಸಿ. ನೀರು ಇರುವುದು. ಈಗಾಗಲೇ ತಾವು ಎತ್ತಿನಹೊಳೆ ಮುಖೇನಾ ಬೆಂಗಳೂರಿಗೆ ನೀರನ್ನು ಸರಬರಾಜು ಮಾಡುತ್ತೇವೆ ಎಂದು ಹೇಳಿದರು. ಎತ್ತಿನಹೊಳೆ ಯೋಜನೆಯು ಚಿಕ್ಕಬಳ್ಳಾಪುರ, ರಾಮನಗರ ಹಾಗೂ ಕೋಲಾರ ಜಿಲ್ಲೆಗಳಿಗೆ ಆಗಿರುವುದು. ಆದರೆ, ಎಲ್ಲಿಗೆ ತಂದು ನಿಲ್ಲಿಸಿದ್ದಾರೆ. ಕೊರಟಗೆರೆ, ತುಮಕೂರು, ಬೆಂಗಳೂರು ಜಿಲ್ಲೆಗಳ ಮಧ್ಯೆ ತಂದು ನಿಲ್ಲಿಸಿದ್ದಾರೆ. ನಮಗೆ ಅವರ ಹಣ ಬೇಡ. ಈ ಸಲ ಬಜೆಟ್‌ನಲ್ಲಿ ಈ ಯೋಜನೆಗಾಗಿ 3 ಸಾವಿರ ಕೋಟಿ ರೂಪಾಯಿ ಮೀಸಲಿಟ್ಟಿದ್ದಾರೆ. ಆ 3 ಸಾವಿರ ಕೋಟಿ ರೂಪಾಯಿಯು ಗುತ್ತಿಗೆದಾರರು ಪೈಪ್ ಹಾಕಿದ್ದು, ಅವರಿಗೆ ಬಿಲ್ ಮೊತ್ತವನ್ನು ಪಾವತಿಸಲು ಖರ್ಚು ಮಾಡುತ್ತಾರೆ. ಆ ಗುತ್ತಿಗೆದಾರ ಸಿವಿಲ್ ವರ್ಕ್ ಆಗಲಿ, ಡ್ಯಾಂ ಕೆಲಸವಾಗಲಿ ಮಾಡಿಲ್ಲ. ಕೇವಲ ಜೆ.ಸಿ.ಬಿ. ಯಂತ್ರದ ಮೂಲಕ ಗುಂಡಿ ಅಗೆದು ಪೈಪ್ ಲೈನ್ ಹಾಕಿಕೊಂಡು ಹೋಗಿದ್ದು, ಆತನಿಗೆ ಆ 3 ಸಾವಿರ ಕೋಟಿ ರೂಪಾಯಿ ನೀಡಬೇಕು. ಆ ಮೂರು ಸಾವಿರ ಕೋಟಿ ಆತನಿಗೆ ಹೋದರೆ, ಇನ್ನು ಈ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಎಲ್ಲಿ ಬಂತು? ಸರ್ಕಾರವು ಆ ಕೆಲಸವನ್ನು ಮಾಡಬೇಕಾಗಿಲ್ಲ.

ಎತ್ತಿನಹೊಳೆ ಯೋಜನೆಯನ್ನು ಮಾಡಬೇಕೆಂದರೆ, ರಾಜಕೀಯ ಇಚ್ಛಾಶಕ್ತಿ ಇರಬೇಕು. ಕೊರಟಗೆರೆ, ದೊಡ್ಡಬಳ್ಳಾಪುರ, ಬೈಲಹೊಂಗಲದಲ್ಲಿ ಡ್ಯಾಂ ನಿರ್ಮಿಸುವ ಸಲುವಾಗಿ ಎರಡು ಜಿಲ್ಲೆಗಳ ರೈತರನ್ನು ಕರೆಸಿ, ಒಂದು ದರ ನಿಗದಿ ಮಾಡಿ, ಅವರಲ್ಲಿರುವ ವಿವಾದವನ್ನು ಬಗೆಹರಿಸುವಂಥ

ರಾಜಕೀಯ ಇಚ್ಛಾಶಕ್ತಿ ಪ್ರದರ್ಶನವಾಗಬೇಕು. ಅದನ್ನು ಬಿಟ್ಟು 3 ಸಾವಿರ ಕೋಟಿ ರೂಪಾಯಿ ನೀಡಿದ್ದೇವೆ ಎಂದರೆ, ಆ ಹಣವನ್ನು ತೆಗೆದುಕೊಂಡು ಉಪ್ಪು-ಖಾರ ಹಾಕಿಕೊಂಡು ನೆಕ್ಕುವುದೇ. ಆ ಕೆಲಸವನ್ನು ಮಾಡುವವರು ಯಾರು? ಸರ್ಕಾರವು ಆ ಕೆಲಸವನ್ನು ಮಾಡಬೇಕಾಗಿದೆ. ಮಾನ್ಯ ಸಚಿವರಿಗೆ ಆ ಕೆಲಸವನ್ನು ಮಾಡುವಂಥ ಚಾಣಾಕ್ಷತನ ಇದೆ. ಆದರೆ, ಇವತ್ತು ಎಷ್ಟು ಚೆನ್ನಾಗಿ ಉತ್ತರ ನೀಡಿದರು. ಅವರ ಹಿರಿತನ ಹಾಗೂ ನೀಡಿದಂಥ ಉತ್ತರಕ್ಕೆ ಏನು ಮಾತನಾಡಲು ಆಗುವುದಿಲ್ಲ. ಅಷ್ಟು ನಾಜುಕುತನದಿಂದ ಉತ್ತರ ನೀಡುತ್ತಾರೆ. ಆ ನಾಜುಕುತನ ಅಲ್ಲಿ ಪ್ರದರ್ಶನ ಮಾಡಿ, ಆ ಸಮಸ್ಯೆಯನ್ನು ಪರಿಹರಿಸಬೇಕು. ಆಗ ಮಾತ್ರ ಎತ್ತಿನಹೊಳೆ ಯೋಜನೆಯ ಕನಸು ನನಸಾಗುತ್ತದೆ. ಇಲ್ಲದಿದ್ದರೆ, ಗುತ್ತಿಗೆದಾರರು ಹಣ ಮಾಡಿಕೊಳ್ಳಲು, ಅಧಿಕಾರಿಗಳು commission ಎಣಿಸಿಕೊಳ್ಳಲು ಯೋಜನೆಯಾಗಿ ಒಂಭತ್ತು ಸಾವಿರ ಕೋಟಿ ರೂಪಾಯಿಯಿಂದ ಪ್ರಾರಂಭವಾಗಿ ಮೂವತ್ತು ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದರೂ ಸಹ ಈ ಯೋಜನೆ ಮುಗಿಯುವುದಿಲ್ಲ. ವರ್ಷ-ವರ್ಷಕ್ಕೂ schedule of rates (SR) ಜಾಸ್ತಿಯಾಗುತ್ತಾ ಹೋಗುತ್ತಿರುತ್ತದೆ. ಯಾವುದೇ ನೀರಾವರಿ ಯೋಜನೆಯು ನಿಗದಿತ ಸಮಯದೊಳಗೆ ಆಗಲಿಲ್ಲವೆಂದರೆ, ಅದು ಆನೆ ಭಾರವಾಗಿ ಮಾರ್ಪಾಟು ಆಗುತ್ತದೆ. ಆದ್ದರಿಂದ ಇಂತಹ ಪ್ರಮುಖವಾದ ನೀರಾವರಿ ಯೋಜನೆಯನ್ನು ಮೊದಲು ಕೈಗೆತ್ತಿಕೊಳ್ಳಬೇಕು. ಸದ್ಯದಲ್ಲಿಯೇ ಚುನಾವಣೆ ಬರುತ್ತಿದ್ದು, ರಾಜಕೀಯವಾಗಿ ಚುನಾವಣಾ ವಿಚಾರದಲ್ಲಿ ಚರ್ಚೆಯಾದರೆ, ಅವರು ಗೆಲುವುದರಲ್ಲಿ ಯಾವುದೇ ಅನುಮಾನ ಬೇಡ, ಅವರೇ ಇದರ ಲಾಭವನ್ನು ಉಪಯೋಗಿಸಿಕೊಳ್ಳಲಿ.

(...ಮುಂದು)

(261) 10.03.2022/6.40/ಎಸ್‌ಕೆ-ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್. ರವಿ (ಮುಂದು):-**

ಅದನ್ನು ತಮ್ಮ ಸರ್ಕಾರವೇ ಉಪಯೋಗಿಸಿಕೊಂಡು, ಅದರ ಪ್ರಯೋಜನವನ್ನು ಪಡೆದುಕೊಳ್ಳಿ. ತಮ್ಮ ಸರ್ಕಾರ ಅಧಿಕಾರಕ್ಕೆ ಬರಬೇಕೆಂಬ ಆಸೆ ಇದೆ. ನಮ್ಮ ಜನರಿಗೆ ನೀರು ಕೊಟ್ಟರೆ ಸಾಕು. ಆ ಕೆಲಸವನ್ನು

ಮಾಡಿ ತೋರಿಸಿದರೆ, ಜನರೇ ತಮಗೆ ಮತವನ್ನು ಹಾಕುತ್ತಾರೆ. ನೀವು ಕೆಲಸ ಮಾಡಿ, ಜನರು ಮತ ಹಾಕಿದರೆ, ನಾವು ಏನು ಮಾಡುವುದಕ್ಕಾಗುತ್ತದೆ? ಅವರು ಕೆಲಸ ಮಾಡಿದ್ದಾರೆ, ಜನರು ಮತವನ್ನು ಹಾಕಿದ್ದಾರೆಂದು ನಾವು ಹೇಳುತ್ತೇವೆ. ತಾವು ಕೆಲಸ ಮಾಡಿ ಮತವನ್ನು ಹಾಕಿಸಿಕೊಳ್ಳಿ. ತಾವು ಖಾಲಿ ಮಾತುಗಳನ್ನಾಡಬೇಡಿ.  ಇಲ್ಲಿ ಸಾವಿರ ಕೋಟಿ ರೂಪಾಯಿಗಳು ಖರ್ಚು ಆಗುವುದಿಲ್ಲ. ಆ ಮೂರು ಸಾವಿರ ಕೋಟಿ ರೂಪಾಯಿಗಳು ಹಳೆ ಕಂಟ್ರ್ಯಾಕ್ಟರ್ ಬಿಲ್‌ಗೆ ವಜಾ ಆಗುತ್ತದೆ. ಹಾಗಾದರೆ ಅವು ಅಲ್ಲಿಯೇ ಬಿದ್ದಿರುತ್ತವೆ. ಅವು ಬೀಳುವುದು ಬೇಡ. ಈ ರಾಜ್ಯದಲ್ಲಿ ಇಪ್ಪತ್ತೈದು ಜನ ಎಂ.ಪಿ.ಗಳು ಪ್ರಬಲರಿದ್ದೀರಿ. ಈ ರಾಜ್ಯದ ಜನರು ತಮ್ಮನ್ನು ಪ್ರಧಾನ ಮಂತ್ರಿಗಳನ್ನಾಗಿ ನೋಡಬೇಕು ಎಂದು ಹೇಳಿ ಮಾನ್ಯ ಮೋದಿಜೀಯವರು ನೇರವಾಗಿ ಹೇಳಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ (ಜಲ ಸಂಪನ್ಮೂಲ ಸಚಿವರು):–** ಮಾನ್ಯ ರವಿಯವರೇ, ನಾನು ಹೇಳುತ್ತೇನೆ.

**ಶ್ರೀ ಎಸ್. ರವಿ:–** ನನ್ನ ಮಾತು ಇನ್ನೂ ಮುಗಿದಿಲ್ಲ. ನಾನು ಮಾತನಾಡಿ ಮುಗಿಸುವುದಕ್ಕೆ ಇನ್ನೂ ಐದು ನಿಮಿಷ ಇದೆ.

**ಶ್ರೀ ಗೋವಿಂದ ಎಂ. ಕಾರಜೋಳ  (ಬೃಹತ್ ಹಾಗ ಮಧ್ಯಮ ನೀರಾವರಿ ಸಚಿವರು (ಜಲ ಸಂಪನ್ಮೂಲ):–** ಮಾನ್ಯ ಸಭಾಪತಿಯವರೇ, 2022–23 ನೇ ಸಾಲಿನಲ್ಲಿ ಇದ್ದೇವೆ.

**(ಗೊಂದಲ)**

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿದರೆ, ನಾವು ಎಲ್ಲಿಗೆ ಹೋಗೋಣ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈಗ

...

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ಮಾನ್ಯ ಸದಸ್ಯರು yield ಆಗಿಲ್ಲ. ಅವರು ಮಾತನಾಡುವುದಕ್ಕೆ ಬಿಡಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಕರ್ನಾಟಕ ರಾಜ್ಯದ ಇಪ್ಪತ್ತೈದು ಜನ ಎಂ.ಪಿ. ಗಳ ಜೊತೆಗೂಡಿ ಪ್ರಧಾನ ಮಂತ್ರಿಯನ್ನು ಭೇಟಿ ಮಾಡಿ ಹಾಗೂ ಕೇಂದ್ರದ ಪರಿಸರ ಮಂತ್ರಾಲಯದ ಸಚಿವರು ಮತ್ತು ಸಂಬಂಧಪಟ್ಟಂತಹ ಸಚಿವರನ್ನೆಲ್ಲಾ ಕರೆದು, ತಾವು ಅದನ್ನು ಏನು ಮಾಡಬೇಕೆಂಬುದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಈ ರಾಜ್ಯದಲ್ಲಿ ನಾವು ತಮ್ಮನ್ನು "ಜಿ ಹುಜೂರ್" ಎಂದು ಹೇಳಕೊಂಡು ಹೋಗುತ್ತೇವೆ. ಅದನ್ನು ತರುವ ಬದ್ಧತೆಯ ಪ್ರದರ್ಶನವಾಗಬೇಕು. ನಾನು ಕೇಳರುವಂತಹದ್ದಕ್ಕೆ, ತಾವು ಉತ್ತರ ಕೊಡುವಂತಹದ್ದಲ್ಲ. ಇದು ಮಾಡಿದರೆ ಮಾತ್ರ ಈ ನೀರಾವರಿ ಯೋಜನೆ ಸಫಲವಾಗುವುದಕ್ಕೆ ಸಾಧ್ಯ.

**ಶ್ರೀ ಅರಗ ಜ್ಞಾನೇಂದ್ರ (ಗೃಹ ಸಚಿವರು):–** ಕಳೆದ ಐದು ವರ್ಷಗಳಲ್ಲಿ ತಮ್ಮದೇ ಆದ ಸರ್ಕಾರವಿದ್ದಾಗ, ತಮ್ಮ ಬದ್ಧತೆಯನ್ನು ಏನು ಪ್ರದರ್ಶನ ಮಾಡಿದ್ದೀರಾ ಎಂದು ಅಂದುಕೊಳ್ಳಿ. ಇದರ ಬಗ್ಗೆ ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ತಾವು ಭಯಂಕರ ಟೋನ್‌ನಲ್ಲಿ ಮಾತನಾಡುತ್ತಿದ್ದೀರಿ. ತಾವು ಹೊಸಬರು ಎಂದು ತಿಳಿದುಕೊಂಡುಬಿಟ್ಟಿದ್ದೀರಿ. ಕಳೆದ ಐದು ವರ್ಷಗಳ ಹಿಂದೆ ತಮ್ಮ ಸರ್ಕಾರವನ್ನು ನಡೆಸಿದವರು. ತಾವು ಈ ತರಹ ಮಾತನಾಡಿದರೆ ಹೇಗೆ? ತಾವು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ. ಆದರೆ...

**(ಗೊಂದಲ)**

**ಶ್ರೀ ಎಸ್. ರವಿ:–** ಮಾನ್ಯ ಅರಗ ಜ್ಞಾನೇಂದ್ರರವರ ಬಗ್ಗೆ ನನಗೆ ಅಪಾರ ಗೌರವವಿದೆ. ನಾನು ಚಿಕ್ಕಮಗಳೂರಿನವನು ಎಂದು ಅವರು ಹೇಳಿದರು. ನಾವು ಮಂಡ್ಯದವರು. ನಾವು ಸ್ವಲ್ಪ ಒರಟು ಜನ. ಇವರು ಬಹಳ ನಯ–ನಾಜೂಕಿನವರು. ಇವರು ಶಿವಮೊಗ್ಗದ ತೀರ್ಥಹಳ್ಳಿ ಮಲೆನಾಡಿನವರು. ನಾವು ಸ್ವಲ್ಪ ಕರಿ ರಾಗಿ ಮುದ್ದೆ ತಿಂದುಕೊಂಡು, ಸ್ವಲ್ಪ ಒರಟು ಒರಟಾಗಿ ಮಾತನಾಡುವ ಜನ. ಅದನ್ನು

ಅವರೇ ಹೇಳಬಿಟ್ಟಿದ್ದಾರೆ. ಅವರು ನನ್ನನ್ನು high tone ನಲ್ಲಿ ಮಾತನಾಡುತ್ತಾರೆ ಎಂದು ಒಪ್ಪಿಕೊಳ್ಳುತ್ತಾರೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ರವಿಯವರೇ, ಮಂಡ್ಯ ಕನಕಪುರ ಈ ಭಾಗದ ಜನರು ಬಹಳ ಹೃದಯವುಳ್ಳಂತಹವರು.

**ಶ್ರೀ ಎಸ್. ರವಿ:–** ಅವರು ನಯ–ನಾಜೂಕಾಗಿ ಮಾತನಾಡುತ್ತಾರೆ. ನಾವು ಕಠಿಣವಾಗಿ ಮಾತನಾಡುತ್ತೇವೆ. ನಾನು ಇದರ ಬಗ್ಗೆ ಮಾತನಾಡುತ್ತಾ ಹೋಗಿ ಕೊನೆಗೆ ಮಾತನಾಡುತ್ತಿದ್ದ ದಾರಿಯೇ ತಪ್ಪಿ ಹೋಗಿಬಿಟ್ಟೆ.

**(ಸದನ ನಗೆಗಡಲಿನಲ್ಲಿ ತೇಲಿತು)**

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ರವಿಯವರೇ, ತಾವು ದಾರಿ ತಪ್ಪಿಲ್ಲ. ತಾವು ಸರಿಯಾಗಿ ಮಾತನಾಡುತ್ತಿದ್ದೀರಾ. ….ಕುಡಿಯುವ ನೀರು ಕೊಡುತ್ತೇವೆಂದು ಅದನ್ನು ತಪ್ಪಿಸಿಕೊಂಡಿರಿ. ಅದರ ಬಗ್ಗೆಯೂ ಕೂಡ ಹೇಳಿ.

**(ಗೊಂದಲ)**

**ಶ್ರೀ ಎಸ್. ರವಿ:–** ಈ ರಾಜ್ಯದಲ್ಲಿ 25 ಜನ ಎಂ.ಪಿ.ಗಳನ್ನು ಆಯ್ಕೆ ಮಾಡಿದ್ದೇವೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ತಾವು ಎಂ.ಪಿ. ಗೆಲ್ಲಿಸಿರುವ ಬಗ್ಗೆ ಸ್ವಲ್ಪ ಹೇಳಿ.

**ಸಭಾಪತಿಯವರು:–** ಮಾನ್ಯ ಸಚಿವರೇ, ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಬಿಡಿ. ಅವರ ಮಾತನಾಡುತ್ತಿರುವ ಬಗ್ಗೆ ಪಾಯಿಂಟ್ಸ್ ತಪ್ಪಿ ಹೋಗುತ್ತದೆ. ಮಾನ್ಯ ಸಚಿವರೇ, ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಎಸ್. ರವಿ:–** ಈ ರಾಜ್ಯದ ಜನರು 25 ಜನ ಎಂ.ಪಿ.ಗಳನ್ನು ಆಯ್ಕೆ ಮಾಡಿ, ಲೋಕಸಭೆಗೆ ಕಳುಹಿಸಿದ್ದಾರೆ ಎಂದು ಮಾನ್ಯ ಮೋದಿಯವರಿಗೆ ಹೇಳಿ. ಆ ಬದ್ಧತೆಯನ್ನು ಪ್ರದರ್ಶನ ಮಾಡಿ, ತಾವು ಅದಕ್ಕೆ ಒತ್ತಡ ಹಾಕಿ, ಇವತ್ತು ಇದನ್ನು ಮಾಡಿಸಿಕೊಳ್ಳಿ. ತಮಿಳುನಾಡಿನಿಂದ ಕೇಂದ್ರದಲ್ಲಿ

ಯಾವುದೇ ರೀತಿಯ ಒತ್ತಡ ಇರುವುದಿಲ್ಲ. ಅಲ್ಲಿ AIADMK ಇದೆ ಅಲ್ಲಿ ಚುನಾವಣೆಯೂ ಇಲ್ಲ. ಅಲ್ಲಿ ಯಾವುದೂ ಇಲ್ಲ. ಅಲ್ಲಿರುವ ಎಂ.ಪಿ.ಗಳು ಯಾವ ಸರ್ಕಾರ ಇರುತ್ತದೆಯೋ, ಅವರೇ ಗೆಲ್ಲುತ್ತಾರೆ. ಅವರನ್ನು ಓಲೈಸುವ ಅವಶ್ಯಕತೆ ತಮಗೆ ಏನಿಲ್ಲ. ಕೇರಳ ರಾಜ್ಯದಲ್ಲಿ ಕಾಂಗ್ರೆಸ್ ಅಥವಾ ಕಮ್ಯೂನಿಸ್ಟ್ ಯಾವುದಾದರೊಂದು ಬರಬೇಕು. ಅಲ್ಲಿಯೂ ಕೂಡ ತಮ್ಮ ಪರವಾಗಿ ಆದೇಶ ಬರುವಂತಹದ್ದೇನಿಲ್ಲ. ದಕ್ಷಿಣ ಭಾರತದದಲ್ಲಿ ಬಿ.ಜೆ.ಪಿ.ಯವರು ಇವತ್ತು ಇಲ್ಲಿ ಕಮಲವನ್ನು ಹೇಗೆ ಅರಳಿಸಿದ್ದೀರಾ ಎಂಬ ಬಗ್ಗೆ ನಾನು ಇಲ್ಲಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಮತ್ತು ಮಾನ್ಯ ಸೋಮಶೇಖರ್‌ರವರು ಕುಳಿತುಕೊಂಡಾಗ, ಕಮಲವನ್ನು ಅರಳಿಸಿದ್ದೀರಿ ಎಂಬ ಬಗ್ಗೆ ಮಾತಾಡಿಕೊಳ್ಳುತ್ತೇವೆ. ಇಲ್ಲಿ ಮಂತ್ರ-ತಂತ್ರ, ಕುತಂತ್ರವನ್ನು ಮಾಡಿ, ಕಮಲವನ್ನು ಅರಳಿಸಿ, ಬಿ.ಜೆ.ಪಿ. ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದೀರಿ. ಇಲ್ಲಿ ಈ ಸರ್ಕಾರವನ್ನು ಉಳಿಸಿಕೊಳ್ಳಬೇಕಾದರೆ, ಒಳ್ಳೆಯ ಕೆಲಸಗಳನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು):-** ಇಲ್ಲಿ ಅಭಿವೃದ್ಧಿ ತಂತ್ರ ಮಾಡಿರುವಂತಹದ್ದು. ಯಾವುದೇ ಕುತಂತ್ರವನ್ನು ಮಾಡಿಲ್ಲ.

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸದಸ್ಯರೇ, ಮಾನ್ಯ ರವಿಯವರು yield ಆಗಿಲ್ಲ.

**ಶ್ರೀ ಎಸ್. ರವಿ:-** ನೀರಾವರಿ ಯೋಜನೆ, ಕರೋನಾ ಬಗ್ಗೆ ಮಾತನಾಡಿದ್ದೇನೆ. ಆದಾದ ಮೇಲೆ ಮಹದಾಯಿ ನದಿ ನೀರಿನ ಹಂಚಿಕೆ ವಿಚಾರ ಏನು ಪಾಪ ಮಾಡಿತ್ತು? ತಾವು ಹುಬ್ಬಳ್ಳಿ-ಧಾರವಾಡದವರು. ಇವತ್ತು ಬಿ.ಜೆ.ಪಿ. ಸರ್ಕಾರ ಗೋವಾದಲ್ಲಿ ಬಂದಾಗಿದೆ. ನಾನು ಅಭಿನಂದಿಸುತ್ತೇನೆ. ಇನ್ನು ಐದು ವರ್ಷವಿದೆ. ಇನ್ನು ಏಕೆ ತಡ ಮಾಡುತ್ತೀರಾ? ತಮ್ಮದೇ ಆದ ಸರ್ಕಾರ, ಒಂದೇ ಒಂದು ಫೋನ್ ಮಾಡಿದರೆ ಸಾಕು; ಡಬಲ್ ಇಂಜಿನ್ ಇರುವಂತಹ ಸರ್ಕಾರ, ಈಗ ತ್ರಿಬಲ್ ಇಂಜಿನ್ ಆಯಿತು. ಈ ಕೆಲಸ ಮಾಡಿರಿ, ಏಕೆ ಅನ್ಯಾಯ ಮಾಡುತ್ತೀರಾ? ಹುಬ್ಬಳ್ಳಿ-ಧಾರವಾಡ, ಗದಗ್ ಇನ್ನಿತರ ತಮ್ಮ ಭಾಗಗಳಲ್ಲಿ ನೀರಿನ ದುಸ್ಥಿತಿ ಇದೆ. ನಾವು ನಮ್ಮ ಭಾಗಗಳಷ್ಟೇ ನೀರಿನ ದುಸ್ಥಿತಿ ಅಂದುಕೊಂಡರೆ, ಅ ಜಿಲ್ಲೆಗಳಲ್ಲಿಯೂ ಕೂಡ ಈ ತರಹ ನೀರಿನ ಆಭಾವವಿದೆ. ಮಾನ್ಯ

ಸಭಾಪತಿಯವರೇ, ತಾವು ಇಲ್ಲಿ ಹೇಗೆ ಇದ್ದೀರಿ. ಈ ಸಂದರ್ಭ ನೋಡಿದರೆ, ಹೊಟ್ಟೆ ಹುರಿದು, ರೊಚ್ಚಿಗೇಳುವಂತಹ ಸಂದರ್ಭ ಉಂಟಾಗುತ್ತದೆ. ಮಾನ್ಯ ಸಭಾಪತಿಯವರೇ, ಕೈಯಲ್ಲಿ ಕತ್ತಿ, ಮಚ್ಚು ಎತ್ತಿಕೊಂಡು ರೊಚ್ಚಿಗೆದ್ದುಬಿಡಬೇಕಾಗಿತ್ತು. ಇವರೇನಾದರೂ ಮತ ಕೇಳುವುದಕ್ಕೆ ಬಂದಿದ್ದರೆ, ಅವರನ್ನು ಬಿಡಬಾರದಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಕೂಡ ಆ ಭಾಗದವರಾಗಿದ್ದಾರೆ. ಆದರೆ ಅವರು ಹೇಗೆ ಬಿಟ್ಟುಕೊಂಡಿದ್ದೀರಾ. ಈ ಭಾಗದಲ್ಲಿ ನೀರಾವರಿ ಕೆಲಸ ಆಗಬೇಕು. ಗೋವಾದಲ್ಲಿ ಇನ್ನೂ ಐದು ವರ್ಷಗಳಲ್ಲಿ ಚುನಾವಣೆ ಇಲ್ಲ.

**ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ):-** ಮಾನ್ಯ ರವಿಯವರೇ, ನನ್ನದೊಂದು ಅನುಮಾನವನ್ನು ಸ್ಪಷ್ಟಪಡಿಸಿ. ಗೋವಾದಲ್ಲಿ ನೀರು ಕೊಡಬೇಡಿ ಎಂದು ಯಾರೊ ಒಬ್ಬರು ರಾಷ್ಟ್ರ ನಾಯಕರು ಹೇಳಿದ್ದರು ಅಲ್ಲವೇ, ಅವರು ಯಾರು?

**(ಗೊಂದಲ)**

**ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು):-** ತಾವು ಅದರ ಬಗ್ಗೆ ಮಾತನಾಡಿ.

**(ಗೊಂದಲ)**

**ಶ್ರೀ ಎಸ್. ರವಿ:-** ನಾನು ಅದರ ಬಗ್ಗೆ ರಾಜಕೀಯವಾಗಿ ಚರ್ಚೆಗೆ ಹೋಗುತ್ತಿಲ್ಲ. **(ಗೊಂದಲ)** ರಾಜಕೀಯವಾಗಿ ಉತ್ತರ ಕೊಡುವುದನ್ನು ನಾನು ಹುಟ್ಟಿದಾಗಿನಿಂದ ಕಲಿತುಕೊಂಡಿದ್ದೇನೆ. ಅದರ ಬಗ್ಗೆಯೂ ಕೂಡ ಉತ್ತರವನ್ನು ಕೊಡುತ್ತೇನೆ. ಈ ಸದನದಲ್ಲಿ ಹಿರಿಯ ಮಂತ್ರಿಗಳು ಕುಳಿತುಕೊಂಡಿದ್ದಾರೆ. ಅದರ ಬಗ್ಗೆಯೂ ಕೂಡ ಹೇಳಬೇಕಲ್ಲದೆ **(ಗೊಂದಲ)** ಮಾನ್ಯ ಸಭಾನಾಯಕರು ಇಲ್ಲಿ ಸುಮ್ಮನೆ ಕುಳಿತುಕೊಂಡಿದ್ದಾರೆ. ನಾನು ಹೇಳುವುದೇನೆಂದರೆ, ಚುನಾವಣೆಯೊಳಗಡೆ ಕರ್ನಾಟಕ ರಾಜ್ಯದ ಜನರಿಗೆ ಈ ಮೂರು ಯೋಜನೆಗಳನ್ನು ಫಲಪ್ರದ ಮಾಡಿ, ಯಶಸ್ವಿಯಾಗಿ ಅರ್ಪಿಸುವುದಕ್ಕೆ ತಮಗೆ ದೇವರೇ ಕೊಟ್ಟಿರುವಂತಹ ಒಂದು ಸುವರ್ಣ ಅವಕಾಶ. ಈ ಕೆಲಸ ಮಾಡಿದರೆ, ಇತಿಹಾಸದಲ್ಲಿ ಉಳಿದುಕೊಳ್ಳುತ್ತದೆ. ನೀವು ಏಮಾರಬೇಡಿ. ಈ ಕೆಲಸವನ್ನು ಇವತ್ತಿನ

ದಿನವೇ ಕಾರ್ಯರೂಪಕ್ಕೆ ತನ್ನಿ. ಸುಮ್ಮನೆ ಎರಡು–ಮೂರು ಸಾವಿರ ಕೋಟಿ ರೂಪಾಯಿಗಳು ಎನ್ನುವಂತಹ dupe ಬೇಡ. ಈ dupe ಕಿತ್ತು ಹಾಕಿ. ಈ ಸರ್ಕಾರ ನಿಜವಾಗಿಯೂ ನಡೆದುಕೊಂಡರೆ, ಜನರು ಈ ಸರ್ಕಾರವನ್ನು ಸ್ಮರಿಸುತ್ತಾರೆ. **(ಗೊಂದಲ)** ಮಾನ್ಯ ಸಭಾಪತಿಯವರೇ, ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಸೀಮಿತವಾಗಿ ಒಂದು ಮಾತನ್ನು ಹೇಳುತ್ತೇನೆ. ರೇಷ್ಮೆ, ಹೈನುಗಾರಿಕೆ ನಮ್ಮ ಜೀವನದ ಉದ್ಯಮವಾಗಿದೆ. ಅದರ ಬಗ್ಗೆ ಮಾನ್ಯ ಸೋಮಶೇಖರ್‌ರವರಿಗೂ ಗೊತ್ತಿದೆ. ಅವರು BAMUL (Bangalore Milk Union Limited) ನ್ನು ನೋಡಿರುವಂತಹದ್ದು... ನಾನು ಹೇಳುವಂತಹದ್ದು ಸಿಲ್ಕ್–ಮಿಲ್ಕ್. ನಮ್ಮ ತಾಲ್ಲೂಕು ಚನ್ನಪಟ್ಟಣ, ಅವರು ಹುಟ್ಟಿರುವಂತಹದ್ದು ಚನ್ನಪಟ್ಟಣ ತಾಲ್ಲೂಕಿನಲ್ಲೇ ಅಲ್ಲಿ ಪ್ರತಿ ದಿನ ಪ್ರತಿ ದಿನ BAMUL ಒಂದರಲ್ಲೇ ಎರಡು ಲಕ್ಷ ಎಂಭತ್ತು ಸಾವಿರ ಲೀಟರ್ ಹಾಲು collect ಆಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಪ್ರತಿದಿನ ಎರಡೂವರೆ ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತದೆ. BAMUL ನಲ್ಲಿ ಸುಮಾರು ಹದಿನೆಂಟು ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತದೆ

ಫುಟಪಾತ್‌ನಲ್ಲಿ ಬಾಳೆ ಹಣ್ಣು ಮಾರಾಟ ಮಾಡುವವರು, ಸೆಕ್ಯೂರಿಟಿ ಗಾರ್ಡ್, ಟ್ಯಾಕ್ಸಿ ಓಡಿಸುವವರು, ಇವರೆಲ್ಲರೂ ಲಾಕ್‌ಡೌನ ಸಂದರ್ಭದದಲ್ಲಿ ವಾಪಸ್ ಊರಿಗೆ ಬಂದಿದ್ದರಿಂದ ಇಲ್ಲಿ ಎರಡ್ಮೂರು ಲಕ್ಷ ಲೀಟರ್‌ನಷ್ಟು ಹಾಲು ಜಾಸ್ತಿ ಉತ್ಪಾದನೆ ಆಗಿಬಿಟ್ಟಿತ್ತು. ಆಗ reverse migration ಆಯಿತು. ಜನರು ಬೇರೆ ಬೇರೆ ಕಡೆಗಳಿಗೆ ಹೋಗಿ, ಎರಡೆರಡು ಹಸುಗಳನ್ನು ತೆಗೆದುಕೊಂಡು ಬಂದು ಕಟ್ಟಿಕೊಂಡರು. ಸಣ್ಣ–ಪುಟ್ಟ ಕೆರೆಗಳಿಗೆ ನೀರು ತುಂಬಿಸುತ್ತಿದ್ದೇವೆ. Lift irrigation ವ್ಯವಸ್ಥೆ ಪರಿಣಾಮವಾಗಿ ಸ್ವಲ್ಪ ಮಟ್ಟಿಗೆ ಅಂತರ್ಜಲದ ಮಟ್ಟ ಸುಧಾರಣೆಯಾಗಿದ್ದರಿಂದ ಬೋರ್‌ವೆಲ್‌ಗಳನ್ನು ಹಾಕಿಕೊಂಡರು. ಎರಡ್ಮೂರು ಹಸುಗಳನ್ನು ಕಟ್ಟಿಕೊಂಡು ಹೈನುಗಾರಿಕೆಯಲ್ಲಿ ತೊಡಗಿದ್ದರಿಂದ ಹಾಲಿನ ಉತ್ಪಾದನೆ ಹೆಚ್ಚಾಯಿತು. ಇವತ್ತಿನ ದಿವಸ ಹಾಲಿನ ಬೆಲೆ ಏನಾಗಿದೆ ಸಾರ್? ಇವತ್ತು BAMUL ನಡೆಯುವುದೇ ಕಷ್ಟವಾಗಿದೆ. ಇವತ್ತು ಹತ್ತು ಲಕ್ಷ ಲೀಟರ್‌ಗಳಷ್ಟು ಹಾಲು ಬಳಕೆಯಿಂದ ತಯಾರಿಸಲ್ಪಟ್ಟ ಉತ್ಪನ್ನಗಳಿಂದ ಮಾರುಕಟ್ಟೆ ಮಾಡುವುದಕ್ಕಾಗುತ್ತಿರುವುದು. ಇನ್ನು ಎಂಟು ಲಕ್ಷ ಲೀಟರ್ ಹಾಲು ಉಳಿಯುತ್ತದೆ. ಜೊತೆಗೆ ಯಾವುದಾದರೂ ಕಾಣಕ್ಕೆ ಎರಡು ದಿವಸ ರಜ ಕೊಟ್ಟುಬಿಟ್ಟರೆ, MPCS

(Milk Producers' Cooperative Society) ನಲ್ಲಿ ಹಾಲು ತೆಗೆದುಕೊಳ್ಳುವುದಿಲ್ಲ ಎಂದರೆ, ಆ ರೈತನ ಕಥೆ ಮುಗಿಯಿತು. ಅವನ ವಾರಕ್ಕೆ ಎರಡ್ಮೂರು ದಿನಗಳ ಖರ್ಚು ತೆಗೆದು, ಹಣ ಉಳಿಯುತ್ತದೆ. ಮಾನ್ಯ ಸಭಾಪತಿಯವರಿಗೆ ಇದರ ಬಗ್ಗೆ ಯಾವುದನ್ನು ಹೇಳಬೇಕಾಗಿಲ್ಲ. ನಮ್ಮದು ಅದೃಷ್ಟ. ಒಂದು ಲೀಟರ್ ಹಾಲಿಗೆ ಇಪ್ಪತ್ನಾಲ್ಕು-ಇಪ್ಪತ್ತೈದು ರೂಪಾಯಿಗಳನ್ನು ಕೊಡುತ್ತಾರೆ. ಜನರು ವಿಧಿಯಿಲ್ಲದೇ, ಹಸುಗಳನ್ನು ಕಟ್ಟಿಕೊಂಡು ಹಾಲು ಹಾಕುತ್ತಾರೆ. ಆದರೆ ಇದರಲ್ಲಿ workout ಆಗುವುದಿಲ್ಲ. BAMUL ನಲ್ಲಿ ಟನ್‌ಗಳಷ್ಟು ಹಾಲಿನ ಪೌಡರ್ ಇದೆ. ಹಾಲಿನ ಪುಡಿ ಮಾಡಿ ಇಟ್ಟುಕೊಂಡಿದ್ದೇವೆ. ಅದಕ್ಕೆ ಮಾರುಕಟ್ಟೆ ಇಲ್ಲವೆಂದರೆ, ಹೇಗೆ ಮಾಡಬೇಕು? ನಮಗೆ ಮಾರುಕಟ್ಟೆ ಮಾಡುವುದಕ್ಕೆ ಏನಾದರೊಂದು ದಾರಿ ತೋರಿಸಬೇಕು. ಸರ್ಕಾರ ಇದೆಲ್ಲಾ ಸರಿ ಬರುವವರೆಗೂ ರೈತನಿಗೆ ಐದು ರೂಪಾಯಿ ಕೊಡುತ್ತಿರುವುದನ್ನು ಇನ್ನೂ ಐದು ರೂಪಾಯಿ ಸೇರಿಸಿ ಕೊಡಬೇಕು. ಆದರೆ ವಿಧಿಯಿಲ್ಲ. ಏಕೆ ಎಂದು ಹೇಳಿದರೆ, ಸರ್ಕಾರದ ಮೂಲ ಉದ್ದೇಶವೇನು? ಉದ್ಯೋಗ ಸೃಷ್ಟಿ ಮಾಡುವುದು. ಎರಡು ಕೋಟಿಗಳಷ್ಟು ಉದ್ಯೋಗವನ್ನು ಸೃಷ್ಟಿ ಮಾಡುತ್ತೇವೆಂದರು. ಎರಡು ಕೋಟಿ ಉದ್ಯೋಗವನ್ನು ಸೃಷ್ಟಿ ಮಾಡುವುದಕ್ಕಾಗುವುದಿಲ್ಲ. ಅವೆಲ್ಲಾ ಸುಳ್ಳು. ಅದು ಬರೀ ರಾಜಕೀಯ ಘೋಷಣೆ ಮತ್ತು ಭಾಷಣ. ಜನರು ಅವರಾಗಿಯೇ ಉದ್ಯೋಗವನ್ನು ಸೃಷ್ಟಿ ಮಾಡಿಕೊಂಡಿದ್ದಾರೆ. ಜನರು ಸಾಲವನ್ನು ಮಾಡಿ ಹಸುಗಳಿಗೆ ಕೊಟ್ಟಿಗೆಗಳನ್ನು ನಿರ್ಮಿಸಿ ಅದರಿಂದ ಜೀವನ ಮಾಡಿಕೊಂಡು ಹೋಗುತ್ತಿದ್ದಾರೆ. ಒಂದು MPCS ಹಾಲು ಒಕ್ಕೂಟದಿಂದ ಒಂದು ವ್ಯವಸ್ಥೆ ಇವತ್ತು ಭದ್ರವಾಗಿ ಬೆಳೆದಿದೆ. ಇದಕ್ಕೆ ಪ್ರೋತ್ಸಾಹ ಕೊಟ್ಟರೆ ಸಾಕು. ಇದಕ್ಕೆ ಪ್ರೋತ್ಸಾಹ ಕೊಡಿ ಎಂದರೆ, ಅದು ಕುಂದದ ರೀತಿಯಲ್ಲಿ, ನಶಿಸದೇ ಇರುವ ರೀತಿಯಲ್ಲಿ ಅದನ್ನು ಕಾಪಾಡಿಕೊಂಡು ಹೋಗುವಂತೆ ಪ್ರೋತ್ಸಾಹ ಕೊಡಿ. ಅದು ಸರ್ಕಾರದ ಕರ್ತವ್ಯ. ಇದನ್ನು ನೋಡಿದರೂ ನೋಡದೇ ಇದ್ದ ಹಾಗೇ ಆರ್ಥಿಕ ಸಂಕಷ್ಟ ಎಂದು ಹೇಳಿ, ಮರೆಯುವಂತಹದ್ದಲ್ಲ. ಅದು ನಿಮ್ಮ ಜಾಣತನ ಅಲ್ಲ. ಇದರ ನೆರವಿಗೆ ಬರುವಂತಹದ್ದು ಸರ್ಕಾರದ ಕರ್ತವ್ಯ. ತಾಯಿ ಹೃದಯವನ್ನು ತೋರಿಸಬೇಕಾದಂತಹದ್ದು ಸರ್ಕಾರದ ಕರ್ತವ್ಯವಾಗಿದೆ. ಈ ಸರ್ಕಾರ ಏನು ಮಾಡುತ್ತಿಲ್ಲ, ಸುಮ್ಮನೆ ಕಣ್ಣು ಮುಚ್ಚಿಕೊಂಡು ಕುಳಿತು ಬಿಟ್ಟಿದೆ. ಮಾನ್ಯ ಸೋಮಣ್ಣನವರು ಸುಮ್ಮನೆ ಕೈ ಕಟ್ಟಿಕೊಂಡು ಕುಳಿತುಕೊಂಡುಬಿಟ್ಟಿದ್ದಾರೆ, ಅದು ಅಲ್ಲ. ಸರ್ಕಾರ ಮುಂದೆ ಬಂದು ಇದಕ್ಕೆ ಒತ್ತಡ ಹಾಕಿ, ಈ ಹೈನು ಉದ್ಯಮವನ್ನು ಉಳಿಸಬೇಕು. ಈ ಹೈನು

ಉದ್ಯಮವನ್ನು ಉಳಿಸದೇ ಹೋದರೆ, ಬಹಳ ಕಷ್ಟವಾಗುತ್ತದೆ. ಇವತ್ತಿನ ದಿನ ರೈತರು ಹೈನು ಉದ್ಯಮವನ್ನು ನಂಬಿಕೊಂಡಿದ್ದಾರೆ.

**ಶ್ರೀ ಎಸ್.ಟಿ. ಸೋಮಶೇಖರ್ (ಸಹಕಾರ ಸಚಿವರು):–** ಈಗ ಕನಕಪುರದಲ್ಲಿ ಒಂದು ಮೆಗಾ ಡೈರಿಯನ್ನೇನು ಪ್ರಾರಂಭ ಮಾಡುವುದಾಗಿ ತಿಳಿಸಲಾಗಿದೆ. ಅದಕ್ಕೆ ಎಷ್ಟು ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿ ಎಂಬ ಬಗ್ಗೆ ಸಹ ಸ್ವಲ್ಪ ಹೇಳಿ.

**ಶ್ರೀ ಎಸ್. ರವಿ:–** ಸರ್ಕಾರದಿಂದ ಎಂಟು ರೂಪಾಯಿ ಸಹ ಕೊಡಲಿಲ್ಲ.

**ಶ್ರೀ ಎಸ್.ಟಿ. ಸೋಮಶೇಖರ್:–** ಸರ್ಕಾರದಿಂದ ಬೇಡ.

**ಶ್ರೀ ಎಸ್. ರವಿ:–** ಇದು ಬಮೂಲ್‌ವರೇ, ಮಾಡಿಕೊಂಡಿದ್ದು.

**ಶ್ರೀ ಎಸ್.ಟಿ. ಸೋಮಶೇಖರ್:–** ಡೈರಿಗೆ ಎಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂಬ ಬಗ್ಗೆ ಹೇಳಿ.

**ಶ್ರೀ ಎಸ್. ರವಿ:–** ಇದು ಬಮೂಲ್‌ವರೇ ಮಾಡಿಕೊಂಡಿದ್ದು.

**ಶ್ರೀ ಎಸ್.ಟಿ. ಸೋಮಶೇಖರ್:–** ಇದರ ಉದ್ದೇಶದಿಂದಲೇ, encouragement ನ್ನು ಕೊಟ್ಟಿದ್ದು, ರಾಮನಗರ ಮತ್ತು ಕನಕಪುರ ಬೇರೆ ಎಲ್ಲಿಯೂ ಕೂಡ ಮಾಡಲಿಲ್ಲ.

**ಶ್ರೀ ಎಸ್. ರವಿ:–** ಇದು ಯಾವ ಯಾವ ಕಾಲದಲ್ಲಿ ಆಯಿತು ಎಂದು ನಾನು ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ.

**ಶ್ರೀ ಎಸ್.ಟಿ. ಸೋಮಶೇಖರ್:–** ಅದು ಯಾವ ಕಾಲದಲ್ಲಿಯೂ ಆಗಿಲ್ಲ. ನಮ್ಮ ಸರ್ಕಾರವಿದ್ದಾಗಲೇ ಇದು ಆಗಿದ್ದು.

**ಶ್ರೀ ಎಸ್. ರವಿ:-** ಈಗ ಒಂದು godown ಗೆ ಮಾತ್ರ ಅನುಮತಿ ದೊರೆತಿದೆ. ನಮ್ಮ ಕಾಲದಲ್ಲಿ ಅವೊತ್ತಿನ ದಿನ ಸುಮಾರು 550 ಕೋಟಿ ರೂಪಾಯಿ ತಂದಿದ್ದಕ್ಕೆ ಹೈನು ಉದ್ಯಮ ಉಳಿದುಕೊಂಡಿದೆ.

(ಮುಂದು)

**(262) 10-03-2022 6.50 ಟಿಸಿಹೆಚ್-ಜಿಆರ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು):-**

ಮುಖ್ಯವಾಗಿ ಅವರಿಗೆ ಗೊತ್ತಾಗಬೇಕು. ಅವರು ಇದಕ್ಕೆ ಸ್ಪಂದಿಸಲೇಬೇಕು. ನಾವು ಅವರನ್ನು ಎಚ್ಚರಿಸಬೇಕು, ಯಾಮಾರಿದವರನ್ನು ಸ್ವಲ್ಪ ಚಿವುಟಲೇಬೇಕು ಏನು ಮಾಡುವುದು ನಮಗೆ ವಿಧಿಯೇ ಇಲ್ಲ. ಇನ್ನೊಂದು ದೊಡ್ಡ ಜೋಕ್ ನಡೆಯಿತು. ಇದು ನಮ್ಮ ದುರ್ದೈವ ಎಂದು ಹೇಳಬಹುದು. Bivoltine ರೇಷ್ಮೆ ಗೂಡಿನ ಬೆಲೆ ಒಂದು ಟನ್‌ಗೆ ಸಾವಿರ ರೂಪಾಯಿಗಳಿಗೆ ಹೋಯಿತು. Cross Breed (C.B.,) ರೇಷ್ಮೆ ಬೆಲೆ ರೂ.700-800 ಗಳಿಗೆ ಹೋಯಿತು. ಕೋವಿಡ್-19ರ ಸಂದರ್ಭದಲ್ಲಿ C.B., ರೇಷ್ಮೆ ರೂ.200-250 ಗಳು ಆಯಿತು. ಅದೇಕೆ ಅಷ್ಟು ಬೆಲೆ ಇಳಿಯಿತೆಂದರೆ ಆ ಸಂದರ್ಭದಲ್ಲಿ ಮದುವೆ-ಮುಂಜಿಗಳು ನಡೆಯಲಿಲ್ಲ. ರೇಷ್ಮೆ ಬಟ್ಟೆಯನ್ನು ಹಾಕಿಕೊಂಡು ಮೆರೆಯುವವರು ಯಾರೇ ಇರಲಿ. ರೇಷ್ಮೆಗೆ ಡಿಮ್ಯಾಂಡ್ ಇಲ್ಲ. ರೇಷ್ಮೆಯಲ್ಲಿ ಫಾರ್ಮರ್ಸ್, ರೀಲರ್ಸ್ ಮತ್ತು ವೀವರ್ಸ್ ಈ ಮೂರು ಜನರು ಅವಲಂಬಿತರಾಗಿರುತ್ತಾರೆ. ರೀಲರ್ಸ್ ದಬ್ಬಾಕಿಕೊಂಡುಬಿಟ್ಟರು. ಪಾಪ ಅವನು ವೀವರ್ ಎಳೆಯನ್ನು ತೆಗೆದುಕೊಂಡು ಹೋದರೆ ತಾನೆ ಅವನು ರೀಲಿಂಗ್ ಮಾಡುವುದು. ವೀವರ್ ನೇಯ್ದದಂಥ ಬಟ್ಟೆ ಸೇಲ್ ಆದರೆ ತಾನೆ. ಕೋವಿಡ್-19ರ ಸಂದರ್ಭದಲ್ಲಿ ರೈತರು ಹೇಗೋ ಅಲ್ಪಸ್ವಲ್ಪ ರೇಷ್ಮೆ ಬೆಳೆದರು. ಹೇಗೋ ಎಲ್ಲಾ ಸೇರಿಕೋಂಡು ಮಾರುಕಟ್ಟೆ ನಡೆಯಿತು. ಆದರೆ ಇದ್ದಕ್ಕಿದ್ದಂತೆ Cross Breed (C.B.,) ರೇಷ್ಮೆ ಬೆಲೆ ರೂ. 250ರಿಂದ ರೂ.600-700 ಗಳಿಗೆ ಹೋಯಿತು. Bivoltine ರೇಷ್ಮೆ ರೂ.1000ಗಳು ಹೋಯಿತು. ಅದರ ಬಗ್ಗೆ ಪತ್ರಿಕೆಗಳ ಫುಲ್‌ಪೇಜ್‌ನಲ್ಲಿ advertisement ಕೂಡ ಬಂತು. ಮಾನ್ಯ ಕ್ರೀಡೆ, ಯುವಜನ ಮತ್ತು ರೇಷ್ಮೆ

ಸಚಿವರಾದ ಶ್ರೀ ಕೆ.ಸಿ.ನಾರಾಯಕಗೌಡರವರು ಬಹಳ ದಕ್ಷರಿದ್ದಾರೆ. ಆ ಪತ್ರಿಕೆಯಲ್ಲಿ ನಮ್ಮ ದಕ್ಷ ಆಡಳಿತದಿಂದಾಗಿ ಇ-ಮಾರ್ಕೆಟಿಂಗ್ ಮ್ಯಾನೇಜ್‌ಮೆಂಟ್‌ನ ದಕ್ಷ supervision ಮಾಡಲಾಗಿ; ಇವತ್ತಿನ ದಿವಸ ಒಂದು ಕೆ.ಜಿ. ರೇಷ್ಮೆ ಗೂಡಿಗೆ ರೂ.1000ಗಳು ದಕ್ಕಿದೆ" ಎಂದು ಅವರ ಫೋಟೋ ಹಾಕಿಸಿಕೊಂಡು ಅವರಿಗೆ ಅವರೇ ಚಪ್ಪಾಳೆ ಹೊಡೆಸಿಕೊಂಡರು. ಸಾವಿರಾರು ರೂಪಾಯಿಗಳನ್ನು ಕೊಟ್ಟು advertisement ಮಾಡಿಕೊಂಡರು. District in-charge Minister ರವರು ರಾಮನಗರಕ್ಕೆ ಬಂದು, ಒಂದು ಕೆ.ಜಿ., ರೇಷ್ಮೆ ಗೂಡಿನ ರೇಟ್ ಕಡಿಮೆ ಇತ್ತು. ಆದರೆ ಇವತ್ತಿನ ದಿವಸ ನಮ್ಮ ಸರ್ಕಾರ ಬಂದ ಮೇಲೆ ರೇಟ್ ಜಾಸ್ತಿ ಆಗಿದೆ. ಅದಕ್ಕೆ ನಾವೇ ಕಾರಣ ಎಂದು ವೀರಾವೇಶದ ಭಾಷಣವನ್ನು ಕೂಡ ಮಾಡಿದರು. ಇದೇನ್ರಪ್ಪಾ ಗ್ರಹಚಾರ, ಅನ್ನೊಂಗಿಲ್ಲ; ಅನುಭವಿಸುವಂತಿಲ್ಲ. ಆದರೆ ಅಲ್ಲಿ ಏನಾಗುತ್ತಿದೆಯೆಂದು ನಮಗೆ ಗೊತ್ತು. ನಾವು ಬೆಳಗ್ಗೆ ಎದ್ದು ಅಲ್ಲಿ ಆಕಳಗೂಡು ಆಯುವವರು ಸ್ವಾಮಿ. ಸುರುಳಪೂಚಿ ನುಸಿ ರೋಗ ಬಂತು. ಆದರೆ ಅದು ಗೂಡಿಗೆ ಬರಲಿಲ್ಲ. ಈ ಮೊದಲು ರೇಷ್ಮೆ ಹುಳುವಿಗೆ ತೊಂಡೆರೋಗ ಮತ್ತಿತರೆ ರೋಗಗಳೆಲ್ಲಾ ಬರುತ್ತಿತ್ತು. ಆಗ ನಾವು ಅರ್ಧದಲ್ಲಿಯೇ ಹೊರಗೆ ಸುರಿಯುತ್ತಿದ್ದೆವು. ಈ ಮೊದಲು ಎಲೆ ಬಿಡಿಸಿಕೊಂಡು ಹುಳುವಿಗೆ ಮೇಯಿಸುತ್ತಿದ್ದೆವು. ಆದರೆ ಈಗ ತಂತ್ರಜ್ಞಾನದಿಂದಾಗಿ ರೇಷ್ಮೆಕಡ್ಡಿ ಕೂಯ್ದು ಹುಳುವಿಗೆ ಮೇಯಿಸುತ್ತೇವೆ. ನಾವು ಕೊಟ್ಟಿಗೆ ಗೊಬ್ಬರ, ಯೂರಿಯಾ, ಫರ್ಟಿಲೈಸರ್ ಮತ್ತು ನೀರು ಚೆನ್ನಾಗಿ ಕೊಟ್ಟಾಗ ರೇಷ್ಮೆಗಿಡ ಸುಮಾರು 6-7 ಅಡಿಳವರೆಗೆ ಬೆಳೆಯುತ್ತಿತ್ತು. ಅದನ್ನು ಕೂಯ್ದು ಆ ಹುಳುಗಳಿಗೆ ಹಾಕುತ್ತಿದ್ದೆವು. ಈಗ ಆ ರೇಷ್ಮೆ ಗಿಡ ಸುಮಾರು ಎರಡು ಅಡಿಗಳು ಮಾತ್ರ ಬೆಳೆಯುತ್ತದೆ. ಆ ಎರಡು ಅಡಿಗಳ ಗಿಡದ ಸುಳಿ ಸುರುಳಪೋಚಿ ರೋಗಕ್ಕೆ ತುತ್ತಾಗುತ್ತದೆ. ಆ ರೋಗದಿಂದಾಗಿ ರೇಷ್ಮೆ ಸರಿಯಾಗಿ ಬರುವುದೇ ಇಲ್ಲ. ಇನ್ನೊಂದು raw material ರೇಷ್ಮೆ ಎಲೆಯ ಕೆಳಭಾಗದಲ್ಲಿ ಸಣ್ಣಸಣ್ಣ ಮೊಟ್ಟೆ ಇಟ್ಟಾಗ, ಶೇ.50ರಷ್ಟು ನುಸಿ ಬರುತ್ತದೆ. ಇನ್ನು ಎಲೆ ಚೆನ್ನಾಗಿ ಬರಬೇಕೆಂದರೆ ಹೇಗೆ ಸಾಧ್ಯ? ರೇಷ್ಮೆ ಹುಳು ಸಾಕಲು ಸಾಕಷ್ಟು ಸೊಪ್ಪಿಲ್ಲದ ಕಾರಣ ಅವೊತ್ತು Cross Breed 500 ರೇಷ್ಮೆ ಮೊಟ್ಟೆ ಬೆಳೆಯುತ್ತಿದ್ದವನು, ಈಗ 150 ಮೊಟ್ಟೆ ಬೆಳೆಯುವ ಮಟ್ಟಕ್ಕೆ ಬಂದಿದ್ದಾರೆ. ಇತ್ತೀಚೆಗೆ ಆ ಎರಡು ಅಡಿ ಸೊಪ್ಪು ಏನು ಬೆಳೆದಿದ್ದೇವೋ ಅಷ್ಟಕ್ಕೆ ಮೊಟ್ಟೆ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇನ್ನು production ಬಗ್ಗೆ ಹೇಳುವುದಾದರೆ, ರಾಮನಗರ ಮಾರುಕಟ್ಟೆಗೆ ಸುಮಾರು 50 ಟನ್ ರೇಷ್ಮೆ ಗೂಡು ಬರುತ್ತಿತ್ತು. ಆದರೆ ಈಗ ಸುಮಾರು 15 ರಿಂದ

20 ಟನ್ ರೇಷ್ಮೆ ಗೂಡು ಬರುತ್ತಿದೆ. ಕನಕಪುರ ಮಾರುಕಟ್ಟೆಗೆ ಸುಮಾರು 7-8 ಟನ್ ರೇಷ್ಮೆ ಗೂಡು ಬರುತ್ತಿದೆ. ಕೊಳ್ಳೆಗಾಲ ಮಾರುಕಟ್ಟೆಗೆ ಸುಮಾರು 15-20 ಟನ್ ರೇಷ್ಮೆ ಗೂಡು ಬರುತ್ತಿದೆ. ಮಾರುಕಟ್ಟೆಗೆ ಟನ್‌ಗಟ್ಟಲೆ ಬರುತ್ತಿದ್ದ ರೇಷ್ಮೆಗೂಡು ಈಗ ನಿಂತುಹೋಯಿತು. ರೇಟ್ ಮಾತ್ರ ಜಾಸ್ತಿಯಾಯಿತು. ರೇಷ್ಮೆ ಮೊಟ್ಟೆ ಹೆಚ್ಚಿಗೆ ಬೆಳೆಯುವಂಥದ್ದಕ್ಕೆ ಕ್ರಮಕೈಗೊಳ್ಳ ಪುಣ್ಯಾತ್ಮ ಎಂದರೆ, ಬರೀ advertisement ಹಾಕಿಸಿಕೊಂಡಿದ್ದಾರೆ. ಇದು ಎಂತಹ ನಗೆಪಾಟಲಿನ ವಿಚಾರ. ಸರ್ಕಾರದ ಹಣವನ್ನು ತೆಗೆದುಕೊಂಡು ಈ ರೀತಿ ಮಾನ್ಯ ಸಚಿವರು ಹಾಕಿಕೊಳ್ಳುವುದು ಧರ್ಮವೇ. ನಾವು ರೇಟ್‌ನ್ನು ರೂ.1100ಗಳಿಗೆ ತೆಗೆದುಕೊಂಡು ಹೋಗಿದ್ದೇವೆಂದರೆ ಹೇಗೆ? ಈಗ Production ಆಗುತ್ತಿರುವುದನ್ನು ನೀವೇ ನೋಡಿ. ನಾನು ಸುಳ್ಳು ಹೇಳಿದರೆ ನನ್ನನ್ನು debar ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಶ್ರೀ ಎಸ್.ರವಿ:-** ಆಯಾಯ ತಿಂಗಳಿನಲ್ಲಿ ಮಾರುಕಟ್ಟೆ ರೇಟ್ ಕಳೆದ ವರ್ಷ ಏನಿತ್ತು, ರಾಮನಗರ ಮಾರ್ಕೆಟ್‌ಗೆ ಎಷ್ಟು ಟನ್ ಬರುತ್ತಿತ್ತು; ಹೆಸರಘಟಕ್ಕೆ ಎಷ್ಟು ಬರುತ್ತಿತ್ತು?

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಮಾನ್ಯ ಎಸ್.ರವಿಯವರು ಯೀಲ್ಡ್ ಆಗಿಲ್ಲ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನಾನು ಯೀಲ್ಡ್ ಆಗುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಇದು ಬರೀ ಚರ್ಚೆ, ಮಂಡನೆ ಅಲ್ಲ. ಒಬ್ಬರಿಗೊಬ್ಬರು ಮಾತನಾಡುವುದಕ್ಕೆ ಏನೂ ತೊಂದರೆಯಿಲ್ಲ. ಈಗ ಸಂಬಂಧಪಟ್ಟ ಸಚಿವರು ರೇಷ್ಮೆ ಗೂಡಿಗೆ ರೇಟ್ ಜಾಸ್ತಿಯಾಗಿದೆ ಎಂದು ಜಾಹೀರಾತು ಕೊಟ್ಟಿರುತ್ತಾರೆ. ರೋಗ ಬಂದಿದ್ದಕ್ಕೆ ಸರ್ಕಾರ ಅಥವಾ ಮಾನ್ಯ ಸಚಿವರು ಕಾರಣವಲ್ಲ. ನಿಮ್ಮ ಸರ್ಕಾರವೂ ಕಾರಣವಲ್ಲ, ನಮ್ಮ ಸರ್ಕಾರವೂ ಕೂಡ ಕಾರಣವಲ್ಲ. ಆದರೆ ಇನ್ನು ಮುಂದೆ ಅದಕ್ಕೆ ಏನಾದರೂ ಪರಿಹಾರ ಕೊಡಬೇಕೇ ಅಥವಾ ಆ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ನೀವು ಈ ರೀತಿ ಮಾಡಬೇಕಿತ್ತು ಎಂದು ಹೇಳಲಿ. ಆದರೆ ಜಾಹೀರಾತು ಕೊಟ್ಟಿದ್ದೇ ತಪ್ಪು ಎಂದರೆ ನಾವು ಏನು ಮಾಡೋಣ. ಈಗ

ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಕೂಡ ಆಯಾಯ ಸಂಸ್ಥೆಯವರು ಜಾಹೀರಾತು ಕೊಡುತ್ತಾರೆ. ಈಗ ಅದಕ್ಕೆ ಪರಿಹಾರ ಏನೆಂದು ಹೇಳಲಿ. ಏಕೆಂದರೆ ಮಾನ್ಯ ಎಸ್.ರವಿಯವರಿಗೆ ಇರುವಷ್ಟು ಅನುಭವ ನಮಗೆ ಇಲ್ಲ. ಅದರಲ್ಲಿ ಅನುಮಾನವೇ ಬೇಡ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನಮ್ಮ ಜೀವನವೇ ಅದು. ನಮ್ಮ ಬದುಕೇ ಅದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅವರು ದಾರಿ ತಪ್ಪಿಸುತ್ತಾರೆ ಹೊರತು, ಅವರು ದಾರಿ ತಪ್ಪುವುದಿಲ್ಲ; ಅದರಲ್ಲಿ ನಮಗೆ ಅನುಮಾನ ಬೇಡ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಈ ರೀತಿ ಹೇಳಿದರೆ ನಾನು ಏನು ಹೇಳಲಿ. ಮಾರುಕಟ್ಟೆಗೆ 100 ಟನ್ ರೇಷ್ಮೆ ಗೂಡು ಬರುತ್ತಿತ್ತು. ಸುಮಾರು ರೂ.400-500ಗಳ ಬೆಲೆಗೆ ಮಾರಾಟವಾಗುತ್ತಿತ್ತು. ಕಳೆದ ವರ್ಷ ಅಕ್ಟೋಬರ್‌ನಲ್ಲಿ 100 ಟನ್ ರೇಷ್ಮೆ ಗೂಡು ಬರುತ್ತಿದ್ದು, ಈ ವರ್ಷ ಅಕ್ಟೋಬರ್‌ನಲ್ಲಿ 50 ಟನ್ ಬಂದಿದೆ. ಆಗ competition ಜಾಸ್ತಿ ಆಯಿತು. Reeleres ಗೂ ಕೆಲಸ ಕೊಡಬೇಕು. ಎಲ್ಲರೂ investment ಮಾಡಿರುತ್ತಾರೆ. ಕೆಲಸ ನಡೆಯದಿದ್ದರೆ ಆಳುಗಳೆಲ್ಲಾ ಹೊರಟು ಹೋಗುತ್ತಾರೆ. ಈ ವ್ಯವಸ್ಥೆ ಬ್ರೇಕ್ ಆಗುತ್ತದೆ. ವಿಧಿಯಿಲ್ಲದೇ ರೇಷ್ಮೆ ಗೂಡು automatically ರೈಸ್ ಆಯಿತು. ಕೋವಿಡ್-19 ಬಂದಿದ್ದರಿಂದ ರೇಷ್ಮೆಗೆ easy ಆಯಿತಲ್ಲವೇ? ಆ ರೀತಿ easy ಆಗುತ್ತಿದ್ದಂತೆ ರೇಷ್ಮೆಗೂ ಕೂಡ ಡಿಮ್ಯಾಂಡ್ ಬಂತು. ಒಂದು ಕೆ.ಜಿ ರೇಷ್ಮೆಗೆ ರೂ.3,000 ಗಳು ಇದ್ದುದು, ರೂ.6,000 ಗಳು ಆಯಿತು. ಅವನಿಗೂ ವಿಧಿಯಿಲ್ಲ, ಹೇಗೋ ಬದುಕಬೇಕಲ್ಲವೇ? ರೂ.400ಗಳಿಗೆ ಆಕ್ಷನ್ ಕೂಗುತ್ತಿದ್ದಂಥವರು ರೂ.1000ಗಳಿಗೆ ಆಕ್ಷನ್ ಕೂಗಿದರು. ಏಕೆಂದರೆ ಮಾರುಕಟ್ಟೆಗೆ ಬೇಡಿಕೆ ಇದ್ದಷ್ಟು ರೇಷ್ಮೆಗೂಡು ಪೂರೈಕೆ ಇಲ್ಲ. ನನ್ನಿಂದ ರೇಷ್ಮೆಗೂಡಿನ ರೇಟ್ ರೂ.1,000ಗಳಿಗೆ ಹೋಯಿತು ಎಂದು ಮಾನ್ಯ ಸಚಿವರು advertisement ಹಾಕಿಕೊಂಡಿದ್ದು ತಪ್ಪಲ್ಲವೇ? ನಾನು ಇಲ್ಲೇ ಪ್ರಶ್ನೆ ಮಾಡಿದ್ದೇನೆ. ಅದರ ಬದಲು ಆ ಸುರುಳಿಪೋಚಿ ರೋಗಕ್ಕೆ ಯಾವ ಔಷಧಿ ಸಿಂಪಡಣೆ ಮಾಡಬೇಕೋ ಅದಕ್ಕೆ ನಿಮ್ಮ ಅಧಿಕಾರಿಗಳನ್ನು ಕಳುಹಿಸಿ ಪರೀಕ್ಷಿಸಿ ನಿಯಂತ್ರಣಕ್ಕೆ ತರಬೇಕು. ಆ ಔಷಧಿಯನ್ನು ಒಂದೇ ತೋಟಕ್ಕೆ ಸಿಂಪಡಣೆ ಮಾಡುವುದಕ್ಕೆ ಆಗುವುದಿಲ್ಲ. ಪಕ್ಕದಲ್ಲಿರತಕ್ಕಂಥವರ ತೋಟಕ್ಕೂ ಕೂಡ

ಆ ಔಷಧಿಯನ್ನು ಸಿಂಪಡಣೆ ಮಾಡಬೇಕು. ಆ ಪಕ್ಕದ ತೋಟಕ್ಕೆ ಸಿಂಪಡಣೆ ಮಾಡಬೇಕಾದರೆ, ಅವರು ಸುಮಾರು 15 ದಿನಗಳಿಂದಲೇ ಹುಳು ಮೇಯಿಸುತ್ತಿರುತ್ತಾನೆ. ಇವನ ತೋಟದಲ್ಲಿ ಏನಾದರೂ ಔಷಧಿ ಸಿಂಪಡಿಸಿಬಿಟ್ಟರೆ, ಅದು ಗಾಳಿಯಲ್ಲಿ ಹೋಗಿ ಅವನು ಬೆಳೆಯುತ್ತಿರುವ ಸೊಪ್ಪಿನ ಮೇಲೆ ಕುಳಿತುಕೊಂಡಿರುತ್ತದೆ. ಆ ರೇಷ್ಮೆ ಸೊಪ್ಪನ್ನು ಅವನೇನಾದರು ಕಿತ್ತುಕೊಂಡು ಹೋಗಿ ಈಗಾಗಲೇ ಮೇಯುತ್ತಿರತಕ್ಕಂಥ ಹುಳುಗಳಿಗೆ ಹಾಕಿದರೆ ಆ ಹುಳುಗಳೆಲ್ಲಾ ಸತ್ತುಹೋಗುತ್ತವೆ. ಆಗ ಅವನ ಜೀವನವೇ ಹಾಳಾಗುತ್ತದೆ. ಆದ್ದರಿಂದ ಪಕ್ಕದ ತೋಟದಲ್ಲಿರುವ ರೈತನು ರೇಷ್ಮೆ ಬೆಳೆಗೆ ಔಷಧಿ ಸಿಂಪಡಣೆ ಮಾಡಿಸುವುದಕ್ಕೆ ಯಾವತ್ತೂ ಒಪ್ಪುವುದಿಲ್ಲ. ಇದನ್ನು ನಿಯಂತ್ರಣ ಮಾಡುವುದು ಅಷ್ಟು ಸುಲಭವಲ್ಲ. ಅದಕ್ಕೆ ಸರ್ಕಾರ ಬದ್ಧತೆ ಪ್ರದರ್ಶನ ಮಾಡಬೇಕು. ಒಂದು ಹಳ್ಳಿಯಲ್ಲಿ ಸುಮಾರು 500 ಎಕರೆ ಜಮೀನು ಇರತಕ್ಕಂಥವರು ನೀವು ಇಷ್ಟು ದಿನದಿಂದ ಇಷ್ಟು ದಿನಕ್ಕೆ ಯಾರೂ ಮೊಟ್ಟೆಯನ್ನು ತಂದು ರೇಷ್ಮೆ ಹುಳುವನ್ನು ಮೇಯಿಸುವಂತಿಲ್ಲ. ನಿಮಗೆ ಸುಮಾರು ಒಂದು ತಿಂಗಳ ಕಾಲ ರೇಷ್ಮೆ ಬೆಳೆಯುವುದನ್ನು ಬ್ಯಾನ್ ಮಾಡಲಾಗಿದೆ. ಆ ಒಂದು ತಿಂಗಳನೊಳಗೆ ಎಲ್ಲಾ ತೋಟಗಳಿಗೂ ಏಕಕಾಲದಲ್ಲಿ ಔಷಧಿ ಸಿಂಪಡಣೆ ಮಾಡಿದರೆ ಆಗ ರೋಗ  ನಿಯಂತ್ರಣಕ್ಕೆ ಬರುತ್ತದೆ. ಆ ಬದ್ಧತೆಯನ್ನು ಮಾನ್ಯ ಸಚಿವರು ತಿಳಿದುಕೊಂಡು ಮಾಡಬೇಕು. ಸರ್ಕಾರ ಸೈಂಟಿಸ್ಟ್‌ಗಳು ಹಾಗೂ ಅಧಿಕಾರಿಗಳಿಗೆ ಲಕ್ಷನುಗಟ್ಟಲೇ ಸಂಬಳವನ್ನು ಕೊಡುತ್ತದೆ.  ಅಧಿಕಾರಿಗಳು ಕೂಡ ಅದಕ್ಕಾಗಿಯೇ ಇದ್ದಾರೆ. ಕೇಂದ್ರೀಯ ಸಿಲ್ಕ್ ಮಂಡಳಿ ಕೂಡ ಇದೆ. ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಿ ಮೂಲ ಎಲ್ಲಿ ಸಮಸ್ಯೆ ಇದೆಯೋ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕಲ್ಲವೇ? ಇದನ್ನೂ ನಾನೇ ಹೇಳಿಕೊಡಬೇಕೆ? ಹಾಗಾದರೆ 'ನೀವು ನನ್ನನ್ನೇ ಮಂತ್ರಿ ಮಾಡಿ ನಾನು ಮಾಡಿ ತೋರಿಸುತ್ತೇನೆ'. ನಾನು ಇರತಕ್ಕಂಥ ವಿಚಾರವನ್ನು ಹೇಳುತ್ತಿದ್ದೇನೆ. ಸುರುಳಿಪೋಚಿ ರೋಗವನ್ನು ನಿಯಂತ್ರಣಕ್ಕೆ ತರದೇ ರೇಷ್ಮೆ ಉತ್ಪಾದನೆಗೆ ಹೆಚ್ಚಿನ ಗಮನವನ್ನು ಕೊಡದೆಯೇ advertisement  ಕೊಟ್ಟಿದ್ದು ತಪ್ಪು ಎಂದು ಹೇಳಬೇಕೋ, ಬೇಡವೋ?  ಈ ರೀತಿ advertisement ಕೊಡಬಾರದು. ಅವರು ಈ ರೋಗ ನಿಯಂತ್ರಣದ ಕೆಲಸವನ್ನು ಮಾಡಬೇಕಿತ್ತಲ್ಲವೇ.

**ಶ್ರೀ ಅರಗ ಜ್ಞಾನೇಂದ್ರ (ಮಾನ್ಯ ಗೃಹ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಎಸ್.ರವಿಯವರೇ, ಇವತ್ತಿನ ದಿವಸ ಉತ್ತರ ಭಾರತದ ರಾಜ್ಯಗಳಲ್ಲಿನ ಚುನಾವಣಾ ರಿಸಲ್ಟ್ ನೋಡುವುದಾದರೆ, ನೀವು ಬೇಗ ಪರಿಶೀಲನೆ ಮಾಡುವುದು ಒಳ್ಳೆಯದು. ನೋಡಿ, ನೀವು ಕೂಡ ಸಚಿವರಾಗುತ್ತೀರಿ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ಆಯಿತು. ಈ ಸಿಲ್ಕ್ ಸಾವಿರಾರು ಜನಕ್ಕೆ ಉದ್ಯೋಗ ಕೊಟ್ಟಿದೆ. ಈಗ ಸಿಲ್ಕ್ ಕೇವಲ ಹಳೆಯ ಮೈಸೂರಿನಷ್ಟೇ ಸೀಮಿತವಾಗಿಲ್ಲ. ಹಾವೇರಿ, ಚಿತ್ರದುರ್ಗ, ಹುಬ್ಬಳ್ಳಿ–ಧಾರವಾಡ ಈ ಭಾಗಕ್ಕೂ ಕೂಡ ಹೋಗುತ್ತಿದೆ. ಮಾನ್ಯ ಸಭಾಪತಿಯವರೇ ತಮ್ಮ ಭಾಗದಿಂದ ಏನು ರೇಷ್ಮೆ ಗೂಡು ಬರುತ್ತಿದೆಯೋ ಅದೇ ಗುಣಮಟ್ಟದ ಗೂಡು ಎಂದು ಹೇಳಬಹುದು. ಡ್ರೈ ಲ್ಯಾಂಡ್‌ನಲ್ಲಿ ಎಲ್ಲೆಲ್ಲಿ ರೇಷ್ಮೆ ಬೆಳೆಯುತ್ತಿದ್ದಾರೋ ಅದು ಕ್ವಾಲಿಟಿ ಹೆಚ್ಚಿರುತ್ತದೆ. ಆದರೆ ವೆಟ್ ಲ್ಯಾಂಡ್‌ನಲ್ಲಿ ಬೆಳೆಯತಕ್ಕಂಥ ಗೂಡು ಅಂತಹ ಕ್ವಾಲಿಟಿ ಇರುವುದಿಲ್ಲ. M.L.C., ಯವರಾಗಿದ್ದಂತಹ ಶ್ರೀ ಸಜ್ಜನರ್‌ರವರು ಕೂಡ automatic reeling ಹಾಕಿದ್ದಾರೆ. ಅದು ರೋಗ ಬರುವುದು ಕೂಡ ಕಡಿಮೆ. ರಾಜ್ಯದಲ್ಲಿ ರೇಷ್ಮೆ ಬೆಳೆಗಾರರಿಗೆ ಅತ್ಯಾಧುನಿಕ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಲು ಕಲಬುರಗಿ ಮತ್ತು ಹಾವೇರಿ ಜಿಲ್ಲೆಯಲ್ಲಿ ನಬಾರ್ಡ್ ನೆರವಿನೊಂದಿಗೆ ರೂ. ೩೦ ಕೋಟಿಗಳ ವೆಚ್ಚದಲ್ಲಿ ಹೈಟೆಕ್ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಯನ್ನು ನಿರ್ಮಿಸಲಾಗುವುದು ಎಂದು ಬಜೆಟ್‌ನಲ್ಲಿ ಅನೌನ್ಸ್ ಮಾಡಿದ್ದಾರೆ. ಅದು ಒಳ್ಳೆಯ ಕೆಲಸ ಮಾಡಲಿ. ಆ ಭಾಗದಲ್ಲಿ ರೇಷ್ಮೆ improve ಮಾಡಲಿ, ಅದರಿಂದ ಸಾಕಷ್ಟು ಜನರಿಗೆ ಉದ್ಯೋಗ ಸಿಗುತ್ತದೆ. ಒಂದು ಟನ್ ರೇಷ್ಮೆ ಗೂಡಿಗೆ ರೂ.೧೦,೦೦೦ ಗಳ ಬೆಂಬಲ ಬೆಲೆ ಪ್ರೋತ್ಸಾಹಧನ ಕೊಡುತ್ತೇವೆಂದು ಬಜೆಟ್‌ನಲ್ಲಿ ಅನೌನ್ಸ್ ಮಾಡಿದ್ದಾರೆ. ನನಗೆ ಬಹಳಷ್ಟು ಖುಷಿ ಆಯಿತು. ನಾನು ಗಣಿತ ವಿಷಯದಲ್ಲಿ ಸ್ವಲ್ಪ ವೀಕ್. ನಾನು ಬಹಳ ಕಷ್ಟಪಟ್ಟು ಗಣಿತ ಕಲಿತವನು. ಆಗ ಗಣಿತದಲ್ಲಿ ಎರಡ್ಮೂರು ಗ್ರೇಸ್ ಅಂಕಗಳನ್ನು ಕೊಡುತ್ತಿದ್ದರಲ್ಲಾ ಅದರಲ್ಲಿ ೩೫ ಅಂಕಗಳನ್ನು ಪಡೆದು ಪಾಸ್ ಆಗಿದ್ದೇನೆ. ಏಕೆಂದರೆ ನನ್ನ ಅಂಕಪಟ್ಟಿಯನ್ನು ತೆಗೆದುಕೊಂಡು ಬಂದು ತೋರಿಸಿದರೂ ಕೂಡ ಅದೇ ರೀತಿ ಇರಬೇಕು. Social Studies and Geography ವಿಷಯಗಳಲ್ಲಿ ಸ್ವಲ್ಪ ಹೆಚ್ಚಿಗೆ ಅಂಕಗಳು ಬಂದಿವೆ. ಆದರೆ

ಗಣಿತದಲ್ಲಿ 35 ರಿಂದ 38 ಅಂಕಗಳನ್ನು ಪಡೆದಿದ್ದೇನೆ. ನಮ್ಮ ಭಾಗದ ಕೆಲವು ರೈತರು ಈ ವರ್ಷದ ಬಜೆಟ್‌ನಲ್ಲಿ ಏನಪ್ಪಾ ಕೊಟ್ಟಿದ್ದಾರೆಂದು ಕೇಳಿದರು. ಅದಕ್ಕೆ ನಾನು ‘ಏಯ್, ಹೋಗೋ ನಮ್ಮ ಸಿಲ್ಕ್ ಗೆ ಬಂಪರ್ ಹೊಡೆಯಿತು, ಒಂದು ಟನ್ ರೇಷ್ಮೆ ಗೂಡಿಗೆ ರೂ.10,000/-ಗಳು ಬಂತು ಎಂದೆನು. ಆಮೇಲೆ ನಮ್ಮ ಅಸೋಸಿಯೇಷನ್‌ನಲ್ಲಿರುವ ಶ್ರೀ ಗೌತಮ್ ಮತ್ತು ಇತರೆ ಸಿಲ್ಕ್ ಜೀವನ ಕಟ್ಟಿಕೊಂಡಿರತಕ್ಕಂಥವವರೆಲ್ಲಾ ನನಗೆ ಫೋನ್ ಮಾಡಿದ್ದರು, ಸಿಲ್ಕ್ ಗೆ ಬಂಪರ್ ಹೊಡೆಯಿತು ಎಂದು ಬಹಳ ಸಂತೋಷಪಟ್ಟೆನು. ನಂತರ ಅವರು ನನಗೆ ಫೋನ್ ಮಾಡಿ ‘ಏನಯ್ಯಾ ನೀನು ಯೋ, ನೀವು ಕೆ.ಜಿಗೆ ಎಷ್ಟು ಬರುತ್ತದೆ ಎಂದು ಗೊತ್ತಿದೆಯೇ ಎಂದರು. ನಾನು ಎಷ್ಟು ಬರುತ್ತದೆಂದು ಕೇಳಿದಾಗ ಅವರು ರೂ.10/-ಗಳು ಮಾತ್ರ ಬರುತ್ತದೆಂದು ಹೇಳಿದರು. ಸರ್ಕಾರ ಅಷ್ಟು ಕೊಟ್ಟರೇನು, ಕೊಡದಿದ್ದರೇನು? ಏಕೆ ಸರ್ ಈ dupe ಎಲ್ಲಾ ಸರ್ಕಾರ ಮಾಡಬೇಕು. ಈಗ ಆ ರೇಷ್ಮೆ ಉತ್ಪಾದನೆ ಕಡಿಮೆಯಾಗಿದ್ದು, ರೇಟ್ ಮಾತ್ರ ಗಗನಕ್ಕೇರಿದೆ. ಇವತ್ತಿನ ದಿವಸ C.B., ರೇಷ್ಮೆ ರೂ.500-600ಗಳು ಇದೆ. Bivoltine ರೇಷ್ಮೆ ರೂ.800-900ಗಳು ಇದೆ. ನಮಗೆ ಆ ರೇಟೇ ಸಾಕು. ನಮಗೆ ಪ್ರಾಡಕ್ಟ್ ಬಂದಷ್ಟೇ ಬರಲಿ. ನಾವು 100 ಕೆ.ಜಿ ರೇಷ್ಮೆ ಬೆಳೆಯುತ್ತಿದ್ದವರು ಇವತ್ತಿನ ದಿವಸ 50 ಕೆ.ಜಿ ರೇಷ್ಮೆ ಬೆಳೆಯುತ್ತಿದ್ದೇವೆ. ಪರವಾಗಿಲ್ಲ ನಮಗೆ ರೇಟ್ ಸಿಗುತ್ತಿದೆ. ನಾವು ಆ ರೇಟ್‌ನಲ್ಲೇ ತೃಪ್ತಿಪಟ್ಟುಕೊಳ್ಳುತ್ತೇವೆ. ಸುರುಳಿಪೋಚಿ ರೋಗಕ್ಕೆ ಸರ್ಕಾರವಂತೂ ನಮ್ಮ ನೆರವಿಗೆ ಬರಲಿಲ್ಲ. ನಾವೆಲ್ಲಾ ರೈತರು ಸೇರಿಕೊಂಡು ರೇಷ್ಮೆ ಬೆಳೆಗಾರರ ಸಹಕಾರ ಸಂಘಗಳನ್ನು ಮಾಡಿಕೊಂಡಿದ್ದೇವೆ. ಆ ಸಂಘಗಳ ಮುಖೇನ ಜನರಿಗೆ ತಿಳುವಳಿಕೆ ಕೊಡತಕ್ಕಂಥ ಕೆಲಸ ಮಾಡುತ್ತಿದ್ದೇವೆ. ಆ ಕೆಲಸ ಮಾಡುವುದರಿಂದ ಆ ಸುರುಳಿಪೋಚಿ ರೋಗವನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಬರುತ್ತೇವೆ ಎನ್ನತಕ್ಕಂಥ ಭರವಸೆ ನಮಗೆ ಇದೆ. ಸರ್ಕಾರ ಆ ರೈತರ ನೆರವಿಗೆ ಬರುತ್ತಿಲ್ಲ. ಮಾನ್ಯ ಸಚಿವರಿಂದಲೂ ಆ ಕೆಲಸ ಆಗುತ್ತಿಲ್ಲ. ಆದರೆ ಇದ್ಯಾಕೆ ಈ ರೂ.10/-ಗಳ ಡೂಪು. ಇದನ್ನು ವಾಪಸ್ಸು ತೆಗೆದುಕೊಂಡು ಬೇರೆ ಯಾವುದಕ್ಕಾದರೂ ಕೊಡತಕ್ಕಂಥದ್ದು ಸೂಕ್ತವೆನಿಸುತ್ತದೆ.

**(ಮುಂದು)**

(263)10.3.2022/7.00/ಎಂ.ಎಂ-ಜಿ.ಆರ್

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್. ರವಿ (ಮುಂದು):-**

ರೇಷ್ಮೆ ಉದ್ಯಮ ಉಳಿದುಕೊಳ್ಳಬೇಕೆಂದರೆ ಗುಣಮಟ್ಟದಲ್ಲಿ ರಾಜಿಯಾಗಬಾರದು. ಗುಣಮಟ್ಟವನ್ನು ಅಳೆಯಲು Automatic Reeling Machine (A.R.M.,) ಎಂದು ಬರುತ್ತದೆ. ಅದಕ್ಕೆ ಸುಮಾರು 01 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಿದ್ದರು. ಎ.ಆರ್.ಎಂ., ಗಳನ್ನು ಹಾಕುವುದು ನಮ್ಮಲ್ಲಿ ಈಗ ಪ್ರಾರಂಭವಾಗಿದೆ. ಅದಕ್ಕೆ Bivoltine ಗೂಡೇ ಬೇಕು. ಚೈನಾ ಸಿಲ್ಕ್‌ಗೆ ಸಮವಾದ ಗುಣಮಟ್ಟವನ್ನು ಎ.ಆರ್.ಎಂ., ಮೆಷಿನ್‌ಗಳಿಂದ ಉತ್ಪಾದನೆ ಮಾಡಬಹುದು. ಚೈನಾಗೆ ಸಮವಾದ ಪೈಪೋಟಿ ಕೊಡಬಹುದು. ಯಾಕೋ ಏನೋ, indigenous ಎಂತಲೋ, ಚೈನಾ ಜೊತೆ ನಮಗೂ ಅವರಿಗೂ ವ್ಯಾವಹಾರಿಕ ಸಂಬಂಧ ಇಲ್ಲದಿರುವುದರಿಂದಲೋ ಇತ್ತೀಚಿನ ದಿನಗಳಲ್ಲಿ ಎ.ಆರ್.ಎಂ., ಗೆ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದನ್ನು ತೆರವು ಮಾಡಬೇಕು, ಅದಕ್ಕೆ ಸಬ್ಸಿಡಿ ಕೊಡಬೇಕು. ಚೈನಾದಿಂದ ಬೇಡವೆಂದರೆ ಜಪಾನ್‌ನಿಂದ ತರಿಸಿಕೊಳ್ಳಿ. ಕೊಯಮತ್ತೂರಿನಲ್ಲಿ indigenous ಎಂದು ಒಬ್ಬ ಖಾಸಗಿಯವರು ಮಾಡುತ್ತಿದ್ದಾರೆ. ಅದು ಬಂದರೆ ಮಾತ್ರ ರೇಷ್ಮೆ ಇಂಡಸ್ಟ್ರಿಯಲ್ಲಿ ಗುಣಮಟ್ಟದ ರೇಷ್ಮೆ ಎಳೆಯನ್ನು ತಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಚೀಪ್ ಗಿಮಿಕ್ ಮಾಡುವುದನ್ನು ಬಿಟ್ಟು, ಕೆ.ಜಿ.,ಗೆ 10 ರೂಪಾಯಿ ಬೆಂಬಲ ಬೆಲೆ ಕೊಡುವುದನ್ನು ರೈತ ಕೇಳುವುದಕ್ಕೂ ಬರುವುದಿಲ್ಲ, ಅದಕ್ಕೆ ಅಪ್ಲೈ ಅನ್ನೂ ಮಾಡುವುದಿಲ್ಲ. ಆ ಹಣವನ್ನೇ ಎತ್ತಿಕೊಂಡು ಅದನ್ನು ಎ.ಆರ್.ಎಂ., ಮೆಷಿನ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಉಪಯೋಗಿಸಿಕೊಳ್ಳಿ. ಸಬ್ಸಿಡಿ, ಪ್ರೋತ್ಸಾಹ ಕೊಡಿ. ಅದನ್ನು ಮಾಡಿದರೆ ಮಾತ್ರ ಇಂಡಸ್ಟ್ರಿ ಉಳಿಯುತ್ತದೆ. ರೇಷ್ಮೆ ವಿಚಾರದ ಬಗ್ಗೆ ಇನ್ನೂ ಬಹಳಷ್ಟು ಮಾತನಾಡುವುದಾದರೆ ಇದು ಬಹಳ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಇವತ್ತು ಏನಾದರೂ ಅದು ಇದ್ದರೆ ರೈತರುಗಳೇ ಸ್ವಸಾಮರ್ಥ್ಯದಿಂದ ಸಂಶೋಧನೆಯನ್ನು ಮಾಡಿಕೊಂಡು; ನಮ್ಮಲ್ಲಿ Chawki Centre ಎಂದು ಹೇಳುತ್ತಾರೆ. ಅವರು ಗುಣಮಟ್ಟದ ರೇಷ್ಮೆ ಗೂಡು ಬಿತ್ತನೆಯನ್ನು ಕಂಡು ಹಿಡಿದಿದ್ದು ಅದನ್ನು ಕೋಲಾರ ಸಿ.ಎಸ್.ಆರ್., ಗೋಲ್ಡ್ ಎನ್ನುತ್ತೇವೆ. ಈ

ತಳಿಯನ್ನು ಸರ್ಕಾರ ಕಂಡು ಹಿಡಿಯಲಿಲ್ಲ. ಅದನ್ನು ಕಂಹಿಡಿದವರು ಖಾಸಗಿ ರೇಷ್ಮೆ ಬಿತ್ತನೆಕೋಠಿದಾರರು, ರೈತರುಗಳು. ಅವರು ಕಂಡುಹಿಡಿದಿರುವುದನ್ನು ಇವತ್ತು ನಾವು ಮಾಡುತ್ತಿದ್ದೇವೆ. ನಮಗಿಂತ ಜಾಸ್ತಿ ಶಿಡ್ಲಘಟ್ಟ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾರೆ. ಶಿಡ್ಲಘಟ್ಟ Reelers, ಶಿಡ್ಲಘಟ್ಟ Weavers; ಜೀವನ ನಡೆಯುತ್ತಿರುವುದೇ ಅದರಿಂದ. ರೈತರು ಸ್ವಸಾಮರ್ಥ್ಯದಿಂದ ರೇಷ್ಮೆಯನ್ನು ಬದುಕಿಸಿ ಉಳಿಸಿದ್ದಾರೆ. ಆದ್ದರಿಂದ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು. ನಿಜವಾದ ಅರ್ಥದಲ್ಲಿ ಹೋಗಬೇಕು. ಯಾರೋ ಮಾಡಿದ್ದಕ್ಕೆ ಜಾಹೀರಾತು ಮಾಡಿಕೊಂಡು; ಇದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುತ್ತಾರೆಂದು ಹೇಳಬಯಸುತ್ತೇನೆ.

ಇನ್ನು ಹೊಸ ತಾಲ್ಲೂಕುಗಳು ರಚನೆಯಾದವು. ನಿಮ್ಮ ಕಡೆಯೂ ಆಗಿರಬೇಕು. ಮಾನ್ಯ ಸಿದ್ಧರಾಮಯ್ಯನವರ ಸರ್ಕಾರದಲ್ಲಿ 42 ತಾಲ್ಲೂಕುಗಳನ್ನು ಅನೌನ್ಸ್ ಮಾಡಿದರು. ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರ ಕಾಂಗ್ರೆಸ್-ಜೆಡಿ(ಎಸ್) ಸಮ್ಮಿಶ್ರ ಸರ್ಕಾರವಿದ್ದಾಗ ಎಂಟು ಹೊಸ ತಾಲ್ಲೂಕುಗಳು ರಚನೆಯಾದವು. ಆ ಸಂದರ್ಭದಲ್ಲಿ;

**ಸಭಾಪತಿಯವರು:-** ಮಾನ್ಯ ರವಿಯವರೇ, ಬೇಗ ಮುಗಿಸಿ.

**ಶ್ರೀ ಎಸ್. ರವಿ:-** ಮಾನ್ಯ ಸಭಾಪತಿಯವರೇ, ತಾವು ನಾಳೆಯೂ ನನಗೆ ಅವಕಾಶ ಕೊಟ್ಟರೆ ಮುಗಿಸುತ್ತೇನೆ.

**ಸಭಾಪತಿಯವರು:-** ಈಗಾಗಲೇ ಇಷ್ಟು ಸಮಯದವರೆಗೆ ಮಾತನಾಡಿದ್ದೀರಿ. ಇನ್ನೂ ಏನನ್ನು ಮಾತನಾಡುತ್ತೀರಿ? ಸಾಕು, ನಿಮಗೆ ಸಮಯ ಕೊಟ್ಟು ಈಗಾಗಲೇ ಸಮಯ 50 ನಿಮಿಷವಾಯಿತು.

**ಶ್ರೀ ಎಸ್. ರವಿ:-** ನಾಳೆಯೂ 10-15 ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:-** ಇಲ್ಲ ಈಗಲೇ ಮಾತನಾಡಿ ಮುಗಿಸಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಡಿ. ಯಾರೂ ಮಾತನಾಡುವವರು ಇಲ್ಲ. ಯಾರೂ ಮಾತನಾಡದಿರುವುದಕ್ಕೆ ನಾನು ಮಾತನಾಡುತ್ತಿದ್ದೇನೆ. ನೀವು 3–4 ಜನರನ್ನು ಕೇಳಿದಿರಿ.

**ಸಭಾಪತಿಯವರು:–** ಚೆನ್ನಾಗಿ ಮಾತನಾಡುತ್ತೀರಿ, ಬೇಗ ಮುಗಿಸಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಆಯಿತು. ಹೊಸ ತಾಲ್ಲೂಕುಗಳು ರಚನೆಯಾದವು. ಹೊಸ ತಾಲ್ಲೂಕುಗಳನ್ನು ರಚನೆ ಮಾಡಬೇಕು. ಅವುಗಳಿಗೆ ಆರ್ಥಿಕ ಸ್ವಾವಲಂಬನೆ ಇಲ್ಲದೇ, ಆರ್ಥಿಕ ಶಕ್ತಿ ಇಲ್ಲದೇ ಇರುವುದರಿಂದ ಮಾಡಬೇಕು. ತಾಲ್ಲೂಕು ಕಛೇರಿಗಳನ್ನು ರಚನೆ ಮಾಡಬೇಕು. ಕನಿಷ್ಠ 40–50 ಕಛೇರಿಗಳ ಸ್ಥಳಾಂತರವಾಗಬೇಕು. ಅವುಗಳಿಗೆ ಸೂಕ್ತ ಜಾಗ ನಿಗದಿ ಮಾಡಬೇಕು, ಕಟ್ಟಡ ನಿರ್ಮಾಣ ಮಾಡಬೇಕು, quarters ಮಾಡಬೇಕು. ಬರೀ ಪೇಪರ್‌ನಲ್ಲಷ್ಟೇ ಉಳಿದುಕೊಂಡರೆ ಹೇಗೆ? ಆ ತಾಲ್ಲೂಕುಗಳ ರಚನೆಯಾದ ಮೇಲೆ ಅನುಷ್ಠಾನಗೊಂಡು ಕೆಲಸ ನಿರ್ವಹಿಸುವುದು ಹೇಗೆ? ಅಲ್ಲಿಗೆ ಗೆಜೆಟೆಡ್ ಆಫೀಸರ್ಸ್ ಎಷ್ಟು ಜನ ಬೇಕು? ತಹಶೀಲ್ದಾರ್, ಇ.ಓ., ಬಿ.ಇ.ಓ., ಬೇಕು. ಕೆ.ಪಿ.ಎಸ್.ಸಿ., ಇಂದ ಎಷ್ಟು ಜನರನ್ನು ನೇಮಕ ಮಾಡಿದ್ದೀರಿ? ಕೆ.ಪಿ.ಎಸ್.ಸಿ., ಇಂದ ನೇಮಕಾತಿಯನ್ನೇ ಮಾಡಿಕೊಳ್ಳಲಿಲ್ಲ. ಯಾರೋ ರೆವಿನ್ಯೂ ಇನ್ಸ್‌ಪೆಕ್ಟರ್, R.I., V.A., ಆಗಿದ್ದವರನ್ನು, promotee ಗಳನ್ನು ತಹಶೀಲ್ದಾರ್‌ರನ್ನಾಗಿ ಮಾಡುತ್ತೀರಿ. ಅವನು ಒಳ್ಳೆಯವನೋ, ಕೆಟ್ಟವನೋ, ಕೆಲವರು ಮಾಡಬಾರದ್ದನ್ನು ಮಾಡಿರುತ್ತಾನೆ. ಉದ್ಯೋಗ ಸೃಜನೆಯನ್ನು ಎಲ್ಲಿ ಮಾಡಿದ್ದೀರಿ? ಒಂದು ತಾಲ್ಲೂಕು ಆಫೀಸಿಗೆ ಬೇಕಾದಂತಹ ಉದ್ಯೋಗ ಸೃಜನೆಗಳನ್ನು ಮಾಡುವುದಕ್ಕೆ ಎಲ್ಲಿ ಪ್ರಯತ್ನವಾಗಿದೆ? ಸುಮಾರು 50 ತಾಲ್ಲೂಕುಗಳು ಘೋಷಣೆಯಾಗಿವೆ. ಅವು ಕಾರ್ಯರೂಪಕ್ಕೆ ಬರಬೇಕು, ಕಾರ್ಯರೂಪಕ್ಕೆ ಬಂದು ಆ ಭಾಗದ ಜನರ ದೈನಂದಿನ ಬದುಕನ್ನು ಹಸನುಗೊಳಿಸುವುದಕ್ಕೆ ಶ್ರಮಿಸಬೇಕು. ಅವುಗಳಿಗೇ ಆದ ಕಾಣಿಕೆಯನ್ನು ಕೊಡಬೇಕು. ಕೊಡಬೇಕೆಂದರೆ, ಮೂಲಭೂತ ಸೌಕರ್ಯಗಳೇ ಇಲ್ಲವೇ? ಮೂಲಭೂತ ಸೌಕರ್ಯಗಳನ್ನು ಕೊಡುವುದಕ್ಕೆ ಚಿಕ್ಕಾಸೂ ಬೇಡವೇ? ಹಣ ಬೇಡವೇ? ಕಟ್ಟಡ ಕಟ್ಟುವುದು ಬೇಡ, ಜಾಗವನ್ನು ಗುರುತಿಸುವುದು ಬೇಡವೇ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಬೆಲ್ ಮಾಡಿದರು)**

ಮಾನ್ಯ ಸಭಾಪತಿಯವರೇ, ಹೀಗೆ ಮಾಡಿದರೆ ಹೇಗೆ?

**ಸಭಾಪತಿಯವರು:–** ಮಾನ್ಯ ರವಿಯವರೇ, ಮಾತನಾಡಿದ್ದು ಸಾಕು.

**ಶ್ರೀ ಎಸ್. ರವಿ:–** ನೀವು ನಾಳೆಯೂ ಅವಕಾಶ ಕೊಡುವುದಿಲ್ಲ ಎನ್ನುತ್ತೀರಿ. ಇವತ್ತೂ ಮಾತು ನಿಲ್ಲಿಸಲು ಹೇಳುತ್ತೀರಿ. ನೀವು ಮಾತನಾಡುವುದನ್ನು ನಿಲ್ಲಿಸು ಎಂದರೆ ನಿಲ್ಲಿಸಿಬಿಡುತ್ತೇನೆ, ಕುಳಿತುಕೊಳ್ಳುತ್ತೇನೆ. ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:–** ನೀವು ಮಾತನಾಡಲು 6 ಗಂಟೆ 10 ನಿಮಿಷಕ್ಕೆ ಪ್ರಾರಂಭ ಮಾಡಿದಿರಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಾದ ಗೋವಿಂದ ಕಾರಜೋಳರವರು 20 ನಿಮಿಷ ಸಮಯ ತಿಂದರು. ಅವರು 5–10 ಸಮಯ ತಿಂದರು, ಮಂಜಣ್ಣನವರು ಒಂದೈದು ನಿಮಿಷ ಸಮಯ ತಿಂದರು. ನಾನು 20 ನಿಮಿಷ ಮಾತನಾಡಿದ್ದೇನೆ. ಇನ್ನೈದು ಹತ್ತು ನಿಮಿಷ ಮಾತನಾಡುತ್ತೇನೆ.

**ಸಭಾಪತಿಯವರು:–** ಯಾರೂ ಇಲ್ಲ. ಕೊನೆಯದಾಗಿ ಐದು ನಿಮಿಷಗಳ ಕಾಲ ಮಾತನಾಡಿ.

**ಶ್ರೀ ಎಸ್. ರವಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೃಹ ಸಚಿವರು ಕೆಲವು ಸಲಹೆಗಳನ್ನು ಕೊಟ್ಟರು. ಈಗ ನಾನು ನೇರವಾಗಿ ವಿಷಯಕ್ಕೆ ಬರುತ್ತೇನೆ. ನಿನ್ನೆ ಯಾರೋ ಮಂತ್ರಿಗಳು ಹೇಳುತ್ತಿದ್ದರು. ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಘೋಷಣೆ ಮಾಡಿದ್ದಾರೆಂದು ಮಾನ್ಯ ಸದಸ್ಯರಾದ ಭೋಜೇಗೌಡರು ಹೇಳಿದರು. ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೊಸದಾಗಿ ಘೋಷಣೆ ಮಾಡಬೇಕಾಗಿಲ್ಲ, ಅದು regular and ongoing programme. ಇದರಲ್ಲಿಯೇ ಬರುತ್ತದೆ ಅದನ್ನು ಸ್ಪಷ್ಟನೆ ಮಾಡಬೇಕು. ಇವತ್ತು ಶಿಕ್ಷಣ ಇಲಾಖೆಯು ದೊಡ್ಡ ಅವಾಂತರಗಳಿಂದ ಕೂಡಿದ ಇಲಾಖೆಯಾಗಿದೆ. ಹಾಸ್ಟೆಲ್‌ಗಳನ್ನು ಹೋಬಳಿ ಹಂತಕ್ಕೆ, ಪಂಚಾಯಿತಿ ಹಂತಕ್ಕೆ ಹಾಸ್ಟೆಲ್‌ಗಳನ್ನು ನಿರ್ಮಾಣ ಮಾಡಲಾಗುತ್ತದೆ. ಹೆಣ್ಣುಮಕ್ಕಳ ಹಾಸ್ಟೆಲ್, ಪರಿಶಿಷ್ಟ ಜಾತಿ, ಪರಿಶಿಷ್ಟ ಜನಾಂಗಳ ಹಾಸ್ಟೆಲ್, ಹಿಂದುಳಿದ ವರ್ಗಗಳ ಹಾಸ್ಟೆಲ್, ಅಲ್ಪಸಂಖ್ಯಾತರ ಹಾಸ್ಟೆಲ್ ಎಂದು ಪಂಚಾಯಿತಿ ಮಟ್ಟಕ್ಕೆ ನಾವು ರಾಜಕಾರಣಿಗಳು ಮಂಜೂರು ಮಾಡಿಸಿಕೊಂಡು ಹಾಸ್ಟೆಲ್‌ಗಳನ್ನು ಕಟ್ಟುತ್ತಿದ್ದೇವೆ. ಅಲ್ಲಿ ಹಾಸ್ಟೆಲ್‌ಗಳ

ಅವಶ್ಯಕತೆ ಏನಿದೆ? ಪಂಚಾಯಿತಿ ಮಟ್ಟಕ್ಕೆ ನಿಜವಾಗಿಯೂ ಹಾಸ್ಟೆಲ್‌ಗಳ ಅವಶ್ಯಕತೆ ಇಲ್ಲ. ನಾವು ನೀವು ಓದುತ್ತಿದ್ದಂತಹ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಬಸ್ಸಿನ ವ್ಯವಸ್ಥೆ ಇರಲಿಲ್ಲ, ಸೂಕ್ತ ಸಾರಿಗೆ ವ್ಯವಸ್ಥೆ ಇರಲಿಲ್ಲ. ಮಕ್ಕಳು ಶಾಲೆಗಳಿಗೆ ಓಡಾಡುವುದಕ್ಕೆ ಆಗುತ್ತಿರಲಿಲ್ಲ. ಹೋಬಳಿಗೊಂದು ಹೈಸ್ಕೂಲ್ ಇರುತ್ತಿತ್ತು, ತಾಲ್ಲೂಕಿಗೊಂದು ಪದವಿಪೂರ್ವ ಕಾಲೇಜು ಇರುತ್ತಿತ್ತು. ಪಿ.ಯು., ಕಾಲೇಜುಗಳು ಒಂದು ತಾಲ್ಲೂಕಿಗೆ 2-3 ಇರುತ್ತಿತ್ತು. ಅವತ್ತು ಹಾಸ್ಟೆಲ್‌ಗಳು ಬೇಕಾಗಿತ್ತು. ಇವತ್ತು ಹಳ್ಳಿ ಹಳ್ಳಿಗಳಲ್ಲೂ ಶಾಲೆಗಳಿವೆ. ಪ್ರತಿ ಪಂಚಾಯಿತಿಗಳಲ್ಲಿ ಹೈಸ್ಕೂಲ್‌ಗಳಿವೆ. ಸಾಕಷ್ಟು ಶಾಲೆಗಳು ಮಕ್ಕಳ ಮನೆ ಮುಂದೆಯೇ ಇವೆ. ಮಕ್ಕಳು ಎದ್ದು ಹೋಗುತ್ತಾರೆ. ನಾನು ಹಾಸ್ಟೆಲ್‌ಗಳನ್ನು ನೋಡಿದ್ದೇನೆ. ಹಾಸ್ಟೆಲ್‌ಗಳು ಯಾವ ಮಟ್ಟಕ್ಕೆ ಹೋಗಿವೆ ಎಂದರೆ ಬಯೋಮೆಟ್ರಿಕ್ ವ್ಯವಸ್ಥೆ ಮಾಡಿದ್ದಾರೆ. ಮಕ್ಕಳು ಬಂದು ಹೆಬ್ಬೆಟ್ಟು ಕೊಟ್ಟು, ಮಧ್ಯಾಹ್ನದ ಹೊತ್ತಿನ ಊಟ ಮಾಡಿಕೊಂಡು ಅವರ ಪಾಡಿಗೆ ಅವರು ಹೋಗುತ್ತಾರೆ. ಹಳ್ಳಿಗಳಲ್ಲಿ ರಾತ್ರಿ ಸಮಯದಲ್ಲಿ ಹಾಸ್ಟೆಲ್‌ಗೆ ಹೋಗಿ ನೋಡಿದರೆ ಒಂದು ನರಪಿಳ್ಳೆಯೂ ಮಲಗಿರುವುದಿಲ್ಲ. ಸರ್ಕಾರದ ಹಣ ಅಪವ್ಯಯವಾಗುತ್ತಿದೆ. ಸರ್ಕಾರದ ಉದ್ದೇಶ ಗ್ರಾಮಾಂತರ ಪ್ರದೇಶದ ಬಡ ಮಕ್ಕಳ, ಶೋಷಿತ ವರ್ಗದವರನ್ನು ಶೈಕ್ಷಣಿಕವಾಗಿ ಮೇಲೆತ್ತುವಂತಹ ಉದ್ದೇಶ ವಿಫಲವಾಗುತ್ತಿದೆ. ಕಾಲಕಾಲಕ್ಕೆ ಯೋಜನೆಗಳನ್ನು ಬದಲಾವಣೆ ಮಾಡಿಕೊಳ್ಳಬೇಕು. ಐ.ಎ.ಎಸ್., ಕೆ.ಎ.ಎಸ್., ಅಧಿಕಾರಿಗಳು, ರಾಜಕಾರಣಿಗಳಿಗೆ ಅವರು ಸರಿಯಾದ ಅನುಭವದ ಮಾತುಗಳ ಮಾರ್ಗದರ್ಶನ ಕೊಡಬೇಕು. ನಾವುಗಳು ಕುಳಿತುಕೊಂಡು ಇವತ್ತಿನ ಕಾಲಕ್ಕೆ ಏನು ಮಾಡಬೇಕು, ಏನು ಆಗಬೇಕು ಎಂದು ಚಿಂತನ-ಮಂಥನ ಮಾಡಬೇಕು. ಉದಾಹರಣೆಗೆ ನಿಮ್ಮ ಗದಗ, ನನ್ನ ಭಾಗವಾದ ಕನಕಪುರ ಅಥವಾ ಕುಂದಾಪುರನೋ ಅದರ ಸುತ್ತಮುತ್ತ ಪ್ರದೇಶಗಳ ಐದು ಕಿಲೋ ಮೀಟರ್ ಅಂತರದಲ್ಲಿ ಸರ್ಕಾರಿ ಶಾಲೆ ಇರುವುದನ್ನು ತೆಗೆಸಿ ನೋಡಿ. ಯಾವುದೋ School Development Committee ನೋಡಿಕೊಳ್ಳುತ್ತಿರುವ ಶಾಲೆಯಲ್ಲಿ ಹಾಜರಾತಿ ಇರುತ್ತದೆ. ಇನ್ನುಳಿದ ಶಾಲೆಗಳಲ್ಲಿ 2, 3, 4, 7, 8, 10 ಮಕ್ಕಳಿರುತ್ತಾರೆ. ಆ ಮಕ್ಕಳ ಪೋಷಕರು ಆಟೋ ಓಡಿಸಲಿ, ಕೂಲಿ ಮಾಡಲಿ, ಪಂಕ್ಚರ್ ಹಾಕಲಿ ತನ್ನ ಮಗ ಕಾನ್ವೆಂಟ್‌ನಲ್ಲಿ ಓದಲಿ ಎಂಬ ಆಸೆ ಇರುತ್ತದೆ. ಮಕ್ಕಳು ಠಸ್, ಪುಸ್ ಎಂದು ಇಂಗ್ಲಿಷ್ ಮಾತನಾಡಿದರೆ ಸಾಕು. ಅವರಿಗೆ ಅರ್ಥವಾಯಿತೋ ಬಿಟ್ಟಿತೋ. ಅವರ ಮಕ್ಕಳು ಆಟೋದಲ್ಲಿ ಹೋಗಬೇಕು, ಆಟೋದಲ್ಲಿ ಇಳಿಯಬೇಕು ಎಂಬ ಆಸೆ

ಇರುತ್ತದೆ. ಅದು ತಪ್ಪು ಎಂದು ನಾವು ಹೇಳುವುದಕ್ಕೆ ಬರುವುದಿಲ್ಲ. ಆ ಆಸೆಯಿಂದ ಸರ್ಕಾರಿ ಶಾಲೆಗಳಲ್ಲಿ ಗಣನೀಯವಾಗಿ ಹಾಜರಾತಿಯ ಕೊರತೆ ಇರುತ್ತದೆ.

ದೆಹಲಿ ಸರ್ಕಾರ; ಯಾವುದೇ ಇರಲಿ. ಗುಣಕ್ಕೆ ಮತ್ಸರವಿಲ್ಲ. ಇವತ್ತು ಅವರು ಪಂಜಾಬ್‌ನಲ್ಲಿ ಗೆದ್ದಾಯಿತು. ನಮ್ಮಿಬ್ಬರನ್ನೂ ಮಣಿಸಿ ನಿಮ್ಮನ್ನು ಮೂರನೇ ಸ್ಥಾನಕ್ಕೆ ತಳ್ಳಿದರು, ನಮ್ಮನ್ನು ಎರಡನೇ ಸ್ಥಾನಕ್ಕೆ ತಳ್ಳಿದರು. ಗುಣಮಟ್ಟದ ಶಿಕ್ಷಣವನ್ನು ಸರ್ಕಾರಿ ಶಾಲೆಗಳು ಯಾವುದೇ ಖಾಸಗಿ ಶಾಲೆಗಳಿಗೆ ಕಡಿಮೆ ಇಲ್ಲದ ರೂಪದಲ್ಲಿ ದೆಹಲಿ ಸರ್ಕಾರಕ್ಕೆ ಕೊಡುವುದಕ್ಕೆ ಸಾಧ್ಯವಾಗುವುದಾದರೆ ಯಾವುದೇ ರಾಜಕೀಯ ಪಕ್ಷವಿರಲಿ; ಕರ್ನಾಟಕ ಸರ್ಕಾರಕ್ಕೆ ಕೊಡುವುದಕ್ಕೆ ಏತಕ್ಕೆ ಸಾಧ್ಯವಿಲ್ಲ? ಆ ಬಗ್ಗೆ ಏತಕ್ಕೆ ಚಿಂತನೆ ನಡೆಯುತ್ತಿಲ್ಲ? ಅನಾವಶ್ಯಕವಾಗಿ ಕಟ್ಟುತ್ತಿರುವಂತಹ ಹಾಸ್ಟೆಲ್‌ಗಳ ನಿರ್ಮಾಣವನ್ನು ನಿಲ್ಲಿಸಬೇಕು. ಕರ್ನಾಟಕ ಪಬ್ಲಿಕ್ ಶಾಲೆಯ ಕಲ್ಪನೆಯನ್ನು ಹೆಚ್ಚು ಮಾಡುತ್ತಾ ಹೋಗಬೇಕು. ಪಂಚಾಯಿತಿಗೊಂದು ಗುಣಮಟ್ಟದ ಶಾಲೆಗಳನ್ನು ನಿರ್ಮಾಣ ಮಾಡುತ್ತಾ ಹೋಗಬೇಕು. ನಿಮಗೆ ಎಲ್ಲಾ ಗೊತ್ತು. ಖಾಸಗಿ ಶಾಲೆಗಳ ಕಾನ್ವೆಂಟ್ ಹೆಸರುಗಳನ್ನು ನೋಡಿದರೆ ಅವು ಕ್ರಿಶ್ಚಿಯನ್ ಮಿಷನರಿಯ ಶಾಲೆಗಳಾಗಿರುತ್ತವೆ. ನಮ್ಮಲ್ಲಿ ಸೇಂಟ್ ಮೈಕಲ್ ಎಂಬ ಹೆಸರಿನ ಒಂದು ಶಾಲೆ ಇದೆ. ಆದರೆ ಅದನ್ನು ನಡೆಸುತ್ತಿರುವವರು ಮುಸ್ಲಿಂಮರು. ಸೇಂಟ್ ಆನ್ಸ್ ಎಂಬ ಒಂದು ಶಾಲೆ ಇದೆ. ಅದನ್ನು ನಮ್ಮವರು ಯಾರೋ ಒಬ್ಬರು ನಡೆಸುತ್ತಿದ್ದಾರೆ. ಏತಕ್ಕೆ ಶಾಲೆಗಳಿಗೆ ಈ ರೀತಿಯ ಹೆಸರುಗಳನ್ನಿಟ್ಟುಕೊಂಡಿದ್ದೀರಿ ಎಂದು ಕೇಳಿದರೆ ಆಕರ್ಷಣೆಗಾಗಿ ಎಂದು ಹೇಳುತ್ತಾರೆ. ಆ ರೀತಿ ಹೆಸರನ್ನಿಟ್ಟುಕೊಂಡರೇನೇ ಮಕ್ಕಳು ಬಂದು ಅಡ್ಮಿಶನ್ ಆಗುತ್ತಾರೆ. ಆದರೆ ಒಳಗಡೆ ಹೋಗಿ ನೋಡಿದರೆ ಅದರ ಬಂಡವಾಳ ಏನೂ ಇಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ಇವುಗಳಿಗೆಲ್ಲಾ ವೆಚ್ಚ ಮಾಡುವ ಬದಲು ಹಾಸ್ಟೆಲ್‌ಗಳನ್ನು ಟೌನ್‌ಗಳ ಸುತ್ತಮುತ್ತ ಮಾಡುವ ಬದಲು ಕರ್ನಾಟಕ ಪಬ್ಲಿಕ್ ಶಾಲೆಯಂತಹ ಶಾಲೆಗಳ ನಿರ್ಮಾಣಕ್ಕೆ; ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿರುವಂತಹ ಸುಸಜ್ಜಿತ ಸರ್ಕಾರಿ ಶಾಲೆಗಳನ್ನು ನಿರ್ಮಾಣ ಮಾಡಬೇಕು.

(ಮುಂದು)

"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(264) 10-03-2022 KH/MD 7-10

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ರವಿ (ಮುಂದು):-**

ಖಾಸಗಿ ಶಾಲೆಗಳಲ್ಲಿ ಪಿ.ಯು.ಸಿ., ಡಿಗ್ರಿ ಫೇಲಾದ ಶಿಕ್ಷಕರು ಪಾಠ ಮಾಡುತ್ತಿರುತ್ತಾರೆ. ಆದರೆ, ನನಗೆ ಹೆಮ್ಮೆ ಎನಿಸುತ್ತದೆ. ನಾನು ಚಿಕ್ಕಮಗಳೂರಿನ ಮಾನ್ಯ ಗೋವಿಂದೇಗೌಡರವರನ್ನು ನೆನಪಿಸಿಕೊಳ್ಳುತ್ತೇನೆ. ಅವರು Teachers Recruitment ಗೆ ಸಂಬಂಧಿಸಿದಂತೆ ತಂದಿರುವಂತಹ Act ನಿಂದ ಇವತ್ತು ಶಿಕ್ಷಕರ ನೇಮಕಾತಿಯಲ್ಲಿ ಯಾವುದೇ corruption ಇಲ್ಲದೇ ಪಾರದರ್ಶಕವಾಗಿ ನಡೆಯುತ್ತಿರುವಂತಹದ್ದು ಆಗಿದೆ. ನಮ್ಮ ಕಡೆ ಬಿ.ಎಡ್., ಎಂ.ಎಡ್., ಮಾಡಿರುವಂತಹ ಗುಣಮಟ್ಟ ಶಿಕ್ಷಕರು ಇದ್ದಾರೆ, ಅವರ ಕಡೆಯಿಂದ ಪಾಠ ಹೇಳಿಸಬಹುದು. ನಾವು ಕನ್ನಡ ಭಾಷೆಯನ್ನು ಕಲಿಸಲೇಬೇಕು. ಕನ್ನಡ ನಮ್ಮ ಮಾತೃ ಭಾಷೆ, ಮೂಲ ಭಾಷೆ, ಆದರೆ, ಇಂಗ್ಲೀಷ್ ಭಾಷೆಯನ್ನು ಒಂದು ಪಠ್ಯ ಪುಸ್ತಕವನ್ನಾಗಿ ಅಳವಡಿಸಿ, ಇಂಗ್ಲೀಷ್ ಭಾಷೆಯನ್ನು ಮೊದಲಿನ ದಿನದಿಂದಲೇ ಕಲಿಸುವಂತಹ ವ್ಯವಸ್ಥೆ ನಡೆಯಬೇಕು. ಈ ಬಜೆಟ್‌ನಲ್ಲಿ ಏಕೆ ಇದು reflect ಆಗಲಿಲ್ಲ? ಇದನ್ನು ಮಾಡಿದ್ದರೆ ನಾನು ಇದು ಒಳ್ಳೆಯ ಬಜೆಟ್ ಎಂದು ಒಪ್ಪಿಕೊಳ್ಳುತ್ತಿದ್ದೆ. ತಮ್ಮವರೆಲ್ಲಾ ವೀರಾವೇಶದಿಂದ ಮಾತನಾಡುತ್ತಾ ಬಂದರಲ್ಲವೇ, ಬಿಲ್ಲು-ಬಾಣಗಳನ್ನು ತೆಗೆದುಕೊಂಡು ಪಾಶುಪತಾಸ್ತ್ರಗಳನ್ನು ಪ್ರಯೋಗ ಮಾಡಿದ ಹಾಗೆ ನಮ್ಮ ಮೇಲೆಲ್ಲಾ ಮಾಡಿದರಲ್ಲವೇ? ನಾವು ಟೀಕೆ ಮಾಡುತ್ತೇವೆ. ತಮಗೆ ಹೊಟ್ಟೆಹುರಿ, ತಮಗೆ ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಸಮರ್ಥರಿದ್ದೇವೆ. ಇಂತಹ ಅದ್ಭುತವಾದ ಬಜೆಟ್‌ವನ್ನು ಈ ದೇಶ ಮತ್ತು ರಾಜ್ಯ ನೋಡೇ ಇರಲಿಲ್ಲ. ಕಂಡರಿಯದ ಕೇಳರಿಯದ ಬಜೆಟ್ ಅನ್ನು ಕೊಟ್ಟಿರುವಂತಹ ವೀರರು ನಾವು, ಶೂರರು ನಾವು ಎಂದು ತಾವು ಹೇಳುತ್ತೀರಲ್ಲವೇ, ಇಂತಹ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ತಾವು ಬಜೆಟ್ ಕೊಟ್ಟಿದ್ದರೆ, ನಾನು ಒಪ್ಪಿಕೊಳ್ಳುತ್ತಿದ್ದೆ. ಇದ್ಯಾವುದೋ ಅಡಾಸಿ ಬಜೆಟ್ ಅನ್ನು ಕೊಟ್ಟುಬಿಟ್ಟು, ಇದನ್ನು ನಾವು ಹೇಗೆ ಒಪ್ಪಿಕೊಳ್ಳಬೇಕು. ಈ ಬಜೆಟ್ ಅನ್ನು ಇವರು "ಸಬ್ ಕಾ ವಿಕಾಸ್" ಎಂದು ಹೇಳುತ್ತಾರೆ. ಇದನ್ನು ನಾವು ಹೇಗೆ "ಸಬ್ ಕಾ ವಿಕಾಸ್ ಬಜೆಟ್" ಎಂದು ಒಪ್ಪಿಕೊಳ್ಳಬೇಕು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಎಷ್ಟೇ ಒಳ್ಳೆಯ ಬಜೆಟ್ ಕೊಟ್ಟರೂ ಕೂಡ ಇವರು "ಬಜೆಟ್ ಒಳ್ಳೆಯದಿಲ್ಲ" ಎಂದು ಹೇಳುತ್ತಾರೆ.

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಇದು ಒಳ್ಳೆಯ ಬಜೆಟ್ ಎಂದು ತಮ್ಮ ಆತ್ಮಸಾಕ್ಷಿಯಾಗಿ ಮಾತನಾಡಿ. ಆಗ ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಎಷ್ಟೇ ಒಳ್ಳೆಯ ಬಜೆಟ್ ಕೊಟ್ಟರೂ ಕೂಡ ಬಜೆಟ್ ಒಳ್ಳೆಯದಿಲ್ಲ ಎಂದು ಇವರು ಹೇಳುತ್ತಾರೆ. ಅದಕ್ಕೋಸ್ಕರ ಇರುವುದನ್ನೆಲ್ಲಾ ಬಿಟ್ಟು ಉಳಿದಿರುವುದೆಲ್ಲಾ ಹೇಳಿಬಿಡುತ್ತಾರೆ.

**(ಗೊಂದಲ)**

**ಶ್ರೀ ಎಸ್.ರವಿ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ತಮಗೆ ತರವಲ್ಲ. ಈ ಬಜೆಟ್ ಅನ್ನು ತಾವು advocacy ಮಾಡಬೇಡಿ. ಇಂತಹ ಕಚಡ ಬಜೆಟ್ ಅನ್ನು ಉತ್ತಮ ಬಜೆಟ್ ಎಂದು ಹೇಳಬೇಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಎಸ್.ರವಿಯವರೇ ಒಂದು ನಿಮಿಷ. ತಾವು ತಾಲ್ಲೂಕಿನ ಬಗ್ಗೆ ಹೇಳಿದ್ದೀರಿ. ತಾಲ್ಲೂಕನ್ನು ರಚನೆ ಮಾಡಿದ್ದು ಯಾರು ಎಂದು ಕೇಳಿ. 5 ವರ್ಷಗಳ ಕಾಲ ಅಧಿಕಾರವನ್ನು ನಡೆಸಿ, ಮೂಲಭೂತ ಸೌಕರ್ಯಗಳನ್ನು ತಾವು ಕೊಡಲೇ ಇಲ್ಲ.

**ಶ್ರೀ ಎಸ್.ರವಿ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ನಾವು ಕೊಡಲಿಲ್ಲ. ಮಾನ್ಯ ವಿ.ಸೋಮಣ್ಣ ಮತ್ತು ಮಾನ್ಯ ಅರಬೈಲು ಶಿವರಾಂ ಹೆಬ್ಬಾರ್‌ರವರನ್ನು ಕರೆದುಕೊಂಡು ನಮ್ಮ ಸರ್ಕಾರವನ್ನು ಉರುಳಿಸಿಬಿಟ್ಟರಲ್ಲಪ್ಪ. ಅವರನ್ನು ನಮ್ಮ ಹತ್ತಿರವೇ ಬಿಟ್ಟಿದ್ದರೆ ತೋರಿಸುತ್ತಿದ್ದೆವು. (ಗೊಂದಲ) ಅವರನ್ನು ಕರೆದುಕೊಂಡು ಸರ್ಕಾರವನ್ನು ಉರುಳಿಸಿಬಿಟ್ಟು ಕೊಡಲಿಲ್ಲವೆಂದರೆ ಹೇಗೆ? ತಾವು announce ಮಾಡಿದ ಮೇಲೆ ಕೆಲಸ ಮಾಡುವುದಕ್ಕೆ ಬಿಡಬೇಕಾಗಿತ್ತು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇವರು 5 ವರ್ಷಗಳ ಕಾಲ ಅಧಿಕಾರವನ್ನು ನಡೆಸಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದಾಗ ಇವರೇ 52 ತಾಲ್ಲೂಕನ್ನು ರಚನೆ ಮಾಡಿದಂತಹವರು. ಇವರು 5 ವರ್ಷಗಳ ಕಾಲ ಅಧಿಕಾರ ಮಾಡುವಾಗ ಮಾನ್ಯ ಕಾಗೋಡು ತಿಮ್ಮಪ್ಪನವರೇ ಘೋಷಣೆ ಮಾಡಿದ್ದರು. ಇವರು 5 ವರ್ಷಗಳಲ್ಲಿ ಯಾವುದೇ ಮೂಲಭೂತ ಸೌಕರ್ಯಗಳನ್ನು ಕೊಡಲಿಲ್ಲ.

**ಶ್ರೀ ಎಸ್.ರವಿ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಈಗ ತಾವು ಏನು ಮಾಡಿದ್ದೀರಿ?

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಇವರು ಈಗ ಏನು ಮಾಡಿದ್ದಾರೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇವರು ಒಂದು ಬಾರಿ ನೆನಪು ಮಾಡಿಕೊಳ್ಳಬೇಕು. ಇವರು 5 ವರ್ಷಗಳ ಕಾಲ ಅಧಿಕಾರದಲ್ಲಿ ಇರುವಾಗ ಏನೂ ಮಾಡಲಿಲ್ಲ. ಆದರೆ ಈಗ ನಾವೇನು ಮಾಡಲಿಲ್ಲ ಎಂದು ಹೇಳುತ್ತಾರೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, ರಾಮನ ಪಾದಸ್ಪರ್ಶದಿಂದ ಅಹಲ್ಯೆಯ ಶಾಪ ವಿಮೋಚನೆಯಾಗಿ ಕಲ್ಲಾಗಿದ್ದವಳು ಹೇಗೆ ನೈಜ ರೂಪ ತಳೆದಳೋ; ಹಾಗೆಯೇ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೇ, ಸಾರ್ವಜನಿಕರಿಗೆ ಶಾಪ ವಿಮೋಚನೆ ಮಾಡಿ. ಆಗ ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ, ತಾವು ಎಲ್ಲಿಂದ ಎಲ್ಲಿಗೋ ಹೋಗಬಾರದು. ತಾಲ್ಲೂಕಿನ ಬಗ್ಗೆ ನಾವು ಹೇಳಿದ್ದೇವೆ. ತಾವು ಹಾಸ್ಟೆಲ್ ಬಗ್ಗೆ ಏನು ಮಾತನಾಡುತ್ತಿದ್ದಿರೋ ಆ ವಿಚಾರಕ್ಕೆ ಬನ್ನಿ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಶಾಪ ವಿಮೋಚನೆಗೆ ಶ್ರೀರಾಮನೇ ಬರಬೇಕು. ಶ್ರೀರಾಮನ ಪಾದ ಸ್ಪರ್ಶದಿಂದಲೇ ಶಾಪ ವಿಮೋಚನೆ ಆಗುತ್ತದೆ.

**ಶ್ರೀ ಎಸ್.ರವಿ:–** ಮಾನ್ಯ ಸಭಾಪತಿಯವರೇ, 2023ನೇ ಸಾಲಿಗೆ ಅಧಿಕಾರಕ್ಕೆ ಕಾಂಗ್ರೆಸ್‌ನವರೇ ಬರಬೇಕು. ತಮ್ಮಿಂದ ಸಾಧ್ಯ ಇಲ್ಲ. ಇದು ಸತ್ಯ, ಇದು ನಿತ್ಯ.

**ಸಭಾಪತಿಯವರು:–** ಈಗ ಸಭೆಯನ್ನು ನಾಳೆ ಬೆಳಗ್ಗೆ 10.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 7 ಗಂಟೆ 13 ನಿಮಿಷಕ್ಕೆ ಮುಕ್ತಾಯಗೊಂಡು, ಪುನಃ ದಿನಾಂಕ: 11ನೇ ಮಾರ್ಚ್ ಮಾಹೆ 2022ರ ಶುಕ್ರವಾರದಂದು ಬೆಳಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>